EXT. DAY. RESCUE CENTER

* EXTREME CLOSE UP SHOT OF DHARMA'S EYES

DHARMA (V.O)
If you're lucky a dog will come into your life,
steal your heart and change everything

CUT TO

EXT. LATE EVENING. PSYCHO HOUSE

* ಆಕಾಶದಲ್ಲಿ ಜೋರಾದ ಸಿಡಿಲು ಬಡಿಯುತ್ತಿದೆ. ಆಕಾಶದಿಂದ Camera tilt down ಆದಂತೆ ಒಂದು ಒಂಟಿಮನೆ ಹಾಗೂ ನಾಯಿಗಳನ್ನು ಕೂಡಿ ಹಾಕಿರುವ ಹಲವಾರು cages ಕಾಣಿಸುತ್ತವೆ. ನಾಯಿಗಳು ಜೋರಾಗಿ ಬೊಗಳುತ್ತಿರುತ್ತವೆ.

CUT TO

INT. NIGHT. PSYCHO HOUSE

* Teapoy ಮೇಲೆ syringeಗಳು, ಹಲವಾರು ಸಿಗರೇಟ್ ತುಂಬಿರುವ ashtray, beer bottles, MDMA tablets,lighter, ಅರ್ಧ ತಿಂಡಿಟ್ಟಿರುವ pizza, ನೋಟುಗಳು ಹಾಗೂ ಇನ್ನಿತಿರ ವಸ್ತುಗಳು ಕಾಣಿಸುತ್ತವೆ.

* Bulletin board ನಲ್ಲಿ ಹಲವಾರು ನಾಯಿಗಳ ಭಾವಚಿತ್ರಗಳು ಕಾಣಿಸುತ್ತವೆ. ಪ್ರತಿಯೊಂದು ಚಿತ್ರದ ಮೇಲೆ sold/missing/dead ಎಂದು ಬರೆದಿರುತ್ತದೆ. ಪಕ್ಕದಲ್ಲಿ calender ನೇತಾಡುತ್ತಿದೆ.

* Breed board ಮೇಲೆ ಬೇರೆ ಬೇರೆ ಬ್ರೀಡ್ ನಾಯಿಮರಿಗಳ ಭಾವಚಿತ್ರಗಳು ಅಂಟಿಸಿಕೊಂಡಿವೆ.

* Laptop screen ಮೇಲೆ inbreedingಗೆ ಸಂಬಂಧಪಟ್ಟ ವೀಡಿಯೊ ಅಪ್ಲೋಡ್ ಆಗುತ್ತಿದೆ. Laptop ಪಕ್ಕದಲ್ಲಿ Handicam connect ಆಗಿದೆ.

* ಗೋಡೆಯ ಮೇಲೆ ಬಂದೂಕು ಹಾಗೂ ಜಿಂಕೆ ಮುಖದ ಆಕೃತಿ ಕಾಣಿಸುತ್ತಿದೆ. Camera ಬಲಗಡೆಗೆ pan ಆದಂತೆ TV Screen ಮೇಲೆ CCTV ದೃಶ್ಯ ಕಾಣಿಸುತ್ತಿದೆ.

* ನೆಲದ ಮೇಲೆ ಅರ್ಧ ಕುಡಿದಿಟ್ಟಿರುವ beer glass ಇದೆ. ಪಕ್ಕದಲ್ಲಿ cigarette ಉರಿಯುತ್ತಿರುವ ashtray, syringe ಬಿದ್ದುಕೊಂಡಿವೆ. Tray ಒಂದರಲ್ಲಿ ರಕ್ತ ತೊಟ್ಟಿಕ್ಕುತ್ತಿದೆ. ಹಿಂದುಗಡೆ ಒಂದು ನಾಯಿ ಏದುಸಿರು ಬಿಡುತ್ತಾ ಮಲಗಿದೆ.

* ಬೋಳು ತಲೆಯ ವ್ಯಕ್ತಿ ಹಬೆ ಕಟ್ಟಿರುವ ಕೋಣೆಯೊಳಗೆ ಸ್ನಾನ ಮಾಡುತ್ತಿದ್ದಾನೆ.

CAMERA CHARGE IN: ಕಬ್ಬಿಣದ BOX ಜೋರಾಗಿ ಅಲುಗಾಡುತ್ತಿದೆ. ಕೊನೆಗೆ BOXನ ಚಿಲಕ ತೆರೆಯುತ್ತದೆ.

CUT TO

EXT. NIGHT. PSYCHO HOUSE

* Psycho ಮನೆ ಹೊರಗಡೆ ಕಿಟಕಿಯ ಗಾಜು ಒಡೆದು ಚಾರ್ಲಿ ಒಳಗಡೆಯಿಂದ ಹಾರುತ್ತಾಳೆ.

FADE OUT

Screen ನಲ್ಲಿ "777 Charlie" ಶೀರ್ಷಿಕೆ ಕಾಣಿಸುತ್ತದೆ.

CUT TO

EXT. LATE EVENING. RANDOM ROAD

ESCAPE SONG STARTS

* ಮೂರು ಬೇರೆ ಬೇರೆ ಜಾಗದ ರಸ್ತೆಗಳಲ್ಲಿ ಚಾರ್ಲಿ ಓಡುತ್ತಿರುವ shots.

CUT TO

EXT. DAY. RAILWAY TRACK

* ರೈಲು ಚಲಿಸುತ್ತಿದೆ. ಓಡಿ ಬರುತ್ತಿದ್ದ ಚಾರ್ಲಿ ಒಂದು ಕ್ಷಣ ನಿಂತು ರೈಲು ಹಾದು ಹೋದ ನಂತರ railway track ದಾಟುತ್ತಾಳೆ.

CUT TO

EXT. NIGHT. MOUNTAIN

* ಓಡಿ ಬರುತ್ತಿರುವ ಚಾರ್ಲಿ ಎತ್ತರದ ಪ್ರದೇಶವೊಂದಕ್ಕೆ ಬಂದು ಕುಳಿತುಕೊಳ್ಳುತ್ತಾಳೆ. ಚಾರ್ಲಿ ಮುಂದೆ ನೋಡುತ್ತಿರುವಾಗ ಆಕಾಶದಲ್ಲಿ ಸಿಡಿಲು ಬಡಿಯುತ್ತೆ. ಭಯದಿಂದ ಬೊಗಳಿ ಅಲ್ಲಿಂದ ಮತ್ತೆ ಓಡುತ್ತಾಳೆ.

CUT TO

EXT. NIGHT. HIGHWAY ROAD

* ಚಾರ್ಲಿ ರಸ್ತೆಯಲ್ಲಿ ನಡೆದುಕೊಂಡು ಬಂದು ರಸ್ತೆ ಬದಿಯಲ್ಲಿರುವ carton box ಒಳಗೆ ಹೋಗಿ ಮಲಗಿ ಕಣ್ಣು ಮುಚ್ಚುತ್ತಾಳೆ.

NIGHT TO DAY

EXT. DAY. ROADSIDE

* ಬೆಳಗಾಗಿದೆ. ಚಾರ್ಲಿ tempo ಕೆಳಗಡೆ ಮಲಗಿದ್ದಾಳೆ. Tempo start ಆದ ಶಬ್ದಕ್ಕೆ ಚಾರ್ಲಿ ಎಚ್ಚರಗೊಂಡು ಅಲ್ಲಿಂದ ಎದ್ದು ಓಡುತ್ತಾಳೆ.

CUT TO

EXT. DAY. BRIDGE/ROAD

* ಚಾರ್ಲಿ bridge ಪಕ್ಕದ ರಸ್ತೆಯಲ್ಲಿ ಓಡಿ ಬರುತ್ತಿದ್ದಾಳೆ.

CUT TO

* ಚಾರ್ಲಿ ರಸ್ತೆಯಲ್ಲಿ ನಡೆಯುತ್ತಿರುವಾಗ Activa scooter ಓಡಿಸುತ್ತಿರುವ ವ್ಯಕ್ತಿ ಚಾರ್ಲಿಯ ಮೈ ಮೇಲೆ ನೀರು ಎರೆಚಿ ಮುಂದೆ ಹೋಗುತ್ತಾನೆ. ಚಾರ್ಲಿ ಅವನನ್ನು ಹಿಂಬಾಲಿಸಿ ಓಡುತ್ತಾಳೆ.

CUT TO

EXT. DAY. FOOD STREET

* ಚಾರ್ಲಿ ಗೋಬಿ ಅಂಗಡಿಯ ಮುಂದೆ ನಿಲ್ಲುತ್ತಾಳೆ. Activa ದಲ್ಲಿ ನೀರು ಹಾರಿಸಿದ್ದ ವ್ಯಕ್ತಿ (ಮಂಜು) ಗೋಬಿ ತಿನ್ನುತ್ತಿದ್ದಾನೆ. ಚಾರ್ಲಿ ಅವನನ್ನು ನೋಡಿ ಬೊಗಳುತ್ತಾಳೆ. ಮಂಜು ಸಿಟ್ಟಿನಿಂದ ನೀರಿನ jug ಕೈಗೆತ್ತಿಕೊಂಡು ಚಾರ್ಲಿಯ ಮೇಲೆ ಎರೆಚುತ್ತಾನೆ. ಚಾರ್ಲಿ ಅಲ್ಲಿಂದ ಓಡುತ್ತಾಳೆ.

CUT TO

EXT. DAY. FISH MARKET

* ಚಾರ್ಲಿ fish market ಒಳಗಡೆ ಬರುತ್ತಾಳೆ. ಹೆಂಗಸರು ಮೀನು ಮಾರಾಟ ಮಾಡುತ್ತಿದ್ದಾರೆ. ಚಾರ್ಲಿಗೆ ಅಲ್ಲಿರುವ ಮೀನು ಕಾಣಿಸುತ್ತದೆ. ಚಾರ್ಲಿ ಓಡಿ ಬಂದು ಆ ಮೀನನ್ನು ಕಚ್ಚುತ್ತಾಳೆ. ಚಾರ್ಲಿಯನ್ನು ನೋಡಿದ ಹೆಂಗಸು,

FISH VENDOR
ಏಯ್.. Shh..

* ಚಾರ್ಲಿ ಮೀನು ಕಚ್ಚಿಕೊಂಡು ಅಲ್ಲಿಂದ ಓಡುತ್ತಾಳೆ.

CUT TO

EXT. DAY. BUNDER

* ಚಾರ್ಲಿ ಮೀನನ್ನು ತಿನ್ನುತ್ತಿದ್ದಾಳೆ. ಒಂದು ಕ್ಷಣ ತಿನ್ನುವುದನ್ನು ನಿಲ್ಲಿಸಿ ಮುಂದೆ ನೋಡುತ್ತಾಳೆ.

CUT TO

* ಚಾರ್ಲಿ ice ರಾಶಿ ಮೇಲೆ ಉರುಳಾಡುತ್ತಿದ್ದಾಳೆ. ವ್ಯಕ್ತಿಯೊಬ್ಬ ಕಲ್ಲೆಸೆದು ಚಾರ್ಲಿಯನ್ನ ಓಡಿಸುತ್ತಾನೆ.

CUT TO

EXT. DAY. FURNITURE SHOP

* ಚಾರ್ಲಿ ಓಡಿ ಬಂದು, park ಆಗಿರುವ goods auto ಒಳಗಡೆ ಹತ್ತುತ್ತಾಳೆ.

* ಒಬ್ಬ ವ್ಯಕ್ತಿ driver ಜೊತೆಗೆ sofa ಎತ್ತಿಕೊಂಡು goods auto ಒಳಗಡೆ load ಮಾಡಿ ಬಾಗಿಲು ಹಾಕುತ್ತಾನೆ. Goods auto ಮುಂದೆ ಚಲಿಸುತ್ತದೆ.

* Goods auto ಒಳಗೆ ಕುಳಿತಿರುವ ಚಾರ್ಲಿ ಸಣ್ಣ ರಂಧ್ರಗಳ ಮೂಲಕ ಬರುತ್ತಿರುವ ಬೆಳಕಿನ ಕಿರಣಗಳನ್ನು ನೋಡುತ್ತಿದ್ದಾಳೆ

CUT TO

EXT. DAY. RANDOM LOCATION

* Goods auto ಒಂದು ಮನೆಯ ಮುಂದೆ ಬಂದು ನಿಲ್ಲುತ್ತದೆ. ಮಾಲೀಕ ಹಾಗೂ security guard footpath ಮೇಲೆ ನಿಂತುಕೊಂಡಿದ್ದಾರೆ. Goods auto ಒಳಗಿರುವ ವ್ಯಕ್ತಿ ಇಳಿದು ಬಂದು Auto ಹಿಂದಿನ ಬಾಗಿಲು ತೆರೆದ ಕೂಡಲೇ ಒಳಗಡೆಯಿಂದ ಚಾರ್ಲಿ ಹಾರುತ್ತಾಳೆ. ಹತ್ತಿಯ ತುಂಡುಗಳು ಹಾರಾಡುತ್ತಿವೆ. ಮೂವರೂ ಸ್ತಬ್ಧರಾಗಿ ಚಾರ್ಲಿಯನ್ನು ನೋಡುತ್ತಾರೆ. ಚಾರ್ಲಿ ಅಲ್ಲಿಂದ ಓಡುತ್ತಾಳೆ.

CUT TO

EXT. DAY. RANDOM ROAD

* ಚಾರ್ಲಿ ರಸ್ತೆಯಲ್ಲಿ ಓಡುತ್ತಿದ್ದಾಳೆ.

CUT TO

EXT. DAY. ABANDONED BUILDING/ROADSIDE

JUMPCUTS

* ಚಾರ್ಲಿ ಪಾಳು ಬಿದ್ದಿರುವ ಕಟ್ಟಡದ ಬಳಿ ಬರುತ್ತಾಳೆ. ಗೋಡೆಯ ಮೇಲೆ 'ಇಲ್ಲಿ ಕಸ ಹಾಕಿದವರು ನಾಯಿಗಳು' ಎಂದು ಬರೆದಿದೆ. ಎದುರುಗಡೆ ಕಸದ ರಾಶಿ ಹಾಕಿದೆ. ಚಾರ್ಲಿ ಅತ್ತಿತ್ತ ಮೂಸುತ್ತಾ ಮುಂದೆ ಹೋಗುತ್ತಾಳೆ.

* ಚಾರ್ಲಿ ಮೈ ಕೆಡವಿಕೊಂಡು ಅಲ್ಲಿಂದ ಎದ್ದು ಓಡುತ್ತಾಳೆ.

CUT TO

EXT. DAY. DUMPYARD

* ಚಾರ್ಲಿ ದೊಡ್ಡದಾದ Dump yard ಒಳಗಡೆ ಬಂದಿದ್ದಾಳೆ. ಕಸದ ರಾಶಿಯಲ್ಲಿ ನಡೆಯುತ್ತಿರುವಾಗ ಯಾವುದೋ ನಾಯಿ ಬೊಗಳಿದ ಶಬ್ದ ಕೇಳಿ ಚಾರ್ಲಿ ಸುತ್ತಲೂ ನೋಡುತ್ತಾಳೆ.

* ಹಿಂದಿನಿಂದ ಬೀದಿ ನಾಯಿಯೊಂದು ಚಾರ್ಲಿಯನ್ನು ಓಡಿಸುತ್ತದೆ.

CUT TO

EXT. DAY. RANDOM ROAD

* ರಸ್ತೆಯಲ್ಲಿ ಚಾರ್ಲಿ ಬಟ್ಟೆ ಕಚ್ಚಿಕೊಂಡು ಓಡುತ್ತಿದ್ದಾಳೆ. ಹಿಂದಿನಿಂದ ಒಬ್ಬ ವ್ಯಕ್ತಿ ಚಾರ್ಲಿಯನ್ನು ಓಡಿಸುತ್ತಿದ್ದಾನೆ. ಅವನ ಹಿಂದಿನಿಂದ ಬಟ್ಟೆ ಗಾಡಿ ಬರುತ್ತಿದೆ.

CUT TO

EXT. DAY. ROADSIDE

* ಚಾರ್ಲಿ ರಸ್ತೆ ಬದಿಯಿರುವ ಕೊಳಚೆ ನೀರು ಕುಡಿಯುತ್ತಾಳೆ.

CUT TO

EXT. EVENING. RANDOM LOCATION

* ಚಾರ್ಲಿ ದೊಡ್ಡದಾದ cement ring ಒಳಗಡೆ ನಿಂತು ಹೊರಗಡೆ ನೋಡುತ್ತಿದ್ದಾಳೆ.

CUT TO

EXT. EVENING. CHINMAYA COLONY ROAD

* ಚಾರ್ಲಿ ಕಾಲನಿ ರಸ್ತೆಯೊಳಗೆ ಓಡುತ್ತಾಳೆ. Camera tilt up ಆದಂತೆ ಕಾಲನಿಯ ಕಮಾನಿನಲ್ಲಿ 'ಚಿನ್ಮಯ ಕಾಲನಿ, ಮೈಸೂರು' ಎಂಬ ಹೆಸರು ಕಾಣಿಸುತ್ತಿದೆ.

FADE OUT

EXT. EVENING. DHARMA'S HOUSE

* ಚಾರ್ಲಿ ಯಾವುದೋ ಮನೆಯ ಸಜ್ಜೆಯ ಮೇಲೆ ನಡೆದುಕೊಂಡು ಹೋಗುತ್ತಾಳೆ.

ESCAPE SONG ENDS

CAMERA TRAVELS INSIDE THE HOUSE THROUGH THE WINDOW.

CUT TO

INT. DAY. DHARMA'S HOUSE

* Camera window ದಾಟಿ ಒಳಗಡೆ ಹೋದಂತೆ wind chain ಕಾಣಿಸುತ್ತದೆ. Wind chain ನಿಂದ ಬೆಳಕಿನ ಕಿರಣ ಪ್ರತಿಫಲಿಸುತ್ತಿದೆ. ಹಿನ್ನಲೆಯಲ್ಲಿ TV ಶಬ್ದ ಕೇಳಿಸುತ್ತಿದೆ.

* ಪಾಚಿ ಕಟ್ಟಿರುವ Aquariumನಲ್ಲಿ ಒಂದೇ ಒಂದು ಮೀನು ಬದುಕಿದೆ. ಪಕ್ಕದಲ್ಲಿ 2 ಸತ್ತಿರುವ ಮೀನುಗಳ ಮೂಳೆಗಳಿವೆ.

* Dining Table ಮೇಲೆ ಒಂದು ಇಡ್ಲಿ ಮಿಕ್ಕಿದೆ. ಇಡ್ಲಿ ಸುತ್ತಲೂ ನೊಣ ಹಾರುತ್ತಿದೆ.

* ನೆಲದ ಮೇಲೆ Smiley ball ಬಿದ್ದುಕೊಂಡಿದೆ. Camera focus shift ಆದಂತೆ 'Art of happiness by Dalai Lama' ಪುಸ್ತಕ ಕಾಣಿಸುತ್ತಿದೆ.

* ಗೋಡೆ ಮೇಲೆ ಧೂಳಿನಿಂದ ತುಂಬಿರುವ ದೇವರ photo frameಗಳು ನೇತು ಹಾಕಿವೆ. ಪಕ್ಕದಲ್ಲಿರುವ ದೇವರ ಗುಂಡದಲ್ಲಿ beer bottles ಇಟ್ಟಿವೆ.

* ತುಕ್ಕು ಹಿಡಿದಿರುವ rat bone ಒಳಗಡೆ ಒಂದು ಇಲಿ ಏನನ್ನೋ ತಿನ್ನುತ್ತಿದೆ.

* ಗೋಡೆಯಲ್ಲಿ Charlie Chaplin artwork ಕಾಣಿಸುತ್ತದೆ. Chaplin ಮೀಸೆ ಕೆಳಗಡೆ ವಾಲಿದೆ.

* Teapoy ಮೇಲೆ cigarette buds ತುಂಬಿರುವ ashtray, ಹಾಗೂ beer bottles ಕಾಣಿಸುತ್ತದೆ. Camera focus shift ಆದಂತೆ TVಯಲ್ಲಿ ಒಂದು ಹುಲಿ ಒಬ್ಬ ವ್ಯಕ್ತಿಯ ಕೈ ನೆಕ್ಕುತ್ತಿರುವ ದೃಶ್ಯ ಪ್ರಸಾರವಾಗುತ್ತಿದೆ.

* ಒಬ್ಬ ವ್ಯಕ್ತಿ ಮಲಗಿದ್ದಾನೆ. ನಿದ್ರೆಯಲ್ಲಿ ಕನವರಿಸುತ್ತಾ ಕಾಲು ಅಲ್ಲಾಡಿಸುತ್ತಾನೆ.

DHARMA (V.O)
Life ಅಲ್ಲಿ ಶನಿ ಹೆಗಲೇರಿ ಕೂರೋ ಮುಂಚೆ ಕನಸಲ್ಲಿ ಒಮ್ಮೆ ಬಂದು ಅವ್ನ ತೂಕ ಹೇಳಿ ಹೋಗ್ತಾನಂತೆ.

* ಯಾರನ್ನೋ ತಡೆಯಲು ಪ್ರಯತ್ನಿಸುತ್ತಿರುವಂತೆ ಕನವರಿಸುತ್ತಾ ಥಟ್ಟನೆ ಎಚ್ಚರಗೊಂಡು ಎದ್ದು ಕುಳಿತುಕೊಳ್ಳುತ್ತಾನೆ. ಪಕ್ಕದ table ಮೇಲಿಂದ Cigarette ತೆಗೆದು ಹಚ್ಚುತ್ತಾನೆ.

DHARMA (V.O)
ನನ್ ಹೆಸ್ರು ಧರ್ಮ. ದಿನಾ alarm ಹೊಡೆಯೋ ಮುಂಚೇನೆ ಏಳ್ತೀನಿ.

* ತಕ್ಷಣ alarm ring ಆಗುತ್ತದೆ.

DHARMA (V.O) CONT'D
ಆದ್ರೂ alarm ಹೊಡೆಯುತ್ತೆ.

* ಧರ್ಮ alarmಗೆ ಬಡಿಯುತ್ತಾನೆ.

DHARMA (V.O)
ನಾನ್ ಅದಿಕ್ಕೆ ಹೊಡೀತೀನಿ

CUT TO

* Sofaದಲ್ಲಿ ಕುಳಿತಿರುವ ಧರ್ಮ, ಒಂದು ಕೈಯಲ್ಲಿ ಹರಿದಿರುವ ಒಂದು ಭಾಗವನ್ನು ಕೀಳುತ್ತಾ ಇನ್ನೊಂದು ಕೈಯಲ್ಲಿ remote ಹಿಡಿದು TV channelಗಳನ್ನು ಬದಲಾಯಿಸುತ್ತಿದ್ದಾನೆ.

DHARMA (V.O)
ಅಮ್ಮ ಯಾವಾಗ್ಲೂ ಒಂದು ಮಾತ್ ಹೇಳೋಳು...

* ಧರ್ಮ channel ಬದಲಾಯಿಸುತ್ತಿರುವಾಗ ಒಂದು channel ನಲ್ಲಿ ಜ್ಯೋತಿಷ್ಯ ಕಾರ್ಯಕ್ರಮ ಪ್ರಸಾರವಾಗುತ್ತಿದೆ.

GURUJI
ಬೆಳಿಗ್ಗೆ ಕಂಡಂಥ ಕನಸುಗಳು ಖಂಡಿತವಾಗಿಯೂ ನಿಜ ಆಗುತ್ತೆ.

ಇದರಲ್ಲಿ ಯಾವುದೇ ಅನುಮಾನ ಇಲ್ಲ. ಈಗ್ ನೋಡಿ..

* ಧರ್ಮ ಕೂಡಲೇ channel ಬದಲಾಯಿಸಿದಾಗ TV Screenನಲ್ಲಿ CHARLIE CHAPLIN ನ MODERN TIMES ಚಿತ್ರದ ದೃಶ್ಯ ಕಾಣಿಸುತ್ತದೆ. ಧರ್ಮ remoteನ table ಮೇಲೆ ಬಿಸಾಕುತ್ತಾನೆ.

CUT TO

* ಧರ್ಮ bathroom ಪಕ್ಕದಲ್ಲೇ ಮೊಳೆಗೆ ಹಾಕಿರುವ towel ತೆಗೆದುಕೊಂಡು ಒಳಗಡೆ ಹೋಗುತ್ತಾನೆ. Calendar 2010ರ July ತೋರಿಸುತ್ತಿದೆ.

* ಧರ್ಮ cutting playerನ ಸಹಾಯದಿಂದ ಖಾಲಿಯಾದ Tooth Paste ಹೊರ ತೆಗೆದು brushಗೆ ಹಾಕಿ ಹಲ್ಲುಜ್ಜಲು ಪ್ರಾರಂಭಿಸುತ್ತಾನೆ.

DHARMA (V.O)
ನನ್ ಪ್ರಕಾರ ನಾನು ಸರಿಯಾಗೆ ಇದೀನಿ...

* ಮುಂದಿರುವ ಕನ್ನಡಿಯಲ್ಲಿ ಧೂಳು ಹಿಡಿದು ಧರ್ಮನ ಮುಖ ಅಸ್ಪಷ್ಟವಾಗಿ ಕಾಣಿಸುತ್ತಿದೆ.

DHARMA (V.O)CONT'D
ಆದ್ರೆ ಜನ ನೋಡೋ ರೀತಿ ಸರಿ ಇಲ್ಲ ಅಷ್ಟೇ.

* ಧರ್ಮ ಬಾಯಲ್ಲಿರುವ paste ಉಗಿದು ನಳ್ಳಿ ತಿರಿಗಿಸುತ್ತಾನೆ.

CUT TO

* ಧರ್ಮ commode ಮೇಲೆ ಕುಳಿತು ಸೇದುತ್ತಿರುವ cigaretteನ ಕೆಳಗಡೆ ಕೊಡವುತ್ತಾನೆ.

* ಹಳೆಯ PLASTIC bottleಗೆ (DIY) ಸಣ್ಣ ತೂತುಗಳನ್ನು ಮಾಡಿರುವ SHOWER ನಲ್ಲಿ ನೀರು ಬರುತ್ತಿದೆ. ಧರ್ಮ Showerನ ಅಡಿ ನಿಂತುಕೊಂಡಿದ್ದಾನೆ.

CUT TO

* ಧರ್ಮ hall ನಲ್ಲಿ Charlie Chaplin artwork ಎದುರು ನಿಂತಿದ್ದಾನೆ. Phone ring ಆಗುತ್ತದೆ. ಧರ್ಮ call receive ಮಾಡ,

DHARMA
Hello.

TELEMARKETING EXECUTIVE (O.S)
(Telephonic Voice)
ನಮಸ್ಕಾರ ಸಾರ್. ನಾನು ಸ್ಪೆನ್ಸರ್ 4G ಕಂಪನಿಯಿಂದ call ಮಾಡ್ತಾ ಇರೋದು. ನಮ್ 4G SIM ಅಲ್ಲಿ ಹೊಸಾ internet offers ಇದೆ. ಅದ್ರ ಬಗ್ಗೆ ಹೇಳ್ಬೇಕು..

* ಧರ್ಮ Chaplin artworkನಲ್ಲಿ ಕೆಳಗಡೆ ವಾಲಿರುವ ಮೀಸೆಯನ್ನು ಸರಿ ಮಾಡುತ್ತಾನೆ.

DHARMA
(Cuts the conversation short)
ಅದೆಲ್ಲಾ ನನ್ ಹತ್ರ already ಇದೆ.

* ಧರ್ಮ call cut ಮಾಡಿ ಹಿಂದೆ ತಿರುಗಿದಾಗ ಆತನ ಮುಖ reveal ಆಗುತ್ತದೆ. ಕೈಯಲ್ಲಿರುವ ಹಳೆಯ Nokia 1100 phone ಕಾಣಿಸುತ್ತದೆ.

CUT TO

EXT. DAY. DHARMA'S HOUSE

* ಧರ್ಮ ಮನೆ garage ಹೊರಗಡೆ bullet start ಮಾಡುತ್ತಿದ್ದಾನೆ. Bullet tank ಮೇಲ್ಗಡೆ ಇಡ್ಲಿ packet ಕಾಣಿಸುತ್ತಿದೆ.

* Gate ಹೊರಗಡೆ ಬಂದಿರುವ ಧರ್ಮ gate ಮುಚ್ಚಲು ಪ್ರಯತ್ನಿಸುತ್ತಾನೆ. ಅದರ lock ಸರಿಯಾಗಿ ಬೀಳುತ್ತಿಲ್ಲ. ಧರ್ಮ ಅಸಹನೆಯಿಂದ ಅದನ್ನು ಹಾಗೇ ಬಿಟ್ಟು ಹೊರಡುತ್ತಾನೆ.

* ಮುಂದೆ ಹೋಗುತ್ತಾ ಧರ್ಮ ಮನೆಯ ಹೊರಗಿರುವ dumpsterಗೆ ಕೈಯಲ್ಲಿರುವ ಇಡ್ಲಿ ಪೊಟ್ಟಣವನ್ನು ಎಸೆದು ಮುಂದೆ ಹೋಗುತ್ತಾನೆ. Dumpster ಮೇಲೆ "One Man's Trash is another man's Treasure" ಎಂದು ಬರೆದಿದೆ.

CUT TO

EXT. DAY. SCENE 13. ROAD TO FACTORY

* ಧರ್ಮ ಗಾಡಿಯಲ್ಲಿ ಹೊರಟು ಹೋದಂತೆ, ಚಾರ್ಲಿ BBMP push cart ಗಾಡಿಯಲ್ಲಿರುವ ಕಸಕ್ಕೆ ಬಾಯಿ ಹಾಕುತ್ತಿದ್ದಾಳೆ. ಪಕ್ಕದಲ್ಲಿ BBMP ಹೆಂಗಸರು ಕಸ ಗುಡಿಸುತ್ತಿದ್ದಾರೆ.

CUT TO

EXT.DAY. ROAD TO FACTORY

* ಯುವಕನೊಬ್ಬ puncture ಆಗಿರುವ cycleನ tyreಗೆ ಸಿಟ್ಟಿನಿಂದ ಒದೆಯುತ್ತಾ

UTTAM

ಥೂ, ಇವತ್ತೇ ಕೈ ಕೊಡ್ಬೇಕಾ!

* Bullet ಶಬ್ದ ಕೇಳಿದ ತಕ್ಷಣ ಯುವಕ ಹಿಂತಿರುಗಿ ನೋಡುತ್ತಾನೆ. ಧರ್ಮ bullet ನಲ್ಲಿ ವೇಗವಾಗಿ ಬರುತ್ತಿದ್ದಾನೆ.  ಯುವಕ ಕೈತೋರಿಸಿ drop ಕೇಳುವ ಸನ್ನೆ ಮಾಡುತ್ತಾನೆ. ಧರ್ಮ ಗಾಡಿ ನಿಲ್ಲಿಸದೆ thumbs down ತೋರಿಸಿ ಹೋಗುತ್ತಾನೆ. ಯುವಕ ಸಿಟ್ಟಿನಿಂದ ಧರ್ಮನನ್ನು ನೋಡುತ್ತಿದ್ದಾನೆ.

CUT TO

INT. DAY. FACTORY CLOAKROOM

* Factory locker roomನಲ್ಲಿ ಕೆಲ ಕಾರ್ಮಿಕರು ಬಟ್ಟೆ ಬದಲಾಯಿಸಿಕೊಳ್ಳುತ್ತಿದ್ದಾರೆ. ರಾಜು ಬಟ್ಟೆ ಬದಲಾಯಿಸುತ್ತಾ ಪಕ್ಕದಲ್ಲಿ ಪೇಪರ್ ಓದಿಕೊಂಡು ಸಿಗರೇಟ್ ಸೇದುತ್ತಾ ಕುಳಿತಿರುವ ತನ್ನ ಸಹೋದ್ಯೋಗಿಯನ್ನು ನೋಡಿ,

RAJU

ಏನ್ ಕೃಪಾಕರ್ ಸರ್? ನಿನ್ನೆ ಮನೆಲೇನೋ ಜೋರಾಗಿ ಗಲಾಟೆ ಆದಂಗಿತ್ತು?

KRIPAKAR

ಮನೆ ಸಂಸಾರ ಅಂದ್ಮೇಲೆ ಗಲಾಟೆ ಇದ್ದೇ ಇರುತ್ತಲ್ಲ ರಾಜು..
ಏನೂ  ಇಲ್ದೇ ಆರಾಮಾಗಿ ಇರ್ಬೇಕು ಅಂದ್ರೆ ನಾವೂ ಒಬ್ಬೊಬ್ರೇ ಗುಂಡ್ರುಗೋವಿ ಥರ ಇರ್ಬೇಕು.

* ಎಂದು ಹೇಳಿ ದಿಟ್ಟಿಸಿ ಮುಂದೆ ನೋಡುತ್ತಾನೆ. ಧರ್ಮ ಅಸಹನೆಯಿಂದ ಹಿಂದೆ ತಿರುಗಿ ನೋಡುತ್ತಾನೆ.

DHARMA (V.O)

ನಾನ್ ಆರಮಾಗಿರೋದೇ ಇವ್ನ್ problem ಆ?

* ಧರ್ಮ locker ನಿಂದ welding helmet ತೆಗೆದುಕೊಂಡು locker lock ಮಾಡಿ ಅಲ್ಲಿಂದ ಹೊರಡುತ್ತಾನೆ. ಕೃಪಾಕರ್ ಧರ್ಮನನ್ನು ಗುರಾಯಿಸಿ ನೋಡುತ್ತಿದ್ದಾನೆ.

DHARMA (V.O) CONT'D
ಅಥವಾ ಇವ್ನಿಗೆ ಸಂಸಾರ ಇರೋದೇ ಇವ್ನ problem ಆ?
ನಂಗೆ ಇದುವರೆಗೂ ಅರ್ಥ ಆಗಿಲ್ಲ.

* ಧರ್ಮ ಅಸಹನೆ ಮುಖದಿಂದ factory ವಟಾರದಲ್ಲಿ ನಡೆದುಕೊಂಡು ಹೋಗುತ್ತಿದ್ದಾನೆ.

DHARMA (V.O)
ನಂಗೆ ಅರ್ಥ ಮಾಡ್ಕೊಳೋ ಶಕ್ತಿ ಇಲ್ಲ ಅಂತಲ್ಲ..

* ಧರ್ಮ ಮುಂದೆ ಹೋಗುತ್ತಾ,

DHARMA (V.O)CONT'D
Time ಇಲ್ಲ ಅಷ್ಟೇ..

* Camera tilt up ಆದಂತೆ factory establish ಆಗುತ್ತದೆ.

CUT TO

INT. DAY. FACTORY WORK AREA

* ಧರ್ಮ helmet ಧರಿಸಿ welding ಮಾಡಲು ಪ್ರಾರಂಭಿಸುತ್ತಾನೆ.

DHARMA
ನಾನ್ normal ಆಗಿ ಯಾರನ್ನೂ ಹತ್ರ ಸೇರ್ಸಲ್ಲ. ಆದ್ರೂ ನನ್
ಹಿಂದೇನೂ ಜನ ಇದ್ದಾರೆ.

* ಮುರಳಿ ಸರ್ ಹಿಂದಿನಿಂದ ಧರ್ಮನ ಹೆಗಲು ತಟ್ಟಿ,

MURALI SIR
ಧರ್ಮ, ಇವ್ರು ಉತ್ತಮ್.. ಉತ್ತಮ್, meet Mr. Dharma,
ನೀವು ಇವರ under ಅಲ್ಲೇ training ಅಲ್ಲಿರ್ತೀರ. He is
our best employee.Ok? Dharma, ಇವ್ರಿಗೆ ಯಾವುದ್ರಿಂದ
training ಶುರು ಮಾಡ್ತೀರ ಈಗ?

DHARMA
Correct Timeಗೆ officeಗೆ ಬರೋದ್ರಿಂದ.

MURALI SIR
(ನಗುತ್ತಾ)
Oho.. Get used to Dharma. OK? All the best.

* ಎಂದು ಹೇಳಿ ಉತ್ತಮ್ ನ ಬೆನ್ನು ತಟ್ಟಿ ಅಲ್ಲಿಂದ ಹೊರಡುತ್ತಾರೆ. ಉತ್ತಮ್ ಧರ್ಮನನ್ನು
ನೋಡಿ,

UTTAM
ಸರ್, ಅದು ಬರೋವಾಗ ಗಾಡಿ ಹಾಳಾಯ್ತು ಸರ್. ಯಾರೂ
Drop ಕೊಡ್ಲಿಲ್ಲ. ಒಬ್ಬ ಬೇಕುಫಾ ಅಂತೂ ಕೈ ಬೇರೆ
ತೋರಿಸ್ಬಿಟ್ ಹೋಗ್ತಾನ್ ಸರ್... ನನ್ ಪರಿಸ್ಥಿತಿ ಯಾಕ್
ಕೇಳ್... ತೀ... ರ...

* ಉತ್ತಮ್ ಮಾತು ಮುಗಿಸುತ್ತಿದ್ದಂತೆ ಧರ್ಮ welding mask ತೆಗೆಯುತ್ತಾನೆ. ಧರ್ಮನನ್ನು
ನೋಡಿ ಉತ್ತಮ್ ಕಕ್ಕಾಬಿಕ್ಕಿಯಾಗುತ್ತೆ. ಧರ್ಮ ಮತ್ತೆ mask ಹಾಕಿಕೊಂಡು ತನ್ನ ಕೆಲಸವನ್ನು
ಮುಂದುವರಿಸುತ್ತಾನೆ. ಉತ್ತಮ್ ಪೆಚ್ಚು ಮುಖದಿಂದ ಧರ್ಮನನ್ನು ನೋಡುತ್ತಿದ್ದಾನೆ.

CUT TO

INT. DAY. FACTORY CAFETERIA.

* Factory cafeteria establish ಆಗುತ್ತದೆ. ಕೆಲಸಗಾರರೆಲ್ಲರೂ ಊಟ ಮಾಡುತ್ತಿದ್ದಾರೆ. ಉತ್ತಮ್,ರಾಜು, ಕೃಪಾಕರ್ ಹಾಗೂ ಇನ್ನಿಬ್ಬರು ಜೊತೆಗೆ ಕುಳಿತು ಊಟ ಮಾಡುತ್ತಿದ್ದಾರೆ. ಧರ್ಮ ಒಬ್ಬನೇ ದೂರದಲ್ಲಿ ಬೇರೊಂದು table ನಲ್ಲಿ ಕುಳಿತು ಊಟ ಮಾಡುತ್ತಿದ್ದಾನೆ. ರಾಜು ಉತ್ತಮ್ ಬಳಿ,

RAJU
ಅವ್ನ್ ಹತ್ರಾನಾ? ಕೆಲ್ಸ ಹೆಂಗಯ್ಯ ಕಲೀತೀಯ?

UTTAM
ಯಾಕ್ Sir? ಆಗಲ್ವ? ಮುರಳಿ ಸಾರ್ ಹೇಳಿದ್ರು ಅವ್ರೆ best employee ಅಂತ?

* ರಾಜು ಪಕ್ಕದಲ್ಲಿ ಕುಳಿತಿರುವ ಕೃಪಾಕರ್ ಮುಖ ನೋಡುತ್ತಾನೆ. ಉತ್ತಮ್ ಮಾತು ಕೇಳಿಸಿಕೊಂಡ ಕೃಪಾಕರ್ ಅಸಹನೆಗೊಂಡು,

KRIPAKAR
ಒಂದ್ ದಿನನೂ ರಜ ಹಾಕ್ದೆ ಇಡೀ ವರ್ಷ ಇಡೀ ಕೆಲ್ಸ ಮಾಡ್ಬಿಟ್ರೆ Best Employee ನಾ? ಆ...? ಮನೆ ಇಲ್ಲ, ಮಠ ಇಲ್ಲ, ಮೂರ್ನೇಯವ್ರು ಹತ್ರಕ್ಕೂ ಸೇರ್ಸಲ್ಲ. Officeಗೆ ಬರ್ದೆ ಇನ್ನೆಲ್ಲಿಗ್ ಹೋಗ್ತಾನೆ? ಹೆಂಡ್ತಿ ಮಕ್ಳು ಇದ್ದಿದ್ರೆ ಗೊತ್ತಾಗಿರೋದು. Best employee ಅಂತೆ Best employee.. ಥೂ!

* ಎಂದು ಹೇಳಿ ಕೃಪಾಕರ್ ಕೋಪದಿಂದ ಎದ್ದು ಹೊರಡುತ್ತಾನೆ. ಉತ್ತಮ್ ಆಶ್ಚರ್ಯದಿಂದ ನೋಡಿ ನಂತರ ರಾಜು ಬಳಿ,

UTTAM
ಅವ್ರಿಗೂ ಇವ್ರಿಗೂ ಆಗಲ್ವಾ?

RAJU
ಅವ್ರಿಗೂ.. ಇಲ್ಲಿ ಯಾರಿಗೂ ಆಗಲ್ಲ. ಅವ್ರ್ example ಕೊಟ್ಟು ಕೊಟ್ಟು ಮೂರ್ ವರ್ಷದಿಂದ ಕೃಪಾಕರ್ ಗೆ promotion ಕೊಡ್ತಾ ಇಲ್ಲ. ಅದಿಕ್ಕೆ ಸ್ವಲ್ಪ ಬರ್ನಿಂಗ್..

UTTAM
Oh!

DHARMA (V.O)
ನಾನ್ ಆವಾಗ್ಲೇ ಹೇಳಿದ್ನಲ್ಲ... ನನ್ ಹಿಂದೇನೂ ಜನ ಇದ್ದಾರೆ ಅಂತ.. ಇದ್ದಾರೆ.. ಆಡ್ಕೊಳಕ್ಕೆ ಮಾತ್ರ.

* ಧರ್ಮ ಮುಂದೆ ನೋಡುತ್ತಾ, ನೀರಿನ ಲೋಟದಲ್ಲಿ ತನ್ನ ಬೆರಳಿಡುತ್ತಾನೆ. ನೀರಿನಿಂದ ಹೊರಬರಲು ಪರದಾಡುತ್ತಿದ್ದ ನೊಣ ಬೆರಳಿನ ಮೇಲೆ ಹತ್ತಿದಾಗ ಧರ್ಮ ಬೆರಳು ಹೊರ ತೆಗೆದು table ಮೇಲಿಡುತ್ತಾನೆ. ನೊಣ ಮುಂದೆ ಚಲಿಸುತ್ತದೆ. ಧರ್ಮ ನೊಣ ಮುಂದೆ ಹೋಗುತ್ತಿರುವುದನ್ನೇ ನೋಡುತ್ತಿದ್ದಾನೆ.

CUT TO

EXT. EVENING. DHARMA'S HOUSE

* ಧರ್ಮ ತನ್ನ ಮನೆಯ ಗೇಟ್ ತೆರೆದು ಒಳಗಡೆ ಹೋಗುತ್ತಿದ್ದಾನೆ. ಹಿನ್ನಲೆಯಲ್ಲಿ ದೂರದಿಂದ loud speakerನಲ್ಲಿ ರಾಜಕಾರಣಿಯ ಭಾಷಣ ಕೇಳಿಸುತ್ತಿದೆ. ಧರ್ಮನ ಎದುರುಗಡೆ ಮನೆಯಲ್ಲಿ ವಾಸಿಸುವ ನಾರಾಯಣ್ ರಾವ್ ಕಾಲನಿ ಸದಸ್ಯರ ಜೊತೆ ನಿಂತುಕೊಂಡಿದ್ದಾರೆ. ನಾರಾಯಣ್ ರಾವ್ ಧರ್ಮನನ್ನು ನೋಡಿದ ತಕ್ಷಣ,

NARAYAN RAO
ಅಲ್ನೋಡ್ರೋ ಧರ್ಮ..

BATANI
ಸುಮ್ನಿರಿ ತಾತ, ಅವ್ನ್ ಬೇಡ.

NARAYAN RAO
ಏಯ್ ಬಟಾಣಿ, ನಿಂಗವೆಲ್ಲ ಗೊತ್ತಾಗಲ್ಲ. ಇದುವರೆಗೂ ಅವ್ನು ಯಾವ್ ಕೆಲ್ಸಾನೂ ಮಾಡ್ಲಿಲ್ಲ. ಇನ್ಮೇಲಾದ್ರೂ ಬಂದು ಮಾಡ್ಲಿ.

* ಎಂದು ಹೇಳುತ್ತಾ ನಾರಾಯಣ್ ರಾವ್ ಕಾಲನಿ ಸದಸ್ಯರ ಜೊತೆಗೆ ಮನೆ ಹೊರಗಡೆ ಬರುತ್ತಾರೆ. ನಾರಾಯಣ್ ರಾವ್ ಧರ್ಮನನ್ನು ನೋಡಿ,

NARAYAN RAO
(ಸ್ವರ ಸರಿ ಮಾಡಿಕೊಳ್ಳುತ್ತಾ)
ಏಯ್ ಧರ್ಮ

* ಮನೆ ಬಾಗಿಲು ತೆರೆಯಲು ಮುಂದಾಗಿದ್ದ ಧರ್ಮ ಹಿಂದೆ ತಿರುಗಿ ನೋಡುತ್ತಾನೆ.

NARAYAN RAO (CONT'D)
ನೀನು ನಮ್ colony ಅವ್ನು ತಾನೆ? ಅದ್ಯಾವನೋ ತಲೆ ಮಾಸ್ದೋನು TV ಹಂಚೋದಿಕ್ಕೆ ನಮ್ ಕಾಲನಿ groundಏ ಆಗ್ಬೇಕಾ ಅವ್ನಿಗೆ?

* ಧರ್ಮ ಕೀಲಿ ತೆಗೆದು ಕಿಸೆಯೊಳಗಿಟ್ಟು ಅಸಹನೆಯಿಂದ ನೋಡುತ್ತಿದ್ದಾನೆ.

NARAYAN RAO (CONT'D)
ಬೆಳಗ್ಗೆಯಿಂದ ಮೈಕ್ ಹಾಕ್ಕೊಂಡು ಕಿರ್ಚ್ತಾ ಇದ್ರೆ ನಾವು ಸಂಗೀತಾಭ್ಯಾಸ ಮಾಡೋದ್ ಹೇಗೆ?

* ಧರ್ಮ ಉತ್ತರಿಸುತ್ತಿಲ್ಲ.

NARAYAN RAO (CONT'D)
ಸಂಜೆ orchestra ಬೇರೆ ಇಟ್ಕೊಂಡಿದ್ದಾನಂತೆ. ಬಾ ಕೇಳೋಣ.

DHARMA
ನಂಗೆ orchestra ಕೇಳೋಕೆ interest ಇಲ್ಲ.

* ಎಂದು ಹೇಳಿ ಬಾಗಿಲು ತೆರೆಯುತ್ತಾನೆ.

NARAYAN RAO
ಏಯ್ ನಿನ್ನ Orchestra ಕೇಳೋಕೆ ಅಲ್ಲಯ್ಯ ಕರೀತಾ ಇರೋದು.

* ಮನೆಯೊಳಗೆ ಪ್ರವೇಶಿಸಿದ ಧರ್ಮ ಹಿಂತಿರುಗಿ ನೋಡುತ್ತಾನೆ.

NARAYAN RAO (CONT'D)
ನಮ್ ground ಅಲ್ಲಿ ಅವ್ರು function ಮಾಡೋಕೆ ಯಾರು ಅಂತ ಕೇಳೋದಕ್ಕೆ. ಬಾ ಹೋಗೋಣ ಅವ್ರು ಹಲ್ಲುದುರಿಸಿ ಬರೋಣ.

* ಧರ್ಮ ಅವರ ಮಾತನ್ನು ನಿರ್ಲಕ್ಷಿಸಿ ಜೋರಾಗಿ ಬಾಗಿಲನ್ನು ಹಾಕುತ್ತಾನೆ. ನಾರಾಯಣ್ ರಾವ್ ದಂಗಾಗಿ ನೋಡುತ್ತಿದ್ದಾರೆ.

CUT TO

INT. EVENING. DHARMA'S HOUSE

* ಧರ್ಮ beer bottle open ಮಾಡುತ್ತಾನೆ.

CUT TO

* ಧರ್ಮ ಸೋಫಾ ಮೇಲೆ ಕುಳಿತು ಇಡ್ಲಿ ತಿನ್ನುತ್ತಿದ್ದಾನೆ

DHARMA (V.O)
ಸಹಾಯ ಕೇಳ್ಕೊಂಡ್ ಬಂದವರನ್ನ ನಾನ್ಯಾವತ್ತೂ ಹಾಗೇ ಕಳ್ಸಿಲ್ಲ. ಕ್ಯಾಕರ್ಸಿ ಉಗ್ದ್ರೇ ಕಳ್ಸಿರೋದು.

* ಧರ್ಮ beer bottle ಕೈಗೆತ್ತಿಕೊಂಡು ಒಂದು ಗುಟುಕು ಕುಡಿಯುತ್ತಾನೆ.

CUT TO

DHARMA (V.O)
ಯಾರ್ ಸಹಾಯಾನೂ ಇಲ್ದೇ ನಾನೊಬ್ನೇ ಖುಷಿಯಾಗಿಲ್ವಾ?

* ಧರ್ಮ ತಟ್ಟೆಯಲ್ಲಿ ಉಳಿದಿರುವ ಇಡ್ಲಿ ತುಂಡನ್ನು ಪುಡಿ ಮಾಡಿ aquarium ಒಳಗೆ ಹಾಕುತ್ತಾನೆ. ಮೀನು ಓಡಿ ಬಂದು ಅದನ್ನು ತಿನ್ನುತ್ತದೆ.

DHARMA (V.O) CONT'D
ನಂಗ್ ಅಷ್ಟೇ ಸಾಕು..

* ಧರ್ಮ aquarium ಪಕ್ಕದಲ್ಲಿರುವ kitchen synk ನಲ್ಲಿ ಬಟ್ಟಲು ತೊಳೆಯುತ್ತಾನೆ.

CUT TO

EXT. NIGHT. DHARMA'S HOUSE

* ಆಕಾಶದಲ್ಲಿ ಪಟಾಕಿಗಳು ಸಿಡಿಯುತ್ತಿವೆ. Orchestra music ಜೋರಾಗಿ ಕೇಳಿಸುತ್ತಿದೆ.

CUT TO

EXT. NIGHT. COLONY GROUND

* ಚಾರ್ಲಿ dumpster ಪಕ್ಕದಲ್ಲಿ ಕುಳಿತು ಪಟಾಕಿ ಶಬ್ದ ಕೇಳಿ ಹೆದರಿ ಬೊಗಳುತ್ತಿದ್ದಾಳೆ.

CUT TO

INT. NIGHT. DHARMA'S HOUSE

* ಹಾಸಿಗೆಯ ಮೇಲೆ ಮಲಗಿರುವ ಧರ್ಮ ಪಟಾಕಿ ಹಾಗೂ loudspeakerನ ಶಬ್ದದಿಂದಾಗಿ ನಿದ್ದೆ ಬಾರದೆ ಹೊರಳಾಡುತ್ತಿದ್ದಾನೆ.

CUT TO

EXT. NIGHT. COLONY GROUND

* Dumpster ಪಕ್ಕದಲ್ಲಿರುವ ಚಾರ್ಲಿ ಭಯದಿಂದ  ಕುಳಿತಲ್ಲಿಂದಲೇ ಹಿಂದೆ ಸರಿಯುತ್ತಿದ್ದಾಳೆ.

CUT TO

INT. NIGHT. DHARMA'S HOUSE

* ಧರ್ಮ ಸಿಟ್ಟಿನಿಂದ ಎದ್ದು ಕುಳಿತು cigarette ತೆಗೆದು ಬಾಯಿಗಿಡುತ್ತಾನೆ.

CUT TO

EXT. NIGHT. COLONY GROUND

* ಚಾರ್ಲಿ ಕುತೂಹಲದಿಂದ ಮುಂದೆ ನೋಡುತ್ತಿದ್ದಾಳೆ

CUT TO

INT. NIGHT. DHARMA'S HOUSE

* ಧರ್ಮ ಸಿಟ್ಟಿನಿಂದ ಸಿಗರೇಟ್ ಹಚ್ಚುತ್ತಾನೆ.

CUT TO

EXT. NIGHT. COLONY GROUND

* ಆಕಾಶದಲ್ಲಿ ಪಟಾಕಿಗಳು ಸಿಡಿಯುತ್ತಿವೆ. Camera ನಿಧಾನವಾಗಿ tilt down ಆದಂತೆ colony ground establish ಆಗುತ್ತದೆ. ನೂರಾರು ಜನ ಸೇರಿದ್ದಾರೆ. Ground ಮಧ್ಯದಲ್ಲಿ stage ಕಾಣಿಸುತ್ತದೆ. Stage ಮೇಲೆ ಒಂದು ಕಡೆ TV ಹಂಚಿಕೆ ಕಾರ್ಯಕ್ರಮ ನಡೆಯುತ್ತಿದೆ. ಮಧ್ಯದಲ್ಲಿ orchestra ನಡೆಯುತ್ತಿದೆ. Camera ಪೂರ್ತಿಯಾಗಿ ಕೆಳಗಡೆ ಬಂದಾಗ ಧರ್ಮ ನಿಂತುಕೊಂಡಿದ್ದಾನೆ. ಒಂದು ಕ್ಷಣ ಮುಂದೆ ನೋಡಿದ ಧರ್ಮ stage ಕಡೆ ನಡೆದುಕೊಂಡು ಹೋಗುತ್ತಾನೆ. ಜನರು ಕುಡಿದು ತೂರಾಡುತ್ತಾ ಕುಣಿಯುತ್ತಿದ್ದಾರೆ.

* ಧರ್ಮ ಕೈಯಲ್ಲಿರುವ cutting plier ಕಿಸೆಯೊಳಗಿಟ್ಟು ಜನರನ್ನು ದಾಟಿ stage ಕಡೆ ನಡೆದುಕೊಂಡು ಹೋಗುತ್ತಾನೆ.

CUT TO

* ಚಾರ್ಲಿ ಜೋರಾಗಿ ಬೊಗಳುತ್ತಿದ್ದಾಳೆ.

CUT TO

* Stage ಮೇಲಿರುವ ಧರ್ಮ ಒಬ್ಬ bouncer ನನ್ನು ಹೊಡೆದು ಹೊರಗೆ ಎಸೆಯುತ್ತಾನೆ. ಆತ tubelight ಮೇಲೆ ಬಿದ್ದು sparkle ಬರುತ್ತದೆ.

* ಚಾರ್ಲಿ ಬೊಗಳುವುದನ್ನು ನಿಲ್ಲಿಸಿ ನೋಡುತ್ತಿದ್ದಾಳೆ.

* ವೃತ್ತಾಕ್ಕಾರದಲ್ಲಿ ಜೋಡಿಸಿದ್ದ tube lights ಒಂದೊಂದಾಗೇ off ಆಗುತ್ತೆ. ಜನರು ಬೊಬ್ಬೆ ಹೊಡೆಯುತ್ತಾ ದಂಗಾಗಿ ನೋಡುತ್ತಿದ್ದಾರೆ.

CUT TO

* Sparkle ಶಬ್ದ ಕೇಳಿದ ಚಾರ್ಲಿ stage ಕಡೆ ನೋಡುತ್ತಿದ್ದಾಳೆ.

CUT TO:

* ಧರ್ಮ ಇನ್ನೊಬ್ಬ bouncerನ stage ಮುಂದುಗಡೆ ಎಸೆಯುತ್ತಾನೆ. ಒಂದಷ್ಟು ಜನರ ಗುಂಪು ಅಲ್ಲಿಂದ ಓಡುತ್ತಾರೆ.

CUT TO

* Sparkle ತಾಗಿ ಪಟಾಕಿಗಳು ಸಿಡಿಯುತ್ತವೆ.

* ಪಟಾಕಿ ಶಬ್ದಕ್ಕೆ ಹೆದರಿ ಚಾರ್ಲಿ ಬೊಗಳುತ್ತಿದ್ದಾಳೆ.

* ಧರ್ಮ ಇನ್ನೊಬ್ಬ bouncerಗೆ ಒದೆಯುತ್ತಾನೆ. Stage ಸುತ್ತಲಿನ tubelights off ಆಗುತ್ತವೆ. ಜನರು ಬೊಬ್ಬೆ ಹೊಡೆಯುತ್ತಾ ಓಡಿ ಹೋಗುತ್ತಿದ್ದಾರೆ. ರಾಜಕಾರಣಿ ಗಾಬರಿಯಿಂದ ಧರ್ಮನನ್ನು

ನೋಡುತ್ತಿದ್ದಾನೆ.

* ಧರ್ಮ ಒಬ್ಬ bouncer ನ ಮುಖವನ್ನು carton box ಗೆ ಜಜ್ಜುತ್ತಾನೆ. ಇನ್ನೊಬ್ಬ bouncerನ ಮುಖವನ್ನು keyboard ಮೇಲೆ ಎಳೆಯುತ್ತಾನೆ. ಪಟಾಕಿಗಳು ಸಿಡಿಯುತ್ತಿವೆ.

* ಧರ್ಮ ರಾಜಕಾರಣಿಗೆ ಹೊಡೆದಾಗ Banner ಹರಿದು ಮುಖ ಹೊರ ಬರುತ್ತದೆ. ಆತ ನೋವಿನಿಂದ ಅರಚುತ್ತಾನೆ.

* ಪಟಾಕಿ ಸಿಡಿದು ಮುಗಿಯುತ್ತದೆ.

* Stageನಲ್ಲಿ ಏಟು ತಿಂದವರು ನೋವಿನಿಂದ ನರಳುತ್ತಾ ಬಿದ್ದಿದ್ದಾರೆ. Stage ಮೇಲ್ಗಡೆ ಒಂದೇ ಒಂದು light ನೇತಾಡುತ್ತಿದೆ. ಧರ್ಮ ಅದನ್ನು ಕೀಳುತ್ತಾನೆ. Stage ಸಂಪೂರ್ಣವಾಗಿ ಕತ್ತಲಾಗುತ್ತದೆ.

* ಧರ್ಮ cigarette ಹಚ್ಚುತ್ತಾನೆ.

* ಚಾರ್ಲಿ ಧರ್ಮನನ್ನು ನೋಡುತ್ತಿದ್ದಾಳೆ.

* Ground ಪೂರ್ತಿ ಹೊಗೆಯಿಂದ ತುಂಬಿ ಹೋಗಿದೆ.
ಹೊಗೆಯ ಮಧ್ಯೆ ಧರ್ಮ Chicken leg piece ತಿನ್ನುತ್ತಾ ನಡೆದುಕೊಂಡು ಬರುತ್ತಾನೆ.

CUT TO

* ಚಾರ್ಲಿ ಧರ್ಮ ನಡೆದುಕೊಂಡು ಹೋಗುತ್ತಿರುವುದನ್ನು ನೋಡುತ್ತಿದ್ದಾಳೆ.

CUT TO

EXT. NIGHT. DHARMA'S HOUSE

* ಧರ್ಮ ತನ್ನ ಮನೆ ತಲುಪಿದ್ದಾನೆ. ಚಾರ್ಲಿ ಧರ್ಮನನ್ನು ಹಿಂಬಾಲಿಸುತ್ತಾ ಬಂದು ನಿಲ್ಲುತ್ತಾಳೆ. ಧರ್ಮ gate ಹೊರಗಿರುವ ಕಸದ ತೊಟ್ಟಿಯ ಬಳಿ chicken bone ಎಸೆದು ಒಳಗಡೆ ಹೋಗುತ್ತಾನೆ. ತಕ್ಷಣ ಚಾರ್ಲಿ ಕಸದ ತೊಟ್ಟಿಯ ಬಳಿ ಓಡಿ ಬಂದು bone ಹುಡುಕುತ್ತಾಳೆ.

* ಧರ್ಮ ಮನೆಯೊಳಗೆ ಹೋಗಿ ಬಾಗಿಲು ಮುಚ್ಚುತ್ತಾನೆ.

CUT TO

* ಚಾರ್ಲಿ bone ತಿನ್ನುತ್ತಾಳೆ.

CUT TO

INT. NIGHT. DHARMA'S HOUSE

* ಧರ್ಮ ಹಾಸಿಗೆಯ ಮೇಲೆ ಮಲಗಿ ಮುಖದ ಮೇಲೆ ಹೊದಿಕೆ ಎಳೆದುಕೊಳ್ಳುತ್ತಾನೆ.

NIGHT TO DAY

INT. DAY. DHARMA'S CHILDHOOD HOUSE

INSERT: FLASHBACK OF DHARMA'S CHILDHOOD

* ಚಿಕ್ಕ ಧರ್ಮ Bed Sheet ಹೊದ್ದುಕೊಂಡು ಮಲಗಿದ್ದಾನೆ. ಮಂಚದ ಹತ್ತಿರ ನಿಂತಿರುವ ಧರ್ಮನ ತಂಗಿ ಧರಣಿ bed sheet ಎಳೆಯುತ್ತಾಳೆ.

JR DHARMA

ಏ... ಹೋಗೇ..

* ಎಂದು ಹೇಳಿ ಧರ್ಮ ಮುಖ ತಿರುಗಿಸಿ ಮಲಗುತ್ತಾನೆ. ಧರಣಿ ಕಿಟಕಿಯ ಹತ್ತಿರ ಹೋಗಿ curtain ಎಳೆಯುತ್ತಾಳೆ. ಧರ್ಮನ ಮುಖದ ಮೇಲೆ ಬೆಳಕು ಬೀಳುತ್ತೆ. ಧರ್ಮ ಅಸಹನೆಯಿಂದ ನೋಡುತ್ತಾನೆ.

DHARANI
ಅಣ್ಣಾ. please ಬಾರೋ.

JR DHARMA
ಏಯ್ ನೀನ್ ಹೋಗೇ.. ನಾನ್ ಬರಲ್ಲ

* ಎಂದು ಹೇಳಿ bedsheet ಎಳೆದುಕೊಳ್ಳುತ್ತಾನೆ.

DHARANI
ಅಮ್ಮಾ.. ಅಣ್ಣ ಎದ್ದೇಳ್ತಾ ಇಲ್ಲ.

* ಅಮ್ಮ ಅಡಿಗೆ ಕೋಣೆಯಲ್ಲಿ tiffin box ಗೆ ತಿಂಡಿ ತುಂಬಿಸುತ್ತಾ,

SHARADA
ಅವ್ನು ಬರಲ್ಲ ಅಂತ ಗೊತ್ತು ತಾನೇ? ನೀನ್ ಬೇಗ ready ಆಗು..

* ಎಂದು ಹೇಳಿ tiffin box ತೆಗೆದುಕೊಂಡು ಹೊರ ಬರುತ್ತಾರೆ.

SHARADA
ರೀ, ವೀಣೆ ಶ್ರುತಿ ಪೆಟ್ಟಿಗೆ ಎಲ್ಲ ತಗೊಂಡ್ರಾ?

DATTANNA (O.S)
ಹಾನ್ ತಗೊಂಡೆ.

* ಧರಣಿ ಧರ್ಮನನ್ನು ದೂಡುತ್ತಾ ಹೊರಗೆ ಬರುತ್ತಾಳೆ. ಧರ್ಮ ಕುರ್ಚಿಯ ಮೇಲೆ ಕುಳಿತು ಎದುರುಗಡೆ table ಮೆಲಿರುವ ಪುಸ್ತಕವನ್ನು ಕೈಗೆತ್ತಿಕೊಳ್ಳುತ್ತಾನೆ. ಶಾರದಾ tiffin boxನ ಧರಣಿಯ ಕೈಗೆ ಕೊಟ್ಟು,

SHARADA
ಏಯ್ ಧರಣಿ, ತಗೋ ಮಾ, ಇದನ್ನ car ನಲ್ಲಿ ಇಟ್ಬಿಡು, ಜಾಣೆ..

* ಎಂದು ಹೇಳಿ dressing table ಮುಂದೆ ಹೋಗುತ್ತಾರೆ. ಧರಣಿ tiffin box ತೆಗೆದುಕೊಂಡು ಧರ್ಮನನ್ನು ನೋಡಿ ಸಿಡುಕು ಮುಖ ಮಾಡಿ ಅಲ್ಲಿಂದ ಹೋಗುತ್ತಾಳೆ. ಧರ್ಮ ಮುಸು ನಗುತ್ತಾ ಪುಸ್ತಕ ಬಿಡಿಸುತ್ತಾನೆ.

* ಶಾರದಾ ಕನ್ನಡಿ ಮುಂದೆ ನಿಂತು makeup ಮಾಡುತ್ತಾ,

SHARADA
ಧರ್ಮ tabel ಮೇಲೆ ತಿಂಡಿ ಇಟ್ಟಿದೀನಿ. Brush ಮಾಡ್ಕೊಂಡು ತಿಂದ್ಬಿಡು.

* ಧರ್ಮ ಪುಸ್ತಕ ನೋಡುತ್ತಾ,

DHARMA
ಹೂ ಆಯ್ತಮ್ಮಾ.

* ಶಾರದಾ ಕಣ್ಣಿಗೆ ಕಾಡಿಗೆ ಹಚ್ಚುತ್ತಾ,

SHARADA
ಆಮೇಲೆ ತಣ್ಣೀರು ಕುಡಿಯೋಕೆ ಹೋಗ್ಬೇಡ. Flask ಅಲ್ಲಿ

ಬಿಸಿನೀರು ಇಟ್ಟಿದ್ದೀನಿ. ಅದನ್ನೇ ಕುಡಿ ಆಯ್ತಾ?

JR DHARMA
ಹೂಂ, ಆಯ್ತು.

DATTANNA (O.S)
ಶಾರದಾ, ಇನ್ನೂ ಎಷ್ಟೊತ್ತು?

SHARADA
ಹಾನ್..

* ಎಂದು ಹೇಳಿ ಧರ್ಮನ ಹತ್ತಿರ ಬಂದು,

SHARADA
ಗುಡುಗು ಬಂದ್ರೆ Tv off ಮಾಡ್ದೆ ಇರ್ಬೇಡ.

* ಎಂದು ಹೇಳಿ ಹಣೆಗೆ ಮುತ್ತು ಕೊಟ್ಟು ಹೊರಡುತ್ತಾರೆ. ಧರ್ಮ ಮುಸುನಗುತ್ತಾ ಅಮ್ಮ ಹೋಗುತ್ತಿರುವುದನ್ನು ನೋಡುತ್ತಿದ್ದಾನೆ.

* ಶಾರದಾ car ಹತ್ತುತ್ತಾರೆ. ಧರಣಿ ಹಿಂದುಗಡೆ seat ನಲ್ಲಿ ಕುಳಿತಿದ್ದಾಳೆ.

DHARANI (OS)
ಅಣ್ಣಾ..

* ಧರ್ಮ ತಂಗಿಯನ್ನು ನೋಡುತ್ತಿದ್ದಾನೆ.

DHARANI
ನಾವು ಬರ್ತಾ ice cream ತಿಂದ್ಕೊಂಡ್ ಬರ್ತೀವಿ. ನಿಂಗೆ ತರಲ್ಲ. ಟಾಟಾ..

* ಧರ್ಮ ಮಂದಹಾಸದಿಂದ ನೋಡುತ್ತಿದ್ದಾನೆ. Car ಮುಂದೆ ಚಲಿಸುತ್ತದೆ. ಧರಣಿ ಕೈಬೀಸುತ್ತಾಳೆ. ಧರ್ಮ ಧರಣಿಯನ್ನು ನೋಡುತ್ತಾ ಕೈ ಬೀಸುತ್ತಿದ್ದಾನೆ.

BACK TO

INT. DAY. DHARMA'S HOUSE

* ಧರ್ಮ ಕೈ ಬೀಸುತ್ತಾ ಥಟ್ಟನೆ ಕನಸಿನಿಂದ ಎಚ್ಚರಗೊಂಡು ಎದ್ದು ಕೂರುತ್ತಾನೆ.

CUT TO

EXT. DAY. COLONY

* ಕಸದ ತೊಟ್ಟಿಗೆ ಇಡ್ಲಿ packet ಬೀಳುತ್ತದೆ. ಚಾರ್ಲಿ ತಲೆಯ ಮೇಲಿರುವ ಇಡ್ಲಿ packet ಜೊತೆಗೆ ಮೇಲೇಳುತ್ತಾಳೆ. ಧರ್ಮ bike ನಲ್ಲಿ ಹೋಗುತ್ತಿದ್ದಾನೆ. ಚಾರ್ಲಿ ಧರ್ಮನನ್ನು ನೋಡುತ್ತಿದ್ದಾಳೆ.

CUT TO

EXT. EVENING. COLONY

* ಕಸದ ತೊಟ್ಟಿಯ ಬಳಿ ಕಸ ಚೆಲ್ಲಾಪಿಲ್ಲಿಯಾಗಿದೆ. ಕೃಪಾಕರ್ ಹೆಂಡತಿ ಜಾನಕಿ ಕಸ ಗುಡಿಸುತ್ತಿದ್ದಾರೆ. ಆದ್ರಿಕಾ ತಾಯಿ ಅವಳಿಗೆ ತಿಂಡಿ ತಿನ್ನಿಸುತ್ತಿದ್ದಾರೆ.

COLONY LADY 1
ಮಕ್ಳು ಯಾಕೆ ಕಸ ಹಾಕ್ತಾರೆ?

VICKY MOTHER
ಮಕ್ಕಳಲ್ಲಪ್ಪಾ. ಇದು ಯಾವ್ದೋ ಬೀದಿ ನಾಯಿದೇ ಕೆಲ್ಸ ಇರ್ಬೇಕು.

JANAKI
ಇದ್ಯಾವ್ ನಾಯಿ ದರಿದ್ರುದ್ದು. ಹೇಗ್ ಮಾಡ್ತಾಕಿದೆ ನೋಡಿ!

ADRIKA
ರಜತ್ ಅಣ್ಣ, ನಾನೂ ಬಂದೆ.

* ಆದ್ರಿಕಾ ಮಕ್ಕಳು ಆಟವಾಡುತ್ತಿರುವ ಕಡೆ ಓಡುತ್ತಾಳೆ.

ADRIKA MOTHER
ಆದೀ..

* ತಕ್ಷಣ ಧರ್ಮನ bullet ಶಬ್ದ ಕೇಳಿಸುತ್ತೆ. ಆದ್ರಿಕಾ ಭಯದಿಂದ ಹಿಂತಿರುಗಿ ನೋಡುತ್ತಾಳೆ. ಧರ್ಮ bullet ನಲ್ಲಿ colony ಪ್ರವೇಶಿಸುತ್ತಿದ್ದಾನೆ. ಆದ್ರಿಕಾ ಭಯದಿಂದ ಅಮ್ಮನ ಹತ್ರ ಓಡಿ ಬರುತ್ತಾಳೆ. ಧರ್ಮ ಅವರಿಬ್ಬರನ್ನು ದಾಟಿ ಹೋಗುತ್ತಾನೆ. ಆದ್ರಿಕಾ ಭಯದಿಂದ ಧರ್ಮನನ್ನು ನೋಡುತ್ತಿದ್ದಾಳೆ.

* ಧರ್ಮ ಮನೆಯ ಗೇಟ್ ತೆರೆಯುತ್ತಾನೆ.

ADRIKA MOTHER (O.S)
ತಗೋ.

* ಆದ್ರಿಕಾ ತಾಯಿ ಅವಳಿಗೆ ತಿಂಡಿ ತಿನ್ನಿಸಲು ಪ್ರಯತ್ನಿಸುತ್ತಾರೆ. ಆದ್ರಿಕಾ ಬೇಡ ಎಂದು ತಲೆಯಾಡಿಸುತ್ತಾಳೆ.

ADRIKA MOTHER
ನೋಡು ಆದೀ... ನೀನೀಗ ತಿಂದಿಲ್ಲ ಅಂದ್ರೆ ಹಿಟ್ಲರ್ ಮಾಮ ನಿನ್ನ ಎತ್ಕೊಂಡ್ ಹೋಗ್ತಾರೆ ಅಷ್ಟೇ.

* ಆದ್ರಿಕಾ ಭಯದಿಂದ ಒಂದು ತುತ್ತು ತಿನ್ನುತ್ತಾಳೆ.

CUT TO

INT. EVENING. DHARMA'S HOUSE.

* TVಯಲ್ಲಿ Charlie Chaplin gibberish song ಪ್ರಸಾರವಾಗುತ್ತಿದೆ. Camera ನಿಧಾನವಾಗಿ ಎಡ ಬದಿಗೆ pan ಆಗುತ್ತದೆ. ಧರ್ಮ ಸ್ನಾನ ಮಾಡುತ್ತಾ gibberish song ಗುನುಗುತ್ತಿದ್ದಾನೆ.

DHARMA
SE BELLA GIU SATORE

JE NOTRE SO CAFORE

JE NOTRE SI CAVORE

CUT TO

EXT. EVENING. DHARMA'S HOUSE

* ಮನೆ ಹೊರಗಡೆ ಬಂದಿರುವ ಧರ್ಮ phone ಕಿವಿಗಿಟ್ಟು gate ತೆಗೆದು ಹೋಗುತ್ತಾನೆ.

TELEMARKETING EXECUTIVE (O.S)
(Telephonic Voice)

ನಮಸ್ಕಾರ ಸಾರ್. ನಾನು ಸ್ಪೆನ್ಸರ್ 4G ಕಂಪನಿಯಿಂದ call ಮಾಡ್ತಾ ಇರೋದು. ನಮ್ 4G SIM ಅಲ್ಲಿ ಹೊಸಾ internet offers ಇದೆ.

* ಧರ್ಮ frame exit ಆಗುತ್ತಾನೆ.

CUT TO

EXT. EVENING. ROAD TO AJJI SHOP

* ಧರ್ಮ ನಡೆದುಕೊಂಡು ಹೋಗುತ್ತಿದ್ದಾನೆ. ರಸ್ತೆಯ ಇನ್ನೊಂದು ಬದಿಯಲ್ಲಿ ಇಬ್ಬರು ಹೆಂಗಸರು ನಡೆದುಕೊಂಡು ಹೋಗುತ್ತಿದ್ದಾರೆ.

RANDOM LADY 1 (O.S)
ಹೌದು ಶಾಂತಮ್ಮ, ಎಳನೀರ್ ಅಭಿಷೇಕ ಮಾಡ್ಸಿದ್ ಮೇಲೆನೇ ಮಗ ಪಾಸ್ ಆಗಿದ್ದು.

RANDOM LADY 2 (O.S)
ಭಕ್ತಿಯಿಂದ ಬೇಡ್ಕೊಂದ್ರೆ ಆ ಮಂಜುನಾಥ ಏನ್ ಬೇಕಾದ್ರೂ ಕೊಡ್ತಾನಪ್ಪಾ.

* ಧರ್ಮ ಅಸಹನೆಯಿಂದ ಅವರತ್ತ ನೋಡಿ ಮುಂದೆ ನಡೆಯುತ್ತಾನೆ.

DHARMA (V.O)
ಕೇಳಿದ್ಮೇಲ್ ಕೊಡೋಕೆ ದೇವ್ರೇ ಆಗ್ಬೇಕ? ಅವನನ್ನ ಹುಡ್ಕೊಂಡ್ಹೋಗಿ, ಕಾಲಿಗ್ ಬಿದ್ದು ಬೇಡ್ಕೊಳೋ ಅಂಥದ್ದು ಏನೂ ಇಲ್ಲ. ಇದ್ದಿದ್ದೆಲ್ಲಾಅವ್ನೆ ಕಿತ್ಕೊಂಡ್ ಮೇಲೆ, ವಾಪಸ್ ಏನ್ ಕೊಡ್ತಾನೆ?

* ಧರ್ಮ light ಕಂಬವನ್ನು ದಾಟಿ ಮುಂದೆ ಹೋದಂತೆ ಚಾರ್ಲಿ ಅವನನ್ನು ಹಿಂಬಾಲಿಸುತ್ತಿದ್ದಾಳೆ. ಧರ್ಮ ಮುಂದೆ ಹೋಗುತ್ತಾನೆ. ಚಾರ್ಲಿ footpath ನಲ್ಲಿ ಕುಳಿತು ಧರ್ಮನನ್ನು ನೋಡುತ್ತಿದ್ದಾಳೆ.

CUT TO

EXT. EVENING. AJJI SHOP

WIDESHOT: TEA ಅಂಗಡಿ ಕಾಣಿಸುತ್ತಿದೆ. ಒಬ್ಬ ವ್ಯಕ್ತಿ COIN BOX PHONE ರಿಪೇರಿ ಮಾಡುತ್ತಿದ್ದಾನೆ.

MONTAGES:

* 'ಶ್ರವಣ ಟಿಫನ್ ಸೆಂಟರ್' ಎಂದು black board ಮೇಲೆ ಬರೆದಿದೆ. Rate card ಮೇಲೆ ಆಯಾಯ ತಿಂಡಿಯ ಬೆಲೆ ಬರೆದಿರುತ್ತದೆ.

* ಗೋಡೆಯ ಮೇಲೆ ಅಜ್ಜ, ಅಜ್ಜಿ ಹಾಗೂ ಅವರ ಮಗನಿರುವ ಫೋಟೋ ನೇತು ಹಾಕಿದೆ.

* ಅಜ್ಜ ಶ್ಲೋಕ ಹೇಳುತ್ತಾ ಅಗರಬತ್ತಿ ಹಚ್ಚಿ ದೇವರಿಗೆ ಪೂಜೆ ಮಾಡುತ್ತಿದ್ದಾರೆ.

* ಅಜ್ಜಿ ಚಹಾ ಮಾಡುತ್ತಿದ್ದಾರೆ.

* ಬೆಕ್ಕಿನ ಮರಿ ಹಾಲು ಕುಡಿಯುತ್ತಿದೆ.

* ಕಾದ ಎಣ್ಣೆಯಲ್ಲಿ ಬಜ್ಜಿ fry ಆಗುತ್ತಿದೆ.

* Coin phone box ರಿಪೇರಿ ಮಾಡುತ್ತಿರುವ ವ್ಯಕ್ತಿ (ಜಯರಾಮ್) ಅಜ್ಜಿಯನ್ನು ನೋಡಿ,

JAYARAM
ಅಜ್ಜಿ ನಿಮ್ ಮಗ ಏನಾದ್ರು ಫೋನ್ ಮಾಡಿದ್ರೆ ಅಮೇರಿಕಾದಿಂದ ಒಂದು ಮೊಬೈಲ್ ಕಳ್ಸೋಕೆ ಹೇಳು. ಈ coin box ರಿಪೇರಿ ಮಾಡಿ ಮಾಡಿ ಸಾಕಾಗೋಗಿದೆ ನಂಗೆ.

* Walking stick ಹಿಡಿದುಕೊಂಡು ಭಜ್ಜಿ ಮಾಡುತ್ತಿರುವ ಅಜ್ಜ,

AJJA
ಕಳ್ಸ್ತಾನೆ ಕಳ್ಸ್ತಾನೆ. ಅವ್ನಿಗೆ ಅವ್ನ ಅಪ್ಪ ಅಮ್ಮಂಗೆ ಒಂದು phone ಮಾಡೋಕೂ ಪುರ್ಸೊತ್ತಿಲ್ಲ. ಇನ್ನು Mobile ಬೇರೆ ಕಳ್ಸ್ತಾನೆ.

* ಜಯರಾಮ್ phone ಇಟ್ಟು ಮುಂದೆ ಬರುತ್ತಾನೆ. ಅಜ್ಜಿ ಅವನನ್ನು ನೋಡಿ

AJJI
ಅವ್ರ ಮಾತೆಲ್ಲ ಕೇಳ್ಬೇಡಪ್ಪ.

* ಒಂದು ಲೋಟ tea ಹಾಗೂ cigarette ಕೊಟ್ಟು,

AJJI
ಸರಿ ಆಯ್ತಾ?

JAYARAM
ಹೂ ಅಜ್ಜಿ.

* ಧರ್ಮ ಅಂಗಡಿಯ ಹತ್ತಿರ ಬರುತ್ತಿದ್ದಾನೆ. ಧರ್ಮನನ್ನು ನೋಡಿದ ತಕ್ಷಣ ಅಜ್ಜಿ ಮುಗುಳ್ನಗುತ್ತಾರೆ.

DHARMA
ಒಂದು packet cigarette ಕೊಡಿ

* ಅಜ್ಜಿ ಕಾಳಜಿಯಿಂದ,

AJJI
ಅದೆಲ್ಲಾ ಯಾಕಪ್ಪ? ಆ packet ಮೇಲಿರೋ photo ನೋಡಿಲ್ವಾ?

* Bench ಮೇಲೆ ಕುಳಿತು tea ಕುಡಿಯುತ್ತಿರುವ ಜಯರಾಮ್ ಅಜ್ಜಿಯ ಮಾತು ಕೇಳಿ ದಂಗಾಗುತ್ತಾನೆ.

DHARMA
ನಾನು cigarette ಕೇಳಿದ್ದು, ಉಪದೇಶ ಅಲ್ಲ. ಎರಡ್ ಇಡ್ಲಿ ಕೊಡಿ.

* ಅಜ್ಜ ಅಜ್ಜಿಯನ್ನು ನೋಡಿ,

AJJA
ಏನೇ? ವ್ಯಾಪಾರ ಹಾಳ್ ಮಾಡ್ಬೇಕು ಅಂತ ಅಂಗಡೀಲಿ ಕೂತಿದ್ದೀಯಾ ನೀನು? ಬಾಯಿ ಮುಚ್ಕೊಂಡ್ ಅವ್ನು ಕೇಳಿದ್ ಅವ್ನಿಗ್ ಕೊಡು.

* ಅಜ್ಜಿ ಧರ್ಮನಿಗೆ Cigarette packet ಕೊಡುತ್ತಾರೆ. ಧರ್ಮ Cigarette ಹಚ್ಚುತ್ತಾನೆ.

AJJA

(ಧರ್ಮನನ್ನು ನೋಡಿ)
ಅಪ್ಪಾ. ನೀನು ದಿನಾ ಬಂದು ನನ್ ಹೆಂಡ್ತಿ ಜೊತೆ ಜಗಳ ಆಡೋದನ್ನ ನಿಲ್ಸು. ನೀನೊಂದು ಮದ್ವೆ ಮಾಡ್ಕೋ. ಅವಾಗ ನೀನು ನಿನ್ ಹೆಂಡ್ತಿ ಜೊತೆ ಜಗಳ ಆಡ್ಕೋಬೇದು.

DHARMA
ಸ್ವಲ್ಪ ಬೇಗ ಕೊಡಿ.

AJJI
ತಾಳಪ್ಪ, ಬಿಸೀದ್ ಕೊಡ್ತೀನಿ.

* ಧರ್ಮ Cigarette ಸೇದುತ್ತಿದ್ದಾನೆ. ಜಯರಾಮ್ ಧರ್ಮನನ್ನು ನೋಡಿ,

JAYARAM
ಧರ್ಮ ಸರ್, ರಾತ್ರಿ ಭಜನೆಗೆ ಹೋಗಲ್ವಾ?

* ಧರ್ಮ ಜಯರಾಮ್ ನ ಗುರಾಯಿಸಿ ನೋಡುತ್ತಾನೆ. ಜಯರಾಮ್ ಪೆಚ್ಚು ಮುಖ ಮಾಡಿ ಸುಮ್ಮನಾಗುತ್ತಾನೆ. ಧರ್ಮ ಅಜ್ಜಿಯನ್ನು ನೋಡಿ,

DHARMA
ಎರಡೇ ಸಾಕು.

* ಅಜ್ಜಿ ನಗು ಮುಖದಿಂದ ತಲೆಯಾಡಿಸುತ್ತಾರೆ.

CUT TO

INT. EVENING. DHARMA'S HOUSE

* ಧರ್ಮ ಮನೆ ಟೇಬಲ್ ಮೇಲೆ ಇಡ್ಲಿ packet ತೆರೆದಾಗ ಅದರಲ್ಲಿ ಮೂರು ಇಡ್ಲಿಯಿದೆ. ಧರ್ಮನಿಗೆ ಕಿರಿಕಿರಿಯಾಗುತ್ತದೆ.

CUT TO

* ಧರ್ಮ ಸೋಫಾದಲ್ಲಿ ಕುಳಿತು beer ಕುಡಿಯುತ್ತಾ TV ನೋಡುತ್ತಿದ್ದಾನೆ.

FOCUS SHIFT TO: DINING TABLE ಮೇಲೆ ಒಂದು ಇಡ್ಲಿ ಕಾಣಿಸುತ್ತಿದೆ. ಸುತ್ತಲೂ ನೊಣ ಹಾರುತ್ತಿದೆ.

CUT TO

EXT. DAY. DHARMA'S HOUSE/COLONY

* ಮನೆ ಹೊರಗಡೆ ಬಂದಿರುವ ಧರ್ಮ bikeನಲ್ಲಿ ಕುಳಿತು gate latch ಹಾಕಲು ಪ್ರಯತ್ನಿಸುತ್ತಿದ್ದಾನೆ. Petrol tank ಮೇಲೆ ಇಡ್ಲಿ packet ಇಟ್ಟಿದೆ. Gate Lock ಆಗುತ್ತಿಲ್ಲ. ಧರ್ಮ bike start ಮಾಡಿ ಮುಂದೆ ಹೋಗುತ್ತಾನೆ.

* ಇಡ್ಲಿ packet ಅನ್ನು ಕಸದ ತೊಟ್ಟಿಯ ಬಳಿ ಎಸೆಯುತ್ತಾನೆ. ಚಾರ್ಲಿ ಕಸದ ತೊಟ್ಟಿಯ ಬಳಿ ಮಲಗಿದ್ದಾಳೆ. ಚಾರ್ಲಿ ಇಡ್ಲಿ ತಿನ್ನುತ್ತಾಳೆ. ವಿಕ್ಕಿ wheeling ಮಾಡುತ್ತಾ dumpster ಮುಂದೆ ಹೋಗುತ್ತಾನೆ.

CUT TO

INT. DAY. FACTORY

* Factory ಯಲ್ಲಿ ಉತ್ತಮ್ L-joint ಹಿಡಿದುಕೊಂಡು ಕುಳಿತಿದ್ದಾನೆ. ಉತ್ತಮ್ ಥಟ್ಟನೆ ಎದ್ದು ನಿಲ್ಲುತ್ತಾನೆ. ಎದುರುಗಡೆ ಧರ್ಮ ನಡೆದುಕೊಂಡು ಬರುತ್ತಿದ್ದಾನೆ. ಧರ್ಮ ಉತ್ತಮ್ ಹತ್ತಿರ ಬಂದ

ತಕ್ಷಣ,

UTTAM
Good morning Sir..

CUT TO

JUMPCUTS:

CLOSE SHOT : ಧರ್ಮ HELMET ಅನ್ನು TABLE ಮೇಲಿಡುತ್ತಾನೆ.

CLOSE SHOT: L JOINT ತುಂಡಾಗುತ್ತದೆ.

CLOSE SHOT : ಧರ್ಮ welding ಮಾಡುತ್ತಾನೆ.

* ಉತ್ತಮ್ ಪೆಚ್ಚು ಮುಖದಿಂದ ನೋಡುತ್ತಿದ್ದಾನೆ.

CUT TO

INT. DAY. FACTORY CAFETERIA

* ಧರ್ಮ ಒಂದು ಗುಟುಕು tea ಕುಡಿದು ಲೋಟವನ್ನು table ಮೇಲಿಡುತ್ತಾನೆ.

TEA GLASS TRANSITION

EXT. EVENING. AJJI SHOP

* ಅಜ್ಜಿ ಅಂಗಡಿಯ ಡಬ್ಬದ ಮೇಲೆ Tea ಲೋಟ ಇಟ್ಟಿದೆ. ಒಬ್ಬ ವ್ಯಕ್ತಿ ಅದನ್ನು ತೆಗೆದುಕೊಳ್ಳುತ್ತಾನೆ. ಧರ್ಮ ಪಕ್ಕದ ಡಬ್ಬದ ಮೇಲೆ ದುಡ್ಡಿಟ್ಟು ಅಜ್ಜಿಯನ್ನು ನೋಡಿ,

DHARMA
ಎರಡೇ ಸಾಕು

AJJI
ಆಯ್ತಪ್ಪ

CUT TO

INT. EVENING. DHARMA'S HOUSE

* ಧರ್ಮ ಮನೆಯೊಳಗೆ ಬಂದು dining table ಮೇಲೆ ಇಡ್ಲಿ packet ಇಡುತ್ತಾನೆ. Aquarium ಹತ್ತಿರ ಬಂದು ಮೇಲ್ಗಡೆ ನೋಡಿ Aquarium ಅನ್ನ ಸರಿಯಾಗಿ adjust ಮಾಡಿ ಇಡ್ತಾನೆ.

CUT TO

JUMP CUTS:

* ಇಡ್ಲಿ packet ತೆರೆಯುತ್ತದೆ. ಅದರಲ್ಲಿ ಮೂರು ಇಡ್ಲಿಯಿದೆ.

* ಧರ್ಮ beer bottle open ಮಾಡುತ್ತಾನೆ.

* ಧರ್ಮ beer ಕುಡಿದು bottleನ TV ಮುಂದಿರುವ table ಮೇಲಿಡುತ್ತಾನೆ.

* ಧರ್ಮ Cigarette ಸೇದುತ್ತಾ ಕುಳಿತಿದ್ದಾನೆ.

SLOW CHARGE ON DHARMA'S FACE

DHARMA (V.O)
ಮನೆ, ಫ್ಯಾಕ್ಟರಿ, ಗಲಾಟೆ, ಇಡ್ಲಿ, cigarette, beer. ಇಷ್ಟೇ ನನ್ ಲೈಫ್. ಬೇರೇನೂ interesting ಇಲ್ಲ.

DHARMA'S FACE CHANGES TO HIS CHILDHOOD FACE

INT. LATE EVENING. DHARMA'S CHILDHOOD HOUSE

INSERT: FLASHBACK OF DHARMA'S CHILDHOOD

* Junior ಧರ್ಮ TV ನೋಡುತ್ತಾ ಖುಷಿಯಿಂದ ನಗಾಡುತ್ತಿದ್ದಾನೆ. TVಯಲ್ಲಿ Charlie Chaplinನ ಹಾಸ್ಯ ಸನ್ನಿವೇಶ ಪ್ರಸಾರವಾಗುತ್ತಿದೆ. ತಕ್ಷಣ current ಹೋಗುತ್ತದೆ. ಜೋರಾದ ಗುಡುಗಿನ ಸದ್ದು ಕೇಳಿಸುತ್ತದೆ. ಹೊರಗಡೆ ಮಳೆ ಸುರಿಯುತ್ತಿದೆ. ಧರ್ಮ ಗುಡುಗಿನ ಶಬ್ದಕ್ಕೆ ಭಯಗೊಂಡು ಹೊರಗಡೆ ನೋಡುತ್ತಿದ್ದಾನೆ.

CUT TO

EXT. EVENING. ROAD

* ಜೋರಾಗಿ ಮಳೆ ಸುರಿಯುತ್ತಿದೆ. Car ಚಲಿಸುತ್ತಿದೆ.

SHARADA (O.S)
ಸ್ವಲ್ಪ ಬೇಗ ಹೋಗೋಣ ರೀ.

* ಧರ್ಮನ ತಂದೆ(ದತ್ತಣ್ಣ) car ಓಡಿಸುತ್ತಿದ್ದಾರೆ. ಧರಣಿ ಹಿಂದಿನ seatನಲ್ಲಿ ಕುಳಿತು icecream ತಿನ್ನುತ್ತಿದ್ದಾಳೆ.

SHARADA (CONT'D)
ಧರ್ಮ ಒಬ್ನೇ ಏನ್ ಮಾಡ್ತಿರ್ತಾನೋ  ಏನೋ. ಈ ಮಳೆ ಬೇರೆ.

DATTANNA
ಅವ್ನಿಗ್ ಏನು. ಕೂತ್ಕೊಂಡ್ TV ನೋಡ್ತಿರ್ತಾನೆ.

* Car ಚಲಿಸುತ್ತಿದೆ. ದತ್ತಣ್ಣ front mirror ನೋಡುತ್ತಾ,

DATTANNA
Ice cream ಚೆನ್ನಾಗಿದ್ಯಾ ಪುಟ್ಟೀ?

DHARANI
ಹಾನ್ ಪಪ್ಪ.. ಅಮ್ಮಾ, 5 ice cream ಇದೆ.. ಒಂದು ನಿಂಗೆ, ಒಂದು ಅಣ್ಣಂಗೆ. ಅಪ್ಪನಿಗೆ ಬೇಡ.  ಮೂರ್ ice cream ನಂಗೆ.. Ok ನಾ?

SHARADA (O.S)
ಆಯ್ತಮ್ಮಾ.

DHARANI
Promise

SHARADA
ಹೂ..

DHARANI
Promise ಅಂತ ಹೇಳು

* ಅಮ್ಮ ಹಿಂದೆ ತಿರುಗಿ ಉತ್ತರಿಸುವಷ್ಟರಲ್ಲಿ ದಾರಿ ಮಧ್ಯ ನಾಯಿಯೊಂದು ವೇಗವಾಗಿ ರಸ್ತೆ ದಾಟುತ್ತದೆ. ದತ್ತಣ್ಣ ನಾಯಿಗೆ ಗುದ್ದುವುದನ್ನು ತಪ್ಪಿಸಲು steering ಎಡ ಬದಿಗೆ ತಿರುಗಿಸಿ ಕಾರಿನ ಮೇಲೆ ನಿಯಂತ್ರಣ ಕಳೆದುಕೊಳ್ಳುತ್ತಾರೆ. Car ಹಾರಿ ಇಳಿಜಾರು ಪ್ರದೇಶದಲ್ಲಿ ಪಲ್ಟಿಯಾಗುತ್ತದೆ.

* Car ಪಲ್ಟಿಯಾಗುತ್ತಿರುವ shots.

* Car ಒಳಗಡೆ ಧರಣಿಯ ತಲೆ ಕನ್ನಡಿಗೆ ಹೊಡೆದು ಗಾಜು ಒಡೆಯುತ್ತದೆ.

FACE OUT

* Car ಪಲ್ಟಿಯಾಗಿ ಬಿದ್ದಿದೆ. Carಹಿಂದಿನ light ಉರಿಯುತ್ತಿದೆ. Camera slide ಆದಂತೆ ಕಾರಿನ window ನಿಂದ ರಕ್ತಸಿಕ್ತವಾದ ಧರಣಿಯ ಕೈ ಹೊರ ಚಾಚಿದೆ.

LIGHTNING BACK TO

INT. EVENING. DHARMA'S HOUSE

* ಧರ್ಮ ಥಟ್ಟನೆ ಕನಸಿನಿಂದ ಎಚ್ಚರಗೊಳ್ಳುತ್ತಾನೆ. ಧರ್ಮ ಸ್ವಲ್ಪ ಸುಧಾರಿಸಿಕೊಂಡು cigarette ಎತ್ತಿಕೊಳ್ಳಲು ಕೈ ಮುಂದೆ ಮಾಡುವಷ್ಟರಲ್ಲಿ ಹೊರಗಿಂದ ನಾಯಿಮರಿ ಅಳುತ್ತಿರುವ ಧ್ವನಿ ಕೇಳಿಸುತ್ತದೆ.

CUT TO

EXT. EVENING. DHARMA'S HOUSE

* ಧರ್ಮ ಬಾಗಿಲು ತೆರೆದು ಹೊರಗೆ ನೋಡಿದಾಗ ಮನೆ gate ತೆರೆದಿರುವುದು ಕಾಣಿಸುತ್ತದೆ. ಪಕ್ಕದಲ್ಲಿ ಗೋಡೆಗೆ ನೇತು ಹಾಕಿರುವ ಛತ್ರಿ ತೆಗೆದು ಬಿಡಿಸಲು ಮುಂದಾದಾಗ ಚಾರ್ಲಿ ಮಳೆಯಲ್ಲಿ ನೆನೆಯುತ್ತಾ ಕುಳಿತಿದ್ದಾಳೆ. ಚಾರ್ಲಿ ಮನೆಯೊಳಗೆ ಪ್ರವೇಶಿಸಲು ಪ್ರಯತ್ನಿಸುತ್ತಾಳೆ. ಧರ್ಮ ಸಿಟ್ಟಿನಿಂದ ಛತ್ರಿ ಬೀಸುತ್ತಾ,

DHARMA

ಏಯ್.. ಹೋಗ್ ಹೋಗು.

* ಚಾರ್ಲಿ ಹಿಂದೆ ತಿರುಗಿ ಓಡುತ್ತಾಳೆ. ಧರ್ಮ ಛತ್ರಿ ಬಿಡಿಸಿ gate ಹತ್ತಿರ ಬಂದು ಒಂದು ಕಲ್ಲನ್ನಿಟ್ಟು gate ಮುಚ್ಚಿ ವಾಪಸ್ ಹೋಗುತ್ತಾನೆ.

* Camera ಬಲ ಬದಿಗೆ slide ಆದಾಗ ಚಾರ್ಲಿ ಕಸದ ತೊಟ್ಟಿಯ ಪಕ್ಕದಲ್ಲಿ ಒದ್ದೆಯಾಗಿ ಕುಳಿತು ಅತ್ತಿತ್ತ ನೋಡುತ್ತಿದ್ದಾಳೆ.

CUT TO

EXT. DAY. COLONY

* ಮುಂಜಾವಿನ ಸಮಯ. ಒಂದಿಬ್ಬರು ಕಾಲನಿ ಸದಸ್ಯರು ನಡೆದುಕೊಂಡು ಹೋಗುತಿದ್ದಾರೆ. Newspaper ಹಾಕುವ ವ್ಯಕ್ತಿ cycle ನಲ್ಲಿ ಬರುತ್ತಾ,

NEWSPAPER GUY

Paper

* ಎಂದು ಹೇಳಿ paper ಎಸೆಯುತ್ತಾನೆ.

CUT TO:

INT. DAY. DHARMA'S HOUSE

* ಧರ್ಮನ ಮನೆಯೊಳಗಿನ ಸಜ್ಜೆಯಿಂದ ನೀರಿನ ಹನಿ aquariumಗೆ ತೊಟ್ಟಿಕ್ಕುತಿದೆ. Aquarium

ಒಳಗೆ ನೀರು ತುಂಬಿದೆ. ಮೀನು ಈಜಾಡುತ್ತಿದೆ.

CUT TO

* ಧರ್ಮ Dining Table ಮೇಲೆ ಇಟ್ಟಿರುವ ಇಡ್ಲಿ packet ತೆಗೆದುಕೊಳ್ಳುತ್ತಾನೆ.

CUT TO

EXT. DAY. DHARMA'S HOUSE

* ಧರ್ಮ cigarette ಸೇದುತ್ತಾ ಕೈಯಲ್ಲಿ ಇಡ್ಲಿ packet ಹಿಡಿದುಕೊಂಡು ಬಾಗಿಲು ತೆರೆಯುತ್ತಾನೆ. ಕೆಳಗೆ ನೋಡಿದಾಗ ಚಾರ್ಲಿ ಧರ್ಮನ ಚಪ್ಪಲಿಯನ್ನು ಕಚ್ಚುತ್ತಿದ್ದಾಳೆ. ಧರ್ಮ ಸಿಟ್ಟಿನಿಂದ ಚಾರ್ಲಿಗೆ ಒದೆಯಲು ಮುಂದಾಗಿ,

DHARMA
(ಸಿಟ್ಟಿನಿಂದ)
ಹೋಗ್!

* ಚಾರ್ಲಿ ಅಲ್ಲಿಂದ ಓಡಿ ಹೋಗಿ ಕಸದ ತೊಟ್ಟಿಯ ಪಕ್ಕದಲ್ಲಿ ಮಲಗುತ್ತಾಳೆ. ಧರ್ಮ ಇಡ್ಲಿ packetಅನ್ನು ಕಸದ ತೊಟ್ಟಿಗೆ ಎಸೆಯುತ್ತಾನೆ. ಚಾರ್ಲಿ ಮೆಲ್ಲನೆ ಮೇಲೇಳುತ್ತಾಳೆ. ಧರ್ಮ ಅತ್ತಿತ್ತ ನೋಡಿ ವಾಪಸ್ ಹೋಗುತ್ತಾನೆ. ಚಾರ್ಲಿ ಕಸದ ತೊಟ್ಟಿಯ ಮೇಲೆ ಹತ್ತಿ ಇಡ್ಲಿಯನ್ನು ತಿನ್ನುತ್ತಾಳೆ.

CUT TO

EXT. DAY. DHARMA'S HOUSE

* ಧರ್ಮ bike shedನಲ್ಲಿ ಕುಳಿತು metal stool weld ಮಾಡುತ್ತಿದ್ದಾನೆ. ಪಕ್ಕದಲ್ಲಿ ಇಟ್ಟಿರುವ ಒಂದು Beer bottle ಮೇಲೆ ball ಬಿದ್ದು Beer ಚೆಲ್ಲುತ್ತದೆ. ಧರ್ಮ ಆ ಕಡೆ ನೋಡಿದಾಗ ಕಾಲನಿಯ ಒಂದಷ್ಟು ಮಕ್ಕಳು gate ಹೊರಗಡೆ ಭಯದಿಂದ ನಿಂತಿದ್ದಾರೆ. ಧರ್ಮನನ್ನು ನೋಡುತ್ತಿರುವ ಒಬ್ಬ ಹುಡುಗ,

RANDOM KID 1
Uncle, ball..

CUT TO

* ಧರ್ಮ ಸಿಟ್ಟಿನಿಂದ ಮತ್ತೆ welding mask ಹಿಡಿದು Weld ಮಾಡಲು ಪ್ರಾರಂಭಿಸುತ್ತಾನೆ. Camera tilt down ಆದಂತೆ, Ball ಎರಡು ತುಂಡಾಗಿ ಬೆಂಕಿ ಕಾಣಿಸುತ್ತಿದೆ. ಹುಡುಗನೊಬ್ಬ ಅಳುತ್ತಾ,

RANDOM KID 2 (O.S)
ಏಯ್ ಬಾರೋ ಅಪ್ಪಂಗ್ ಹೇಳೋಣ ಹಿಟ್ಲರ್ ಮಾಮ ball
ಸುಟ್ಟು ಹಾಕಿದ್ರು ಅಂತ..

CUT TO

EXT. EVENING. DHARMA'S HOUSE/COLONY

* ಧರ್ಮ ಬಾಗಿಲು lock ಮಾಡಿ ನಡೆದುಕೊಂಡು ಬರುತ್ತಾನೆ. ಎದುರುಗಡೆ ಮನೆಯ ನಾರಾಯಣ್ ರಾವ್ ಹಾಡು ಗುನುಗುತ್ತಾ ಗಿಡಗಳಿಗೆ ನೀರು ಹಾಕುತ್ತಿದ್ದಾರೆ. ಧರ್ಮನನ್ನು ನೋಡಿದ ತಕ್ಷಣ ನಾರಾಯಣ್ ರಾವ್,

NARAYAN RAO
ಏಯ್ ಧರ್ಮ.. ಬಿಸಿ ಉಪ್ಪಿಟ್ ಮಾಡ್ತಿದ್ದಾರೆ ಕಣೋ.
ತಿನ್ಕೊಂಡ್ ಹೋಗೋ..

* ಧರ್ಮ ಅವರನ್ನು ದಿಟ್ಟಿಸಿ ಅಲ್ಲಿಂದ ಹೊರಡ್ತಾನೆ.

CUT TO

EXT. EVENING. AJJI SHOP

* ಅಜ್ಜಿ ಅಂಗಡಿ ಮುಚ್ಚಿದೆ. ವಯಸ್ಸಾದ ವ್ಯಕ್ತಿಯೊಬ್ಬರು ಅಂಗಡಿ ಹೊರಗಡೆ ಕುಳಿತಿದ್ದಾರೆ. ಧರ್ಮ ಸ್ವಲ್ಪ ದೂರದಲ್ಲಿ ನಿಂತು ನೋಡುತ್ತಿದ್ದಾನೆ.

DHARMA (V.O)
ಹೊಟ್ಟೆ ಹಸ್ದಾಗ, ಊಟ ಸಿಗ್ದೇ ಇರೋದಕ್ಕಿಂತ ದುರಾದೃಷ್ಟ ಇನ್ನೊಂದಿಲ್ಲ.

CUT TO

EXT. EVENING. ROAD TO COLONY

* ಧರ್ಮ footpathನಲ್ಲಿ ನಡೆದುಕೊಂಡು ಬರುತ್ತಿದ್ದಾನೆ. ಯಾರೋ ಹಿಂಬಾಲಿಸಿದಂತೆ ಅನ್ನಿಸಿ ಹಿಂದೆ ತಿರುಗಿ ನೋಡಿದಾಗ ಧರ್ಮನಿಗೆ ಕಿರಿಕಿರಿಯಾಗುತ್ತದೆ. ಧರ್ಮ ಮುಂದೆ ನಡೆಯುತ್ತಾ,

DHARMA (V.O)
ನಾನ್ ಹೇಳಿದ್ನಲ್ಲ. ಊಟ ಸಿಗ್ದೇ ಇರೋದಕ್ಕಿಂತ ದುರಾದೃಷ್ಟ ಇನ್ನೊಂದಿಲ್ಲ ಅಂತ. ಈಗ ಅದಕ್ಕಿಂತ ದೊಡ್ಡ ದುರಾದೃಷ್ಟ ನನ್ ಬೆನ್ ಹತ್ತಿದೆ.

* ಧರ್ಮ frame exit ಆದಂತೆ ಚಾರ್ಲಿ ರಸ್ತೆಯ ಇನ್ನೊಂದು ಬದಿಯಲ್ಲಿ ಅವನನ್ನು ಹಿಂಬಾಲಿಸಿಕೊಂಡು ಬರುತ್ತಿರುವುದು ಕಾಣಿಸುತ್ತದೆ.

CUT TO

EXT. EVENING. COLONY.

* ಧರ್ಮ Colony ರಸ್ತೆ ತಲುಪುತ್ತಾನೆ. ಚಾರ್ಲಿ ಹಿಂಬಾಲಿಸಿಕೊಂಡು ಬರುತ್ತಿದ್ದಾಳೆ. ಧರ್ಮ ಹಿಂತಿರುಗಿ ನೋಡಿ  ವೇಗವಾಗಿ ನಡೆಯುತ್ತಾನೆ.

DHARMA (V.O)
ಈ ನಾಯಿ ನನ್ ಯಾಕ್ follow ಮಾಡ್ತಿದೆ ಅಂತ ಅರ್ಥ ಆಗ್ತಿಲ್ಲ.

* ಧರ್ಮ ಮುಂದೆ ನಡೆಯುತ್ತಿದ್ದಾನೆ. ಚಾರ್ಲಿ ಹಿಂಬಾಲಿಸುತ್ತಿದ್ದಾಳೆ. ಹಿಂದಿನಿಂದ RX 100 ನಲ್ಲಿ ವಿಕ್ಕಿ ಬರುತ್ತಿದ್ದಾನೆ. ಧರ್ಮ ಹಿಂದೆ ತಿರುಗಿ ನೋಡುತ್ತಾನೆ.

DHARMA (V.O)
ಇವತ್ತೇನಾದ್ರು ಮನೆಯೊಳಗೆ ಬಂದ್ರೆ, guarantee ವಾಪಸ್ ಹೋಗಲ್ಲ.

* ಧರ್ಮ ವೇಗವಾಗಿ ನಡೆಯುತ್ತಾನೆ. ಹಿನ್ನಲೆಯಲ್ಲಿ ಗಾಡಿ ಗುದ್ದಿ ಬಿದ್ದ ಶಬ್ದ ಹಾಗೂ ನಾಯಿ ನೋವಿನಿಂದ ಅರಚುತ್ತಿರುವ ಶಬ್ದ ಕೇಳಿಸುತ್ತದೆ. ಧರ್ಮ ಒಂದು ಕ್ಷಣ ದಂಗಾಗಿ ನಿಂತು ಹಿಂದೆ ತಿರುಗಿ ನೋಡುತ್ತಾನೆ. ಚಾರ್ಲಿ ರಸ್ತೆಯಲ್ಲಿ ಬಿದ್ದು ಉರುಳುತ್ತಿದ್ದಾಳೆ. ಚಾರ್ಲಿಯ ಕತ್ತಿನಲ್ಲಿರುವ tag ಉರುಳಿ ಹೋಗುತ್ತಿದೆ. ಹಿಂದುಗಡೆ ವಿಕ್ಕಿ ಗಾಡಿಯಿಂದ ಬಿದ್ದಿದ್ದಾನೆ. ಚಾರ್ಲಿ ಕಾಲಿನಿಂದ ರಕ್ತ ಸುರಿದು ನೋವಿನಿಂದ ಕಿರುಚುತ್ತಿದ್ದಾಳೆ. ಧರ್ಮ ಸ್ತಬ್ಧನಾಗಿ ಚಾರ್ಲಿಯನ್ನು ನೋಡುತ್ತಿದ್ದಾನೆ. ಚಾರ್ಲಿ ನರಳಾಡುತ್ತಿದ್ದಾಳೆ. ಧರ್ಮ ಥಟ್ಟನೆ ಹಿಂದೆ ತಿರುಗುತ್ತಾನೆ. ಕಾಲನಿಯ ಜನರು ವಿಕ್ಕಿಯ ಹತ್ತಿರ ಓಡಿ ಬರುತ್ತಿದ್ದಾರೆ.

COLONY LADY 1(O.S)
ಅಯ್ಯಯ್ಯೋ, ವಿಕ್ಕಿ ಬಿದ್ಬಿಟ್ಟ. ಬೇಗ ಹೋಗಿ ನೋಡೋ.

COLONY LADY 2
ಅಯ್ಯೋ ದೇವ್ರೇ.. ಬೇಗ ಬನ್ನಿ.

* ಧರ್ಮ ಮನೆ ಗೇಟ್ ತೆರೆದು ಒಳಗೆ ಹೋಗುತ್ತಾನೆ.

CUT TO

INT. EVENING. DHARMA'S HOUSE

* ಧರ್ಮ ಮನೆಯೊಳಗೆ ಬಂದು TV ಮುಂದಿರುವ sofa ಮೇಲೆ ಕುಳಿತು Cigarette ಕೈಗೆತ್ತಿಕೊಳ್ಳುತ್ತಾನೆ. TVಯಲ್ಲಿ ಚಾರ್ಲಿ ಚಾಪ್ಲಿನ್ ನ "A Dog's life" ಚಿತ್ರದ ದೃಶ್ಯ ಪ್ರಸಾರವಾಗುತ್ತಿದೆ. ದೃಶ್ಯದಲ್ಲಿ ಬೀದಿನಾಯಿಗಳ ಗುಂಪು ಇನ್ನೊಂದು ನಾಯಿಮರಿಗೆ ಹಲ್ಲೆ ಮಾಡುತ್ತಿವೆ. ಚಾರ್ಲಿ ಚಾಪ್ಲಿನ್ ಆ ನಾಯಿಮರಿಯನ್ನು ಅವುಗಳಿಂದ ರಕ್ಷಿಸಲು ಪ್ರಯತ್ನಿಸುತ್ತಿದ್ದಾನೆ. ಧರ್ಮ cigarette ಸೇದುತ್ತಾ ಆ ದೃಶ್ಯವನ್ನು ನೋಡುತ್ತಿದ್ದಾನೆ. ಕೊನೆಗೆ ಚಾರ್ಲಿ ಚಾಪ್ಲಿನ್ ಆ ನಾಯಿಮರಿಯನ್ನು ರಕ್ಷಿಸಿ ಕರೆದುಕೊಂಡು ಬಂದು ನೀರು ಕುಡಿಸುತ್ತಿದ್ದಾನೆ. ಧರ್ಮ cigarette ಸೇದುವುದನ್ನು ನಿಲ್ಲಿಸಿ ಸ್ತಬ್ದನಾಗಿ ದೃಶ್ಯವನ್ನು ನೋಡುತ್ತಿದ್ದಾನೆ.

CUT TO

EXT. EVENING. COLONY

* ಚಾರ್ಲಿ ಗಾಯಗೊಂಡು ಮಲಗಿದ್ದಾಳೆ. ಆದ್ರಿಕಾ ಬೇಸರದಿಂದ ಚಾರ್ಲಿಯನ್ನು ನೋಡುತ್ತಿದ್ದಾಳೆ. ಕಾಲನಿ ಸದಸ್ಯರು ಅಪಘಾತವಾದ ಸ್ಥಳದಲ್ಲಿ ಸೇರಿದ್ದಾರೆ. ಮುರಳಿ ಸರ್ ವಿಕ್ಕಿಯನ್ನು ನೋಡಿ,

MURALI SIR
ಬೈಕು ಎರಡೂ ಚಕ್ರುದಲ್ ಓಡಿಸ್ಬೇಕು

VICKY
ಇರೋದೆ ಎರಡೇ ಚಕ್ರ uncle

MURALI SIR
ಅದೇ ಕಣೋ, ಎರಡೂ ಚಕ್ರುದಲ್ ಓಡಿಸ್ಬೇಕು, ಅದು ಬಿಟ್ಟು ವೀಲಿ-ಗೀಲಿ ಮಾಡಿದ್ರೆ? ಹೀಗೆ ಆಗೋದು..

* ವಿಕ್ಕಿಯ ಕೈ ಗಾಯ ಒರೆಸುತ್ತಿರುವ ತಾಯಿ,

VICKY MOTHER
ಅಲ್ಲ ರೀ, ನನ್ ಮಗನ್ನ ಯಾಕ್ ರೀ ಬೈತೀರ? ಎಲ್ಲ ಆ ದರಿದ್ರ ನಾಯಿಂದ ಆಗಿರೋದು.

* ಆದ್ರಿಕಾ ಅಳು ಮುಖದಿಂದ ಚಾರ್ಲಿಯನ್ನು ನೋಡುತ್ತಿದ್ದಾಳೆ.

COLONY MAN (O.S)
ಸರಿ ಆಯಿತು ಬಿಡಿ. ಆಸ್ಪತ್ರೆಗೆ ಏನಾದ್ರು ಹೋಗ್ಬೇಕೇನೋ?

VICKY(O.S)
ಬೇಡ ಅಂಕಲ್.

* ಹಿನ್ನಲೆಯಲ್ಲಿ ಧರ್ಮನ ಮನೆ ಬಾಗಿಲು ತೆರೆದ ಶಬ್ದ ಕೇಳಿಸುತ್ತದೆ. ಆದ್ರಿಕಾ ಭಯದಿಂದ ಅತ್ತ ಕಡೆ ನೋಡುತ್ತಾಳೆ. ಧರ್ಮ ಮನೆ ಹೊರಗಡೆ ಬಂದು ಬಾಗಿಲು lock ಮಾಡುತ್ತಾನೆ. ತಕ್ಷಣ ಆದ್ರಿಕಾ ಭಯದಿಂದ ಓಡಿ ಹೋಗಿ ಅಪ್ಪನ ಹತ್ತಿರ ನಿಲ್ಲುತ್ತಾಳೆ. ಧರ್ಮ bike shed ಕಡೆ ನಡೆದುಕೊಂಡು ಹೋಗುತ್ತಿದ್ದಾನೆ. ಧರ್ಮನನ್ನು ನೋಡಿದ ಕೃಪಾಕರ್ ಆಕಳಿಸುತ್ತಾ,

KRIPAKAR
(ವ್ಯಂಗ್ಯವಾಗಿ)
ಇತ್ತೀಚೆಗೆ ಇಲ್ಲಿ ನಾಯಿಗಳ ಕಾಟ ಸ್ವಲ್ಪ ಜಾಸ್ತಿನೇ ಆಗಿದೆ.

* ಧರ್ಮ bike shed shutter ತೆಗೆಯುತ್ತಾನೆ.

COLONY LADY 1(O.S)
ರೀ ರಮಾ, ಇದೇ ನಾಯಿ ಅನ್ಸುತ್ತೆ ಇಷ್ಟು ದಿನ ನಮ್ ಮನೆ ಮುಂದೆ ಎಲ್ಲಾ ಕಸ ಹಾಕಿ ಗಲೀಜ್ ಮಾಡ್ತಿದ್ದಿದ್ದು..

VICKY MOTHER
ಹೌದು..

COLONY LADY 2
ಮಕ್ಕಳೆಲ್ಲ ಹೊರ್ಗಡೆನೇ ಆಟ ಆಡ್ತಾ ಇರ್ತಾರೆ. ನಾಯಿ ಕಚ್ಚಿದ್ದಿದ್ರೆ ಏನ್ ಮಾಡೋದು?

* ಆದ್ರಿಕಾ ಆತಂಕದಿಂದ ಚಾರ್ಲಿಯನ್ನು ನೋಡುತ್ತಿದ್ದಾಳೆ.

COLONY MAN (O.S)
ನಾಯಿ ಸತ್ ಹೋಗಿದೆ ಅಂತ corporation ಅವ್ರಿಗೆ phone ಮಾಡಿ ಮುರಳಿ. ಎತ್ತಾಕ್ಕೊಂಡ್ ಹೋಗ್ತಾರೆ. ಬಾರೇ.. ಕುಮಾರ ಎಲ್ಲೋಗವ್ನೆ?

COLONY LADY 1
ಅಲ್ಲೆಲ್ಲೋ ಆಟ ಆಡ್ತಿರ್ಬೇಕು ರೀ.

COLONY LADY 3 (O.S)
ಇನ್ನೂ ಉಸಿರಾಡ್ತಾ ಇದೆ ಶನಿ.

* ಧರ್ಮ bulletಗೆ trolley bag attach ಮಾಡಿ ಹೊರಗಡೆ ಬಂದು ಚಾರ್ಲಿಯ ಹತ್ತಿರ ಗಾಡಿ ನಿಲ್ಲಿಸುತ್ತಾನೆ. ಆದ್ರಿಕಾ ಧರ್ಮನನ್ನು ನೋಡುತ್ತಿದ್ದಾಳೆ. ಧರ್ಮ Bulletನಿಂದ ಕೆಳಗಿಳಿದು ಚಾರ್ಲಿಯನ್ನು ಎತ್ತಿಕೊಳ್ಳುತ್ತಾನೆ. ಧರ್ಮನನ್ನು ನೋಡಿದ ನಾರಾಯಣ್ ರಾವ್ ಅವರ ಹೆಂಡತಿ ಕಮಲಮ್ಮ,

KAMALAMMA
ನೀನ್ಯಾಕಪ್ಪಾ ಎತ್ಕೊಂಡು ಹೋಗ್ತೀಯ? Call ಮಾಡಿದ್ರೆ corporation ಅವ್ರೆ ತಗೊಂಡ್ ಹೋಗ್ತಾರೆ.

KRIPAKAR (O.S)
ತಗೊಂಡ್ ಹೋಗ್ಲಿ ಬಿಡಿಮಾ. ಜಾಸ್ತಿ ಹೊತ್ತು ಇಲ್ಲೇ ಬಿಟ್ರೆ ವಾಸ್ನೆ ಬರುತ್ತೆ.

* ಧರ್ಮ ಚಾರ್ಲಿಯನ್ನು trolley bagನಲ್ಲಿ ಮಲಗಿಸುತ್ತಾನೆ.

ADRIKA
ಅಪ್ಪ ಅಪ್ಪ ಪ್ಲೀಸ್ ಅಪ್ಪ.. ನಾವೇ ಹಾಸ್ಪಿಟಲ್ ಗೆ ಕರ್ಕೊಂಡು ಹೋಗೋಣ ಅಪ್ಪ.. ಅಪ್ಪ ಪ್ಲೀಸ್ ಅಪ್ಪ..

ADRIKA MOTHER
ಏಯ್ ಸುಮ್ನಿರೇ

* ಧರ್ಮ ಗಾಡಿ start ಮಾಡಿ ಮುಂದೆ ಹೋಗುತ್ತಾನೆ. ಕಾಲನಿ ಸದಸ್ಯರು ಸ್ಥಳದಿಂದ ವಾಪಸ್ ಹೋಗುತ್ತಾರೆ. ಆದ್ರಿಕಾ ಬೇಸರದಿಂದ ಧರ್ಮ ಹೋಗುತ್ತಿರುವುದನ್ನು ನೋಡುತ್ತಿದ್ದಾಳೆ.

CUT TO

EXT. EVENING. VET CLINIC

* ವಿಶಾಲವಾದ greenery backdropನಲ್ಲಿ vet clinic ಕಾಣಿಸುತ್ತಿದೆ. ಧರ್ಮ Vet clinic

ಹೊರಗಡೆ ಬೆಂಚಿನಲ್ಲಿ ಕುಳಿತಿದ್ದಾನೆ. ಪಕ್ಕದಲ್ಲಿ ಒಂದು ದೊಡ್ಡ ಗಾತ್ರದ ನಾಯಿ ನಾಲಗೆ ಹೊರಗೆ ಹಾಕಿ ಧರ್ಮನನ್ನು ನೋಡುತ್ತಿದೆ. ನಾಯಿಯ ಹತ್ತಿರ ಕುಳಿತಿರುವ ಹೆಂಗಸಿಗೆ ಪಕ್ಕದಲ್ಲಿ ನಿಂತಿರುವ compounder prescription ವಿವರಿಸುತ್ತಿದ್ದಾನೆ.

COMPOUNDER
ನೋಡಿ ಮೇಡಂ. ಇದು ಮೂರು ಡೋಸ್ ಉಂಟು. ಒಂದು ಬೆಳಿಗ್ಗೆಗೆ. ಒಂದು ಮಧ್ಯಾನ್ನಕ್ಕೆ, ಒಂದು ರಾತ್ರಿಗೆ. ಮತ್ತೆ ಇದೊಂದು syrup. ಎರಡು ಹೊತ್ತು ಕೊಡ್ಬೇಕು.

* ಧರ್ಮ ಪಕ್ಕಕ್ಕೆ ತಿರುಗಿ ನೋಡಿದಾಗ ನಾಯಿ ಧರ್ಮನನ್ನೇ ನೋಡುತ್ತಿದೆ. ಧರ್ಮ ಕಿರಿಕಿರಿಗೊಂಡು ಕುಳಿತಲ್ಲಿಯೇ ಸ್ವಲ್ಪ ಪಕ್ಕಕ್ಕೆ ಸರಿಯುತ್ತಾನೆ.

CUT TO

INT. EVENING. VET CLINIC

* ಚಾರ್ಲಿ strecherನಲ್ಲಿ ಮಲಗಿದ್ದಾಳೆ. Doctor Ashwin(35ವರ್ಷ) bandage ಹಿಡಿದು ಚಾರ್ಲಿಗೆ ಚಿಕಿತ್ಸೆ ನೀಡಲು ತಯಾರು ಮಾಡಿಕೊಳ್ಳುತ್ತಿದ್ದಾರೆ. ಪಕ್ಕದಲ್ಲಿ nurse ನಿಂತಿದ್ದಾಳೆ.

DOCTOR ASHWIN
ಈಗಿನ ಮಕ್ಕಳಿಗೆ ಗಾಡಿಯಲ್ಲಿ ಕೂತ್ರೆ ಕಣ್ಣು ಕಾಣೂದಿಲ್ಲ..

* ಡಾಕ್ಟರ್ bandage ಕೈಯಲ್ಲಿ ಹಿಡಿದು ಹಿಂದೆ ತಿರುಗಿ ಚಾರ್ಲಿಯನ್ನು ನೋಡಿ,

DOCTOR ASHWIN (CONT'D)
ಅಲ್ಲ ಮಗ, ನೀನಾದ್ರೂ ಸ್ವಲ್ಪ ನೋಡಿಕೊಂಡು ಹೋಗ್ಬೇಕಲ್ವಾ? ರಸ್ತೆ ದಾಟುವಾಗ left right ಸ್ವಲ್ಪ ನೋಡಿಕೊಂಡು ಹೋಗ್ಬೇಕು.

* ಎಂದು ಹೇಳಿ ಚಾರ್ಲಿ ಕಾಲಿಗೆ bandage ಕಟ್ಟಲು ಹೊರಟಾಗ ಹಿಂದಿನಿಂದ compounder ಧ್ವನಿ ಕೇಳಿಸುತ್ತೆ.

COMPOUNDER (O.S)
ಸರ್.. ಇವ್ರೆ.

* Compounder ಹಾಗೂ ಧರ್ಮ ಒಳಗೆ ಬರುತ್ತಾರೆ. ಧರ್ಮನನ್ನು ನೋಡಿದ ಡಾಕ್ಟರ್,

DOCTOR ASHWIN
Oh ಇವನಾ, ಅವನತ್ರ ನಂಗೆ ಮಾತಾಡ್ಲಿಕಿಲ್ಲ ಹೇಳು.

* ಧರ್ಮ doctor ಮುಖ ನೋಡುತ್ತಿದ್ದಾನೆ.

DOCTOR ASHWIN (O.S)
ಅವನತ್ರ ನಂಗೆ ಮಾತಾಡ್ಲಿಕಿಲ್ಲ.

COMPOUNDER
Doctor ಮಾತಾಡುದಿಲ್ವಂತೆ. He's angry.

DOCTOR
ಮತ್ತೆಂತದಾ..ಇಷ್ಟು ಚಂದದ ನಾಯಿಯನ್ನು ಸಾಕ್ಲಿಕಾಗುದಿಲ್ಲ ಅಂದ್ರೆ ಇವರಿಗೆಲ್ಲ ಎಂತಕೆ ಶೋಕಿಗಾ ನಾಯಿ?

DHARMA
ಈ ನಾಯಿ ನಂದಲ್ಲ.

DOCTOR ASHWIN

ಎಂತ? ನನ್ನತ್ರ ಸುಳ್ಳು ಹೇಳ್ತಿಯನ? ನಾಯಿ ಮರಿಯನ್ನು
ನೋಡ್ತಾ ಇದ್ದಾಗೆ ಅದ್ರ owner ಯಾರು ಅಂತ ಗೊತ್ತಾಗ್ತದೆ.
ಎಷ್ಟು ವರ್ಷ ಆಯ್ತಾ ನನ್ನexperience? ಇವ ನಂಗೆ
ಗೊತ್ತಾಗುದಿಲ್ಲ ಅಂತ ಮಾಡಿದ್ದಾನೆ.

* ಧರ್ಮ ಅಸಹನೆಯಿಂದ ನೋಡುತ್ತಿದ್ದಾನೆ. Doctor tray ಯಲ್ಲಿರುವ Syringe ಕೈಗೆತ್ತಿಕೊಂಡು,

DOCTOR ASHWIN
Injection ಒಂದು ಕೊಟ್ಟು ಬಿಡ್ತೇನೆ. ಅಲ್ಲಿಗೆ ನನ್ನ ಕೆಲ್ಸ
ಮುಗೀತದೆ.

* Syringe ನೋಡಿದ ತಕ್ಷಣ ಚಾರ್ಲಿ ಬೊಗಳಿ ಮಲಗಿದಲ್ಲಿಂದ ಏಳಲು ಪ್ರಯತ್ನಿಸುತ್ತಾಳೆ. Compunder, nurse ಹಾಗೂ doctor ಚಾರ್ಲಿಯನ್ನು ಸಮಾಧಾನ ಮಾಡಿಸಿ ಮಲಗಿಸುತ್ತಾರೆ. Doctor ಚಾರ್ಲಿಗೆ injection ಚುಚ್ಚುತ್ತಾ,

DOCTOR ASHWIN (O.S)
ಯಬ್ಬೋ, ಇದೆಂತ ಹೆದ್ರುದು ಮಾರ್ರೆ ಸೂಜಿ ಕಂಡ್ರೆ?

* ಧರ್ಮ ನಿರಾಸಕ್ತಿಯಿಂದ ನೋಡುತ್ತಿದ್ದಾನೆ.

DOCTOR ASHWIN
ಇದಕ್ಕಿಂತ ಮುಂಚೆ injection ಹಾಕ್ಸಿದ್ದೀಯ?

DHARMA
(ಅಸಹನೆಯಿಂದ)
ಒಂದ್ಸಲ ಹೇಳಿದ್ರೆ ಅರ್ಥ ಆಗಲ್ವಾ ನಿಮ್ಗೆ? ಇದು ನನ್ ನಾಯಿ
ಅಲ್ಲ.

* Doctor ಹಾಗೂ Compounder ಚಾರ್ಲಿಯನ್ನು ಸಮಾಧಾನ ಮಾಡ್ತಾ ಮುಖ ಮುಖ ನೋಡಿಕೊಳ್ಳುತ್ತಾರೆ.

CUT TO

* ಗೋಡೆಯ ಮೇಲೆ DOCTOR ASHWIN ಬೇರೆ ಬೇರೆ ಪ್ರಾಣಿಗಳ ಜೊತೆಗೆ ತೆಗೆಸಿಕೊಂಡಿರುವ photos ಕಾಣಿಸುತ್ತವೆ. ಧರ್ಮ ಅವುಗಳನ್ನು ನೋಡುತ್ತಿದ್ದಾನೆ. Doctor ಧರ್ಮನನ್ನು ನೋಡಿ,

DOCTOR ASHWIN
Photos ಚಂದ ಬಂದಿದ್ಯಲ್ಲಾ? ನಂಗೆ ಈ ಪ್ರಾಣಿಗಳಂದ್ರೆ
ಭಯಂಕರ ಇದು..
(Compounderನ ಕಡೆ ತಿರುಗಿ)
ಎಂತದಾ ಅದು??

COMPOUNDER
ಹುಚ್ಚು.

DOCTOR ASHWIN
ಅಲ್ಲ.. Ah.. Passion. ಥೇಟು ನಿನ್ನ ಥರವೇ. ರೋಡಿನಲ್ಲಿ
ಯಾವ ಪ್ರಾಣಿ ನರಳ್ತಾ ಇರ್ಲಿ ನಂಗೆ ನೋಡ್ಲಿಕಾಗುದಿಲ್ಲ..ಸೀದಾ
ಕರ್ಕೊಂಡು ಬರೂದು, treatment ಮಾಡೂದು..
(Compounderನ ನೋಡಿ)
Ah, ಇವನೇ ನೀನ್ ಯಾವ ರೋಡಲ್ಲಿ ಸಿಕ್ಕಿದ್ದು?

* Compounder ಮದ್ದನ್ನು ಡಾಕ್ಟರ್ ಕೈಗೆ ಕೊಟ್ಟು,

COMPOUNDER

(ಅಸಹನೆಯಿಂದ)
ಮಾತ್ರೆ

DOCTOR ASHWIN
(ನಗಾಡುತ್ತಾ)
ಬೆಚ್ಚಾಗಿದೆ. ಈಗ ವಿಷಯಕ್ಕೆ ಬರುವ.

* DOCTOR ASHWIN table ಮೇಲಿರುವ ಮದ್ದಿನ ಚೀಟಿಯನ್ನ ಮುಂದೆ ದೂಡಿ,

DOCTOR ASHWIN
ದಿವಸಕ್ಕೆ ಮೂರ್ ಸಲ ಕೊಡ್ಬೇಕು.. ಒಂದು ವಾರದಲ್ಲಿ ನಿನ್ನ ನಾಯಿ complete ಗುಣ ಆಗ್ತದೆ..

DHARMA
ಒಂದ್ ನಿಮ್ಷ
(ಮದ್ದಿನ ಚೀಟನ್ನು ವಾಪಸ್ ಮುಂದೆ ತಳ್ಳಿ)
ಆ ನಾಯಿ ನಂದಲ್ಲ ಅಂತ ಹೇಳಿದ್ದು ಅರ್ಥಾಗಿಲ್ವಾ ನಿಮ್ಗೆ? Treatment fees ಎಷ್ಟಾಯ್ತು ಅಂತ ಹೇಳಿ ಕೊಟ್ಬಿಟ್ಟು ಹೊರಡ್ತೀನಿ ನಾನು.

DOCTOR ASHWIN
ಮತ್ತೆ ನಾಯಿ?

DHARMA
ಅದಕ್ಕೆ ಇಲ್ಲೇನಾದ್ರೂ ವ್ಯವಸ್ಥೆ ಮಾಡಿ.

DOCTOR ASHWIN
ಇಲ್ಲಿ ಎಂತ ವ್ಯವಸ್ಥೆ ಮಾಡೂಡಾ?
(Compounder ನ ಓರೆಗಣ್ಣಿನಿಂದ ನೋಡಿ)
ಇಲ್ಲಿ ಇದ್ದ ನಾಯಿಗಳನ್ನೇ ನಮ್ಗೆ ನೋಡಿಕೊಳ್ಳಿಕೆ ಆಗ್ತಾ ಇಲ್ಲ.

* Compounder doctor ಅನ್ನ ದಿಟ್ಟಿಸಿ ನೋಡುತ್ತಾನೆ.

DOCTOR ASHWIN (CONT'D)
ಅದರ ಜೊತೆ ಇನ್ನೊಂದು ನಾಯಿ ಬಂದಿದೆ ಅಂತ ಹೇಳಿದ್ರೆ owner ರಂಪ ಮಾಡ್ತಾನೆ..

DHARMA
Sir ದಯವಿಟ್ಟು ಅರ್ಥ ಮಾಡ್ಕೊಳ್ಳಿ. ಈ ನಾಯಿಮರಿ ಎಲ್ಲ ನೋಡ್ಕೊಳ್ಳಿಕೆ ಆಗಲ್ಲ ನಂಗೆ.

* Compounder ಹಿಂದೆ ತಿರುಗಿ,

COMPOUNDER
ಯಾಕೆ? ನಾಯಿ ಕಂಡ್ರೆ ಭಯವ? Aan ಡಾಕ್ಟ್ರ ಇದೂ Cynophobia ಅಂತ ಕಾಣ್ತದೆ. ನಿಮ್ಮ ಭಾವನಿಗೆ ಸಾ same,

DOCTOR ASHWIN (O.S)
(ತುಳು ಭಾಷೆಯಲ್ಲಿ)
ಮೂಲು Doctor ಈಯ? ಯಾನ?

COMPOUNDER (O.S)
ಈರೇ.

DOCTOR ASHWIN (O.S)
ಒಂತೆ ಮನಿಪ್ಪಂದೆ ಕುಲ್ಲೇರ ಆಪುಜ್ಜಾ?

* ಧರ್ಮ ಆ ಕಡೆ ತಿರುಗಿ strecher ಮೇಲೆ ಮಲಗಿರುವ ಚಾರ್ಲಿಯನ್ನ ನೋಡ್ತಾನೆ. ಧರ್ಮನನ್ನು ನೋಡಿದ ತಕ್ಷಣ ಚಾರ್ಲಿ ಎದ್ದು ನಿಲ್ಲುತ್ತಾಳೆ.

DOCTOR ASHWIN (O.S)
ಸರಿ, ಒಂದು ಕೆಲ್ಸ ಮಾಡುವ. ಈಗ ಈ ನಾಯಿಯನ್ನ ಕರ್ಕೊಂಡು ಹೋಗು.

* ಧರ್ಮ ತಕ್ಷಣ ಮುಖ ತಿರುಗಿಸುತ್ತಾನೆ.

DOCTOR ASHWIN
ನಂಗೆ ಈ dog adoptionಗೆ ಸುಮಾರು call ಬರ್ತಾ ಇರ್ತದೆ. ಅದರಲ್ಲಿ ಒಂದಕ್ಕೆ ಗಾಳ ಹಾಕಿ ನಿಂಗೆ set ಮಾಡಿ ಕೊಡ್ತೇನೆ.Just. Just ಒಂದು 4 days ಅಷ್ಟೇ.

DHARMA
ನಮ್ colonyಲಿ ನಾಯಗಳನ್ನ ಸಾಕೋ ಹಂಗಿಲ್ಲ. ಅಕ್ಕಪಕ್ಕದವ್ರಿಗೆ ಗೊತ್ತಾದ್ರೆ..

DOCTOR ASHWIN
(ಧರ್ಮನ ಮಾತಿಗೆ ಅಡ್ಡ ಬಾಯಿ ಹಾಕಿ)
ಸಣ್ಣ ನಾಯಿ ಮಾರಾಯ. ನಾಲ್ಕು ದಿವ್ಸ ಮನೆಯೊಳಗೆ ಬಚ್ಚಿಟ್ರೆ ಯಾರಿಗ್ ಗೊತ್ತಾಗ್ತದೆ? ಗೊತ್ತಾಗುದಿಲ್ಲ.

DHARMA
ಆ ಕೆಲ್ಸ ನೀವೇ ಮಾಡ್ಬೋದಲ್ಲ? ಇಲ್ಲೇ ಬಚ್ಚಿಡಿ. Ownerಗೆ ಗೊತ್ತಿಲ್ದೇ ಇರೋ ಹಾಗೆ..

COMPOUNDER
ಅದು ಮಾಡಿ ಪ್ರಯೋಜನ ಇಲ್ಲ. Ownerಗೆ guarantee ಗೊತ್ತಾಗ್ತದೆ. Owner ಇವ್ರೆ ಅಲ್ಲ.

* Doctor Compounderನ ಕಡೆ ತಿರುಗಿ ನೋಡಿ ಸಿಟ್ಟಿನಿಂದ,

DOCTOR ASHWIN
ನಿಂಡೆ ಇತ್ತೆ ಕೇಂಡನಾ ಆಯೆ? ಒಂತೆ ಮನಿಪ್ಪಂದೆ ಕುಲ್ಲೆರ ಆಪುಜ್ಜಾ?
(ಧರ್ಮನನ್ನು ನೋಡಿ)
ಹಾಗಾದ್ರೀಗ ಎಂತ ಮಾಡುದು ಅಂತ ಹೇಳೂದು ಮಾರಾಯ ನೀನು? ನಾಯಿಯನ್ನು ಮತ್ತೆ ರೋಡಿಗೆ ಬಿಡೂದಾ? ನಾಳೆ ಅದು ಇನ್ನೊಂದು ಗಾಡಿಯಡಿಗೆ ಬಿದ್ದು ಸತ್ರೆ.. ಯೋಚ್ನೆ ಮಾಡು. ನೀನು ಕಾಪಾಡಿದ ಪುಣ್ಯ waste ಆಗೂದಿಲ್ವಾ? Just ಒಂದು 4 days ಅಷ್ಟೇ.. ಈಗ number ಕೊಡು ಹೇಳ್ತೇನೆ..

DHARMA
ನಿಮ್ ನಾಯಿ ಕಾಪಾಡಿದ ಪುಣ್ಯ, ನಿಮ್ ನಾಯಿ
(ಕೂತಲ್ಲಿಂದ ಎದ್ದು)
ಎರಡೂ ನೀವೇ ಇಟ್ಕೊಳ್ಳಿ..

* ಎಂದು ಹೇಳಿ table ಮೇಲೆ ದುಡ್ಡಿಟ್ಟು ಹೊರಡುತ್ತಾನೆ. Doctor ಗಲಿಬಿಲಿಯಿಂದ ನೋಡುತ್ತಿದ್ದಾರೆ.

CUT TO

EXT. EVENING. COLONY/MURALI SIR'S HOUSE

* ಆದ್ರಿಕಾ ಮನೆಯ ಮುಂದೆ ಮೆಟ್ಟಿಲಿನಲ್ಲಿ ಬೇಸರದಿಂದ ಕುಳಿತಿದ್ದಾಳೆ. ಹಿನ್ನಲೆಯಲ್ಲಿ bullet

ಶಬ್ದ ಕೇಳಿಸುತ್ತದೆ. ಆದ್ರಿಕಾ ಎದ್ದು ನಿಂತು ರಸ್ತೆ ಕಡೆ ನೋಡುತ್ತಾಳೆ.

CUT TO

* ಧರ್ಮ bulletನಲ್ಲಿ 'pets not allowed' board ದಾಟಿ colony ಪ್ರವೇಶಿಸುತ್ತಾನೆ. ಆದ್ರಿಕಾ gate ಹತ್ತಿರ ಓಡಿ ಬಂದು ಧರ್ಮನ ಗಾಡಿಯನ್ನು ನೋಡುತ್ತಾಳೆ. Trolley bag ನೋಡಿದಾಗ ಚಾರ್ಲಿ ಕಾಣಿಸುವುದಿಲ್ಲ. ಧರ್ಮ gate ಒಳಗಡೆ ಹೋಗುತ್ತಾನೆ. ಆದ್ರಿಕಾ ನಿರಾಶೆಯಿಂದ ನೋಡುತ್ತಿದ್ದಾಳೆ. ಹಿನ್ನಲೆಯಲ್ಲಿ ಮಂಜು ಹಾಗೂ ಕೃಪಾಕರ್ ನಡುವೆ ಜಗಳ ವಾಗ್ವಾದ ಕೇಳಿಸುತ್ತಿದೆ.

MANJU (O.S)
ಏನ್ ಹಾಲು ಪೇಪರ್ ಹಾಕೋನು ಅಂದ್ಕೊಂಡಿದ್ದೀಯಾ ಮುಂದಿನ್ ತಿಂಗ್ಳು ಸೇರ್ಸಿ ಕೊಡೋಕೆ?

KRIPAKAR (O.S)
ಕೂಗಾಡ್ಬೇಡ್ರೀ, ಈ ಸಲ  ಪಕ್ಕಾ promotion ಆಗೇ ಆಗುತ್ತೆ.

CUT TO

EXT. EVENING. DHARMA'S HOUSE.

* ಧರ್ಮ bulletನಿಂದ ಕೆಳಗಿಳಿದು ಬಟ್ಟೆಯಲ್ಲಿ ಸುತ್ತಿಕೊಂಡಿರುವ ಚಾರ್ಲಿಯನ್ನು ಎತ್ತಿಕೊಂಡು ಮುಂದೆ ನಡೆಯುತ್ತಾನೆ. ಧರ್ಮ ಕೃಪಾಕರ್ ಮನೆಯತ್ತ ನೋಡಿದಾಗ  ಅಲ್ಲಿ ಆತನಿಗೂ ಮಂಜುವಿಗೂ ಮಾತುಕತೆ ನಡೆಯುತ್ತಿದೆ.

MANJU
ಯಪ್ಪಾ ಸ್ವಾಮೀ, promotion ಕಥೆ ಹಾಳಾಗ್ ಹೋಗ್ಲಿ. ಮೊದ್ಲು ನನ್ ದುಡ್ಡು settle ಮಾಡು. ಅಮೇಲ್ ಮಾತಾಡೋವಂತೆ.

* ಧರ್ಮ ಅದನ್ನು ಕಡೆಗಣಿಸಿ ಮುಂದೆ ಬರುತ್ತಾನೆ.

KRIPAKAR (O.S)
ಒಂದೇ ಸಲ settle ಮಾಡು ಅಂದ್ರೆ ಎಲ್ಲಾಗುತ್ತೆ ರೀ. ಈಗ ಒಂದ್ ಐನೂರು ರುಪಾಯಿ ಇಟ್ಕೊಂಡಿರಿ. ಅಮೇಲ್ ನೋಡೋಣ.

MANJU (O.S)
ಏನೇನು? ಐನೂರು ರುಪಾಯಿನಾ?

* ಧರ್ಮ ಒಂದು ಕ್ಷಣ ನಿಂತು ಮೆಲ್ಲನೆ ಹಿಂದೆ ತಿರುಗಿ ನೋಡುತ್ತಾನೆ. ಆದ್ರಿಕಾ ನಗು ಮುಖದಿಂದ ಧರ್ಮನನ್ನು ನೋಡುತ್ತಿದ್ದಾಳೆ. ಧರ್ಮ ಆದ್ರಿಕಾ ಬಳಿ 'ಏನು' ಎಂದು ಸಂಜ್ಞೆ ಮಾಡುತ್ತಾನೆ.

ADRIKA
ಪಪ್ಪಿ..

* ಧರ್ಮ ಕೆಳಗಡೆ ನೋಡಿದಾಗ ಚಾರ್ಲಿ ಬಾಲ ಅಲ್ಲಾಡಿಸುತ್ತಿರುವುದು ಕಾಣಿಸುತ್ತದೆ. ಧರ್ಮ ಆದ್ರಿಕಾಳನ್ನ ನೋಡಿ ಬಾಯಿ ಮೇಲೆ ಬೆರಳಿಟ್ಟು ಸುಮ್ಮನಿರುವಂತೆ ಸಂಜ್ಞೆ ಮಾಡುತ್ತಾನೆ.

ADRIKA
(ಖುಷಿಯಿಂದ ತಲೆಯಾಡಿಸುತ್ತಾ)
Ok..

* ಧರ್ಮ ಅಸಹಾಯಕನಾಗಿ ನೋಡುತ್ತಿದ್ದಾನೆ.

CUT TO

INT. EVENING/NIGHT. DHARMA'S HOUSE (TORTURE SONG)

* ಧರ್ಮ TV ನೋಡುತ್ತಾ ಕುಳಿತಿದ್ದಾನೆ. ಧರ್ಮ ಮೆಲ್ಲನೆ ಪಕ್ಕಕ್ಕೆ ತಿರುಗಿ ನೋಡಿದಾಗ ಚಾರ್ಲಿ TV ನೋಡುತ್ತಿದ್ದಾಳೆ. ಎದುರುಗಡೆ pedigree ಕಾಣಿಸುತ್ತದೆ.

TORTURE SONG BIT STARTS

ಧರ್ಮ TV ಕಡೆ ತಿರುಗಿ Cigarette ತೆಗೆದು ಬಾಯಿಗಿಡುತ್ತಾನೆ. TV ಯಲ್ಲಿ Snow Ad ಪ್ರಸಾರವಾಗುತ್ತಿದೆ. ಧರ್ಮ ಚಾರ್ಲಿ ಕಡೆ ತಿರುಗಿ ಚಾರ್ಲಿ ಅಲ್ಲಿರುವುದಿಲ್ಲ. ಅಲ್ಲಿಟ್ಟಿದ್ದ pedigree ಖಾಲಿಯಾಗಿದೆ. ಧರ್ಮ dining table ಕಡೆ ನೋಡಿದಾಗ, ಚಾರ್ಲಿ ಇಡ್ಲಿ ತಿನ್ನುತ್ತಿದ್ದಾಳೆ. ಧರ್ಮನನ್ನು ನೋಡಿದ ಚಾರ್ಲಿ ಬೊಗಳುತ್ತಾಳೆ. ಗಾಬರಿಯಿಂದ ಧರ್ಮನ ಬಾಯಲ್ಲಿದ್ದ cigarette ಕೆಳಗೆ ಬೀಳುತ್ತದೆ.

* ಧರ್ಮ ನಿದ್ರೆಯಿಂದ ಎಚ್ಚರಗೊಂಡಿದ್ದಾನೆ. ಚಾರ್ಲಿ ಬೊಗಳುವ ಶಬ್ದ ಕೇಳಿಸುತ್ತಿದೆ. ಧರ್ಮ ಎದ್ದು light on ಮಾಡುತ್ತಾನೆ. Sofa ಮೇಲೆ ಮಲಗಿರುವ ಚಾರ್ಲಿ ಒಂದೇ ಸಮನೆ ಬೊಗಳುತ್ತಿದ್ದಾಳೆ. ಧರ್ಮ ಎದ್ದು ಹೋಗಿ ಅವಳನ್ನು ಸಮಾಧಾನ ಮಾಡಿ ಮಲಗಿಸುತ್ತಾನೆ. ಚಾರ್ಲಿ ಒಮ್ಮೆಗೆ ಬೊಗಳುವುದನ್ನು ನಿಲ್ಲಿಸುತ್ತಾಳೆ. ಧರ್ಮ ಮೆಲ್ಲನೆ ಮಂಚದ ಹತ್ತಿರ ಬಂದು light off ಮಾಡಿ ಮಲಗುತ್ತಾನೆ. ಸ್ವಲ್ಪ ಹೊತ್ತಲ್ಲಿ ಚಾರ್ಲಿ ಮತ್ತೆ ಬೊಗಳುತ್ತಾಳೆ. ಧರ್ಮ ಪುನಃ ಎದ್ದು ಬಂದು ಸಮಾಧಾನ ಮಾಡುತ್ತಾನೆ. ಸುಮಾರು ಸಲ ಇದೇ ರೀತಿ ಮಾಡುತ್ತಾನೆ. ಚಾರ್ಲಿ ಸಂಪೂರ್ಣವಾಗಿ ಬೊಗಳುವುದು ನಿಲ್ಲಿಸಿದ ಮೇಲೆ ಧರ್ಮ ಮಲಗುತ್ತಾನೆ. ಅಷ್ಟರಲ್ಲಿ alarm ring ಆಗುತ್ತೆ. ಧರ್ಮನಿಗೆ ಮತ್ತೆ ಎಚ್ಚರವಾಗುತ್ತೆ. ಧರ್ಮ irritate ಆಗಿದ್ದಾನೆ.

* ಧರ್ಮ ಮಂಚದ ಮೇಲೆ ಕುಳಿತು cigarette ಹಚ್ಚುತ್ತಾನೆ. ಮಂಚದಿಂದ ಎದ್ದು bathroom ನತ್ತ ಹೊರಟು ಚಾರ್ಲಿಯನ್ನು ನೋಡಿದಾಗ ಚಾರ್ಲಿ sofa ಮೇಲೆ ಕಾಲು ಮೇಲೆ ಮಾಡಿಕೊಂಡು ಗೊರಕೆ ಹೊಡೆಯುತ್ತಾ ಮಲಗಿದ್ದಾಳೆ.

CUT TO

INT. DAY. DHARMA'S HOUSE (TORTURE SONG)

* ಧರ್ಮ ತಲೆ ಒರೆಸುತ್ತಾ bathroom ನಿಂದ ಹೊರಗೆ ಬಂದು ನೋಡಿದಾಗ ಚಾರ್ಲಿ ಧರ್ಮನ ಮಂಚದ ಮೇಲೆ ಮೈಯೆಲ್ಲಾ bandage ಸುತ್ತಿಕೊಂಡು ಕುಳಿತಿದ್ದಾಳೆ. ಧರ್ಮ ಏನೋ ತುಳಿದಂತೆ ಅರಿತು ಕೆಳಗೆ ನೋಡಿದಾಗ ಕಾಲಿನಲ್ಲಿ ಚಾರ್ಲಿಯ ಮಲ ಅಂಟಿಕೊಂಡಿದೆ. ಧರ್ಮ ಅಸಹ್ಯಗೊಂಡು ಪುನಃ bathroom ಒಳಗೆ ಹೋಗಿ ಬಾಗಿಲು ಮುಚ್ಚುತ್ತಾನೆ.

CUT TO

INT. DAY. FACTORY (TORTURE SONG)

* ಧರ್ಮ factoryಯಲ್ಲಿ ಕುಳಿತು ನಿದ್ರಿಸುತ್ತಿದ್ದಾನೆ. ಪಕ್ಕದಲ್ಲಿ ಕುಳಿತಿರುವ ಉತ್ತಮ್ ಕೂಡಾ ನಿದ್ರಿಸುತ್ತಿದ್ದಾನೆ. ಉತ್ತಮ್ ನ ತಲೆ desk ಗೆ ಬಡಿದಾಗ ಧರ್ಮ ಎಚ್ಚರಗೊಳ್ಳುತ್ತಾನೆ. ಉತ್ತಮ್ ಆಕಳಿಸುತ್ತಿದ್ದಾನೆ.

CUT TO

INT. DAY. DHARMA'S HOUSE (TORTURE SONG)

* ಧರ್ಮ ಮನೆ ಬಾಗಿಲು ತೆರೆದಾಗ ಚಾರ್ಲಿ ಧರ್ಮನ ಮೈ ಮೇಲೆ ಹಾರುತ್ತಾಳೆ. ಧರ್ಮ ಅವಳನ್ನು ಪಕ್ಕಕ್ಕೆ ತಳ್ಳಿ ಮುಂದೆ ನೋಡಿದರೆ ಮನೆ ಪೂರ್ತಿ ಚೆಲ್ಲಾಪಿಲ್ಲಿಯಾಗಿದೆ. ಧರ್ಮ ಕಿರಿಕಿರಿಗೊಂಡು ಹಿಂದೆ ತಿರುಗಿ ನೋಡಿದರೆ ಚಾರ್ಲಿ ಬಾಗಿಲ ಮುಂದೆ ನಿಂತು ತನ್ನನ್ನು ಹೊರಗೆ ಕರೆದುಕೊಂಡು ಹೋಗುವಂತೆ ಸೂಚಿಸುತ್ತಾ ಬೊಗಳುತ್ತಿದ್ದಾಳೆ. ಧರ್ಮ ಅಸಹಾಯಕನಾಗಿ ನೋಡುತ್ತಿದ್ದಾನೆ.

CUT TO

EXT. DAY. PARK (TORTURE SONG)

* ಧರ್ಮ leash ಹಾಕಿಸಿ ಚಾರ್ಲಿಯನ್ನು park ಗೆ ಕರೆದುಕೊಂಡು ಬಂದಿದ್ದಾನೆ. ಚಾರ್ಲಿ leash ಎಳೆಯುತ್ತಾ ಮುಂದೆ ಹೋಗಲು ಪ್ರಯತ್ನಿಸುತ್ತಾಳೆ. ಧರ್ಮ ಒಂದು ಕಡೆ ಕುಳಿತು leash ತೆಗೆಯುತ್ತಾನೆ. ಚಾರ್ಲಿ ಮುಂದೆ ಓಡುತ್ತಾಳೆ. ಧರ್ಮ ಹಿಂದೆ ತಿರುಗಿ ಓಡುತ್ತಾನೆ.

CUT TO

INT/EXT. DAY. DHARMA'S HOUSE (TORTURE SONG)

* ಧರ್ಮ ಖುಷಿಯಿಂದ ಮನೆಯೊಳಗೆ ಬಂದು leash ಬಿಸಾಕುತ್ತಾನೆ. ತಕ್ಷಣ calling bell ಶಬ್ದವಾಗುತ್ತದೆ. ಧರ್ಮ ಬಾಗಿಲು ತೆರೆದು ಹೊರಗೆ ಬಂದಾಗ ಆದ್ರಿಕಾ ನಿಂತಿದ್ದಾಳೆ.

DHARMA
ಏನು?

ADRIKA
ಪಪ್ಪಿ

DHARMA
ಏನು?

ADRIKA
ಪಪ್ಪಿ park ಅಲ್ಲಿ ಇತ್ತು

DHARMA
ಹೌದಾ?

ADRIKA
ಹೌದು

DHARMA
ಇವಾಗ್ಲೂ ಅಲ್ಲೇ ಇದೆ ತಾನೆ?

* ಆದ್ರಿಕಾ ಇಲ್ಲ ಎಂದು ತಲೆಯಾಡಿಸುತ್ತಾಳೆ.

DHARMA
ಮತ್ತೆ?

ADRIKA
ಇಲ್ಲಿ

* ಆದ್ರಿಕಾ ತಿರುಗಿದಾಗ ಅವಳ bagನಲ್ಲಿ ಚಾರ್ಲಿ ಇದ್ದಾಳೆ.

CUT TO

* ಧರ್ಮ ಹರಿದಿರುವ sofaವನ್ನು ಕೀಳುತ್ತಿದ್ದಾನೆ. ಚಾರ್ಲಿ ಪಕ್ಕದಲ್ಲಿ ಕುಳಿತು ನೋಡುತ್ತಿದ್ದಾಳೆ. Wind chain ನಿಂದ ಬೆಳಕಿನ ಕಿರಣಗಳು ಪ್ರತಿಫಲಿಸುತ್ತಿವೆ. ಅದನ್ನು ಗಮನಿಸಿದ ಚಾರ್ಲಿ ಬೆಳಕಿನ ಕಿರಣಗಳನ್ನು ಹಿಡಿಯಲು ಓಡುತ್ತಾ ಹೋಗಿ godrej ಮೇಲೆ ಹಾರುತ್ತಾಳೆ. ಶಬ್ದ ಕೇಳಿ ಧರ್ಮ ಹಿಂದೆ ತಿರುಗಿ ನೋಡುತ್ತಾನೆ. ಚಾರ್ಲಿ ಬೆಳಕಿನ ಕಿರಣ ಅತ್ತಿತ್ತ ಚಲಿಸುವುದನ್ನು ನೋಡುತ್ತಿದ್ದಾಳೆ.

CUT TO

* ಧರ್ಮ sofa ದಲ್ಲಿ ಕುಳಿತು cigarette ಸೇದುತ್ತಿದ್ದಾನೆ. ಏನೋ ಶಬ್ದ ಕೇಳಿದ ತಕ್ಷಣ ತಿರುಗಿ fridge ಹತ್ತಿರ ನೋಡುತ್ತಾನೆ. ಇಲಿಯೊಂದು ಕುಳಿತಿದೆ.

* ಚಾರ್ಲಿ ಅತ್ತಿತ್ತ ನೋಡುತ್ತಿದ್ದಾಳೆ. ಧರ್ಮ ಕೋಲು ಹಿಡಿದು ಇಲಿಯನ್ನು ಓಡಿಸುತ್ತಿದ್ದಾನೆ. ಇಲಿ Kitchen shelf ಮೇಲೆ ಹತ್ತಿ ಓಡಿ ಹೋಗುತ್ತದೆ. ಚಾರ್ಲಿ ಕುತೂಹಲದಿಂದ ನೋಡುತ್ತಿದ್ದಾಳೆ.

ಧರ್ಮ ಹಿಂದೆ ತಿರುಗಿ ಚಾರ್ಲಿಯನ್ನು ನೋಡುತ್ತಾನೆ. ಚಾರ್ಲಿ head down ಮಾಡುತ್ತಾಳೆ.

DHARMA'S FACE TO FACE TRANSITION

* ಧರ್ಮ cigarette ಸೇದುತ್ತಾ commodeನಲ್ಲಿ ಕುಳಿತಿದ್ದಾನೆ. ಚಾರ್ಲಿ ಓಡಿ ಬಂದು ಧರ್ಮನ ಚಡ್ಡಿಯನ್ನು ಕಚ್ಚಿಕೊಂಡು ಹೊರಗಡೆ ಓಡುತ್ತಾಳೆ. ಧರ್ಮ ಗೋಡೆಯಲ್ಲಿ ನೇತು ಹಾಕಿರುವ ಲುಂಗಿ ಎತ್ತಿಕೊಳ್ಳುತ್ತಾನೆ.

CUT TO

EXT. DAY. COLONY(TORTURE SONG)

* ಚಾರ್ಲಿ ಧರ್ಮನ ಚಡ್ಡಿ ಕಚ್ಚಿಕೊಂಡು ಕಾಲನಿ ರಸ್ತೆಯಲ್ಲಿ ಓಡುತ್ತಿದ್ದಾಳೆ. ಧರ್ಮ ಚಾರ್ಲಿಯ ಹಿಂದೆ ಓಡುತ್ತಿದ್ದಾನೆ. ಸ್ವಲ್ಪ ದೂರ ಓಡಿದ ನಂತರ ಧರ್ಮ ಚಾರ್ಲಿಯನ್ನು ಹಿಡಿದು ಚಡ್ಡಿ ಕೈಗೆತ್ತಿಕೊಂಡು ಚಾರ್ಲಿಯನ್ನು ತನ್ನ ಲುಂಗಿಯೊಳಗೆ ಅಡಗಿಸಿ ಕೂರಿಸುತ್ತಾನೆ. ಬೈಕ್ ರಿಪೇರಿ ಮಾಡುತ್ತಿದ್ದ ವಿಕ್ಕಿ ಆಶ್ಚರ್ಯದಿಂದ ಧರ್ಮನನ್ನು ನೋಡುತ್ತಿದ್ದಾನೆ. ಧರ್ಮ ಮೆಲ್ಲನೆ ನಡೆಯುತ್ತಿದ್ದಾನೆ. ಮನೆ ಮುಂದೆ ರಂಗೋಲಿ ಹಾಕುತ್ತಿದ್ದ ಹೆಂಗಸು ಧರ್ಮ ವಿಚಿತ್ರವಾಗಿ ನಡೆಯುತ್ತಿರುವುದನ್ನು ನೋಡುತ್ತಿದ್ದಾರೆ. ಸ್ವಲ್ಪ ಮುಂದೆ ಬಂದಾಗ ಲುಂಗಿಯೊಳಗಿನಿಂದ ಚಾರ್ಲಿಯ ಮುಖ ಕಾಣಿಸುತ್ತದೆ. ಹಾರ್ಮೋನಿಯಂ ಬಾರಿಸುತ್ತಿದ್ದ ನಾರಾಯಣ್ ರಾವ್ ಹಾಗೂ ಸಂಗೀತ ಕಲಿಯುತ್ತಿದ್ದ ಮಕ್ಕಳು ಹಿಂದೆ ತಿರುಗಿ ಧರ್ಮ ಮನೆಯೊಳಗೆ ಹೋಗುತ್ತಿರುವುದನ್ನು ನೋಡುತ್ತಿದ್ದಾರೆ.

CUT TO

INT. DAY. DHARMA'S HOUSE (TORTURE SONG)

* ಧರ್ಮ ಮನೆಯೊಳಗೆ ಹೋಗಿ ಬಾಗಿಲು ಮುಚ್ಚುತ್ತಾನೆ. ಲುಂಗಿಯೊಳಗಿ ಅಡಗಿಸಿದ್ದ ಚಾರ್ಲಿಯನ್ನ ಕೆಳಗೆ ಬಿಟ್ಟ ತಕ್ಷಣ ಚಾರ್ಲಿ ಓಡುತ್ತಾಳೆ. ಧರ್ಮ ಲುಂಗಿ ಕಟ್ಟಿಕೊಳ್ಳಲು ಮುಂದಾದಾಗ ಚಾರ್ಲಿ ಮೂತ್ರ ವಿಸರ್ಜಿಸಿ ಲುಂಗಿ ಸಂಪೂರ್ಣವಾಗಿ ಒದ್ದೆಯಾಗಿರುತ್ತದೆ. ಧರ್ಮ ಪೆಚ್ಚುಮೋರೆಯಿಂದ ನೋಡುತ್ತಿದ್ದಾನೆ.

CUT TO

EXT. DAY. DHARMA'S HOUSE (TORTURE SONG)

* ಧರ್ಮನ ಮನೆ compound ಹೊರಗಡೆ ಕಾಲನಿಯ ಮಕ್ಕಳು ನಿಂತಿದ್ದಾರೆ. ಧರ್ಮ ಬಾಗಿಲು ತೆರೆದು ಹೊರ ಬರುತ್ತಾನೆ. ಧರ್ಮನನ್ನು ನೋಡಿದ ತಕ್ಷಣ ಮಕ್ಕಳು compound ಹಿಂದೆ ಅಡಗಿ ಕುಳಿತುಕೊಳ್ಳುತ್ತಾರೆ. ಚಾರ್ಲಿ ಬಾಲ್ ಕಚ್ಚಿಕೊಂಡು ಕುಳಿತಿದ್ದಾಳೆ. ಧರ್ಮ ಚಾರ್ಲಿಯ ಹತ್ತಿರ ಬಂದು ಅವಳ ಬಾಯಿಂದ ball ತೆಗೆದು ಒಳಗಡೆ ಓಡಿಸುತ್ತಾನೆ. ಮಕ್ಕಳು ಮೆಲ್ಲನೆ ತಲೆಯೆತ್ತುತ್ತಾರೆ. ಧರ್ಮ ಕೈಯಲ್ಲಿ ball ಹಿಡಿದುಕೊಂಡು ಮಕ್ಕಳನ್ನು ನೋಡುತ್ತಿದ್ದಾನೆ. ಒಬ್ಬ ಹುಡುಗ ಧರ್ಮನನ್ನು ನೋಡಿ,

RANDOM KID

Uncle..ball

* ಧರ್ಮ ಹುಡುಗನತ್ತ ಬಂದು,

DHARMA

ಇಲ್ಲಿ ನಾಯಿ ಇರೋ ವಿಷ್ಯ ಯಾರಿಗೂ ಹೇಳ್ಬೋಕೊಗ್ಬೇಡಿ..

* ಹುಡುಗ ಆಯ್ತು ಎನ್ನುವಂತೆ ತಲೆಯಾಡಿಸ್ತಾನೆ. ಧರ್ಮ ಅವನ ಕೈಗೆ ball ಕೊಟ್ಟು ಹಿಂದೆ ತಿರುಗಿ ನಡೆಯುತ್ತಾನೆ. ನಾರಾಯಣ್ ರಾವ್ ಮಕ್ಕಳನ್ನು ನೋಡಿ,

NARAYAN RAO

ಅಲ್ಲೇನ್ರೋ ಮಾಡ್ತಿದ್ದೀರ?

COLONY KID
ಏನಿಲ್ಲ ತಾತ, Uncle ಮನೆ ನಾಯಿ ball ಕಚ್ಕೊಂಡ್ ಹೋಗಿತ್ತು.

* ಧರ್ಮ ಅಸಹನೆಗೊಂಡು ನಿಲ್ಲುತ್ತಾನೆ.

NARAYAN RAO
ನಾಯಿನಾ?

CUT TO

INT. DAY. COLONY/DHARMA'S HOUSE (TORTURE SONG)

* ಧರ್ಮ ಮನೆ ಬಾಗಿಲು ತೆರೆದು ಒಳಗೆ ಬರುತ್ತಾನೆ. ಚಾರ್ಲಿ ಎಲ್ಲೂ ಕಾಣಿಸುವುದಿಲ್ಲ. Fridge ಕಡೆ ನೋಡಿದಾಗ fridge ಬಾಗಿಲು ಅರ್ಧ ತೆರೆದಿದ್ದು ಪಕ್ಕದಲ್ಲೇ beer bottles ಅಡ್ಡಬಿದ್ದು Beer ಚೆಲ್ಲಿದೆ. ಚಾರ್ಲಿ ಕಾಲು ಮೇಲೆ ಮಾಡಿ ಮಲಗಿದ್ದಾಳೆ. ಧರ್ಮ ಮೆಲ್ಲನೆ ಚಾರ್ಲಿಯ ಹತ್ತಿರ ಬಂದು ಮುಟ್ಟುತ್ತಾನೆ. ಚಾರ್ಲಿ ಥಟ್ಟನೆ ಎದ್ದು ಧರ್ಮನ ಮೈ ಮೇಲೆ ಹಾರುತ್ತಾಳೆ.

CUT TO

* ಮಂಚದಲ್ಲಿ ಮಲಗಿರುವ ಧರ್ಮ ಏನೋ ವಾಸನೆ ಬಂದಂತೆ ಕಣ್ಣು ತೆರೆದು ನೋಡಿದರೆ, ಚಾರ್ಲಿ ಇಲಿಯನ್ನು ಕಚ್ಚಿಕೊಂಡು ಧರ್ಮನ ಮೇಲೆ ಕುಳಿತಿದ್ದಾಳೆ. ಧರ್ಮ ಅಸಹ್ಯಗೊಳ್ಳುತ್ತಾನೆ. ಚಾರ್ಲಿ ಇಲಿಯನ್ನು ಧರ್ಮನ ಮೈ ಮೇಲೆ ಹಾಕುತ್ತಾಳೆ. ಧರ್ಮ ಇಲಿಯನ್ನು ಪಕ್ಕಕ್ಕೆಸೆದು ಎದ್ದು ಹೋಗುತ್ತಾನೆ.

CUT TO

* ಸೋಫಾ ಮೇಲೆ ಕುಳಿತಿದ್ದ ಚಾರ್ಲಿ ಮುಂದೆ ನೋಡಿದಾಗ ಧರ್ಮ 3 seater sofa ಮೇಲೆ ಕಾಲು ಅಗಲಿಸಿ ಬಿದ್ದುಕೊಂಡಿದ್ದಾನೆ. ಧರ್ಮನ ದೇಹದ ಮಧ್ಯ ಭಾಗದ ಮೇಲೆ ಬೆಳಕಿನ ಕಿರಣ ಬೀಳುತ್ತಿದೆ. ಅದನ್ನು ನೋಡಿದ ತಕ್ಷಣ ಚಾರ್ಲಿ ಓಡಿ ಬಂದು ಧರ್ಮನ ಮಧ್ಯ ಭಾಗಕ್ಕೆ ಬಾಯಿ ಹಾಕುತ್ತಾಳೆ. ಧರ್ಮ ಎಚ್ಚರಗೊಂಡು ನೋವಿನಿಂದ ಒದ್ದಾಡುತ್ತಾನೆ.

CUT TO

* ಧರ್ಮ ಮಲಗಿರುವಾಗ ಚಾರ್ಲಿ bedsheet ಒಳಗಿನಿಂದ ಬಂದು ಧರ್ಮನ ಮುಖ ನೆಕ್ಕುತ್ತಾಳೆ. ಧರ್ಮನಿಗೆ ಕಿರಿಕಿರಿಯಾಗುತ್ತೆ.

CUT TO

* ಧರ್ಮ bathroom ಒಳಗೆ ಕನ್ನಡಿ ನೋಡುತ್ತಾ ಮುಖ ತೊಳೆಯುತ್ತಿದ್ದಾನೆ.

CUT TO

* SPLIT SCREEN: LEFT SIDE

ಧರ್ಮ phone dial ಮಾಡುತ್ತಾನೆ.

* SPLIT SCREEN RIGHT SIDE

* ಡಾಕ್ಟರ್ ಅಶ್ವಿನ್ phone ಕಿವಿಗಿಟ್ಟುಕೊಂಡಿದ್ದಾರೆ

DOCTOR ASHWIN
ಹಾ, ಧರ್ಮ..

DHARMA
ಸರ್, 4 ದಿನದಲ್ಲಿ ಯಾರನ್ನಾದ್ರೂ arrange ಮಾಡ್ತೀನಿ ಅಂತ

ಹೇಳಿ Already ಎರಡು ವಾರ ಆಯ್ತು. ದಯವಿಟ್ಟು ಆದಷ್ಟು ಬೇಗ ಯಾರನ್ನಾದ್ರೂ ಹುಡ್ಕಿ ಸರ್, ಇದ್ರು torture ತಡ್ಕೋಳ್ಳೋಕಾಗ್ತಿಲ್ಲ.

DOCTOR ASHWIN

ಕಳಿಸುವ ಮಾರಾಯ, ಆಮೇಲೆ ಅದಿಕೆ ಒಳ್ಳೆ food ಕೊಡು.. ನಾಯಿ ನೋಡ್ಲಿಕೆ ತುಂಬ ವೀಕ್ ಉಂಟಾ.

* SPLIT SCREEN 3: ಚಾರ್ಲಿ TABLE ಮೇಲಿರುವ ಇಡ್ಲಿ ತಿನ್ನುತ್ತಿದ್ದಾಳೆ.

DOCTOR ASHWIN (CONT'D)

ನೋಡ್ಲಿಕೆ ಚಂದ ಇಲ್ಲದಿದ್ರೆ ಯಾರೂ ತಕ್ಕೊಂಡು ಹೋಗುದಿಲ್ಲ, ಹಾಗೇ.

DHARMA

ಸರಿ ಸರ್.

* ಧರ್ಮ call cut ಮಾಡಿ ಚಾರ್ಲಿಯನ್ನ ನೋಡುತ್ತಾನೆ.

(TRANSITION SCENE: SMALL CHARLIE TO BIG CHARLIE)

* ಚಾರ್ಲಿ bowlನಲ್ಲಿ pedigree ತಿನ್ನುತ್ತಿದ್ದಾಳೆ. ಪಕ್ಕದಲ್ಲಿರುವ pedigree ಮೂಟೆ ಖಾಲಿಯಾಗುತ್ತಿದೆ. ಹಿಂದಿರುವ shoe rackನಲ್ಲಿ beer bottles ತುಂಬಿಕೊಳ್ಳುತ್ತಿವೆ. ಸಣ್ಣ ನಾಯಿ ದೊಡ್ಡದಾಗುತ್ತಿರುವ transition ಕಾಣಿಸುತ್ತಿದೆ.

CUT TO

* ಚಾರ್ಲಿ TV ಯಲ್ಲಿ snow ad ನೋಡಿ ಜಿಗಿಯುತ್ತಿದ್ದಾಳೆ. ಧರ್ಮ beer ಕುಡಿಯುತ್ತಾ TV ಯತ್ತ ನೋಡುತ್ತಾನೆ. ಕೈಯಲ್ಲಿರುವ ಬಟ್ಟಲಿನಲ್ಲಿ ಇಡ್ಲಿಯಿದೆ. ಚಾರ್ಲಿ ಬೊಗಳುತ್ತಾ ಜಿಗಿಯುತ್ತಿದ್ದಾಳೆ. ಧರ್ಮ beer bottle ಕೆಳಗಿಟ್ಟು remote ಎತ್ತಿಕೊಂಡು Tv off ಮಾಡುತ್ತಾನೆ. ಚಾರ್ಲಿ ಹಿಂದೆ ತಿರುಗಿ ಧರ್ಮನನ್ನು ನೋಡುತ್ತಾಳೆ. ಧರ್ಮ ಇಡ್ಲಿ ತಿನ್ನುತ್ತಿದ್ದಾನೆ. ಚಾರ್ಲಿ ಬಾಲ ಅಲ್ಲಾಡಿಸುತ್ತಾ ಧರ್ಮನನ್ನು ನೋಡುತ್ತಿದ್ದಾಳೆ. ಧರ್ಮನಿಗೆ ಬಾಯಲ್ಲಿ ಏನೋ ಸಿಕ್ಕಿದಂತೆ ಭಾಸವಾಗಿ ಕೈಯಲ್ಲಿ ಹೊರ ತೆಗೆದಾಗ ಚಾರ್ಲಿಯ ಕೂದಲು ಹೊರ ಬರುತ್ತದೆ. ಧರ್ಮ ಅಸಹ್ಯಗೊಂಡು ಚಾರ್ಲಿಯನ್ನು ನೋಡುತ್ತಾನೆ. ಚಾರ್ಲಿ ಬೊಗಳುತ್ತಿದ್ದಾಳೆ.

TORTURE SONG ENDS

CUT TO

EXT. EVENING. PARK

* DOCTOR ASHWIN mobileನಲ್ಲಿ camera adjust ಮಾಡುತ್ತಿದ್ದಾರೆ. ಪಕ್ಕದಲ್ಲಿ ಧರ್ಮ ನಿಂತಿದ್ದಾನೆ. ಮುಂದುಗಡೆ Park benchನಲ್ಲಿ ಚಾರ್ಲಿ ಕುಳಿತಿದ್ದಾಳೆ. Doctor ಚಾರ್ಲಿಯ photos click ಮಾಡುತ್ತಾರೆ. ಅದನ್ನು ಧರ್ಮನಿಗೆ ತೋರಿಸುತ್ತಾ,

DOCTOR ASHWIN

ಇಲ್ಲಿ ನೋಡು, ಎಷ್ಟು ಚಂದ ಬಂದಿದ್ದಾಳೆ ನೋಡು, ಇನ್ನಿವಳನ್ನು ಯಾರು adoption ಮಾಡುದಿಲ್ಲ ಅಂತ ನಾನುಸಾ ನೋಡ್ತೇನೆ.

* ಧರ್ಮ photos ನೋಡುತ್ತಿದ್ದಾನೆ. Doctor ಎದುರುಗಡೆ ನೋಡಿದಾಗ ಚಾರ್ಲಿ ಒಂದು ಗಂಡು ನಾಯಿ ಜೊತೆ ಆಟವಾಡುತ್ತಿದ್ದಾಳೆ.

DOCTOR ASHWIN (O.S)

ಏಯ್ ಅಲ್ಲಿ ನೋಡಾ.

* ಇಬ್ಬರೂ ಚಾರ್ಲಿಯನ್ನು ನೋಡುತ್ತಿದ್ದಾರೆ.

DOCTOR ASHWIN (CONT'D)
ಮೊದ್ಲೇ ಹೆಣ್ಣು ನಾಯಿ ಮಾರೆ. ಸ್ವಲ್ಪ ಜಾಗ್ರತೆ ಮಾಡು. ಅವಳನ್ನೇ adoption ಮಾಡ್ಲಿಕೆ ಕಷ್ಟಾಗ್ತುಂಟು. ಇನ್ನು ಮರಿ ಹಾಕಿದ್ರೆ ಉಂಟಲ್ಲ.

* ಧರ್ಮ ಗಾಬರಿಗೊಳ್ಳುತ್ತಾನೆ.

CUT TO

EXT. DAY. FOOTPATH

* ಧರ್ಮ ಚಾರ್ಲಿಗೆ diaper ಧರಿಸಿ ಕರೆದುಕೊಂಡು ಹೋಗುತ್ತಿದ್ದಾನೆ.

CUT TO

INT/EXT. DAY. DHARMA'S HOUSE

* ಧರ್ಮ dining table Dining table ಪಕ್ಕ ಚಿಂತಿಸುತ್ತಾ ಕುಳಿತಿದ್ದಾನೆ. ಧರ್ಮ ಇನ್ನೇನು ಏಳಬೇಕು ಎನುವಷ್ಟರಲ್ಲಿ ಚಾರ್ಲಿ ಕೆಮ್ಮುತ್ತಿದ್ದಾಳೆ. ಧರ್ಮ ಚಾರ್ಲಿಯನ್ನು ನೋಡುತ್ತಾನೆ. ಕೆಮ್ಮುತ್ತಾ ಚಾರ್ಲಿಯ ಬಾಯಿಯ ಒಳಗಿನಿಂದ ball ಹೊರ ಬೀಳುತ್ತದೆ. ತಕ್ಷಣ ಧರ್ಮನ phone ring ಆಗುತ್ತದೆ. ಧರ್ಮ ಖುಷಿಯಿಂದ call receive ಮಾಡಿ,

DHARMA
ಸರ್ ಹೇಳಿ ಸರ್. ಯಾರಾದ್ರೂ ಸಿಕ್ಕಿದ್ರಾ?

CUT TO

EXT. DAY. PARK

* Doctor Ashwin parkನಲ್ಲಿ jogging ಮಾಡುತ್ತಿದ್ದಾರೆ. ಪಕ್ಕದಲ್ಲಿ ಹೆಂಗಸು ಹಾಗೂ ಚಿಕ್ಕ ಹುಡುಗ jogging ಮಾಡುತ್ತಿದ್ದಾರೆ.

DOCTOR ASHWIN
ಮತ್ತೆ ನಂಗೆ ಜವಾಬ್ದಾರಿ ಕೊಟ್ರೆ ಕೆಲಸ ಆಗ್ದೇ ಇರ್ತದಾ? ಆ.. ಇದು, ಸಂಜೆ ನಾಲ್ಕು ಗಂಟೆಗೆ ಪಾರ್ಟಿ ನಿಮ್ಮ ಮನೇಲಿರ್ತದೆ..

DHARMA
(ಖುಷಿಯಿಂದ)
ಸರಿ ಸರ್.

DOCTOR ASHWIN
ಇದೂ.. WhatsAppಅಲ್ಲಿ ಒಂದು address ಕಳಿಸಾಯ್ತಾ..

DHARMA(O.S)
Text ಮಾಡ್ತೀನ್ ಸರ್..

* ಧರ್ಮ call cut ಮಾಡಿ ಚಾರ್ಲಿಯನ್ನು ನೋಡುತ್ತಾನೆ. ಚಾರ್ಲಿ ಧರ್ಮನನ್ನು ನೋಡುತ್ತಿದ್ದಾಳೆ.

CUT TO

INT. DAY. FACTORY

MURALI SIR

ಏನ್ ಉತ್ತಮ್ ಇದು? ಬೇಗ ಹೋಗ್ಬೇಕು ಅಂದ್ರೆ ಹೆಂಗೆ?

* ಮುರಳಿ ಸರ್ ಎದುರು ನಿಂತಿರುವ ಉತ್ತಮ್ ಕೆಮ್ಮುತ್ತಿದ್ದಾನೆ.

MURALI SIR
ಆ ಧರ್ಮನನ್ನು ನೋಡಿ ಕಲೀರಿ. ಒಂದಿನ ದಿನ ರಜ ತೊಗೊಂಡಿಲ್ಲ ಅವ್ರು, ಒಂದು ದಿನ ಬೇಗ ಹೋಗ್ಬೇಕು ಅಂತನೂ ಕೇಳಿಲ್ಲ.. ಗೊತ್ತಾ?

DHARMA (O.S)
ಮುರಳಿ ಸರ್..

* ಮುರಳಿ ಸರ್ ಹಾಗೂ ಉತ್ತಮ್ ಧರ್ಮನ ಕಡೆ ನೋಡುತ್ತಾರೆ.

DHARMA
ನಾನ್ ಸ್ವಲ್ಪ ಬೇಗ ಹೋಗ್ತಾ ಇದ್ದೀನಿ.. Bye

* ಮುರಳಿ ಸರ್ ಹಾಗೂ ಉತ್ತಮ್ ಮುಖ ಮುಖ ನೋಡಿಕೊಳ್ಳುತ್ತಾರೆ.

CUT TO

INT. DAY. DHARMA'S HOUSE

* ಧರ್ಮ ಮನೆ ಬಾಗಿಲು ತೆರೆದು ಒಳಗೆ ಬಂದಾಗ ಮನೆಯಿಡೀ ಹತ್ತಿ ಹಾರುತ್ತಿದೆ. ಧರ್ಮ ಗಾಬರಿಗೊಂಡು ಮುಂದೆ ನೋಡಿದಾಗ ಮನೆ ಪೂರ್ತಿ ಚೆಲ್ಲಾಪಿಲ್ಲಿಯಾಗಿದೆ. Sofa ಪಕ್ಕದಲ್ಲಿ ಕುಳಿತಿರುವ ಚಾರ್ಲಿ ಧರ್ಮನನ್ನು ನೋಡುತ್ತಿದ್ದಾಳೆ. ಧರ್ಮ ಸಿಟ್ಟಾಗುತ್ತಾನೆ.

JUMPCUTS

* ಧರ್ಮನ ಕೈಯಲ್ಲಿದ್ದ helmet ಕೆಳಗೆ ಬೀಳುತ್ತದೆ.

* ಧರ್ಮ ಕಾಲಿನಿಂದ ಒದ್ದು ಬಾಗಿಲು ಹಾಕುತ್ತಾನೆ.

* Kitchen shelfನಲ್ಲಿದ್ದ ಸೌಟು ತೆಗೆದುಕೊಂಡು ಚಾರ್ಲಿಯನ್ನು ಅಟ್ಟಾಡಿಸಿಕೊಂಡು ಹೋಗುತ್ತಾನೆ. ಚಾರ್ಲಿ ತಪ್ಪಿಸಿಕೊಂಡು ಓಡುತ್ತಿದ್ದಾಳೆ.

* ಹಿನ್ನಲೆಯಲ್ಲಿ calling bell ಶಬ್ದವಾಗುತ್ತದೆ.
ಚಾರ್ಲಿ ಓಡುವ ರಭಸದಲ್ಲಿ TV remote ಮೇಲೆ ಕಾಲಿಡುತ್ತಾಳೆ. TV screenನಲ್ಲಿ 'TOM AND JERRY' ಬರುತ್ತದೆ. ಧರ್ಮ ಚಾರ್ಲಿಯನ್ನು sofa ಸುತ್ತಲೂ ಓಡಿಸುತ್ತಾನೆ. ಇನ್ನೊಮ್ಮೆ ಚಾರ್ಲಿ remote ಮೇಲೆ ಕಾಲಿಟ್ಟಾಗ TV screen ನಲ್ಲಿ ಉಪೇಂದ್ರನ A ಸಿನಿಮಾದ ದೃಶ್ಯ ಬರುತ್ತದೆ.

TV
ಓಡು. ಇವನು ಓಡ್ತಿರೋ speed ನೋಡಿದ್ರೆ ಇವನು ಸುಭಾಶ್ಚಂದ್ರ ಬೋಸ್ ಆಗ್ಬೋದು. God is great!

* ಚಾರ್ಲಿ dining table ಮೇಲೆ ಹಾರುತ್ತಾಳೆ. ಮತ್ತೊಮ್ಮೆ calling bell ಶಬ್ದವಾಗುತ್ತದೆ. ಧರ್ಮ ಚಾರ್ಲಿಯನ್ನು ಓಡಿಸುತ್ತಿದ್ದಾನೆ. ಚಾರ್ಲಿ ಮತ್ತೊಮ್ಮೆ TVಯ remote ಮೇಲೆ ಕಾಲಿಡುತ್ತಾಳೆ. TV channel ಬದಲಾಗುತ್ತದೆ. ಧರ್ಮ ಇನ್ನೇನು ಚಾರ್ಲಿಗೆ ಹೊಡೆಯಬೇಕೆಂದು ಕೈ ಮೇಲೆತ್ತಿದ್ದಾಗ ಮನೆ ಬಾಗಿಲು ತೆರೆದ ಶಬ್ದ ಕೇಳಿಸುತ್ತದೆ. ಧರ್ಮ ಬಾಗಿಲ ಬಳಿ ನೋಡಿದಾಗ ಹೆಂಗಸು ಹೊರಗಡೆ ನಿಂತು ದಂಗಾಗಿ ನೋಡುತ್ತಿದ್ದಾರೆ. ಪಕ್ಕದಲ್ಲಿ ನಿಂತಿರುವ ಚಿಕ್ಕ ಹುಡುಗ ಮೆಲ್ಲನೆ ಮನೆಯೊಳಗೆ ಇಣುಕುತ್ತಾನೆ. ಧರ್ಮ ಮುಜುಗರದಿಂದ ಚಾರ್ಲಿಯನ್ನು ತಿರುಗಿ ನೋಡುತ್ತಾನೆ. ಚಾರ್ಲಿ hands up ಮಾಡಿ sofa ಮೇಲೆ ಕುಳಿತಿದ್ದಾಳೆ. ಚಾರ್ಲಿ ಮೆಲ್ಲನೆ ಅವರಿಬ್ಬರತ್ತ ತಿರುಗಿ ನೋಡುತ್ತಾಳೆ. ಹೆಂಗಸು ಸಿಟ್ಟಿನಿಂದ ನೋಡುತ್ತಿದ್ದಾಳೆ. ಧರ್ಮ ಕೈ ಕೆಳಗಿಳಿಸಿ ಮುಜುಗರದಿಂದ smile ಮಾಡುತ್ತಾನೆ.

CUT TO

EXT. DAY. DHARMA'S HOUSE

* ಹೆಂಗಸು ಸಿಟ್ಟಿನಿಂದ ಮಗನ ಕೈ ಎಳೆದುಕೊಂಡು ವಾಪಸ್ ಹೋಗುತ್ತಿದ್ದಾರೆ. ಹುಡುಗ ಅಳುತ್ತಿದ್ದಾನೆ. ಧರ್ಮ ಅವರ ಹಿಂದಿನಿಂದ ಬಂದು ಬೇಡಿಕೊಳ್ಳುತ್ತಿದ್ದಾನೆ. ಚಾರ್ಲಿಯೂ ಧರ್ಮನ ಹಿಂದೆ ಓಡಿ ಬರುತ್ತಾಳೆ.

DHARMA
(ಮೇಡಂ ಮೇಡಂ.. ಮೇಡಂ.. ಅದು ನಾಯಿ ಮಾಡಿದ್ದಲ್ಲ ಮೇಡಂ.. ಅದು TRAINED DOG..
(ಹುಡುಗನನ್ನು ನೋಡಿ)
ಏಯ್ ಪುಟ್ಟ.. ನಿಂಗ್ ನಾಯಿ ಬೇಡ್ವೇನೋ.?

FOSTER FAT KID
(ಅಳುತ್ತಾ)
ಬೇಕು..

FOSTER FAT LADY
ಏಯ್ ನಿಂಗ್ ನಾಯಿ ಯಾಕೋ? ಮನೇಲಿ ಅಪ್ಪ ಇದ್ದಾರೆ ಬಾ..

* ಧರ್ಮ ಹೇಳಿದ್ದನ್ನು ಲೆಕ್ಕಿಸದೆ ಹೆಂಗಸು ಮಗನ ಕೈ ಎಳೆದು ನಡೆದುಕೊಂಡು ಹೋಗುತ್ತಾಳೆ.

DHARMA
(ಬೇಡಿಕೊಳ್ಳುತ್ತಾ)
ಅಯ್ಯೋ ಪಾಪ ಮಗು ಅಷ್ಟು ಕೇಳ್ಕೊತಾ ಇದೆ ma'am. Ma'am please..

FOSTER FAT LADY
(ಧರ್ಮನ ಮಾತನ್ನು ಲೆಕ್ಕಿಸದೆ)
ಹತ್ತೋ ಗಾಡಿ

* ಎಂದು ಹೇಳಿ ಮಗನನ್ನು car ಗೆ ಹತ್ತಿಸಿ ಕುಳಿತುಕೊಳ್ಳುತ್ತಾರೆ. ಧರ್ಮ ಅಸಹಾಯಕನಾಗಿ,

DHARMA
Ma'am ಅದ್ರಲ್ಲಿ ನಾಯಿದೇನು ತಪ್ಪಿಲ್ಲ Ma'am. ಅದು trained dog ಅಂತ ಹೇಳಿದ್ನಲ್ವ?

DHARMA
Ma'am please..

* Car ಮುಂದೆ ಹೋಗುತ್ತದೆ. Car ಹೊರಟು ಹೋದಂತೆ ಕಾಲನಿಯ ಸದಸ್ಯರ ಗುಂಪು ನಡೆದುಕೊಂಡು ಬರುತ್ತಿದ್ದಾರೆ. ಧರ್ಮ gate close ಮಾಡಲು ಪ್ರಯತ್ನಿಸುತ್ತಾನೆ. ಆದರೆ latch ಬೀಳುತ್ತಿಲ್ಲ. ಚಾರ್ಲಿ ಬೊಗಳುತ್ತಿದ್ದಾಳೆ. ಧರ್ಮ ಹಿಂದೆ ತಿರುಗಿ ನೋಡಿದಾಗ Bikeshead ಒಳಗೆ trolley bagನಲ್ಲಿ ಚಾರ್ಲಿ ಕುಳಿತಿದ್ದಾಳೆ. ಧರ್ಮ ಸಿಟ್ಟಿನಿಂದ ಪಕ್ಕದಲ್ಲಿರುವ rod ತೆಗೆದುಕೊಂಡು ಹೊಡೆಯಲು ಮುಂದಾಗಾದ,

VICKY MOTHER
Hello excuse me?

* ಧರ್ಮ ಹಿಂದೆ ತಿರುಗಿ ನೋಡಿದರೆ ಕಾಲನಿ ಸದಸ್ಯರು ಗುಂಪಿನಲ್ಲಿ gate ಹೊರಗಡೆ ನಿಂತುಕೊಂಡಿದ್ದಾರೆ.

VICKY MOTHER
Colonyಲಿ ನಾಯಿ ಸಾಕ್ಬಾರ್ದು ಅಂತ rules ಗೊತ್ತಿಲ್ವಾ ನಿಂಗೆ?

TV GUY 1
ಬೇರೆ ಎಲ್ಲದಕ್ಕೂ ಕಾಲೋನಿ ರೂಲ್ಸ್ ಅಂತ ಮಾತಾಡ್ತೀಯ...?

KRIPAKAR
Rules ನಮಗ್ ಮಾತ್ರ ಅಲ್ಲ, ನಿನಿಗೂ apply ಆಗುತ್ತೆ..ನಿನ್ ನಾಯಿಗೂ apply ಆಗುತ್ತೆ.

* ಚಾರ್ಲಿ trolley bagನಿಂದ ಇಳಿದು ಧರ್ಮನ ಹತ್ತಿರ ಬಂದು ಕುಳಿತುಕೊಳ್ಳುತ್ತಾಳೆ..

TV GUY 2
ಚಾಲಾಕಿ ಇದ್ಯ ಮಗನೆ ನೀನು. ಗಳಿಗೆ ಸಿದ್ದ ಒಳಗೇ ಮಾಡ್ದ ಅನ್ನೋ ಹಂಗೆ, ಯಾರ್ಗೂ ಗೊತ್ತಾಗ್ದೆ ಇರೋ ಹಂಗೆ ನಾಯಿ ತಂದು ಸಾಕ್ಕೊಂಡಿದ್ದೀಯಾ?

KRIPAKAR (O.S)
ನಾಯಿ ಬಚ್ಚಿಟ್ಕೊಂಡ್ರೆ ನಮ್ಗೆ ಗೊತ್ತಾಗಲ್ಲಅಂದ್ಕೊಂಡಿದ್ದೀಯ?

* ಧರ್ಮ ಸಿಟ್ಟಿನಿಂದ ಎಲ್ಲರನ್ನೂ ನೋಡುತ್ತಿದ್ದಾನೆ.

KRIPAKAR (CONT'D)
ಗೊತ್ತು ಗುರಿ ಇಲ್ದೇ ಇರೋರಿಗೆ colonyಲಿ ಜಾಗ ಕೊಟ್ರೆ ಹಿಂಗೆ ಆಗೋದು.

* ಧರ್ಮ gate latch ನ ನೋಡುತ್ತಿದ್ದಾನೆ.

KRIPAKAR (O.S)
ಇನ್ನೂ ಏನೇನು ಕೆಲ್ಸ ಮಾಡ್ತಾನೋ secret ಆಗಿ, ಯಾವನಿಗೊತ್ತು?

VICKY MOTHER
ನೋಡಿ ಅವ್ನ. ಹೆಂಗ್ ದುರುಗುಟ್ಕೊಂಡು ನೋಡ್ತಿದ್ದಾನೆ ನಮ್ಮನ್ನೆಲ್ಲ?

COLONY LADY 3
ಅವ್ನ್ ಮುಖ ಕಟ್ಕೊಂಡ್ ನಮ್ಗೇನ್ ಆಗ್ಬೇಕಾಗಿದೆ ? ಪಾಪ, ಮಕ್ಳಾಡೋ ಜಾಗ..ನಾಯಿ ಸಾಕ್ತಾನಂತೆ.

* ಧರ್ಮ ಸಿಟ್ಟಿನಿಂದ ಅವರೆಲ್ಲರನ್ನೂ ನೋಡುತ್ತಿದ್ದಾನೆ.

KRIPAKAR
ಇಲ್ ತಂದ್ ಸಾಕ್ತಿದ್ದೀಯಲ್ಲ ಈ ದರಿದ್ರಾನ...
(ಸ್ವಲ್ಪ ಮುಂದೆ ಬಂದು)
ಇದನ್ನ ಹೊರಗಡೆ ಹಾಕಿದ್ರೆ ಸರಿ. ಇಲ್ಲಾಂದ್ರೆ ನಾವೆಲ್ರೂ ಸೇರಿ ನಿನ್ನ ಕಾಲನಿಯಿಂದ ನಿನ್ನನ್ನ ಹೊರಗಡೆ ಹಾಕ್ಬೇಕಾಗುತ್ತೆ.

* ಕೃಪಾಕರ್ ಮಾತು ಮುಗಿಸುತ್ತಿದ್ದಂತೆ ಧರ್ಮ rodನಿಂದ gate latch ಮೇಲೆ ಜೋರಾಗಿ ಹೊಡೆಯುತ್ತಾನೆ. ಎಲ್ಲರೂ ಗಾಬರಿಗೊಂಡು ಎರಡು ಹೆಜ್ಜೆ ಹಿಂದೆ ಹೋಗುತ್ತಾರೆ. Latch ತುಂಡಾಗಿ ಕೆಳಗಡೆ ಬಿದ್ದು ತಿರುಗುತ್ತದೆ. ಧರ್ಮ latch ಮೇಲೆ ಕಾಲಿಟ್ಟಾಗ ಅದು ತಿರುಗುವುದು ನಿಲ್ಲತ್ತದೆ. ಧರ್ಮ ಸಿಟ್ಟಿನಿಂದ ಎಲ್ಲರನ್ನೂ ನೋಡುತ್ತಾನೆ. ಎಲ್ಲರೂ ಗಾಬರಿಗೊಂಡಿದ್ದಾರೆ.

DHARMA
ಇದ್ ನನ್ ಮನೆ, ನಾನಿಲ್ಲೇ ಇರ್ತೀನಿ.

* ಧರ್ಮ ಹಿಂದೆ ತಿರುಗಿ ನೋಡುತ್ತಾನೆ. ಪಕ್ಕದಲ್ಲೇ ಕುಳಿತಿದ್ದ ಚಾರ್ಲಿ paw ಮಾಡ್ತಾಳೆ. ಧರ್ಮ ಚಾರ್ಲಿಯನ್ನು ತಿರುಗಿ ನೋಡಿದ ನಂತರ,

DHARMA
ಇದ್ ನನ್ ನಾಯಿ. ಇದೂ ಇಲ್ಲೇ ಇರುತ್ತೆ. ಯಾವ್
ಬೋಳಿಮಗ ಏನ್ ಕಿತ್ಕೊತಾನೋ ನಾನೂ ನೋಡ್ತೀನಿ.

* ಕಾಲನಿ ಜನರು ದಂಗಾಗಿ ನಿಂತಿದ್ದಾರೆ.

COLONY LADY 3
ಅಯ್ಯೋ, ನಾನ್ Gas off ಮಾಡೋದೇ ಮರೆತುಬಿಟ್ಟೆ..

* ಎಂದು ಹೇಳಿ ಅಲ್ಲಿಂದ ಹೊರಡುತ್ತಾಳೆ.

JANAKI
(ಕೃಪಾಕರ್ ನ ಕೈ ಹಿಡಿದು)
ರೀ ಬನ್ರೀ...

KRIPAKAR
ನಾನೇನ್ ಹೆದರ್ಲಿಲ್ಲ. ಬಿಡೇ ಕೈ ನಾ.

JANAKI
ಬನ್ರೀ

* ಎಂದು ಹೇಳಿ ಕೃಪಾಕರ್ ಕೈ ಹಿಡಿದು ಕರೆದುಕೊಂಡು ಹೋಗುತ್ತಾಳೆ. ಒಬ್ಬೊಬ್ಬರೇ ಹೊರಡುತ್ತಾರೆ.

TV GUY 1
(Phoneನಲ್ಲಿ ಮಾತಾಡುವಂತೆ ನಟಿಸುತ್ತಾ)
Hello.. ಬಂದ್ರು? ಆ. ಬಂದೆ ಬಂದೆ..

* ಧರ್ಮ ವಿಕ್ಕಿಯನ್ನ ನೋಡಿ,

DHARMA
ಏಯ್, ನೀನು

TV GUY 1
ನಾನ?

* Phone ನಲ್ಲಿ ಮಾತಾಡುವಂತೆ ನಟಿಸುತ್ತಾ TV Guy ಹೋಗುತ್ತಾನೆ. ಧರ್ಮ ವಿಕ್ಕಿಯನ್ನು ನೋಡಿ,

DHARMA
ಇನ್ನೊಂದ್ ಸಲ ಈ ರೋಡಲ್ಲಿ ವೀಲಿ ಗೀಲಿ ಏನಾದ್ರೂ
ಮಾಡಿದ್ರೆ parts ಕಿತ್ತು ಕೈಯಲ್ ಕೊಡ್ತೀನಿ. ಗಾಡೀದಲ್ಲ.
ನಿಂದು.

* ವಿಕ್ಕಿ ಭಯದಿಂದ ವಾಪಸ್ ಹೋಗುತ್ತಾನೆ. ಧರ್ಮ ಕೈಯಲ್ಲಿರುವ rod ನ ಎಸೆದು gate latch ಎತ್ತಿಕೊಳ್ಳಲು ಹೊರಟಾಗ ಪಕ್ಕದಲ್ಲಿ ಒಂದು tag ಕಾಣಿಸುತ್ತದೆ. ಧರ್ಮ ಅದನ್ನು ಕೈಗೆತ್ತಿಕೊಂಡು ನೋಡುತ್ತಾನೆ. Tag ಮೇಲೆ 'Keaton' ಎಂದು ಬರೆದಿದೆ. ಧರ್ಮ ಅದನ್ನು ಪಕ್ಕಕ್ಕೆ ಎಸೆದು latch ಅನ್ನು gateಗೆ ಸಿಕ್ಕಿಸುತ್ತಾನೆ. ಹಿನ್ನಲೆಯಲ್ಲಿ ಚಾರ್ಲಿ ಬೊಗಳುತ್ತಾಳೆ

CUT TO

INT. DAY. DHARMA'S HOUSE

* Doctor ಅಶ್ವಿನ್ phone ನಲ್ಲಿ ಮಾತನಾಡುತ್ತಾ,

DOCTOR ASHWIN

ನಂಗೆಂತ ಇದೇ ಕೆಲ್ಸ ಏನಾ? ನಾನು ನಾಯಿದು ಡಾಕ್ಟರ್,
ಬ್ರೋಕರ್ ಅಲ್ಲ.

* ಧರ್ಮ ಹರಿದಿದ್ದ sofa ಗೆ tape ಅಂಟಿಸುತ್ತಾ phoneನಲ್ಲಿ ಮಾತಾಡುತ್ತಿದ್ದಾನೆ. ಚಾರ್ಲಿ TV ಮುಂದೆ snow ad ನೋಡುತ್ತಾ ಜಿಗಿಯುತ್ತಿದ್ದಾಳೆ.

DHARMA
(Tape ಅಂಟಿಸುತ್ತಾ)
ನಾನ್ ಹಾಗ್ ಹೇಳಿಲ್ಲ ಸರ್. ಆದ್ರೆ ಸ್ವಲ್ಪ ನನ್ ಪರಿಸ್ಥಿತಿನೂ
ಅರ್ಥ ಮಾಡ್ಕೊಳಿ.

DOCTOR ASHWIN
ಒಂದು ಕೆಲ್ಸ ಮಾಡುವ. ನಾನು ಒಂದು facebook post
ಹಾಕ್ತೇನೆ. ರಪ್ಪ ಒಂದು ನಾಯಿದು license number ಕಳಿಸು.

* ಚಾರ್ಲಿ ಬೊಗಳುತ್ತಿದ್ದಾಳೆ.

DHARMA
License..
(ಕಿರಿಕಿರಿಗೊಂಡು remote ತೆಗೆದು TV off ಮಾಡಿ)
License ಎಲ್ಲಾ ಮಾಡ್ಸಿಲ್ಲ ಸರ್..

DOCTOR ASHWIN
Oh! License ಇಲ್ವಾ? First ಅದನ್ನು ಮಾಡಿಸು. Dog
license ಇದ್ರೆ ರಪ್ಪ adoption ಆಗ್ತದೆ. ಹಾಗೆ.

DHARMA
Ok Sir. ಎಲ್ ಮಾಡ್ಸೋದು?

CUT TO

EXT. DAY. DOG LICENSE PARK

* ವಿಶಾಲವಾದ parkನಲ್ಲಿ Dog licensing camp ನಡೆಯುತ್ತಿದೆ. Dog License Camp 2020 establish ಆಗುತ್ತದೆ. ಜನರು license form ಹಿಡಿದುಕೊಂಡು ಅವರವರ ನಾಯಿಗಳ ಜೊತೆಗೆ ಸಾಲಾಗಿ ನಿಂತಿದ್ದಾರೆ.

MONTAGES:

* ನಾಯಿಗಳಿಗೆ ಸಂಬಂಧಿಸಿದ postersಗಳನ್ನು ನೇತು ಹಾಕಲಾಗಿದೆ.

* ಜನರು ತಮ್ಮ ನಾಯಿಗಳನ್ನು docotor ಹತ್ತಿರ ಪರೀಕ್ಷಿಸುತ್ತಿದ್ದಾರೆ. Doctor prescription ಬರೆಯುತ್ತಿದ್ದಾರೆ.

* Pendalನಲ್ಲಿ volunteers ಜನರಿಗೆ ಮಾಹಿತಿ ಕೊಡುತ್ತಿದ್ದಾರೆ.

* Photo boothನಲ್ಲಿ dog owner ತನ್ನ ನಾಯಿಯ ಜೊತೆ photo ತೆಗೆದುಕೊಳ್ಳುತ್ತಿದ್ದಾರೆ.

* ಜನರು food& toys ಖರೀದಿಸುತ್ತಿದ್ದಾರೆ.

* ನಾಯಿಯೊಂದು ಮೂತ್ರ ವಿಸರ್ಜಿಸುತ್ತಿದೆ.

* ಪುಟ್ಟ ಮಗು ನಾಯಿಯ ಜೊತೆ ಕುಳಿತಿದ್ದಾಳೆ. ಮುಂದೆ ಕುಳಿತಿರುವ ಚಿತ್ರಕಾರ ಅವರಿಬ್ಬರ ಚಿತ್ರ ಬಿಡಿಸುತ್ತಿದ್ದಾನೆ.

* ಒಬ್ಬಳು volunteer Dog pedicure ಮಾಡುತ್ತಿದ್ದಾಳೆ.

* ನಾಯಿಗಳ ಜೊತೆಗೆ ನಿಂತಿರುವ ಜನರತ್ತ camera pan ಆಗುತ್ತಾ ಸ್ವಲ್ಪ ಮುಂದೆ ಹೋದಾಗ diaper ಹಾಕಿಕೊಂಡು ಚಾರ್ಲಿ ಕಾಣಿಸುತ್ತಾಳೆ. Camera tilt up ಆದಾಗ ಧರ್ಮ ಕಾಣಿಸುತ್ತಾನೆ. ಧರ್ಮನ ಹಿಂದೆ ನಿಂತಿರುವ ಹೆಂಗಸು ತನ್ನ ನಾಯಿಮರಿಯನ್ನು ಮುದ್ದು ಮಾಡುತ್ತಿದ್ದಾಳೆ.

KEMPARAJU

Next..

* ಧರ್ಮನ ಮುಂದೆ ನಿಂತಿರುವ ವ್ಯಕ್ತಿ ಮುಂದೆ ಹೋಗಿ ಕುಳಿತು license form ಕೊಡುತ್ತಾನೆ. ಎದುರುಗಡೆ ಕುಳಿತಿರುವ ದೇವಿಕಾ ಅದನ್ನು ತೆಗೆದುಕೊಂಡು ಮುಗುಳ್ನಗುತ್ತಾಳೆ. ಪಕ್ಕದಲ್ಲಿ ಇಬ್ಬರು Assistants (Pragathi, Kemparaju)
ಕುಳಿತಿದ್ದಾರೆ.

DEVIKA

ಹೆಸ್ರು?

LICENSE GUY

ಪಮ್ಮಿ

* ದೇವಿಕಾ license form ಪರೀಕ್ಷಿಸುತ್ತಾ,

DEVIKA

Food ಏನ್ ಹಾಕ್ತೀರ?

LICENSE GUY

Pedigree ಮತ್ತೆ ಹಾಲು, ನೈಟ್ ಹೊತ್ತು fruits ಕೊಡ್ತೀನಿ.

DEVIKA

Good, training ಆಗಿದ್ಯಾ?

LICENSE GUY

ಅದೇ ಹಾಲು ಕೊಡ್ತೀನಿ ಅಂದ್ನಲ್ಲಾ, ದಿನಾ ಪಮ್ಮಿನೇ ಹೋಗ್ ತರೋದು.

DEVIKA

(ನಾಯಿಯನ್ನು ನೋಡಿ)

Well groomed...

LICENSE GUY

Oh! Ya

DEVIKA (O.S)

Last Vaccination ಯಾವಾಗ ಮಾಡ್ಸಿದ್ರಿ?

* ಧರ್ಮನ ಹಿಂದೆ ನಿಂತಿರುವ ಹೆಂಗಸು ತನ್ನ ನಾಯಿಮರಿಯನ್ನು ಮುದ್ದಿಸುವನ್ನು ಕೇಳಿಸಿಕೊಂಡ ಧರ್ಮ ಅಸಹನೆಯಿಂದ ಹಿಂದೆ ತಿರುಗಿ ನೋಡುತ್ತಾನೆ.

ARYAN MOTHER

(ನಾಯಿಮರಿಯನ್ನು ಮುದ್ದಿಸುತ್ತಾ)

ಏನಾಯ್ತು? ಹಶುವಗ್ತಾ ಉಂಟಾ?

* ಇನ್ನೊಂದು ಕಡೆ ಅವಳ ಗಂಡ ಅಳುತ್ತಿರುವ ಮಗನ(Aryan) ಕೈ ಹಿಡಿದು phoneನಲ್ಲಿ ಮಾತನಾಡುತ್ತಿದ್ದಾನೆ. ಹೆಂಗಸು Aryanನ ನೋಡುತ್ತಾಳೆ. Aryan ಅಳುತ್ತಾ,

ARYAN

ಮಮ್ಮಿ, ಬೇಗ ಬಾ ಇಲ್ಲಿ. ನಂಗೆ ಹೊಟ್ಟೆ ಹಶುವಾಗ್ತಾ ಇದೆ..

* ತಾಯಿ ಅಸಹನೆಯಿಂದ,

ARYAN MOTHER
ಏನೋ ನಿಂದು? ಇರೋ
(ನಾಯಿಯನ್ನು ಮುದ್ದಿಸುತ್ತಾ)
ಓ.. ನಿಂಗಲ್ಲ ನಿಂಗಲ್ಲ ಹೆದರ್ಬೇಡ ಬಂಗಾರ..

* ಧರ್ಮ ಕಿರಿಕಿರಿಯಿಂದ ನೋಡುತ್ತಿದ್ದಾನೆ.

KEMPARAJU (O.S)
Next..

* ಧರ್ಮ ಮುಂದೆ ಬಂದು ಕುಳಿತು license form ದೇವಿಕಾಗೆ ಕೊಡುತ್ತಾನೆ. ದೇವಿಕಾ form ನೋಡುತ್ತಾ,

DEVIKA
ಹೆಸ್ರು?

DHARMA
ಧರ್ಮ.

DEVIKA
ನಿಮ್ದಲ್ಲ, ಇದ್ರದ್ದು.

* ಧರ್ಮ ಚಾರ್ಲಿಯನ್ನು ನೋಡುತ್ತಾನೆ. ಚಾರ್ಲಿ ಬೊಗಳುತ್ತಾಳೆ.

DEVIKA
(Form ನೋಡುತ್ತಾ)
ಏನಂತ ಕರಿತೀರ ಇದನ್ನ?

* ಧರ್ಮನ ಹಿಂದೆ ನಿಂತಿರುವ ಹೆಂಗಸು ನಾಯಿಯನ್ನು 'ಚೂ ಚೂ' ಎಂದು ಮುದ್ದಿಸುತ್ತಿದ್ದಾರೆ. ಧರ್ಮ ಸ್ವಲ್ಪ ಹೊತ್ತು ಯೋಚಿಸಿ,

DHARMA
ಚು ಚೂ

* ಕೆಂಪರಾಜು, ಪ್ರಗತಿ ಹಾಗೂ ದೇವಿಕಾ ಆಶ್ಚರ್ಯದಿಂದ ನೋಡುತ್ತಾರೆ.

DEVIKA
Sorry!?

DHARMA
ಇದ್ರು ಹೆಸ್ರು, 'ಚೂ ಚೂ'

DEVIKA
(ಕೆಂಪರಾಜು ಕಡೆ ತಿರುಗಿ ನಗಾಡುತ್ತಾ)
ಇದೂ ಒಂದ್ ಹೆಸರಾ?

DHARMA
ನಾನ್ ಹಾಗೇ ಕರಿಯೋದು, ಬರ್ಕೊಳ್ಳಿ.

* ದೇವಿಕಾ ಪ್ರಗತಿಯನ್ನು ನೋಡಿ ಬರೆದುಕೋ ಎನ್ನುವಂತೆ ಸನ್ನೆ ಮಾಡುತ್ತಾಳೆ. ದೇವಿಕಾ form ನೋಡುತ್ತಾ,

DEVIKA
Food ಏನ್ ಹಾಕ್ತೀರ?

DHARMA
ಇಡ್ಲಿ

* ಮೂವರೂ ಆಶ್ಚರ್ಯದಿಂದ ನೋಡುತ್ತಾರೆ.

DEVIKA
ಏನು?

DHARMA
ಇಡ್ಲಿ

DEVIKA
ನಾಯಿಗೆ ಬರೀ ಇಡ್ಲಿ ಹಾಕ್ತೀರ?

DHARMA
ಜೊತೆಗ್ ಚಟ್ನೀನೂ ಹಾಕ್ತೀನಿ.

DEVIKA
ನೋಡಿ, ನಾಯಿಗಳಿಗಂತಾನೇ ಊಟ ತಿಂಡಿ ಬೇರೆ ಇರುತ್ತೆ. ನೀವು ಅದನ್ನ ಹಾಕ್ಬೇಕು.. ಆಮೇಲೆ Hygiene ಅನ್ನೋದು ನಮಗೆ ಎಷ್ಟು ಮುಖ್ಯಾನೋ ಅವುಗಳಿಗೂ ಅಷ್ಟೇ ಮುಖ್ಯ..So..
(ದೇವಿಕಾ ಕೆಂಪರಾಜು ಕೈಯಿಂದ Dog essential care guide ತೆಗೆದುಕೊಂಡು)

DEVIKA
ಇದ್ ತಗೊಳ್ಳಿ. Dog essential care guide. ನೀವು ನಿಮ್ ನಾಯೀನ ಹೇಗ್ ನೋಡ್ಕೊಳ್ಬೇಕು ಅಂತ clear ಆಗಿದೆ. ನಿಮಿಗೆ ಇದರ ಅಗತ್ಯ ಇದೆ.

DHARMA
ನೋಡಿ, ನಾನ್ ನಾಯಿನ ಹೆಂಗ್ ನೋಡ್ಕೊಬೇಕು ಅಂತ ಗೊತ್ತು. ಆ ಪುಸ್ತಕ ನೀವೇ ಇಟ್ಕೊಳ್ಳಿ. ಬಂದಿರೋ ಕೆಲ್ಸ ಮುಗ್ಸೋಣ. ಮೊದ್ಲು license ಕೊಡಿ.

* ದೇವಿಕಾ ಆಶ್ಚರ್ಯದಿಂದ ನೋಡುತ್ತಿದ್ದಾಳೆ.

JUMPCUTS

* ದೇವಿಕಾ Form ಮೇಲೆ seat ಹಾಕುತ್ತಾಳೆ.

* ದೇವಿಕಾ form ಮೇಲೆ ಸಹಿ ಮಾಡುತ್ತಾಳೆ.

* Card ನಲ್ಲಿ 'ಪರವಾನಗಿ ಸಂಖ್ಯೆ' ಎಂದು ಬರೆದಿದೆ. ಅದರ ಮೇಲೆ ಮುದ್ರೆ ಹಾಕಿದಾಗ '0777' ಎಂದು ಕಾಣಿಸುತ್ತದೆ.

* ದೇವಿಕಾ envelope ಜೊತೆಗೆ dog essential care guideನ ಧರ್ಮನಿಗೆ ಕೊಡುತ್ತಾಳೆ. ಧರ್ಮ ಸಿಟ್ಟಿನಿಂದ ಅವೆರಡನ್ನೂ ತೆಗೆದುಕೊಂಡು ಎದ್ದು ಹೋಗುತ್ತಾನೆ. ದೇವಿಕಾ ಧರ್ಮನ್ನು ದಿಟ್ಟಿಸಿ ನಂತರ ಚಾರ್ಲಿ ಕಡೆಗೆ ನೋಡಿದಾಗ ಅವಳು diaper ಧರಿಸಿರುವುದು ಕಾಣುತ್ತದೆ.

KEMPARAJU (O.S)
Next..

* ಧರ್ಮ ಮುಂದೆ ಹೋಗುತ್ತಾ dog essential care guideನ ಅಲ್ಲಿರುವ dustbinಗೆ ಎಸೆದು ಹೋಗುತ್ತಾನೆ. ದೇವಿಕಾ ಅಸಹನೆಯಿಂದ ನೋಡುತ್ತಿದ್ದಾಳೆ.

CUT TO

INT. DAY. DHARMA'S HOUSE

* ಧರ್ಮ ಮಲಗಿದ್ದಾನೆ. ಚಾರ್ಲಿ curtain ಸರಿಸಿ ಧರ್ಮನ ಮುಖವನ್ನು ನೆಕ್ಕುತ್ತಾಳೆ. ಧರ್ಮ ಕಿರಿಕಿರಿಗೊಂಡು ಎಚ್ಚರಗೊಳ್ಳುತ್ತಾನೆ.

CUT TO

EXT. DAY. DHARMA'S HOUSE

* ಧರ್ಮ gate latch weld ಮಾಡುತ್ತಿದ್ದಾನೆ. ವೇಗವಾಗಿ ಚಲಿಸುತ್ತಿರುವ RX 100 ಶಬ್ದ ಕೇಳಿಸುತ್ತದೆ. ಧರ್ಮ ದಿಟ್ಟಿಸಿ ನೋಡುತ್ತಾನೆ. ಧರ್ಮನನ್ನು ನೋಡಿದ ತಕ್ಷಣ ವಿಕ್ಕಿ ಭಯದಿಂದ ನಿಧಾನಕ್ಕೆ ಚಲಿಸುತ್ತಾನೆ. ಧರ್ಮ welding ಮುಗಿಸಿ gate latch ಹಾಕುತ್ತಾನೆ.

CUT TO

INT. DAY. DHARMA'S HOUSE

* ಚಾರ್ಲಿ ಇಡ್ಲಿ ತಿನ್ನುತ್ತಿದ್ದಾಳೆ. ಧರ್ಮ kitchen sink ನಲ್ಲಿ ನಳ್ಳಿ ತಿರುಗಿಸುತ್ತಾನೆ. ನೀರು ಬರುತ್ತಿಲ್ಲ. ಧರ್ಮ ಹಿಂದೆ ತಿರುಗಿ ಚಾರ್ಲಿಯನ್ನು ನೋಡುತ್ತಾನೆ. ಚಾರ್ಲಿ ನಾಲಗೆ ಹೊರಗೆ ಹಾಕಿ ನೋಡುತ್ತಿದ್ದಾಳೆ. ಧರ್ಮ ಕೈಯಲ್ಲಿರುವ ಬಟ್ಟಲನ್ನು ಚಾರ್ಲಿಗೆ ತೋರಿಸುತ್ತಾನೆ. ಚಾರ್ಲಿ ಓಡಿ ಬಂದು ಬಟ್ಟಲಲ್ಲಿ ಮಿಕ್ಕಿರುವ ಇಡ್ಲಿ, ಚಟ್ನಿಯನ್ನು ನೆಕ್ಕುತ್ತಾಳೆ. ಧರ್ಮ ಬಟ್ಟಲನ್ನು ಮೇಲೆತ್ತಿ ನೋಡಿದಾಗ ಸಂಪೂರ್ಣವಾಗಿ clean ಆಗಿ ಧರ್ಮನ ಮುಖ ಕಾಣಿಸುತ್ತಿದೆ. Calling bell ಶಬ್ದವಾಗುತ್ತದೆ. ಧರ್ಮ ಸಿಟ್ಟುಗೊಂಡಿದ್ದಾನೆ.

CUT TO

* ಧರ್ಮ ಬಾಗಿಲು ತೆರೆಯುತ್ತಾನೆ. ದೇವಿಕಾ, ಕೆಂಪರಾಜು ಹಾಗೂ ಪ್ರಗತಿ ಧರ್ಮನ ಮನೆ ಹೊರಗಡೆ ನಿಂತಿದ್ದಾರೆ.

DHARMA
ಹೇಳಿ.

PRAGATHI
(ಭಯದಿಂದ)
Hi..

DEVIKA
Hi. ಒಳಗ್ ಬರ್ಬೋದಾ?

DHARMA
ಇಲ್ಲ.

* ಎಂದು ಹೇಳಿ ಬಾಗಿಲು ಹಾಕುತ್ತಾನೆ. ಧರ್ಮನ ಮಾತು ಕೇಳಿ ಪ್ರಗತಿ ತಿರುಗಿ ಹೊರಡಲು ಮುಂದಾದಾಗ ದೇವಿಕಾ ಅವಳನ್ನು ತಡೆದು ನಿಲ್ಲಿಸಿ,

DEVIKA
Hello hello ಧರ್ಮ ಅವ್ರೆ, excuse me..

* ಧರ್ಮ ಮತ್ತೆ ಬಾಗಿಲು ತೆರೆಯುತ್ತಾನೆ. ದೇವಿಕಾ bag ನಿಂದ visiting card ತೆಗೆದು,

DEVIKA
ನನ್ ಹೆಸರು ದೇವಿಕ ಅಂತ..

KEMPARAJU
ಕೆಂಪರಾಜು

PRAGATHI
ಪ್ರಗತಿ

* ದೇವಿಕಾ ಕೈಯಲ್ಲಿರುವ card ನ ಧರ್ಮನಿಗೆ ತೋರಿಸುತ್ತಾ,

DEVIKA
ತಗೊಳ್ಳಿ. ನಾವು Animal Welfare Board ಇಂದ ಬಂದಿರೋದು.

* ಧರ್ಮ card ತೆಗೆದುಕೊಳ್ಳುತ್ತಾನೆ.

DEVIKA
ನೀವು ನಿಮ್ ನಾಯಿನ ಚನ್ನಾಗ್ ನೋಡ್ಕೊಂತಿಲ್ಲ ಅಂತ complaint ಬಂದಿದೆ.

* Card ನೋಡುತ್ತಿದ್ದ ಧರ್ಮ,

DHARMA
ಯಾರ್ ಕೊಟ್ಟಿದ್ದು complaint?

KEMPARAJU
(ದೇವಿಕಾಳತ್ತ ಕೈ ತೋರಿಸಿ)
ಇವ್ರೆ complaint ಕೊಟ್ಟಿದ್ದು

DHARMA
ಏನ್ ತಮಾಷೆ ಮಾಡ್ತಿದ್ದೀರಾ? ನೀವೆ complaint ಕೊಟ್ಬಿಟ್ಟು ನೀವೇ checking ಬರ್ತೀರಾ?

DEVIKA
We have the authority. So, ಒಳಗ್ ಬರ್ಬೋದಾ?

* ಧರ್ಮ ಮೂವರನ್ನು ದಿಟ್ಟಿಸಿ ನೋಡಿ ಮನೆಯೊಳಗೆ ಹೋಗುತ್ತಾನೆ. ಮೂವರೂ ಮನೆಯೊಳಗೆ ಬಂದು ಸುತ್ತಲೂ ನೋಡುತ್ತಿದ್ದಾರೆ. ಮನೆ ಪೂರ್ತಿ cigarette buds, beer bottles ಕಾಣಿಸುತ್ತಿವೆ. ಧರ್ಮ ಮಂಚದ ಮೇಲೆ ಕುಳಿತು cigarette ತೆಗೆದುಕೊಳ್ಳುತ್ತಾನೆ. ಧರ್ಮನನ್ನು ನೋಡಿದ ದೇವಿಕಾ,

DEVIKA
Cigarette ನಾಯಿಗೆ ಒಳ್ಳೇದಲ್ಲ

DHARMA
Cigarette ನಾಯಿ ಅಲ್ಲ.. ನಾನು ಸೇದೋದು..

* ಎಂದು ಹೇಳಿ cigartte ಬಾಯಿಗಿಡುತ್ತಾನೆ. ದೇವಿಕಾ aquarium ಹತ್ತಿರ ನಡೆದುಕೊಂಡು ಹೋಗುತ್ತಾ,

DEVIKA
Smoke is injurious to health.. Anybody's health

DHARMA
(ಅಸಹನೆಯಿಂದ)
ವಿಷ್ಯಕ್ಕೆ ಬನ್ನಿ..

* ದೇವಿಕಾ ಧರ್ಮನನ್ನು ನೋಡಿ,

DEVIKA
chu chu?

* Cigarette ಸೇದುತ್ತಿದ್ದ ಧರ್ಮ ದೇವಿಕಾಳನ್ನು ನೋಡುತ್ತಾನೆ.

DEVIKA
ನೀವಲ್ಲ ನಿಮ್ ನಾಯಿ.. "chu chu" ಎಲ್ಲಿದೆ?

* ದೇವಿಕಾಳ ಮಾತು ಕೇಳಿ ಕೆಂಪರಾಜು ನಗಾಡುತ್ತಾನೆ. ಧರ್ಮ ಅಸಹನೆಯಿಂದ ಕೆಂಪರಾಜುವನ್ನು ನೋಡುತ್ತಾನೆ. ನಂತರ ದೇವಿಕಾಳನ್ನು ನೋಡಿ,

DHARMA
ಏಯ್ ನಾಯಿ..

* Aquarium ನೋಡುತ್ತಿದ್ದ ದೇವಿಕಾ ಧರ್ಮನನ್ನು ತಿರುಗಿ ನೋಡುತ್ತಾಳೆ.

DHARMA
ನೀವಲ್ಲ.. ನನ್ ನಾಯಿ..

* Kemparaju ಮತ್ತೆ ನಗಾಡುತ್ತಾನೆ. ದೇವಿಕಾ ಅವನನ್ನು ದಿಟ್ಟಿಸಿ ನೋಡುತ್ತಾಳೆ. ಪ್ರಗತಿ ಕೆಂಪರಾಜುವನ್ನು ನೋಡಿ ಪಿಸುಗುಟ್ಟುತ್ತಾ,

PRAGATHI
ಸುಮ್ನಿರು..

* ದೇವಿಕಾ ಮುಂದೆ ನಡೆದುಕೊಂಡು ಬರುತ್ತಾ,

DEVIKA
ಹೌದು.. Aquarium ಅಲ್ಲಿ ಯಾಕೆ ಒಂದೇ ಮೀನಿದೆ?

DHARMA
ಬರ್ಬೇಕಾದ್ರೆ ಮೂರಿತ್ತು.. ಇವಾಗ ಒಂದೇ ಇದೆ.

DEVIKA
ನೋಡಿ ಈ ಪ್ರಾಣಿ ಹಿಂಸೆ ಇದಿಯಲ್ಲ, punishable offense. ಮೊನ್ನೆ ತಾನೆ ನಮ್ ಕೈಗೆ ಒಬ್ಬ ಸಿಕ್ಕಾಕ್ಕೊಂಡ. ನಾಲ್ಕು ವರ್ಷ Jail ಶಿಕ್ಷೆ ಆಯ್ತು. 4 years!

* ದೇವಿಕಾ ಬಾಗಿಲ ಹತ್ತಿರ ನಡೆದುಕೊಂಡು ಹೋಗುತ್ತಾ,

DEVIKA (O.S)
ನೀವೇನ್ ಹೆದರ್ಬೇಡಿ. Information ಗೋಸ್ಕರ ಹೇಳ್ದೆ ಅಷ್ಟೇ..

* ಧರ್ಮ ದೇವಿಕಾಳ ಮಾತನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ.

DEVIKA
ಏನ್ ಮಾಡೋದು
(pedigree packetನಿಂದ pedegree ತೆಗೆದು)
ನಮ್ ಕೆಲ್ಸ ಆಲ್ವಾ ಮಾಡ್ಲೇ ಬೇಕು.

* ಎಂದು ಹೇಳಿ ಕೈಯಲ್ಲಿರುವ pedigree ಯನ್ನ food bowlಗೆ ಹಾಕುತ್ತಾಳೆ. Pedigree ಬಿದ್ದ ಶಬ್ದ ಕೇಳಿದ ತಕ್ಷಣ Storeroom ಕಡೆಯಿಂದ ಶಬ್ದ ಕೇಳಿಸುತ್ತದೆ. ಮೂವರೂ ಆ ಕಡೆ ನೋಡುತ್ತಾರೆ. ಧರ್ಮ storeroom ಕಡೆ ನೋಡಿದಾಗ ಚಾರ್ಲಿ ಒಳಗಿನಿಂದ underwear ಕಚ್ಚಿಕೊಂಡು ಧರ್ಮನ ಹತ್ತಿರ ಓಡಿ ಬರುತ್ತಾಳೆ. ಧರ್ಮ ಚಡ್ಡಿಯನ್ನು ಚಾರ್ಲಿಯ ಬಾಯಿಂದ ಎಳೆದು ತೆಗೆದು ಪಕ್ಕಕ್ಕೆ ಎಸೆಯುತ್ತಾನೆ. ದೇವಿಕಾ, ಕೆಂಪರಾಜು ಹಾಗೂ ಪ್ರಗತಿ ಮುಸು ನಗುತ್ತಿದ್ದಾರೆ. ಚಾರ್ಲಿ ಮಂಚದ ಮೇಲೆ ಹತ್ತಿ ಧರ್ಮನ ಮುಖ ನೆಕ್ಕಲು ಪ್ರಯತ್ನಿಸುತ್ತಾಳೆ. ಧರ್ಮ ಕಿರಿಕಿರಿಗೊಂಡು ಚಾರ್ಲಿಯನ್ನು ಪಕ್ಕಕ್ಕೆ ತಳ್ಳುತ್ತಿದ್ದಾನೆ.

DEVIKA (O.S)
ಕೆಂಪರಾಜು ಅವ್ರೆ.

KEMPARAJU (O.S)
Han madam?

DEVIKA
'ಚೂ ಚೂ' ಆರೋಗ್ಯವಾಗಿ ಇದ್ಯಾ ಅಂತ check ಮಾಡಿ..

KEMPARAJU
ಹೂ ಮೇಡಂ..

* ಕೆಂಪರಾಜು ಚಾರ್ಲಿಯ ಹತ್ತಿರ ಬಂದು,

KEMPARAJU
(ನಗು ಮುಖದಿಂದ)
Hello.. ಚೂ ಚೂ

* ಚಾರ್ಲಿ ಕೆಂಪರಾಜುವನ್ನು ನೋಡಿ ಬೊಗಳುತ್ತಾಳೆ. ಆತ ಹೆದರುತ್ತಾನೆ. ಚಾರ್ಲಿ ಬೊಗಳುತ್ತಾ ಮಂಚದಿಂದ ಕೆಳಗಿಳಿದು ಅವನನ್ನು ಓಡಿಸುತ್ತಾಳೆ. ಕೆಂಪರಾಜು ಭಯದಿಂದ ಓಡುತ್ತಾನೆ. ದೇವಿಕಾ ಹಾಗೂ ಪ್ರಗತಿ ಮುಂದೆ ನೋಡುತ್ತಿದ್ದಾರೆ. ಧರ್ಮ cigarette ಸೇದುತ್ತಾ ನೋಡುತ್ತಿದ್ದಾನೆ.

KEMPARAJU
(ಭಯದಿಂದ ಓಡುತ್ತಾ)
ಸಾರ್, ಸಾರ್ ಕಚ್ಚುತ್ತೆ ಸಾರ್.. ಬೇಡ ಬೇಡ. ಅಯ್ಯೋ

KEMPARAJU (CONT'D)
ಇದ್ರು ಅರೋಗ್ಯ ತುಂಬಾ ಚನ್ನಾಗಿದೆ ಮೇಡಂ. ಸಾರ್ ಸಾರ್, ಕರೀರಿ ಸಾರ್ ಕಚ್ಚುತ್ತೆ ಸರ್.

* ದೇವಿಕಾ ಹಾಗೂ ಪ್ರಗತಿ ನಗುತ್ತಿದ್ದಾರೆ. ಧರ್ಮ ಆಸಕ್ತಿಯೇ ಇಲ್ಲದವನಂತೆ ಕುಳಿತಿದ್ದಾನೆ. ಚಾರ್ಲಿ TV ಯ ಮುಂದೆ ಹಿಂದೆ ಕೆಂಪರಾಜುವನ್ನು ಓಡಿಸುತ್ತಿದ್ದಾಳೆ. ಓಡುತ್ತಾ chaplin art work ಹತ್ತಿರ ಬಂದಾಗ cable wireಗೆ ಚಾರ್ಲಿಯ ಮುಖ ತಾಗಿ chaplin stick ಕೆಳಗೆ ಬಿದ್ದು, ಜೊತೆಗೆ ಒಂದೊಂದೇ parts ಕೆಳಗೆ ಬೀಳುತ್ತವೆ. ಧರ್ಮ ಸಿಟ್ಟಿನಿಂದ ಕುಳಿತಲ್ಲಿಂದ ಏಳುತ್ತಾನೆ. ದೇವಿಕಾ ಹಾಗೂ ಪ್ರಗತಿ ಜೋರಾಗಿ ನಗಾಡುತ್ತಾರೆ. ಧರ್ಮ ಅವರಿಬ್ಬರನ್ನು ದಿಟ್ಟಿಸಿ ನೋಡಿ ಮತ್ತೆ ಕುಳಿತುಕೊಳ್ಳುತ್ತಾನೆ. ಕೆಂಪರಾಜು ಚಾರ್ಲಿಯಿಂದ ತಪ್ಪಿಸಿಕೊಂಡು ಬಂದು ಭಯದಿಂದ ದೇವಿಕಾಳ ಹಿಂದೆ ನಿಲ್ಲುತ್ತಾನೆ. ಪ್ರಗತಿ ಕೆಂಪರಾಜುವನ್ನು ನೋಡಿ ನಗಾಡುತ್ತಿದ್ದಾಳೆ. ದೇವಿಕಾ ನಗಾಡುತ್ತಾ ಧರ್ಮನನ್ನು ನೋಡಿ,

DEVIKA
ನಿಮ್ doggie ತುಂಬಾ ಚೂಟಿಯಾಗಿದೆ.

* ಧರ್ಮ ಸಿಟ್ಟಿನಿಂದ cigartte ಸೇದುತ್ತಿದ್ದಾನೆ.

DEVIKA
Anyways.. Pedigree packet ಖಾಲಿಯಾಗಿದೆ. ಅದೊಂದು ತರ್ಸಿತ್ಕೊಳ್ಳಿ. ಇಡ್ಲಿ ನೀವೇ ತಿನ್ನಿ..Cigarette dog ಇಂದ ದೂರ ಇಡಿ.

* ಧರ್ಮ ಸಿಟ್ಟಿನಿಂದ ನೋಡುತ್ತಿದ್ದಾನೆ.

DEVIKA
So ನಾವಿನ್ನು ಬರ್ತೀವಿ.. ಅವಾಗಾವಾಗ..

* ಕೆಂಪರಾಜು ಭಯದಿಂದ ಹೊರಗೆ ಓಡುತ್ತಾನೆ. ದೇವಿಕಾ ಚಾರ್ಲಿಯನ್ನು ನೋಡಿ ಕೈ ಸನ್ನೆ ಮಾಡುತ್ತಾ,

DEVIKA
Bye chu chu..

* ಚಾರ್ಲಿ ಓಡಿ ಬಂದು ದೇವಿಕಾಳ ಹಿಂದೆ ಹೋಗುತ್ತಾಳೆ. ಧರ್ಮ ಮುರಿದಿರುವ chaplin artwork ನೋಡುತ್ತಾನೆ. ಸಿಟ್ಟಿನಿಂದ cigarette ಕೆಳಗೆಸೆದು phone ತೆಗೆದುಕೊಂಡು dial ಮಾಡುತ್ತಾನೆ

CUT TO

INT. DAY. VET CLINIC/DHARMA'S HOUSE

* Doctor Ashwin ತಮ್ಮ cabinನಲ್ಲಿ 'ಬಾಲಮಂಗಳ' ಓದುತ್ತಾ ಕುಳಿತಿದ್ದಾರೆ. Phone ring ಆಗುತ್ತೆ. Doctor ಖುಷಿಯಿಂದ,

DOCTOR ASHWIN
ಧರ್ಮ..

* ಎಂದು ಹೇಳಿ Call answer ಮಾಡುತ್ತಾರೆ.

DOCTOR ASHWIN
ಹಾ ಧರ್ಮ! ಸೌಖ್ಯವಾ?

DHARMA
(ಸಿಟ್ಟಿನಿಂದ)
2 ದಿನ ಟೈಮ್ ನಿಂಗೆ. ಅಷ್ಟ್ರಲ್ಲಿ ಯಾವನ್ನಾದ್ರೂ arrange ಮಾಡು, ಇಲ್ಲಾಂದ್ರೆ ಈ ನಾಯೀನ್ ತಂದು ನಿನ್ table ಮೇಲೆ ಬಿಸಾಕ್ತೀನಿ..

DOCTOR ASHWIN
ನೀ ಎಂತದಾ ಹೀಗೆ ಮಾತಾಡೂದು? ಇದೆಲ್ಲ ನಂಗೊಂದು ದೊಡ್ಡ ವಿಷಯವಾ?

* ಧರ್ಮ ಸಿಟ್ಟಿನಿಂದ call cut ಮಾಡುತ್ತಾನೆ.

DR.ASHWIN
ಇವ cut ಮಾಡಿದ್ದಾ?

BACK TO

EXT. DAY. DHARMA'S HOUSE

* ಚಾರ್ಲಿ compound ಮೇಲೆ ಕಾಲಿಟ್ಟು ಕೃಪಾಕರ್ ಮನೆ ಕಡೆ ನೋಡುತ್ತಾ ಬೊಗಳುತ್ತಿದ್ದಾಳೆ.ಕೃಪಾಕರ್ ಮನೆ ಹೊರಗಡೆ ಮಂಜು ಹಾಗೂ ಕೃಪಾಕರ್ ನಡುವೆ ವಾದ ನಡೆಯುತ್ತಿದೆ. ಜಾನಕಿ ಹಾಗೂಮಗಳು ಬಾಗಿಲ ಹತ್ತಿರ ನಿಂತುಕೊಂಡಿದ್ದಾರೆ.

MANJU
ಏನ್ ಏನ್ ಎಷ್ಟಂತ time ಕೊಡೋದು ನಿಂಗೆ? 20 ಸಲ time ಕೊಡು ಅಂದ್ರೆ ಏನು?

KRIPAKAR
ದಿನಾ ಬಂದು ಗಲಾಟೆ ಮಾಡ್ಬೇಡ
(ಜಾನಕಿಯತ್ತ ತಿರುಗಿ)
ಏಯ್ ನಡಿಯೇ ಒಳ್ಗಡೆ

MANJU
ಏಯ್ ಅವೆಲ್ಲ ಆಗಲ್ಲಯ್ಯ. ನಂಗಿವತ್ತು ನನ್ ದುಡ್ಡು

ಬೇಕಷ್ಟೇ.

KRIPAKAR
ದುಡ್ಡಿಲ್ಲ ಈಗ.

MANJU
ಏನಯ್ಯ ಹಿಂಗ್ ಹೇಳ್ತೀಯಾ?

KRIPAKAR
ಇನ್ನೆಂಗ್ ಹೇಳ್ಲಿ? ನಾನೇನು ಜೂಜಾಡ್ತಿದ್ನೆ? ಪ್ರಮೋಶನ್ ಸಿಗ್ಬೋದು ಆಮೇಲ್ ಕೊಡ್ತೀನ್ ಬಿಡು..

* ಧರ್ಮ ಮನೆ ಹೊರಗಡೆ ಬರುತ್ತಾನೆ. ಮನೆ ಹೊರಗಡೆ ಕಾರ್ ತೊಳೆಯುತ್ತಿದ್ದ ಮುರಳಿ ಸರ್ ಧರ್ಮನನ್ನು ನೋಡಿ ಕೈ ಬೀಸುತ್ತಾರೆ.

MANJU (O.S)
ಅಷ್ಟೆಲ್ಲ ಕಾಯಾಕಾಗಲ್ಲ.

KRIPAKAR (O.S)
ಕಾಯಕಾಗಲ್ಲ ಅಂದ್ರೆ ಕೊಡೋಕಾಗಲ್ಲ.

* ಧರ್ಮ ಚಾರ್ಲಿ ಬೊಗಳುತ್ತಿರುವುದನ್ನು ನೋಡುತ್ತಾನೆ.

MANJU
ನೀನಿವತ್ತು ಕೊಡ್ಲಿಲ್ಲ ಅಂದ್ರೆ ನಾನಿವತ್ತು ಇಲ್ಲಿಂದ ಹೋಗೋದೇ ಇಲ್ಲ

* ಎಂದು ಹೇಳಿ ಕೆಳಗೆ ಕುಳಿತುಕೊಳ್ಳುತ್ತಾನೆ.

KRIPAKAR
ಹೋಗ್ಬೇಡ ಇಲ್ಲೇ ಕೂತ್ಕೋ.

DHARMA
(ಸಿಟ್ಟಿನಿಂದ)
ಏಯ್ ನಾಯಿ?

* ಮಂಜು ಗಾಬರಿಯಿಂದ ಮೇಲೆದ್ದು ಧರ್ಮನ್ನು ನೋಡುತ್ತಾನೆ. ಚಾರ್ಲಿ ತಿರುಗಿ ಧರ್ಮನನ್ನು ತಿರುಗಿ ನೋಡುತ್ತಾಳೆ.

DHARMA
ಬಾ ಇಲ್ಲಿ..

* ಧರ್ಮ ತನಗೆ ಬೈಯುತ್ತಿರುವುದು ಎಂದು ಭಾವಿಸಿದ ಮಂಜು ಗಾಬರಿಯಿಂದ ನೋಡುತ್ತಿದ್ದಾನೆ.

DHARMA
(ಚಾರ್ಲಿಯನ್ನು ನೋಡಿ)
ಏನ್ ನೋಡ್ತಿದ್ದೀಯ?

* ಮಂಜು ಗಾಬರಿಯಿಂದ ಏನಿಲ್ಲ ಎಂಬಂತೆ ತಲೆಯಾಡಿಸುತ್ತಾನೆ. ಕೃಪಾಕರ್ ಆಶ್ಚರ್ಯದಿಂದ ಮಂಜುವನ್ನು ನೋಡುತ್ತಿದ್ದಾನೆ.

DHARMA
(ಚಾರ್ಲಿಯನ್ನು ನೋಡಿ)
ಬರ್ತೀಯಾ ಅಥವಾ ಎರಡು ಬಾರಿಸ್ಲಾ?

MANJU
ಬೇಡ ನಾನೇ ಹೋಗ್ತೀನಿ.
(ಕೃಪಾಕರ್ ನ ನೋಡಿ ಹಿಂದೆ ಸರೆಯುತ್ತಾ)
ಜನ್ರು ಕರ್ಸಿ ಹೊಡೆಸ್ತೀಯಾ ಅಲ್ಲ? Police ಕರ್ಕೊಂಡ್ ಬರ್ತೀನಿ ಇರು. ನಾನೇನ್ ಪುಕ್ಲ ಅಲ್ಲ.

* ಚಾರ್ಲಿ ಧರ್ಮನನ್ನು ನೋಡುತ್ತಿದ್ದಾಳೆ. ಧರ್ಮ ಸಿಟ್ಟಿನಿಂದ cigerette ಕೆಳಗೆಸೆದು ಚಾರ್ಲಿಗೆ ಹೊಡೆಯಲು ಮುಂದೆ ಬರುತ್ತಾನೆ. ತಕ್ಷಣ ಧರ್ಮನಿಗೆ ತಲೆ ಸುತ್ತು ಬರುತ್ತದೆ. ಚಾರ್ಲಿ ಧರ್ಮನನ್ನು ನೋಡುತ್ತಿದ್ದಾಳೆ. ಧರ್ಮ ನೆಲಕ್ಕೆ ಕುಸಿದು ಬೀಳುತ್ತಾನೆ. ಚಾರ್ಲಿ ಗಾಬರಿಯಿಂದ ಧರ್ಮನ ಹತ್ತಿರ ಬಂದು ಆತನ ಎದೆಗೆ paw ಮಾಡುತ್ತಾ ಬೊಗಳುತ್ತಾಳೆ. ಧರ್ಮನಿಗೆ ಸುತ್ತಲೂ ಮಂಜು ಮಂಜಾಗಿ ಕಾಣಿಸುತ್ತದೆ. ಚಾರ್ಲಿ ಒಂದೇ ಸಮನೆ paw ಮಾಡುತ್ತಾ ಬೊಗಳುತ್ತಿದ್ದಾಳೆ.

FADE OUT

EXT/INT. DAY. AMBULANCE/ROAD.

* Ambulance ಚಾಲಕ ಗಾಡಿ ಓಡಿಸುತ್ತಿದ್ದಾನೆ. ಪಕ್ಕದಲ್ಲಿ Navigator ಕುಳಿತಿದ್ದಾನೆ. Driver ಹಿಂದೆ ತಿರುಗಿ ನೋಡಿದಾಗ ಧರ್ಮ oxygen mask ಹಾಕಿಕೊಂಡು ಮಲಗಿದ್ದಾನೆ.

AMBULANCE DRIVER
Patient ಕಡೆಯವರು ಯಾರೂ ಇಲ್ವಾ?

NAVIGATOR
(Mirror ನೋಡಿ)
ಹಿಂದೆ ಬರ್ತಾ ಇದ್ದಾರಲ್ಲಾ.

* Driver side Mirror ನೋಡಿದಾಗ Murali Sir ಕಾರ್ ನಲ್ಲಿ Ambulance ನನ್ನು ಹಿಂಬಾಲಿಸುತ್ತಿದ್ದಾರೆ. ಚಾರ್ಲಿ Footpath ನಲ್ಲಿ ಮುರಳಿ ಸರ್ ಕಾರ್ ದಾಟಿ ಮುಂದೆ ಹೋಗುತ್ತಾಳೆ. ಮುರಳಿ ಸರ್ ಚಾರ್ಲಿಯನ್ನು ನೋಡುತ್ತಾರೆ.

* Ambulance ವೇಗವಾಗಿ ಚಲಿಸುತ್ತಿದೆ. ಚಾರ್ಲಿ ಹಿಂದಿನಿಂದ ಓಡಿ ಬರುತ್ತಿದ್ದಾಳೆ.

* ಚಾರ್ಲಿ Ambulance ಹಿಂಬಾಲಿಸಿ ಓಡುತ್ತಿದ್ದಾಳೆ.

* Ambulance ಮುಂದೆ ಹೋಗುತ್ತಿದೆ. Divider ನಲ್ಲಿ ಒಂದು Tempo ಮುಖ್ಯರಸ್ತೆ ಪ್ರವೇಶಿಸುತ್ತದೆ. ಹಿಂದಿನಿಂದ ಓಡಿ ಬರುತ್ತಿದ್ದ ಚಾರ್ಲಿ tempoನ ತಪ್ಪಿಸಿ ಓಡಿ ಹೋಗುತ್ತಾಳೆ.

* Ambulance ಮುಂದೆ ಹೋಗುತ್ತಿದೆ. ಚಾರ್ಲಿ  ಹಿಂದಿನಿಂದ ಓಡುತ್ತಿದ್ದಾಳೆ.

* Ambulance siran ಕೇಳಿ ಜನರು Ambulanceಗೆ ದಾರಿ ಮಾಡಿ ಕೊಡುತ್ತಿದ್ದಾರೆ. ಚಾರ್ಲಿ ಹಲವಾರು ವಾಹನಗಳ ಮಧ್ಯೆ ಓಡಿ ಬರುತ್ತಿದ್ದಾಳೆ. Ambulance signal ಹತ್ತಿರ ಬಂದು ನಿಲ್ಲುತ್ತದೆ. ಚಾರ್ಲಿ ಓಡಿ ಬಂದು Ambulance ಹಿಂದೆ ಕಾಲಿಟ್ಟು ಒಳಗೆ ನೋಡುತ್ತಾ ಬೊಗಳುತ್ತಾಳೆ. Ambulance ಮುಂದೆ ಹೋಗುತ್ತದೆ.

CUT TO

EXT. DAY. HOSPITAL

* Hospital Security gate ತೆರೆಯುತ್ತಾನೆ. Ambulance ಆಸ್ಪತ್ರೆಯ ಒಳಗೆ ಪ್ರವೇಶಿಸುತ್ತದೆ. ಚಾರ್ಲಿ Ambulance ಹಿಂದೆಯೇ ಓಡಿ ಹೋಗುತ್ತಾಳೆ. Security ಚಾರ್ಲಿಯ ಹಿಂದೆ ಓಡುತ್ತಾನೆ.

* ಚಾರ್ಲಿ ಬಾಗಿಲ ಹೊರಗೆ ನಿಂತು ಅತ್ತಿತ್ತ ನೋಡುತ್ತಿದ್ದಾಳೆ. ಒಳಗಿನಿಂದ ಒಬ್ಬ ವ್ಯಕ್ತಿ ಬಂದು ಬಾಗಿಲು ತೆರೆದ ತಕ್ಷಣ ಚಾರ್ಲಿ ಆಸ್ಪತ್ರೆಯ ಒಳಗೆ ಓಡುತ್ತಾಳೆ. ಇದನ್ನು ನೋಡಿದ Security ಹಿಂದಿನಿಂದ ಓಡಿ ಬರುತ್ತಾನೆ. ಚಾರ್ಲಿ ಆಸ್ಪತ್ರೆಯ ಆವರಣದಲ್ಲಿ ಓಡುತ್ತಿದ್ದಾಳೆ. Security ಚಾರ್ಲಿಯನ್ನು ಓಡಿಸುತ್ತಾ,

SECURITY
ಏಯ್ ಏಯ್.. ಹಿಡ್ಕೊಳ್ಳಿ..

CUT TO

* ಧರ್ಮ Bed ಮೇಲೆ ಕೈಗೆ plaster ಹಾಕಿಕೊಂಡು ಕುಳಿತಿದ್ದಾನೆ. ಮುರಳಿ ಸರ್ ಧರ್ಮನ ಹತ್ತಿರ ನಿಂತಿದ್ದಾರೆ. Doctor reports ಪರೀಕ್ಷಿಸುತ್ತಾ,

DOCTOR
ECG ಎಲ್ಲ normal ಇದೆ. It's just a panic attack which you had. Anxiety Issues ಏನಾದ್ರೂ ಇತ್ತಾ ನಿಮ್ಗೆ?

* ಧರ್ಮ 'ಇಲ್ಲ' ಅನ್ನೋ ಥರ ತಲೆಯಾಡಿಸುತ್ತಾನೆ.

DOCTOR
Ok.. Smoke ಮಾಡ್ತೀರ ನೀವು?

* ತಕ್ಷಣ ಹಿನ್ನಲೆಯಿಂದ ಚಾರ್ಲಿ ಬೊಗಳುವ ಶಬ್ದ ಕೇಳಿಸುತ್ತದೆ. ಎಲ್ಲರೂ ಹಿಂದೆ ತಿರುಗಿ ನೋಡುತ್ತಾರೆ. ಚಾರ್ಲಿ ಹೊರಗಿರುವ Glass chamber ಮೇಲೆ ಕೈಯಿಟ್ಟು ಒಳಗಡೆ ನೋಡಿ ಬೊಗಳುತ್ತಿದ್ದಾಳೆ.

DOCTOR (O.S)
ಏಯ್ ಯಾರ್ ರೀ ಅದು ನಾಯೀನ ಒಳಗಡೆ ಬಿಟ್ಟಿದ್ದು?

* ಹಿಂದಿನಿಂದ ಓಡಿ ಬಂದ Security,

SECURITY (O.S)
ಸರ್ ಅದೂ ambulance ಹಿಂದೆನೇ ಓಡ್ಕೊಂಡು ಬಂತು..

* ಧರ್ಮ ಆಶ್ಚರ್ಯದಿಂದ ಚಾರ್ಲಿಯನ್ನು ನೋಡುತ್ತಿದ್ದಾನೆ. ಚಾರ್ಲಿ ಬೊಗಳುತ್ತಾ door scratch ಮಾಡುತ್ತಿದ್ದಾಳೆ. ಧರ್ಮ ಸ್ತಬ್ದನಾಗಿ ನೋಡುತ್ತಿದ್ದಾನೆ.

CUT TO

INT. NIGHT. DHARMA'S HOUSE

* TV Screenನಲ್ಲಿ Charlie Chaplinನ "The Great Dictator's speech" ಚಿತ್ರದ ದೃಶ್ಯ ಪ್ರಸಾರವಾಗುತ್ತಿದೆ.

CHAPLIN SPEECH ON TV SCREEN
I'm sorry, I don't want to be an emperior. That's not my buisiness. I don't want to rule or conquer anyone.

* ಚಾರ್ಲಿ cigarette packets ಕಚ್ಚಿ ಹರಿಯುತ್ತಿದ್ದಾಳೆ. ಮಂಚದಲ್ಲಿ ಮಲಗಿರುವ ಧರ್ಮ ಚಾರ್ಲಿಯನ್ನು ನೋಡುತ್ತಿದ್ದಾನೆ.

CHAPLIN SPEECH ON TV SCREEN
I should like to help everyone if possible. We think too much and feel too little. More than machinery we need humanity. More than cleverness we need kindness and gentleness. Without these qualities, life will be violent and all will be lost..

* ಧರ್ಮ speech ಕೇಳುತ್ತಾ ಶಾಂತನಾಗಿ ಮಲಗಿದ್ದಾನೆ.

FADE OUT

INT. DAY. DHARMA'S HOUSE

* ಧರ್ಮ ನಿದ್ರಿಸುತ್ತಿದ್ದಾನೆ. ಚಾರ್ಲಿ bedsheet ಒಳಗಿನಿಂದ ಬಂದು ಧರ್ಮನ ಮುಖ ನೆಕ್ಕುತ್ತಾಳೆ. ಧರ್ಮ ಎಚ್ಚರಗೊಳ್ಳುತ್ತಾನೆ. ಚಾರ್ಲಿಯನ್ನು ನಿಧಾನಕ್ಕೆ ತಳ್ಳಿ ಮೇಲೇಳುತ್ತಾನೆ. ಚಾರ್ಲಿ ಮಂಚದಿಂದ ಕೆಳಗಿಳಿದು ಹೋಗುತ್ತಾಳೆ. ಧರ್ಮ ಚಾರ್ಲಿಯನ್ನು ನೋಡುತ್ತಿದ್ದಾನೆ.

CUT TO

INT. DAY. DHARMA'S HOUSE

* ಧರ್ಮ shower ಕೆಳಗಡೆ ನಿಂತು ಸ್ನಾನ ಮಾಡುತ್ತಿದ್ದಾನೆ.

CUT TO

* ಧರ್ಮ shirt ಧರಿಸುತ್ತಾ TV ಕಡೆ ನೋಡುತ್ತಾನೆ. TV ಯಲ್ಲಿ snow Ad ಪ್ರಸಾರವಾಗುತ್ತಿದೆ. ಜಾಹೀರಾತಿನಲ್ಲಿ Ice Cream ಗಾಡಿ ಕಾಣಿಸುತ್ತಿದೆ. ಚಾರ್ಲಿ ಬೊಗಳುತ್ತಾ Tv screen ಮೇಲೆ paw ಮಾಡುತ್ತಿದ್ದಾಳೆ. ಧರ್ಮ ಆಶ್ಚರ್ಯದಿಂದ ನೋಡುತ್ತಾನೆ. ಚಾರ್ಲಿ Ice cream ನೋಡಿ ಬೊಗಳುತ್ತಾ ಜಿಗಿಯುತ್ತಿದ್ದಾಳೆ.

CUT TO

EXT. DAY. SIGNAL

* ಧರ್ಮ ಗಾಡಿ ಓಡಿಸುತ್ತಿದ್ದಾನೆ. Signal ನಲ್ಲಿ ನಿಲ್ಲಿಸಿ ರಸ್ತೆ ಬದಿ ನೋಡಿದಾಗ bakery ಕಾಣಿಸುತ್ತದೆ. 'Enjoy' Ice cream banner ಕಾಣಿಸುತ್ತಿದೆ. ಧರ್ಮ ಅದನ್ನು ನೋಡುತ್ತಿದ್ದಾನೆ

CUT TO

INT. DAY. DHARMA'S HOUSE

* ಚಾರ್ಲಿ ಮಂಚದಲ್ಲಿ ಮಲಗಿದ್ದಾಳೆ. ಹಿನ್ನಲೆಯಲ್ಲಿ Bullet ಶಬ್ದ ಕೇಳಿದ ತಕ್ಷಣ ಚಾರ್ಲಿ ತಲೆಯೆತ್ತಿ ನೋಡುತ್ತಾಳೆ. ಮಂಚದಿಂದ ಕೆಳಗಿಳಿದು ಬಾಗಿಲ ಹತ್ತಿರ ಬೊಗಳುತ್ತಾಳೆ.

CUT TO

EXT. DAY. DHARMA'S HOUSE

* ಧರ್ಮ bulletನಲ್ಲಿ ಬಂದು gate ತೆರೆದು ಒಳಗಡೆ ಬರುತ್ತಾನೆ.

* ಧರ್ಮ ಖುಷಿಯಿಂದ Enjoy ice cream cover ತೆಗೆದುಕೊಂಡು ಬರುತ್ತಾನೆ.

CUT TO

INT.DAY. DHARMA'S HOUSE

* ಧರ್ಮ ಬಾಗಿಲು ತೆರೆದು ಒಳಗೆ ಪ್ರವೇಶಿಸಿದ ಕೂಡಲೇ ಚಾರ್ಲಿ excite ಆಗಿ ಧರ್ಮನ ಮೈ ಮೇಲೆ ಹಾರುತ್ತಾಳೆ. ಧರ್ಮice cream coverನ toolkit boardಗೆ ನೇತು ಹಾಕಿ ಅಲ್ಲೇ ಕುಳಿತು ಚಾರ್ಲಿಯನ್ನು ಸಮಾಧಾನ ಮಾಡುತ್ತಾನೆ. ಧರ್ಮ ಹಿಂದೆ ತಿರುಗಿ ನೋಡುತ್ತಾನೆ.

DOCTOR ASHWIN (O.S)

ಪುಣ್ಯಕ್ಕೆ ನೀ ಮನೇಲಿದ್ದಿ..

* ಧರ್ಮ ಹಿಂದೆ ತಿರುಗಿ ನೋಡುತ್ತಾನೆ. Doctor Ashwin ನಡೆದುಕೊಂಡು ಬರುತ್ತಾ,

DOCTOR ASHWIN
ನಿಂಗೊಂದು phone receive ಮಾಡ್ಲಿಕಾಗುದಿಲ್ವಾ ಮಾರ್ರೆ?
ಎಷ್ಟು ಸಲ phone ಮಾಡೂದು ನಿಂಗೆ?

* ಧರ್ಮ ಮೆಲ್ಲನೆ ಎದ್ದು ನಿಲ್ಲುತ್ತಾನೆ. Doctor ಮನೆಯೊಳಗೆ ಬಂದು ಸುತ್ತಲೂ ನೋಡಿ,

DOCTOR ASHWIN
ಇದೆಂತ ಮಾರ್ರೆ ಇದು?

* ನೆಲದಲ್ಲಿ ಸುಮಾರು beer bottles ಗಳು ಬಿದ್ದಿವೆ.

DOCTOR ASHWIN (CONT'D)
ಯಾವುದೋ ಬಾರಿಗೆ ಬಂದಾಗುಂಟು?

DHARMA
ನೀವೇನ್ ಸರ್ ಇಲ್ಲಿ?

* Doctor ಧರ್ಮನನ್ನು ನೋಡಿ,

DOCTOR ASHWIN
ಏನಿಲ್ಲ ಅಂದ್ರೆ, ಮೊನ್ನೆ phone ಮಾಡಿ ಬಾಯಿಗೆ ಬಂದಾಗೆ
ಬೈದೆ ಮಾರ್ರೆ? ಅದಕ್ಕೆ ಇವತ್ತು ನಿನ್ನ tension ಕಮ್ಮಿ
ಮಾಡಿಯೇ ಹೋಗುವ ಅಂತ decide ಮಾಡಿ ಬಂದದ್ದು..

* Doctor Ashwin ಹೊರಗಡೆ ನೋಡಿ ಶಿಳ್ಳೆ ಹೊಡೆಯುತ್ತಾರೆ.

COMPOUNDER
ಹಾನ್..

* Compounder ಕಾರಿನಲ್ಲಿರುವ ಕುಟುಂಬದ ಸದಸ್ಯರನ್ನು ಕೆಳಗಡೆ ಇಳಿಯಲು ಹೇಳುತ್ತಾ,

COMPOUNDER
ಬನ್ನಿ ಬನ್ನಿ ಬನ್ನಿ.. ಮಕ್ಳೇ ಬನ್ನಿ. ಬನ್ನಿ

* ಧರ್ಮ ಹೊರಗಡೆ ನೋಡುತ್ತಾನೆ. ಕಾರಿನಲ್ಲಿದ್ದವರು ಕೆಳಗಿಳಿಯುತ್ತಿದ್ದಾರೆ. ಧರ್ಮ ಡಾಕ್ಟರ್ ಬಳಿ,

DHARMA
ಯಾರ್ ಸರ್ ಇವ್ರೆಲ್ಲ?

DOCTOR ASHWIN
Adoptionಗಾ ಮತ್ತೆಂತಕೆ ಮಾರೆ?

* ಹಿಂದಿದಿಂದ ಮಕ್ಕಳು ಓಡಿ ಬರುತ್ತಿದ್ದಾರೆ.

DOCTOR ASHWIN
(ಹಿಂದೆ ನೋಡುತ್ತಾ)
Madam ಬನ್ನಿ madam, Sir ಬನ್ನಿ.. ಬನ್ನಿ ಒಳಗೆ ಬನ್ನಿ..

* ಹೆಂಗಸು, ಮೂವರು ಮಕ್ಕಳು ಹಾಗೂ ತಾತ Compounder ಜೊತೆಗೆ ಒಳಗಡೆ ಬರುತ್ತಾರೆ.

DOCTOR ASHWIN
ಬನ್ನಿ ಬನ್ನಿ..

* Compounder ಒಳಗಡೆ ಬಂದು ಡಾಕ್ಟರ್ ನತ್ತ ಕೈ ತೋರಿಸಿ,

COMPOUNDER
ಆನ್, ಇದು ನಾಯಿ..

* ಡಾಕ್ಟರ್ compounder ಅನ್ನು ಗುರಾಯಿಸಿ ಪಕ್ಕಕ್ಕೆ ಸರಿಯುತ್ತಾರೆ. ಚಾರ್ಲಿ ಧರ್ಮನ ಪಕ್ಕದಲ್ಲಿ ಕುಳಿತಿದ್ದಾಳೆ. Doctor ಎದುರುಗಡೆ trunk ಮೇಲಿರುವ leash ತೆಗೆದುಕೊಂಡು,

DOCTOR ASHWIN
Madam, ಒಂದು.. ಇದು ತಗೊಳ್ಳಿ ಮೇಡಂ.. Trial ಹೋಗಿ ಬನ್ನಿ.

* Foster Kid 1 Doctor ಕೈಯಿಂದ leash ತೆಗೆದುಕೊಂಡು ಮುಂದೆ ಬರುತ್ತಾ,

FOSTER KID 1 (O.S)
ಇಲ್ಕೊಡಿ.

* ಚಾರ್ಲಿ ಕುಳಿತಲ್ಲಿಂದ ಎದ್ದು ಹೋಗುತ್ತಾಳೆ.

FOSTER KID 1(O.S)
ಏಯ್ ನಾನ್ ಫಸ್ಟು ನಾನ್ ಫಸ್ಟು

* ಚಾರ್ಲಿ ಮಂಚದ ಕೆಳಗೆ ಹೋಗಿ ಮಲಗುತ್ತಾಳೆ.

FOSTER KID 2(O.S)
ಇಲ್ಲ ನಾನ್ ಫಸ್ಟು.

COMPOUNDER (O.S)
ಜಾಗ್ರತೆ ಮಕ್ಳೇ.. ನಾಯಿಗೆಂತ ಮಾಡ್ಬೇಡಿ..

* Foster Lady ಚಾರ್ಲಿಯ ಹತ್ತಿರ ಬರುತ್ತಾರೆ.

FOSTER KID 1(O.S)
ಏಯ್ ಇಲ್ ಬಾ..

FOSTER KID 2 (O.S)
ಏಯ್ cutie, come, come come..ಹೆದರ್ಬೇಡ ಬಾ.

* ಮಕ್ಕಳಿಬ್ಬರೂ ಚಾರ್ಲಿಯನ್ನು ಮುದ್ದು ಮಾಡುತ್ತಿದ್ದಾರೆ. Foster Lady ಹಾಗೂ Foster Kid 3 ಮಂಚದ ಮೇಲೆ ಕುಳಿತುಕೊಳ್ಳುತ್ತಾರೆ. Doctor ಖುಷಿಯಿಂದ ನೋಡುತ್ತಿದ್ದಾರೆ.

FOSTER KID 2
ಹೆದರ್ಬೇಡ ಬಾ..

FOSTER KID 1 (O.S)
ಬಾ ಬಾ ಬಾ..

* ಎಂದು ಹೇಳಿ ಚಾರ್ಲಿಯನ್ನು ಹೊರಗಡೆ ಎಳೆದು ಕೂರಿಸುತ್ತಾನೆ.

FOSTER KID 2
(ಚಾರ್ಲಿಯನ್ನು pet ಮಾಡುತ್ತಾ)
It looks so cute..

FOSTER KID 1
ಹೌದಲ್ಲಾ.. Uncle, ಇದ್ಕೆ ಹೆಸ್ರಿಟ್ಟಿದ್ದೀರಾ?

DOCTOR ASHWIN
(ಗಲಿಬಿಲಿಯಿಂದ ಧರ್ಮನನ್ನು ನೋಡಿ)
ಇಲ್ಲವಾ ಹೊಸ ನಾಯಿಯಾ, ಮನೆಗ್ ಹೋದ್ಮೇಲೆ ನೀನೇ ಹೆಸ್ರಿಡಾಯ್ತಾ?

FOSTER KID 1
ಹೂ..

FOSTER KID 3
(ಹಠ ಮಾಡುತ್ತಾ)
ಮಮ್ಮಿ ನಂಗ್ black doggy ಬೇಕು..

COMPOUNDER
ಏಯ್ Blackದು ಬೇಡ್ವಾ.. ಕೊಳೆಯಾದ್ರೆ ಎದ್ದು ಕಾಣ್ತದೆ..

FOSTER KID 3 (O.S)
ಬೇಕು..

DOCTOR ASHWIN
ಅದೌದು ಮೇಡಂ.

FOSTER LADY 2
(ಡಾಕ್ಟರ್ ನ ನೋಡಿ)
ಅಂದ ಹಾಗೆ ಇದ್ಕೆ toilet training ಆಗಿದ್ಯಾ?

DOCTOR ASHWIN
ಮತ್ತೆ? TOILETಗೆ ಹೋಗಿ POTTY ಮಾಡುದಷ್ಟೇ ಅಲ್ಲ..FLUSHಸ ಮಾಡ್ತದೆ

* Compounder ಕಿಸಿಯುತ್ತಾನೆ. Docotor ಸಿಟ್ಟಿನಿಂದ ತಿರುಗಿ ನೋಡುತ್ತಾನೆ. ಧರ್ಮ ಬೇಸರದಿಂದ ಚಾರ್ಲಿಯನ್ನು ನೋಡುತ್ತಿದ್ದಾನೆ. ಚಾರ್ಲಿ ಕೂಡಾ ಧರ್ಮನನ್ನು ನೋಡುತ್ತಿದ್ದಾಳೆ. ಮಕ್ಕಳು ಚಾರ್ಲಿಯನ್ನು pet ಮಾಡುತ್ತಿದ್ದಾರೆ. Foster Lady 2 ಚಾರ್ಲಿಯನ್ನ ಮುದ್ದು ಮಾಡುತ್ತಾ,

FOSTER LADY 2 (O.S)
Hello..Hii.

* ಡಾಕ್ಟರ್ ಖುಷಿಯಿಂದ ನೋಡುತ್ತಿದ್ದಾರೆ. ಚಾರ್ಲಿಯನ್ನು ನೋಡುತ್ತಿದ್ದ ಧರ್ಮ ಡಾಕ್ಕರ್ ಕಡೆ ತಿರುಗಿ,

DHARMA
Sir ನಿಮ್ಮತ್ರ ಸ್ವಲ್ಪ ಮಾತಾಡ್ಬೇಕು.

* ಇದನ್ನು ಗಮನಿಸಿದ Foster Lady 2,

FOSTER LADY 2
ಏನಂತೆ?

DOCTOR ASHWIN
ಅದು... ನಾಯಿಯನ್ನ ಇಷ್ಟು ದಿವಸ ಪ್ರೀತಿಯಿಂದ ಚಂದ ಮಾಡಿ ಸಾಕಿದ್ದಾರಲ್ಲಾ. ಅದೊಂದು ಬೇಜಾರು ಇದ್ವೇ ಇರ್ತದಲ್ಲ ಅಷ್ಟೇ..

FOSTER LADY 2
ಅದ್ರು ಬಗ್ಗೆ ಯೋಚ್ನೆ ಮಾಡ್ಬೇಡಿ. I think kids are already in love with the dog.

* ಡಾಕ್ಟರ್ ಧರ್ಮನನ್ನು ನೋಡಿ,

DOCTOR ASHWIN
ಆನ್.. ಸಮಾಧಾನ ಆಯ್ತಲ್ಲ?

* ಚಾರ್ಲಿ ಬೇಸರದಿಂದ ಧರ್ಮನನ್ನು ನೋಡುತ್ತಿದ್ದಾಳೆ.

DOCTOR ASHWIN CONT'D (O.S)
ನಾ ಬರ್ತೇನೆ..
(Foster Lady 2 ನೋಡಿ)
ಆನ್.. ಮತ್ತೆ license Documents ಇವು ನಿಮ್ಗೆ transfer ಮಾಡಿ ಕೊಡ್ತಾರೆ.

* ಎಂದು ಹೇಳಿ ಧರ್ಮನತ್ತ call ಮಾಡುತ್ತೇನೆ ಎಂಬಂತೆ ಸನ್ನೆ ಮಾಡುತ್ತಾರೆ.

DOCTOR ASHWIN
ಬನ್ನಿ ಮೇಡಂ..

* ಧರ್ಮ ಅಸಹಾಯಕನಾಗಿ ನೋಡುತ್ತಿದ್ದಾನೆ. Foster Kid 2 leash ಹಾಕಿ ಚಾರ್ಲಿಯನ್ನು ಕರೆದುಕೊಂಡು ಹೊರಡುತ್ತಾನೆ. ಚಾರ್ಲಿ ಧರ್ಮನನ್ನು ನೋಡುತ್ತಿದ್ದಾಳೆ. ಧರ್ಮ ಬೇಸರದಿಂದ ಚಾರ್ಲಿಯನ್ನು ನೋಡುತ್ತಾನೆ. ಎಲ್ಲರೂ ಮನೆಯಿಂದ ಹೊರ ಹೋಗುತ್ತಾರೆ. Compounder leash ಎಳೆಯುತ್ತಾ ಚಾರ್ಲಿಯನ್ನು ಕರೆದುಕೊಂಡು ಹೋಗುತ್ತಿದ್ದಾನೆ. ಚಾರ್ಲಿ ಹಿಂದೆ ತಿರುಗಿ ಧರ್ಮನನ್ನು ನೋಡುತ್ತಾ ಬೊಗಳುತ್ತಿದ್ದಾಳೆ. ಧರ್ಮ ಅಸಹಾಯಕನಾಗಿ ನೋಡುತ್ತಿದ್ದಾನೆ. Compounder ಚಾರ್ಲಿಯನ್ನು ಎತ್ತಿಕೊಂಡು ಬಂದು Car ಒಳಗೆ ಕೂರಿಸುತ್ತಾನೆ. ಕಾರು ಚಲಿಸುತ್ತದೆ. ಚಾರ್ಲಿ ಕಾರಿನ ಒಳಗಿನಿಂದ ಧರ್ಮನನ್ನೇ ನೋಡುತ್ತಿದ್ದಾಳೆ. ಧರ್ಮ ಬೇಸರದಿಂದ ಚಾರ್ಲಿಯನ್ನು ನೋಡುತ್ತಾ ನಿಂತಿದ್ದಾನೆ.

CUT TO

INT. DAY. DHARMA'S HOUSE

* Toolkit ಮೇಲೆ ನೇತು ಹಾಕಿರುವ ice cream packetನಲ್ಲಿದ್ದ ice cream ಕರಗಿ ಒಂದೊಂದೇ ಹನಿ ನೆಲಕ್ಕೆ ಬೀಳುತ್ತಿದೆ. ಧರ್ಮ 3 seater sofaದಲ್ಲಿ ಕುಳಿತು ನೋಡುತ್ತಿದ್ದಾನೆ.

CUT TO

INT. DAY. DHARMA'S HOUSE

* ಅಜ್ಜಿ ಅಂಗಡಿಯಲ್ಲಿ ತಾತ ಪುಟ್ಟ ಬೆಕ್ಕೊಂದಕ್ಕೆ ಹಾಲು ಕುಡಿಸುತ್ತಿದ್ದಾರೆ. ಧರ್ಮ ಆ ದೃಶ್ಯವನ್ನು ನೋಡುತ್ತಿದ್ದಾನೆ. ಅಜ್ಜಿ ಇಡ್ಲಿ packet ಧರ್ಮನಿಗೆ ಕೊಡುತ್ತಾ,

AJJI
ತಗೋಪ್ಪಾ.. ಯಾಕ್ ಮಗಾ ಬೇಜಾರಾಗಿದ್ದೀಯಾ?

* ಧರ್ಮ ಅಜ್ಜಿಯ ಮಾತಿಗೆ ಉತ್ತರಿಸದೆ ಇಡ್ಲಿ packet ತೆಗದುಕೊಂಡು ಹೋಗುತ್ತಾನೆ. ಅಜ್ಜಿ ಆಶ್ಚರ್ಯದಿಂದ ನೋಡುತ್ತಿದ್ದಾರೆ.

CUT TO

INT. DAY. DHARMA'S HOUSE

* ಧರ್ಮ ಸಿಟ್ಟಿನಿಂದ l joint ಕೆಳಗೆ ಬಿಸಾಕುತ್ತಾನೆ. L joint ತುಂಡಾಗುತ್ತದೆ. ಎದುರುಗಡೆ ನಿಂತಿದ್ದ ಉತ್ತಮ್ ಗಾಬರಿಗೊಂಡಿದ್ದಾನೆ.

DHARMA
ಏನ್ ಕಾಟಾಚಾರಕ್ಕೆ ಕೆಲ್ಸ ಮಾಡ್ತೀರಾ ಇಲ್ಲಿ? ಒಂದ್

ಸ್ವಲ್ಪಾನೂ ಬುದ್ಧಿ..

* Factory workers ಎಲ್ಲಾ ಅವರಿಬ್ಬರನ್ನ ನೋಡುತ್ತಿರುವುದನ್ನು ಗಮನಿಸದ ಧರ್ಮ ಸುಮ್ಮನಾಗುತ್ತಾನೆ.

CUT TO

INT. NIGHT. DHARMA'S HOUSE

* ಧರ್ಮನ ಮನೆಯ TV ಯಲ್ಲಿ ನಾಯಿ ಬೊಗಳುವ ದೃಶ್ಯ ಪ್ರಸಾರವಾಗುತ್ತಿದೆ. ಧರ್ಮ ಕುಡಿದ ಅಮಲಿನಲ್ಲಿ sofa ಮೇಲೆ ಬಿದ್ದುಕೊಂಡಿದ್ದಾನೆ.

DHARMA
ಏಯ್ ಸುಮ್ನೆ ಬೊಗಳ್ಬೇಡ, ಅಲ್ಲಿದೆ ನೋಡು ಇಡ್ಲಿ.

CUT TO

INT.DAY. DHARMA'S HOUSE

* Dining table ಮೇಲೆ ಮೂರು ಇಡ್ಲಿಯಿದೆ. ಇಡ್ಲಿ ಸುತ್ತಲೂ ನೊಣ ಹಾರುತ್ತಿದೆ.

CUT TO

EXT. DAY. DHARMA'S HOUSE

* ಧರ್ಮ Dumpster ಹತ್ತಿರ ಬಂದು ಕೈಯಲ್ಲಿರುವ Enjoy ice cream packetನ ಎಸೆಯುತ್ತಾನೆ. ಧರ್ಮ ವಾಪಸ್ ಹಿಂತಿರುಗಿ ಹೊರಟಾಗ,

ADRIKA (O.S)
Uncle

* ಧರ್ಮ ಹಿಂದೆ ತಿರುಗಿ ನೋಡುತ್ತಾನೆ. ಆದ್ರಿಕಾ school uniform ಧರಿಸಿಕೊಂಡು ನಿಂತಿದ್ದಾಳೆ ಕೈಯಲ್ಲಿ ಮಡಚಿರುವ ಕಾಗದ ಹಿಡಿದುಕೊಂಡಿದ್ದಾಳೆ. ಆದ್ರಿಕಾ ಧರ್ಮನ ಮನೆಯೊಳಗೆ ಇಣುಕಿ ನೋಡುತ್ತಾಳೆ. ಧರ್ಮನೂ ಹಿಂದೆ ತಿರುಗಿ ನೋಡುತ್ತಾನೆ. ಆದ್ರಿಕಾ ಧರ್ಮನನ್ನು ನೋಡಿ,

ADRIKA
Doggy?

* ಧರ್ಮ ಉತ್ತರಿಸುತ್ತಿಲ್ಲ.

ADRIKA(CONT'D)
ತಾಚಿ ಮಾಡ್ತಾ ಇದ್ಯಾ?

* ಧರ್ಮ ತಲೆಯಾಡಿಸುತ್ತಾನೆ.

ADRIKA
(ಕೈಯಲ್ಲಿರುವ ಮಡಚಿಟ್ಟಿದ್ದ paper ಕೊಟ್ಟು)
Ok ok.. ಅದು ಎದ್ ಮೇಲೆ ಇದನ್ನ ತೋರ್ಸಿ. ಆದ್ರಿಕಾ ಮಾಡಿದ್ದು ಅಂತ ಹೇಳಿ.

* ಧರ್ಮ ಅದನ್ನ ತೆಗೆದುಕೊಳ್ಳುತ್ತಾನೆ. ಧರ್ಮನನ್ನು ನೋಡಿದ ಆದ್ರಿಕಾ ಬೇಸರದಿಂದ,

ADRIKA
Uncle, ನೀವು ಯಾಕ್ smile ಏ ಮಾಡೋದಿಲ್ಲ?

* ಧರ್ಮ ಸುಮ್ಮನೆ ನಿಂತು ನೋಡುತ್ತಿದ್ದಾನೆ.

ADRIKA MOTHER(O.S)
ಆದ್ರಿಕಾ..

ADRIKA
Ok ok uncle.. ನಾಳೆ ಬರ್ತೀನಿ..bye..

* ಎಂದು ಹೇಳಿ ಓಡುತ್ತಾಳೆ. ಧರ್ಮ ಆದ್ರಿಕಾಳನ್ನು ನೋಡುತ್ತಾನೆ.

CUT TO

INT.DAY. DHARMA'S HOUSE

* ಧರ್ಮ ಮಂಚದ ಮೇಲೆ ಕುಳಿತು ಆದ್ರಿಕಾ ಕೊಟ್ಟಿರುವ ಚಿತ್ರವನ್ನು ನೋಡುತ್ತಿದ್ದಾನೆ. Drawing ನಲ್ಲಿ ಸಣ್ಣ ಗುಡಿಸಲಿನ ಒಳಗಡೆ ಧರ್ಮ ಹಾಗೂ ಚಾರ್ಲಿ ಕುಳಿತಿದ್ದಾರೆ. ಧರ್ಮ Superman T Shirt ಧರಿಸಿದ್ದಾನೆ. ಪಕ್ಕದಲ್ಲಿ 'Thank you uncle' ಎಂದು ಬರೆದಿದೆ. ಧರ್ಮನ phone ring ಆಗುತ್ತದೆ. ಧರ್ಮ phone receive ಮಾಡುತ್ತಾನೆ.

DOCTOR ASHWIN (O.S)
ಆನ್.. ನಿಂಗೊಂದು license transfer ಮಾಡ್ಲೀಕೆ ಎಷ್ಟು ದಿವಸ ಬೇಕಾ?

DHARMA
ಮಾಡ್ಸ್ತೀನಿ ಸರ್

CUT TO

EXT. DAY. ROADSIDE PANI PURI SHOP

* ಡಾಕ್ಟರ್ ಅಶ್ವಿನ್ Compounder ಜೊತೆಗೆ ಪಾನಿ ಪುರಿ ತಿನ್ನುತ್ತಿದ್ದಾರೆ.

DOCTOR ASHWIN
ಅಲ್ಲ ಇನ್ನೆಂತ ಮಾಡಿಸೂದು? ಅವರಲ್ಲಿ form ಎಲ್ಲಾ ತಂದಿಟ್ಟಿದಾರಂತೆ. ಒಂದು Documents ಎಲ್ಲ ತಗೊಂಡ್ ಹೋಗಿ sign ಹಾಕಿ ಬಾ ಮಾರಾಯ ಮರ್ಯಾದೆ ತೆಗಿಬೇಡ. ಅಲ್ಲಿ ಆ ಹೆಂಗಸು ನಂಗೆ phone ಮಾಡಿ ನಾಯಿ flush ಮಾಡ್ತಿಲ್ಲ flush ಮಾಡ್ತಿಲ್ಲ ಅಂತ ಬೊಬ್ಬೆ ಹಾಕ್ತಾ ಉಂಟು ಗೊತ್ತುಂಟಾ?

* Compounder ಡಾಕ್ಟರ್ ತಿನ್ನಬೇಕಿದ್ದ ಪಾನಿ ಪುರಿ ತೆಗೆದು ತಿನ್ನುತ್ತಾನೆ. ಡಾಕ್ಟರ್ ಅವನನ್ನು ದಿಟ್ಟಿಸಿ ನೋಡುತ್ತಾ,

DOCTOR ASHWIN
Address ಎಲ್ಲ ಕಳಿಸ್ತೇನೆ ಹೋಗಾಯ್ತಾ? ಮರೀಬೇಡ..

* ಧರ್ಮ phone cut ಮಾಡುತ್ತಾನೆ.

CUT TO

EXT/INT. DAY. FOSTER FAMILY'S HOUSE

* ಧರ್ಮ bulletನಲ್ಲಿ foster family ಮನೆ ಮುಂದೆ ಬರುತ್ತಾನೆ.

CUT TO

* ಧರ್ಮ ಬಾಗಿಲ ಹತ್ತಿರ ಬಂದು ಎರಡು calling bell ಒತ್ತುತ್ತಾನೆ. Calling bell ಸದ್ದು ಕೇಳಿಸುತ್ತಿಲ್ಲ. ಧರ್ಮ ಬಾಗಿಲು ತಟ್ಟಿದಾಗ ಬಾಗಿಲು ತೆರೆದಿರುವುದನ್ನು ಗಮನಿಸುತ್ತಾನೆ. ಬಾಗಿಲು

ತೆರೆದು ಒಳಗೆ ಹೋಗುತ್ತಾನೆ. ಮನೆ ಸುತ್ತಲೂ ಹತ್ತಿ ಹಾರಾಡುತ್ತಿದೆ. ಮಕ್ಕಳಿಬ್ಬರೂ ಹೆದರಿ ಅವಿತು ಕುಳಿತಿದ್ದಾರೆ. ಧರ್ಮ ಒಳಗೆ ಬಂದು ನೋಡಿದಾಗ ಮನೆಯಲ್ಲಿರುವ ವಸ್ತುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿವೆ. Foster Lady 2 ಕೈಯಲ್ಲಿ ಪೊರಕೆ ಹಿಡಿದುಕೊಂಡು,

FOSTER LADY 2
(ಸಿಟ್ಟಿನಿಂದ)
ಏಯ್ Come out..ಬಾ ಇಲ್ಲಿ..

* ಚಾರ್ಲಿ TV table ಹಿಂದೆ ಕುಳಿತಿದ್ದಾಳೆ. ಧರ್ಮನನ್ನು ನೋಡಿದ ತಕ್ಷಣ ಚಾರ್ಲಿ ಬೊಗಳುತ್ತಾಳೆ. ಧರ್ಮ ಚಾರ್ಲಿಯನ್ನು ನೋಡುತ್ತಾ ಮುಗುಳ್ನಗುತ್ತಾನೆ. Foster Lady 2 ಹಾಗೂ ತಾತ ಧರ್ಮನನ್ನು ದಿಟ್ಟಿಸಿ ನೋಡುತ್ತಿದ್ದಾರೆ. ಧರ್ಮ ನಗು ತಡೆಯಲಾರದೆ ಜೋರಾಗಿ ನಗಾಡುತ್ತಾನೆ. ಧರ್ಮನನ್ನು ನೋಡುತ್ತಾ ಚಾರ್ಲಿ table ಮೇಲೆ ಜಿಗಿದು ಕುಳಿತುಕೊಳ್ಳುತ್ತಾಳೆ. ಧರ್ಮ ಒಂದೇ ಸಮನೆ ನಗುತ್ತಿರುವುದನ್ನು ನೋಡಿದ ಚಾರ್ಲಿ tableನಿಂದ ಇಳಿದು ಓಡಿ ಬಂದು ಧರ್ಮನ ಮೇಲೆ ಹಾರುತ್ತಾಳೆ. ಧರ್ಮ ಚಾರ್ಲಿಯನ್ನು ಹಿಡಿದುಕೊಳ್ಳುತ್ತಾನೆ. ಚಾರ್ಲಿ ಧರ್ಮನ ಮುಖ ನೆಕ್ಕುತ್ತಾಳೆ.

* ಧರ್ಮ ಚಾರ್ಲಿಯನ್ನು ಎತ್ತಿಕೊಂಡು ಹೊರಡುತ್ತಾನೆ. ಮನೆಯವರು ಹೊರಗೆ ನಿಂತು ನೋಡುತ್ತಿದ್ದಾರೆ. ಸಣ್ಣ ಹುಡುಗ ಅಮ್ಮನನ್ನು ನೋಡಿ,

SMALL KID (BOY)
Mummy mummy, ನಂಗೆ black doggy ಬೇಕು..

FOSTER LADY 2
ಬಾಯ್ ಮುಚ್ಕೋ..

BONDING SONG STARTS

CUT TO

EXT. DAY. VARIOUS ROADS (BONDING SONG)

* ಧರ್ಮ bullet ಓಡಿಸುತ್ತಿದ್ದಾನೆ. ಚಾರ್ಲಿ petrol tank ಮೇಲೆ ಕುಳಿತಿದ್ದಾಳೆ.

CUT TO

EXT. DAY. ROAD (BONDING SONG)

* Doctor Ashwin ಹಾಗೂ compounder ಅದೇ ದಾರಿಯಲ್ಲಿ  scooter ನಲ್ಲಿ ಬರುತ್ತಿದ್ದಾರೆ. Compounder ಗಾಡಿ ಓಡಿಸುತ್ತಾ ದಂಗಾಗಿ ಮುಂದೆ ನೋಡುತ್ತಾನೆ. ಹಿಂದೆ ಕುಳಿತಿದ್ದ ಡಾಕ್ಟರ್ ಕೂಡಾ ದಂಗಾಗಿ ನೋಡುತ್ತಿದ್ದಾರೆ. ಧರ್ಮ ಅವರಿಬ್ಬರನ್ನು ದಾಟಿ ಮುಂದೆ ಹೋಗುತ್ತಾನೆ.

CUT TO

EXT. DAY. ADRIKA'S SCHOOL ZONE (BONDING SONG)

* ಧರ್ಮ bulletನಲ್ಲಿ ಆದ್ರಿಕಾಳ ಶಾಲೆಯ ರಸ್ತೆಯಲ್ಲಿ  ಬರುತ್ತಿದ್ದಾನೆ. ಆದ್ರಿಕಾ ಅವರಿಬ್ಬರನ್ನು ನೋಡುತ್ತಿದ್ದಾಳೆ. ಧರ್ಮ ಆದ್ರಿಕಾಳನ್ನು ನೋಡಿ ಮುಗುಳ್ನಗುತ್ತಾ ಮುಂದೆ ಹೋಗುತ್ತಾನೆ. ಆದ್ರಿಕಾ ಖುಷಿಯಿಂದ ನೋಡುತ್ತಿದ್ದಾಳೆ.

CUT TO

EXT. DAY. AJJI SHOP (BONDING SONG)

* ಮಂಜು ಅಜ್ಜಿ ಅಂಗಡಿ ಹೊರಗಿನ ಬೆಂಚಿನಲ್ಲಿ ಕುಳಿತು tea ಕುಡಿಯುತ್ತಿದ್ದಾನೆ. ಧರ್ಮ ಗಾಡಿಯಲ್ಲಿ ಬರುವುದನ್ನು ನೋಡಿದ ಮಂಜು ಗಾಬರಿಯಿಂದ tea glass ಪಕ್ಕದಲ್ಲಿಟ್ಟು ಓಡಿ ತನ್ನ ಗಾಡಿ ಹತ್ತಿ ಹೊರಡುತ್ತಾನೆ. ಧರ್ಮ ಅಜ್ಜಿಯಂಗಡಿ ಎದುರು ಬಂದು ಗಾಡಿ ನಿಲ್ಲಿಸುತ್ತಾನೆ.

ಚಾರ್ಲಿ ಗಾಡಿಯಿಂದ ಇಳಿದು ಮುಂದೆ ಹೋಗಿ ನಿಲ್ಲುತ್ತಾಳೆ. ಧರ್ಮ ಅವಳ ಹಿಂದಿನಿಂದ ಬರುತ್ತಾನೆ. ಅಜ್ಜಿ ಚಾರ್ಲಿಯನ್ನು ನೋಡಿ ಖುಷಿಯಿಂದ ಧರ್ಮನ ಬಳಿ,

AJJI
ನಾಯಿ ತಗೊಂಡ್ಯ ಮಗ? ಮುದ್ದಾಗಿದೆ. ಏನ್ ಹೆಸರಿಟ್ಟಿದ್ದೀಯಾ?

* ಧರ್ಮ ಏನೂ ಉತ್ತರಿಸದೆ ಮುಂದೆ ನೋಡುತ್ತಿದ್ದಾನೆ.

CUT TO

INT. DAY. DHARMA'S HOUSE (BONDING SONG)

* ಧರ್ಮ ಮನೆಯೊಳಗೆ ಯೋಚಿಸುತ್ತಾ ಆ ಕಡೆ ಈ ಕಡೆ ನಡೆಯುತ್ತಿದ್ದಾನೆ. ಧರ್ಮ ಚಾರ್ಲಿ ಚಾಪ್ಲಿನ್ artwork ನೋಡುತ್ತಾನೆ. ಚಾರ್ಲಿಯತ್ತ ನೋಡಿದಾಗ ಅವಳು ಕಿಟಕಿ ಹತ್ತಿರ ಕುಳಿತು ಹೊರಗಡೆ ನೋಡುತ್ತಿದ್ದಾಳೆ.

DHARMA
ಚಾರ್ಲಿ..

* ಚಾರ್ಲಿ ತಿರುಗಿ ನೋಡುತ್ತಾಳೆ. ಧರ್ಮ ಖುಷಿಯಿಂದ ನೋಡುತ್ತಿದ್ದಾನೆ.

JUMPCUTS:

* Badge ಮೇಲೆ 'Charlie' ಎಂದು punch ಬೀಳುತ್ತದೆ.

* ಚಾರ್ಲಿ ಕುತ್ತಿಗೆಯಲ್ಲಿ '777 Charlie' tag ಕಾಣಿಸುತ್ತೆ.

* ಚಾರ್ಲಿ ಖುಷಿಯಿಂದ ಜಿಗಿಯುತ್ತಾಳೆ. ಧರ್ಮ ಹಾಗೂ ಆದ್ರಿಕಾ ಚಾರ್ಲಿಯನ್ನು ನೋಡಿ ಖುಷಿಯಿಂದ ನಗಾಡುತ್ತಿದ್ದಾರೆ.

CUT TO

INT. DAY. DHARMA'S HOUSE (BONDING SONG)

* ಧರ್ಮ ಚಾರ್ಲಿಯ ಬಾಯಿ ಒಡೆದು ಹಿಡಿದಿದ್ದಾನೆ. ಆದ್ರಿಕಾ ಚಾರ್ಲಿಗೆ brush ಮಾಡಿಸುತ್ತಿದ್ದಾಳೆ. ಚಾರ್ಲಿ ಸೀನುತ್ತಾಳೆ. ಇಬ್ಬರೂ ನಗಾಡುತ್ತಾರೆ.

* ಧರ್ಮ ಹಾಗೂ ಆದ್ರಿಕಾ ಚಾರ್ಲಿಗೆ ಸ್ನಾನ ಮಾಡಿಸುತ್ತಿದ್ದಾರೆ. ಚಾರ್ಲಿ ಮೈ ಕೊಡವುತ್ತಾಳೆ. ಧರ್ಮ bathroom ಮೂಲೆಯತ್ತ ನೋಡಿದಾಗ ಹಳೆಯದಾದ bathtub ಕಾಣಿಸುತ್ತದೆ.

CUT TO

EXT. DAY. DHARMA'S HOUSE (BONDING SONG)

* ಆದ್ರಿಕಾ ಧರ್ಮನ ಮನೆ ಹೊರಗಡೆ ಮೆಟ್ಟಿಲಲ್ಲಿ ಕುಳಿತು ಚಾರ್ಲಿ ಬೆರಳಿಗೆ nail polish ಹಾಕುತ್ತಿದ್ದಾಳೆ. ಧರ್ಮ ಮನೆ ಅಂಗಳದಲ್ಲಿ bathtub ತೊಳೆಯುತ್ತಿದ್ದಾನೆ. ಧರ್ಮನನ್ನು ನೋಡಿದ ಆದ್ರಿಕಾ,

AADRIKA
Uncle.. ಏನ್ ಮಾಡ್ತಾ ಇದ್ದೀರಾ?

DHARMA
Surprise

ADRIKA MOTHER (O.S)

ಆದ್ರಿಕಾ late ಮಾಡ್ಬೇಡ..

ADRIA
ಹಾನ್ ಅಮ್ಮಾ ಬಂದೆ..

CUT TO

INT. DAY. DHARMA'S HOUSE (BONDING SONG)

* ಧರ್ಮ aquariumನಲ್ಲಿರುವ ಮೀನುಗಳಿಗೆ food ಹಾಕಿ ಹಿಂದೆ ತಿರುಗಿದಾಗ ಚಾರ್ಲಿ helmet ಕಚ್ಚಿಕೊಂಡು ಕುಳಿತಿದ್ದಾಳೆ. ಧರ್ಮ ಮುಗುಳ್ನಗುತ್ತಾನೆ.

CUT TO

EXT. DAY. PARK (BONDING SONG)

JUMPCUTS

* Park ನಲ್ಲಿ ಧರ್ಮ ಚಾರ್ಲಿಯ photo click ಮಾಡುತ್ತಾನೆ. ಒಂದಷ್ಟು ಜನ ಚಾರ್ಲಿಯನ್ನು pet ಮಾಡುತ್ತಾ pose ಕೊಡುತ್ತಿದ್ದಾರೆ.

* ಧರ್ಮ leash ಎಳೆಯುತ್ತಿದ್ದಾನೆ. ಚಾರ್ಲಿ ಮಲಗಿದಲ್ಲಿಂದ ಏಳುತ್ತಿಲ್ಲ. ಧರ್ಮ leash ಬಿಟ್ಟು ಮುಂದೆ ಹೋದಾಗ ಚಾರ್ಲಿ ಥಟ್ಟನೆ ಎದ್ದೇಳುತ್ತಾಳೆ. ಧರ್ಮ ಮತ್ತೆ leash ಹಿಡಿದಾಗ ಚಾರ್ಲಿ ಮತ್ತೆ ಮಲಗುತ್ತಾಳೆ. ಧರ್ಮ ಪುನಃ leash ಬಿಡುತ್ತಾನೆ. ಚಾರ್ಲಿ ಥಟ್ಟನೆ ಏಳುತ್ತಾಳೆ.

CUT TO

EXT. DAY. DHARMA'S HOUSE (BONDING SONG)

* ಧರ್ಮ bikeshed ನಲ್ಲಿ ಕುಳಿತು ಕಬ್ಬಿಣದ rod ಸವರುತ್ತಿದ್ದಾನೆ. ಚಾರ್ಲಿ ಪಕ್ಕದಲ್ಲಿ ಕುಳಿತು paw ಮಾಡುತ್ತಾಳೆ. ಧರ್ಮ ಚಾರ್ಲಿಯನ್ನು pet ಮಾಡಿ ತನ್ನ ಕೆಲಸ ಮುಂದುವರೆಸುತ್ತಾನೆ. ಚಾರ್ಲಿ ಮತ್ತೊಮ್ಮೆ 'paw' ಮಾಡುತ್ತಾಳೆ. ಧರ್ಮ ಕೆಲಸ ನಿಲ್ಲಿಸಿ ಚಾರ್ಲಿಯನ್ನು ಅಪ್ಪಿ ಹಿಡಿದು pet ಮಾಡುತ್ತಾನೆ

CUT TO

INT. DAY. FACTORY (BONDING SONG)

* Factoryಯಲ್ಲಿ ಉತ್ತಮ್ ಕೆಲಸ ಮಾಡುತ್ತಿದ್ದಾನೆ. ಧರ್ಮ ಉತ್ತಮ್ ಹಿಂದೆಯಿಂದ ಬಂದು ಬೆನ್ನು ತಟ್ಟಿ,

DHARMA
Good morning uttam..

* ಉತ್ತಮ್ ಆಶ್ಚರ್ಯದಿಂದ ಧರ್ಮನನ್ನು ನೋಡಿ ಎದ್ದು ನಿಂತು,

UTTAM
Good morning Sir..

DHARMA
ಕೂತ್ಕೊಳ್ಳಿ.

* ದೂರದಲ್ಲಿ ಕೆಲಸ ಮಾಡುತ್ತಿದ್ದ ರಾಜು ಮುಂದೆ ನೋಡಿ ಪಕ್ಕದಲ್ಲಿರುವ ಕೃಪಾಕರ್ ಬೆನ್ನುತಟ್ಟುತ್ತಾನೆ. ಕೃಪಾಕರ್ ಮುಂದೆ ನೋಡಿದಾಗ ಧರ್ಮ ಉತ್ತಮ್ ಗೆ ಕೆಲಸ ಹೇಳಿ ಕೊಡುತ್ತಿದ್ದಾನೆ.

RAJU

ಧರ್ಮ ಸರ್ change ಆಗಿದ್ದಾರೆ ಅಲ್ವಾ??

* ಧರ್ಮ ಉತ್ತಮ್ ಬೆನ್ನು ತಟ್ಟಿ ಅಲ್ಲಿಂದ ಹೋಗುತ್ತಾನೆ. ಉತ್ತಮ್ ಆಶ್ಚರ್ಯದಿಂದ ಧರ್ಮನನ್ನು ನೋಡುತ್ತಾನೆ.

CUT TO

INT. DAY. DHARMA'S HOUSE (BONDING SONG)

TIMELAPSE SHOTS:

* SHOT 1: ಧರ್ಮ ಮಂಚದಲ್ಲಿ ಮಲಗಿದ್ದಾನೆ. ಚಾರ್ಲಿ ಧರ್ಮನ ಪಕ್ಕದಲ್ಲಿ ಮಲಗಿದ್ದಾಳೆ.

* SHOT 2: ಚಾರ್ಲಿ ಧರ್ಮನ ಮೈ ಮೇಲೆ ಮಲಗಿದ್ದಾಳೆ.

* SHOT 3: ಧರ್ಮ ಚಾರ್ಲಿಯನ್ನು ಹಿಡಿದುಕೊಂಡು ಮಲಗಿದ್ದಾನೆ.

* SHOT 4: ಚಾರ್ಲಿ ಕೈ ಕಾಲು ಮೇಲೆ ಮಾಡಿ ಮಲಗಿದ್ದಾಳೆ.

CUT TO

INT. DAY. DHARMA'S HOUSE (BONDING SONG)

JUMPCUTS:

* ಧರ್ಮ scale ಇಟ್ಟು pencil ನಿಂದ ಗೆರೆ ಎಳೆಯುತ್ತಾನೆ.

* ಧರ್ಮ bathtub ಅಳತೆ ನೋಡಿ pencilನಲ್ಲಿ mark ಮಾಡುತ್ತಾನೆ.

* ಧರ್ಮ bathtub weld ಮಾಡುತ್ತಾನೆ.

* ಧರ್ಮ ಸುತ್ತಿಗೆಯಲ್ಲಿ iron sheet ಒಂದನ್ನು ಹೊಡೆದು shape ಕೊಡುತ್ತಿದ್ದಾನೆ.

* ಧರ್ಮ sidecarಗೆ screw drill ಮಾಡುತ್ತಾನೆ.

* ಧರ್ಮ cigarette ಸೇದುತ್ತಾ sidecar grinding ಮಾಡುತ್ತಿದ್ದಾನೆ.

* ಧರ್ಮ gas cutter ಹಿಡಿದು weld ಮಾಡುತ್ತಿದ್ದಾನೆ.

* ಧರ್ಮ sidecarಗೆ seat fix ಮಾಡಿ screw ಹಾಕುತ್ತಾನೆ.

* ಧರ್ಮ screen ಮೇಲೆ spray ಹೊಡೆಯುತ್ತಾನೆ.

CUT TO

EXT. DAY. DHARMA'S HOUSE (BONDING SONG)

* ಧರ್ಮ bullet ಮೇಲಿರುವ tarpal ಎಳೆದಾಗ sidecar bulletಗೆ attach ಆಗಿದೆ. ಆದ್ರಿಕಾ ಆಶ್ಚರ್ಯದಿಂದ ನೋಡುತ್ತಿದ್ದಾಳೆ. ಚಾರ್ಲಿ ಖುಷಿಯಿಂದ ಜಿಗಿದು ಓಡಿ ಹೋಗಿ sidecarನಲ್ಲಿ ಹತ್ತಿ ಕುಳಿತುಕೊಳ್ಳುತ್ತಾಳೆ.

CUT TO

EXT. DAY. ROAD (BONDING SONG)

* ಧರ್ಮ bullet ಓಡಿಸುತ್ತಿದ್ದಾನೆ. ಚಾರ್ಲಿ ಹಾಗೂ ಆದ್ರಿಕಾ sidecar ನಲ್ಲಿ ಕುಳಿತಿದ್ದಾರೆ. ಆದ್ರಿಕಾ ಧರ್ಮನನ್ನು ನೋಡಿ ನಗಾಡುತ್ತಿದ್ದಾಳೆ. ಧರ್ಮ ಖುಷಿಯಿಂದ ಆದ್ರಿಕಾಳನ್ನು ನೋಡುತ್ತಾನೆ.

CUT TO

INT. DAY. MALL (BONDING SONG)

* Box ತೆರೆದಾಗ ಹೊಸ smartphone ಕಾಣಿಸುತ್ತದೆ. ಅಂಗಡಿಯವ phoneನ ಧರ್ಮನ ಕೈಗೆ ಕೊಡುತ್ತಾನೆ.

CUT TO

EXT. DAY. ROAD (BONDING SONG)

* ಧರ್ಮ bullet ಓಡಿಸುತ್ತಿದ್ದಾನೆ. ಆದ್ರಿಕಾ sidecar ನಲ್ಲಿ ಕುಳಿತು ಚಾರ್ಲಿಗೆ ice cream ತಿನ್ನಿಸುತ್ತಿದ್ದಾಳೆ. ಧರ್ಮ ಖುಷಿಯಿಂದ ನೋಡುತ್ತಿದ್ದಾನೆ.

CUT TO

INT. DAY. DHARMA'S HOUSE (BONDING SONG)

* TVಯಲ್ಲಿ ice cream ad ಪ್ರಸಾರವಾಗುತ್ತಿದೆ. ಚಾರ್ಲಿ TV ನೋಡುತ್ತಾ ಜಿಗಿಯುತ್ತಾ ಬೊಗಳುತ್ತಿದ್ದಾಳೆ. ಧರ್ಮ phone ನೋಡುತ್ತಿದ್ದಾನೆ. ಧರ್ಮ ಚಾರ್ಲಿಯನ್ನು ನೋಡಿ,

DHARMA
ಏಯ್..

* ಚಾರ್ಲಿ ಜಿಗಿಯುವುದನ್ನು ನಿಲ್ಲಿಸಿ ತಿರುಗಿ ನೋಡುತ್ತಾಳೆ.

DHARMA (CONT'D)
TV ಮುಂದೆ ಹಾರಿದ್ರೆ ice cream ಸಿಗಲ್ಲ. Fridgealliಅಲ್ಲಿ ಇದೆ ತಗೋ..

CUT TO

INT. DAY. DHARMA'S HOUSE (BONDING SONG)

* ಧರ್ಮ cigarette ಸೇದುತ್ತಾ factoryಗೆ ಸಂಬಂಧಿಸಿದ ಕೆಲಸ ಮಾಡುತ್ತಿದ್ದಾನೆ. ಚಾರ್ಲಿ ಪಕ್ಕದಲ್ಲಿ ಕುಳಿತಿದ್ದಾಳೆ. ಧರ್ಮ cigarette ಬಾಯಿಗಿಟ್ಟಾಗ ಚಾರ್ಲಿ paw ಮಾಡಿ ಧರ್ಮನ ಮುಖ ನೋಡುತ್ತಿದ್ದಾಳೆ.

CUT TO

INT/EXT. DAY. AJJI SHOP(BONDING SONG)

* ಟೀ ಅಂಗಡಿಯಲ್ಲಿ ಅಜ್ಜ ಕಷ್ಟಪಟ್ಟು walking stick ಹಿಡಿದು ನಡೆಯುತ್ತಿದ್ದಾರೆ. ಧರ್ಮ ಹೊರಗಡೆ ನಿಂತು ನೋಡುತ್ತಿದ್ದಾನೆ. ಅಜ್ಜ cigarette packet ಡಬ್ಬದ ಮೇಲಿಟ್ಟು,

AJJA
ತಗೋ.

DHARMA
ನಾನ್ cigarette ಬಿಟ್ಟಿದ್ದೀನಿ

* ಅಜ್ಜ ಹಾಗೂ ಅಜ್ಜಿ ಆಶ್ಚರ್ಯದಿಂದ ಧರ್ಮನನ್ನು ನೋಡುತ್ತಾರೆ.

CUT TO

INT. DAY. DHARMA'S HOUSE (BONDING SONG)

JUMPCUTS:

* ಚಾರ್ಲಿ dining table ಮೇಲೆ ಕುಳಿತಿದ್ದಾಳೆ. ಧರ್ಮ ಚಾರ್ಲಿಗೆ ice cream ತಿನ್ನಿಸುತ್ತಿದ್ದಾನೆ.

* ಚಾರ್ಲಿ ice cream ತಿನ್ನುತ್ತಾ ಧರ್ಮನ ಮುಖ ನೆಕ್ಕುತ್ತಾಳೆ.

CUT TO

INT. DAY. FACTORY (BONDING SONG)

* ಧರ್ಮ factoryಯಲ್ಲಿ courier packet ತೆಗೆದುಕೊಳ್ಳುತ್ತಾನೆ.

COURIER BOY
Thank you sir

CUT TO

INT. DAY. DHARMA'S HOUSE (BONDING SONG)

* ಆದ್ರಿಕಾ ಧರ್ಮನ phoneನಲ್ಲಿ photo ತೆಗೆಯಲು camera adjust ಮಾಡುತ್ತಿದ್ದಾಳೆ.

ADRIKA
Ready?

* ಧರ್ಮ ಹಾಗೂ ಚಾರ್ಲಿ 3 seater sofa ದಲ್ಲಿ T-shirt ಧರಿಸಿಕೊಂಡು ಕುಳಿತಿದ್ದಾರೆ. ಧರ್ಮ ಧರಿಸಿರುವ T-shirtನಲ್ಲಿ ಚಾರ್ಲಿಯ ಚಿತ್ರವಿದೆ. ಚಾರ್ಲಿ ಧರಿಸಿರುವ T-shirtನಲ್ಲಿ ಧರ್ಮನ ಚಿತ್ರವಿದೆ.

ADRIKA
Smile..

* ಧರ್ಮ smile ಮಾಡುತ್ತಾನೆ. ಇಬ್ಬರ photo click ಆಗುತ್ತದೆ.

BONDING SONG ENDS

CUT TO

INT. EVENING. DHARMA'S HOUSE

* ಆದ್ರಿಕಾ ಧರ್ಮನ ಮಂಚದ ಮೇಲೆ ಕೈಯಲ್ಲಿ teddybear ಹಿಡಿದುಕೊಂಡು ಕುಳಿತಿದ್ದಾಳೆ. ಚಾರ್ಲಿ ಎದುರುಗಡೆ ನಿಂತಿದ್ದಾಳೆ.

ADRIKA
Sit.. Charlie Sit.. ಕೂತ್ಕೋ.. ಇಲ್ಲಾಂದ್ರೆ ನಾನ್ ನಿಂಗೆ
ಇದು ಕೊಡಲ್ಲ.

* ಹಿನ್ನಲೆಯಲ್ಲಿ ಧರ್ಮನ bullet ಶಬ್ದ ಕೇಳಿಸುತ್ತದೆ. ಚಾರ್ಲಿ ತಕ್ಷಣ ಬಾಗಿಲ ಹತ್ತಿರ ಹೋಗುತ್ತಾಳೆ. ಆದ್ರಿಕಾ ಚಾರ್ಲಿಯನ್ನು ನೋಡಿ,

ADRIKA
ಚಾರ್ಲಿ.. ಆವಾಗ ನಂಗೆ thanks ಮಾಡಿದ್ಯಲ್ಲ.. ಅದನ್ನ
uncle ಮುಂದೆ ಮಾಡ್ಬೇಕು?

* ಚಾರ್ಲಿ door scratch ಮಾಡುತ್ತಾ ಬೊಗಳುತ್ತಿದ್ದಾಳೆ. ಧರ್ಮ ಬಾಗಿಲು ತೆರೆದು ಮನೆಯೊಳಗೆ ಬರುತ್ತಾನೆ.

ADRIKA
Uncle uncle ಚಾರ್ಲಿಗೆ ನಾನು thanks ಮಾಡೋದ್
ಹೇಳ್ಕೊಟ್ಟೆ..

DHARMA
Oh ಹೌದಾ! super

* ಧರ್ಮ ಕೈಯಲ್ಲಿರುವ ಇಡ್ಲಿ packet ಅನ್ನು dining table ಮೇಲೆ ಇಡುತ್ತಾನೆ. ಆದ್ರಿಕಾ ಚಾರ್ಲಿಯನ್ನು ನೋಡಿ,

ADRIKA
ಚಾರ್ಲಿ ಬಾ ಇಲ್ಲಿ..
(ಧರ್ಮನನ್ನು ನೋಡಿ)
Uncle, ಬನ್ನಿ ಬೇಗ..

DHARMA
Han

* ಎಂದು ಹೇಳಿ ಆದ್ರಿಕಾಳ ಪಕ್ಕ ಕುಳಿತುಕೊಳ್ಳುತ್ತಾನೆ. ಚಾರ್ಲಿ ಆದ್ರಿಕಾ ಮುಂದೆ ಕುಳಿತಿದ್ದಾಳೆ. ಆದ್ರಿಕಾ ಚಾರ್ಲಿಯನ್ನು ನೋಡಿ,

ADRIKA
Charlie thanks ಮಾಡು

* ಚಾರ್ಲಿ ಸುಮ್ಮನೆ ಕುಳಿತು ಆದ್ರಿಕಾ ಮುಖ ನೋಡುತ್ತಿದ್ದಾಳೆ.

ADRIKA
Charlie thanks ಮಾಡು

* ಚಾರ್ಲಿ ಪ್ರತಿಕ್ರಯಿಸುತ್ತಿಲ್ಲ. ಆದ್ರಿಕಾ ಬೇಸರದಿಂದ ಧರ್ಮನನ್ನು ನೋಡಿ,

ADRIKA
ಅವಾಗ ಮಾಡಿತ್ತು uncle..

* ಆದ್ರಿಕಾ ಚಾರ್ಲಿಯನ್ನು ನೋಡಿ ಕೈ ತೋರಿಸುತ್ತಾ,

ADRIKA
Charlie ಅವಾಗ ನೀನು ಕೈ ಹಿಂಗೆ ಮಾಡಿ thanks
ಮಾಡಿದ್ಯಲ್ವ? ಅದನ್ನ ಮಾಡು ಚಾರ್ಲಿ.

* ಚಾರ್ಲಿ ಸುಮ್ಮನೆ ಕುಳಿತಿದ್ದಾಳೆ. ಆದ್ರಿಕಾ ಧರ್ಮನನ್ನು ನೋಡಿ

ADRIKA
(ಬೇಸರದಿಂದ)
Promise.. ಅವಾಗ ಮಾಡಿತ್ತು uncle
(ಚಾರ್ಲಿಯನ್ನು ನೋಡಿ ಬೇಸರದಿಂದ)
Please ಚಾರ್ಲಿ. Thanks ಮಾಡು ಚಾರ್ಲಿ..

* ಧರ್ಮ ಆದ್ರಿಕಾಳನ್ನು ನೋಡಿ,

DHARMA
ಆದೀ.. ಚಾರ್ಲಿ ಇವಾಗ ಸುಸ್ತಾಗಿದ್ದಾಳೆ ಅನ್ಸುತ್ತೆ. ಆಮೇಲ್
ಮಾಡ್ತಾಳ್ ಬಿಡು..

ADRIKA
(ಅಳುವ ಧ್ವನಿಯಿಂದ)
ಇಲ್ಲ.. ಅವಾಗ್ಲೇ ಮಾಡಿದ್ದು uncle..
(ಚಾರ್ಲಿಯನ್ನು ನೋಡಿ)
ಚಾರ್ಲಿ please ಚಾರ್ಲಿ ,Thanks ಮಾಡು ಚಾರ್ಲಿ

* ಆದ್ರಿಕಾ ಅಳುತ್ತಿದ್ದಾಳೆ. ಧರ್ಮ ಆದ್ರಿಕಾಳನ್ನು ನೋಡಿ,

DHARMA
Ok. ಚಾರ್ಲಿ ಇವಾಗ thanks ಮಾಡಿಲ್ಲ ಅಂದ್ರೆ ನಾವು ಅವ್ಳಿಗೆ Ice cream ಕೊಡೋದ್ ಬೇಡ.

* ಆದ್ರಿಕಾ ಬೇಸರದಿಂದ teddybear ಬಿಸಾಕಿ,

ADRIKA
ತಗೋ.. ನೀನೆ ಇಟ್ಕೋ..

* ಎಂದು ಹೇಳಿ ಎದ್ದು ಹೋಗುತ್ತಾಳೆ. ಚಾರ್ಲಿ ಕುಳಿತಲ್ಲಿಂದ ಎದ್ದು ಹೋಗಿ 3 seater sofaದಲ್ಲಿರುವ helmet ಕಚ್ಚಿಕೊಂಡು ಬಂದು ಧರ್ಮನ ಮುಂದೆ ಕುಳಿತುಕೊಳ್ಳುತ್ತಾಳೆ.

DHARMA
ತಿನ್ನೋದು, ತಿರ್ಗೋದು, ಇಷ್ಟೇ ಆಯ್ತು.. ಅದು ಬಿಟ್ಟು ಬೇರೇನಾದ್ರು ಬರುತ್ತಾ ನಿಂಗೆ?

* ಚಾರ್ಲಿ ಧರ್ಮನನ್ನು ನೋಡುತ್ತಿದ್ದಾಳೆ.

DHARMA (O.S)
ಪಾಪ ಆ ಮಗು ಅಳ್ತಾ ಹೋಯ್ತು. ನೀನೇ Helmet ತಗೊಂಡ್ ಹೋಗು

* ಚಾರ್ಲಿ helmet ಕೆಳಗಿಟ್ಟು ಧರ್ಮನನ್ನು ನೋಡಿ Paw ಮಾಡುತ್ತಾಳೆ. ಧರ್ಮ ಸಿಟ್ಟಿನಿಂದ ಅವಳ ಕೈ ದೂಡಿ ಮುಖ ತಿರುಗಿಸುತ್ತಾನೆ. ಚಾರ್ಲಿ ಮತ್ತೊಮ್ಮೆ paw ಮಾಡುತ್ತಾಳೆ. ಧರ್ಮ ಪುನಃ ಅವಳ ಕೈ ದೂಡುತ್ತಾನೆ. ಚಾರ್ಲಿ ಪುನಃ paw ಮಾಡಿದಾಗ ಧರ್ಮ ಚಾರ್ಲಿಯನ್ನು ಒರೆಗಣ್ಣಿನಿಂದ ನೋಡುತ್ತಾನೆ. ಚಾರ್ಲಿ ಮಂಚದ ಮೇಲೆ ಹತ್ತಿ ಕುಳಿತು ಧರ್ಮನನ್ನು ಅಪ್ಪಿಕೊಳ್ಳುತ್ತಾಳೆ. ಧರ್ಮ ಚಾರ್ಲಿಯನ್ನು ಅಪ್ಪಿಕೊಳ್ಳುತ್ತಾನೆ. ಚಾರ್ಲಿ ಬೇಸರದಿಂದ ನೋಡುತ್ತಿದ್ದಾಳೆ.

DHARMA
(ಚಾರ್ಲಿಯ ಮೈ ಸವರುತ್ತಾ)
ಸರಿ ಸರಿ..ನಾಳೆ ಆದ್ರಿಕಾ ಬಂದಾಗ thank you ಮಾಡ್ಲೇ ಬೇಕು. ಸರೀನಾ?

* ಎಂದು ಹೇಳುತ್ತಾ pet ಮಾಡುತ್ತಾನೆ. ಚಾರ್ಲಿ ಕಣ್ಣಲ್ಲಿ ನೀರು ತುಂಬಿಕೊಂಡಿದೆ.

CUT TO

INT. DAY. DHARMA'S HOUSE

* ಧರ್ಮ helmet ಕೈಗೆತ್ತಿಕೊಂಡು ಹೊರಡುತ್ತಾ ಚಾರ್ಲಿಯನ್ನು ನೋಡಿ,

DHARMA
ಇವತ್ತು factory ಯಿಂದ ಬೇಗ ಬರ್ತೀನಿ. ಸಂಜೆ ನಿಂಗೊಂದು surprise ಇದೆ

* ಚಾರ್ಲಿ ಬಾಗಿಲಗೆ ಅಡ್ಡವಾಗಿ floor mat ಮೇಲೆ ಮಲಗಿದ್ದಾಳೆ. ಧರ್ಮ ಬಾಗಿಲು ತೆಗೆಯಲು ಪ್ರಯತ್ನಿಸುತ್ತಾನೆ. ಚಾರ್ಲಿ ಏಳುತ್ತಿಲ್ಲ. ಧರ್ಮ ಚಾರ್ಲಿಯನ್ನು ನೋಡಿ,

DHARMA
ಏಯ್ ಇದೇನಿದು ಹೊಸ ಆಟ? ಸೈಡಿಗೆ ಬಾ..

* ಎಂದು ಹೇಳಿ ಬಾಗಿಲು ತೆರೆಯಲು ಪ್ರಯತ್ನಿಸುತ್ತಾನೆ. ಚಾರ್ಲಿ ಎದ್ದೇಳುತ್ತಿಲ್ಲ. ಧರ್ಮ ಅತ್ತಿತ್ತ ನೋಡಿ kitchen shelf ನಲ್ಲಿರುವ ball ತೆಗೆದು ಚಾರ್ಲಿಗೆ ತೋರಿಸಿ,

DHARMA
ಹೌದಾ? ಚಾರ್ಲಿ.. Yes..

* ಎಂದು ಹೇಳಿ ball ಬಿಸಾಕುತ್ತಾನೆ. ಚಾರ್ಲಿ ಪ್ರತಿಕ್ರಯಿಸುತ್ತಿಲ್ಲ.

DHARMA
ಹ್ಹ್.. ಇದಾ ವಿಷ್ಯ?

* ಧರ್ಮ mat ಸಮೇತ ಚಾರ್ಲಿಯನ್ನು ಪಕ್ಕಕ್ಕೆ ಎಳೆದು ಮಲಗಿಸಿ ಹೊರಗೆ ಹೋಗಿ ಬಾಗಿಲು ಮುಚ್ಚುತ್ತಾನೆ. ಪುನಃ ಬಾಗಿಲು ತೆರೆದು ಒಳಗಡೆ ಇಣುಕಿ ಚಾರ್ಲಿಯನ್ನು ನೋಡಿ,

DHARMA
ರೈಡಿಗೆ ಸಂಜೆ ಬಂದ್ ಮೇಲೆ ಕರ್ಕೊಂಡ್ ಹೋಗ್ತೀನಿ.Ok??
Bye..

* ಎಂದು ಹೇಳಿ ಬಾಗಿಲು ಮುಚ್ಚುತ್ತಾನೆ. ಚಾರ್ಲಿ ಮಲಗಿದಲ್ಲಿಂದಲೇ ಸಪ್ಪೆ ಮುಖ ಮಾಡಿ ಮಲಗಿದ್ದಾಳೆ.

CUT TO

INT. DAY. ROAD TO FACTORY

* ಧರ್ಮ bullet ಚಲಾಯಿಸುತ್ತಿದ್ದಾನೆ.

MANJU (O.S)
ಅಲ್ ಬಾ ಇಲ್ ಬಾ ಅಂತೀರ್ತಿಯಲ್ಲಾ.. ಏನ್ ಅಲ್ಲಿ ಇಲ್ಲಿ
ಬರೋಕೆ ನಾನೇನ್ cag ಕೆಟ್ನ?

* ಧರ್ಮ ರಸ್ತೆ ಬದಿ ನೋಡಿದಾಗ ಮಂಜು ಗೂಂಡಾಗಳ ಜೊತೆಗೆ ಕೃಪಾಕರ್ ನ collar ಹಿಡಿದು ಬೆದರಿಸುತ್ತಿದ್ದಾನೆ.

MANJU
ಮುಖ ಮೂತಿ ಒಡ್ದು ಹಾಕ್ತೀನಿ ಹುಷಾರು..
(ಗೂಂಡಾಗಳನ್ನು ನೋಡಿ)
ಏಯ್ ಬರೋರ್ಲಿ ಮುಂದೆ..ಏನ್ ಅಂದ್ಕೊಂಡಿದ್ದೀಯ? ಏನ್
ಅಂದ್ಕೊಂಡಿದ್ದೀಯ ಅಂತ ನೀನು?

* ಧರ್ಮ ಆ ದೃಶ್ಯವನ್ನು ನೋಡುತ್ತಾ ಹೋಗುತ್ತಿರುವಾಗ ಮುಂದಿನಿಂದ ಕಾರ್ ಇನ್ನೇನು ಗುದ್ದುವಂತೆ pass ಆಗುತ್ತದೆ. ಧರ್ಮ ತಕ್ಷಣ break ಹಾಕುತ್ತಾನೆ.

CUT TO

INT. DAY. FACTORY CABIN

* ಧರ್ಮ factory cabin ನಲ್ಲಿ ಕುಳಿತಿದ್ದಾನೆ. Murali sir ಧರ್ಮನಿಗೆ file ತೋರಿಸುತ್ತಾ,

MURALI SIR
ಧರ್ಮ, ನಿನ್ department ದು promotion list ಇದೆ..
ಯಾರು eligible ಅಂತ ಹೇಳು.

* ಎಂದು ಹೇಳಿ file ಧರ್ಮನ ಮುಂದೆ ಇಟ್ಟು ಅಲ್ಲಿಂದ ಹೊರಡುತ್ತಾರೆ.

DHARMA
ಸರಿ ಸರ್..

* ಧರ್ಮ pen ತೆಗೆದುಕೊಂಡು list ನೋಡುತ್ತಿದ್ದಾನೆ. ಹೆಸರುಗಳ ಪಟ್ಟಿಯಲ್ಲಿ ಕೊನೆಗೆ ಕೃಪಾಕರ್ ನ ಹೆಸರು ಕಾಣಿಸುತ್ತಿದೆ.

CUT TO

INT. DAY. FACTORY CORRIDOR

* Corridor ನಲ್ಲಿ ನಿಂತಿರುವ ಮುರಳಿ ಸರ್ ಕೆಲಸಗಾರರನ್ನು ನೋಡಿ,

MURALI SIR
Load karne keliye main boltha hun..ok?

* ಧರ್ಮ ಮುರಳಿ ಸರ್ ಹತ್ತಿರ ಬಂದು file ಕೊಡುತ್ತಾನೆ,

DHARMA
ಸರ್.

MURALI SIR
ನೋಡಿದ್ಯಾ?

* ಧರ್ಮ ತಲೆಯಾಡಿಸಿ ಹೊರಡುತ್ತಾನೆ. ಮುರಳಿ ಸರ್ file ತೆಗೆದು ನೋಡಿದರೆ listನಲ್ಲಿ Kripakar ಹೆಸರಿಗೆ tick ಮಾಡಿರುವುದು ಕಾಣಿಸುತ್ತದೆ. ಮುರಳಿ ಸರ್ ಆಶ್ಚರ್ಯದಿಂದ ಧರ್ಮನನ್ನು ನೋಡುತ್ತಾರೆ.

DHARMA (V.O)
Nothing is permanent in this wicked world.

CUT TO

EXT. DAY. FACTORY

DHARMA (V.O) CONT'D
Not even our troubles. ಚಾರ್ಲಿ ಚಾಪ್ಲಿನ್ ಸರಿಯಾಗೇ ಹೇಳಿದ್ದಾನೆ.

* ಧರ್ಮ Factory ಹೊರಗಡೆ bulletನಲ್ಲಿ ಹೋಗುತ್ತಿದ್ದಾನೆ. Factory ಕಾರ್ಮಿಕರು ಗುಂಪಿನಲ್ಲಿ ನಿಂತು ಕೃಪಾಕರ್ ಗೆ  ಅಭಿನಂದಿಸುತ್ತಿದ್ದಾರೆ.

RAJU
ಏಯ್ ಕೃಪಾಕರ್ ಅಣ್ಣ, ಕೊನೆಗೂ promotion ಸಿಕ್ತು. Congratulations..Party ಯಾವಾಗ?

CUT TO

INT. EVENING. DHARMA'S HOUSE

DHARMA (V.O) CONT'D
ಜೀವನ ಇಷ್ಟೇ ಅಂತ ಅಂದ್ಕೊಂಡಿದ್ದೆ. ಆದ್ರೆ ಚಾರ್ಲಿ ನನ್ ನಂಬಿಕೇನ ಸುಳ್ಳು ಮಾಡಿದ್ನು.

* ಧರ್ಮ ಕೈಯಲ್ಲಿ helmet ಹಾಗೂ paint boxes ಹಿಡಿದುಕೊಂಡು ಮನೆ ಬಾಗಿಲು

ತೆರೆಯುತ್ತಾನೆ. ಚಾರ್ಲಿ ಎಲ್ಲೂ ಕಾಣಿಸುತ್ತಿಲ್ಲ. Kitchen ಕಡೆ ನೋಡಿದಾಗ ಚಾರ್ಲಿ ಮಲಗಿದ್ದಾನೆ. ಧರ್ಮ paint boxesನ ಅಲ್ಲೇ ಪಕ್ಕದಲ್ಲಿಟ್ಟು,

DHARMA
ಯಾಕೆ? ಇನ್ನೂ ಸಿಟ್ಟು ಇಳಿದಿಲ್ವಾ?

* ಎಂದು ಹೇಳಿ ಮುಂದೆ ಬಂದು helmetನ table ಮೇಲಿಡುತ್ತಾನೆ. ಮುಂದೆ ನಡೆದುಕೊಂಡು ಬರುತ್ತಾ,

DHARMA
ಮನೆ ಎಲ್ಲಾ paw prints ಮಾಡಿಟ್ಟಿದ್ದೀಯಾ..ಒಂದೆರಡು ದಿನ ಆದ್ರಿಕಾ ಮನೇಲಿರು..

* ಎಂದು ಹೇಳಿ 3 seater sofa ಮೇಲೆ ಕುಳಿತು shoe lace ಕಟ್ಟುತ್ತಾ,

DHARMA
ನಂಗೆ ನಾಳೆಯಿಂದ painting ಶುರು ಮಾಡ್ಬೇಕು.
(ಚಾರ್ಲಿಯ food bowl ಇರುವ ಜಾಗದ ಕಡೆ ನೋಡಿ)
ಏಯ್, ಯಾಕೆ ಏನೂ ತಿಂದೇ ಇಲ್ಲ? Oh! ಹೌದಾ?

* ಎಂದು ಹೇಳಿ table ಮೇಲಿಟ್ಟಿದ್ದ ಚಾರ್ಲಿ helmet ತೆಗೆದುಕೊಂಡು ಬಂದು ಚಾರ್ಲಿಯ ಹತ್ತಿರ ಬಂದು ಕುಳಿತು ಅವಳಿಗೆ ತೋರಿಸುತ್ತಾ,

DHARMA
ಇವಾಗ?

* ಚಾರ್ಲಿ ಪ್ರತಿಕ್ರಿಯಿಸುತ್ತಿಲ್ಲ. ಧರ್ಮನ ಮುಖಭಾವ ಬದಲಾಗುತ್ತದೆ.

DHARMA
ಚಾರ್ಲಿ?

* Helmet ಪಕ್ಕದಲ್ಲಿಟ್ಟು ಚಾರ್ಲಿಯ ಕೈ ಮೇಲೆತ್ತಿ ನೋಡಿದಾಗ ಕೆಳಗಡೆ ವಾಂತಿ ಕಾಣಿಸುತ್ತದೆ. ಧರ್ಮ ಗಾಬರಿಯಿಂದ ನೋಡುತ್ತಿದ್ದಾನೆ.

CUT TO

INT. EVENING. VET CLINIC

* ಧರ್ಮ Doctor chamber ಒಳಗಡೆ ಕುಳಿತು table ಮೇಲಿರುವ ಗಾಜಿನ ballಅನ್ನು ತಿರಿಗಿಸುತ್ತಿದ್ದಾನೆ. ಧರ್ಮ ಪಕ್ಕಕ್ಕೆ ತಿರುಗಿ ನೋಡುತ್ತಾನೆ. ಡಾಕ್ಟರ್ ಅಶ್ವಿನ್ ಚಾರ್ಲಿಯ x-ray ಪರೀಕ್ಷಿಸುತ್ತಿದ್ದಾರೆ. ನಂತರ reports ತೆಗೆದುಕೊಂಡು chamber ಒಳಗಡೆ ಬರುತ್ತಾರೆ. ಧರ್ಮ ಅವರನ್ನು ನೋಡಿ,

DHARMA
Sorry Doctor. ಅದು.. By mistake ball ನ Charlie ಹತ್ರಾನೆ ಬಿಟ್ ಹೋಗಿದ್ದೆ..ಇನ್ಮುಂದೆ ಈ ಥರ ಆಗ್ದೇ ಇರೋ ಥರ ನೋಡ್ಕೊಳ್ತೀನಿ.

* ಡಾಕ್ಟರ್ ಅಶ್ವಿನ್ ಧರ್ಮನ ಮುಂದೆ ಕುಳಿತುಕೊಂಡಿದ್ದಾರೆ. ಧರ್ಮನನ್ನು ನೋಡಿ,

DOCTOR ASHWIN
Dharma. ಇದು ball ನುಂಗಿ ಆದದ್ದಲ್ಲ..

DHARMA
Oh! ಮತ್ತೆ?

DOCTOR ASHWIN
She has Hemangiosarcoma...

DHARMA
ತೊಂದ್ರೆ ಏನಿಲ್ವಲ್ಲ Doctor? Medicine ಏನಿದ್ರೂ ಬರ್ಕೊಡಿ.

DOCTOR ASHWIN
ಕೊಡುವ. ಆದ್ರೆ ಅಷ್ಟು ಸಾಲುದಿಲ್ಲ...

DHARMA
Operation ಏನಾದ್ರೂ ಮಾಡ್ಬೇಕಾಗುತ್ತಾ?

DOCTOR ASHWIN
Dharma, ಅವಳಿಗೆ cancer ಉಂಟೂ.

* ಧರ್ಮನಿಗೆ ಆಘಾತವಾಗುತ್ತದೆ.

DOCTOR ASHWIN
ಅದೂ.. ಅವಳ veins ಅಲ್ಲಿ ಸಣ್ಣ ಸಣ್ಣ clots ಉಂಟು. ನಂಗೆ ಅವಳನ್ನು ನೋಡಿದ ತಕ್ಷಣ ಅನುಮಾನ ಬಂತು. Blood tests, CT scan ಎಲ್ಲಾ ಮಾಡಿದೆ.

* ಎಂದು ಹೇಳಿ reports ಅನ್ನ ಧರ್ಮನಿಗೆ ಕೊಡುತ್ತಾರೆ.

DOCTOR ASHWIN (CONT'D)
Cancer ಇರೋದು confirm.

DHARMA
(ತೊದಲು ಧ್ವನಿಯಿಂದ)
ಆದ್ರೆ ನಾನವಳನ್ನ ಚನ್ನಾಗ್ ನೋಡ್ಕೊಂಡಿದ್ದೀನಲ್ಲ Doctor. Cancer ಹೇಗ್ ಬರುತ್ತೆ? ನೀವ್ ಹೇಳಿದ್ ಹಾಗೆ time timeಗೆ vaccination ಎಲ್ಲ ಕೊಡ್ಸಿದ್ದೀನಲ್ಲ?

DOCTOR ASHWIN
ನೀನ್ ಚಂದ ನೋಡಿಕೊಂಡಿದ್ದೀಯ ಧರ್ಮ. ನಿಂದಲ್ಲ .. ನಂಗ್ ಅವಳನ್ನ ನೋಡಿದಾಗ ಅನಿಸ್ತದೆ ಇದು genetic mutation ಅಂತ.. ಕೆಲವರು ಎಂತ ಮಾಡ್ತಾರಂದ್ರೆ ಒಂದೇ ತಾಯಿಯ ಮರಿಗಳನ್ನ breed ಮಾಡ್ಸಿ ಅದಕ್ಕೆ ಮರಿ ಮಾಡಿಸ್ತಾರೆ. ಆಗ ಈ ಥರ ಆಗೋ chance ಜಾಸ್ತಿ... ಇದಕ್ಕೆ In Breeding ಅಂತ ಕರೀತಾರೆ.. ಕೆಲವು breeders ದುಡ್ಡಿಗೋಸ್ಕರ ಎಂತಸಾ ಮಾಡಿ ಬಿಡ್ತಾರೆ. ಎಂತ ಮಾಡೂದು??

DHARMA
ನಂಗಿದು ರಸ್ತೇಲಿ ಸಿಕ್ಕಿದ್ದು Doctor. ನಾನು ಯಾವ breeder ಇಂದ ತಗೊಂದಿದ್ದಲ್ಲ.

DOCTOR ASHWIN
ನೀ ತಗೊಳ್ಳಿಲ್ಲ ನಿಜ ಮಾರಾಯ. ಆದ್ರೆ ಎಲ್ಲಿಂದ್ಲೋ ಕಳೆದು ಹೋಗಿ ಬಂದು ನಿಂಗೆ ಸಿಕ್ಕಿದ್ದಲ್ಲ?? ಇಲ್ಲದಿದ್ರೆ ಒಂದು labrador ಜಾತಿ ನಾಯಿ. ರೋಡಲ್ಲಿ ಸಿಗ್ತದಾ?

* ಧರ್ಮ ಉತ್ತರಿಸುತ್ತಿಲ್ಲ. ಡಾಕ್ಟರ್ ಅಶ್ವಿನ್ ಮದ್ದಿನ ಚೀಟಿ ಬರೆಯುತ್ತಾ,

DOCTOR ASHWIN
ಔಷಧಿ ಎಲ್ಲ ಬರ್ದು ಕೊಡ್ತೇನೆ.. ಚಂದ ನೋಡಿಕೋ ಆಯ್ತಾ?

* Strecher ಮೇಲೆ ಮಲಗಿರುವ ಚಾರ್ಲಿ ಧರ್ಮನನ್ನು ನೋಡುತ್ತಿದ್ದಾಳೆ. ಧರ್ಮ ಸ್ತಬ್ದನಾಗಿ ಚಾರ್ಲಿಯನ್ನು ನೋಡುತ್ತಿದ್ದಾನೆ.

DOCTOR ASHWIN CONT'D (O.S)
ಗೊತ್ತಾಗ್ತದೆ ನಿಂಗೆ ತುಂಬಾ ನೋವಾಗ್ತದೆ ಅಂತ. ಆದ್ರೆ ಅವಳುಸಾ ಅಷ್ಟೇ ನೋವಲ್ಲಿದ್ದಾಳೆ. ಧರ್ಮ.. ಏಯ್ ಧರ್ಮ

* ಚಾರ್ಲಿಯನ್ನೇ ನೋಡುತ್ತಿದ್ದ ಧರ್ಮ ತಿರುಗಿ ನೋಡುತ್ತಾನೆ.

DHARMA
ಇನ್ನು ಎಷ್ಟ time ಇದೆ Doctor?

DOCTOR ASHWIN (O.S)
ಹೇಳ್ಳಿಕಾಗುದಿಲ್ಲ ಧರ್ಮ.. Final stage ನಲ್ಲಿ ಇದ್ದಾಳೆ.

* ಧರ್ಮ ಅಸಹಾಯಕನಾಗಿ ನೋಡುತ್ತಿದ್ದಾನೆ.

CUT TO

EXT. EVENING. ROAD

* ಧರ್ಮ bullet ಓಡಿಸುತ್ತಿದ್ದಾನೆ. ಚಾರ್ಲಿ sidecarನಲ್ಲಿ ಕುಳಿತಿದ್ದಾಳೆ.

DOCTOR ASHWIN (O.S)
Chemotherapy ಮಾಡಿಸಬಹುದು.. ಆದ್ರೆ ಇವಳನ್ನ ಎರಡು ವರ್ಷ ನರಳಾಡಿಸಿ ಬದುಕ್ಸೋದಕ್ಕಿಂತ, ಇರೋವಷ್ಟು ದಿವಸ ಖುಷಿಯಲ್ಲಿ ನೋಡಿಕೊಳ್ಳುದೆ ಒಳ್ಳೇದು ಅಂತ ಅನ್ಸುದಿಲ್ವ ನಿಂಗೆ?

* ಧರ್ಮ ಪಕ್ಕಕ್ಕೆ ತಿರುಗಿ ಚಾರ್ಲಿಯನ್ನು ನೋಡುತ್ತಾನೆ.

CUT TO

INT. EVENING. DHARMA'S HOUSE

CUT AWAY SHOTS

* ಧರ್ಮ ಮನೆಯೊಳಗೆ ಪುಸ್ತಕಗಳನ್ನು ಎಳೆದು ಹಾಕುತ್ತಿದ್ದಾನೆ.

* Table ಮೇಲಿದ್ದ ಪೆಟ್ಟಿಗೆ ತೆರೆದು ಹುಡುಕುತ್ತಾನೆ. ಏನೂ ಸಿಗುವುದಿಲ್ಲ.

* Godrej ಮೇಲೆ ಹುಡುಕಾಡಿಗಾಗ match box ಸಿಗುತ್ತದೆ.

* Kitchen shelf ಮೇಲೆ ಹುಡುಕಾಡಿದಾಗ ಒಂದು cigarette ಸಿಗುತ್ತದೆ. ಅದನ್ನು ತೆಗೆದುಕೊಂಡು ಬಂದು ಮಂಚದ ಮೇಲೆ ಕುಳಿತುಕೊಳ್ಳುತ್ತಾನೆ.

DHARMA (V.O)
ಮನ್ಸಿನ್ ಗಾಯಕ್ಕೆ ಖುಷಿನೇ ಮದ್ದು ಅಂತಾರೆ. ನಂಗಾಗಿರೋ ಗಾಯಕ್ಕೆ ಚಾರ್ಲಿ ಅನ್ನೋ ಖುಷಿ ನನ್ನನ್ನು ಹುಡುಕ್ಕೊಂಡು ಬಂತು.

* ಧರ್ಮ Cigarette ಹಚ್ಚಲು ಹೊರಟು ಕಣ್ಣೀರು ಒರೆಸುತ್ತಾನೆ.

DHARMA (V.O) CONT'D
ಆದ್ರೆ ಅವ್ಳಿಗ್ ಆಗಿರೋ ಗಾಯಕ್ಕೆ ಖುಷೀನ ಹುಡುಕ್ಕೊಂಡು

ನಾನೆಲ್ಲಿ ಹೋಗ್ಲಿ?

* ಧರ್ಮ Cigarette ಹಚ್ಚಲು ಕಡ್ಡಿ ಗೀರುತ್ತಿದ್ದಾನೆ. ಹಿನ್ನಲೆಯಲ್ಲಿ ಚಾರ್ಲಿ ಬೊಗಳುತ್ತಿದ್ದಾಳೆ. ಧರ್ಮ Cigarette ಹಚ್ಚುವುದನ್ನು ನಿಲ್ಲಿಸಿ ತಿರುಗಿ ನೋಡಿದಾಗ, ಚಾರ್ಲಿ TV ನೋಡುತ್ತಾ ಜಿಗಿಯುತ್ತಿದ್ದಾಳೆ. TV ಯಲ್ಲಿ ಚಾರ್ಲಿ ಚಾಪ್ಲಿನ್ ನ GOLD RUSH ಚಿತ್ರದ ದೃಶ್ಯ ಪ್ರಸಾರವಾಗುತ್ತಿದೆ. ದೃಶ್ಯದಲ್ಲಿ ಚಾರ್ಲಿ ಚಾಪ್ಲಿನ್ snow ಮೇಲೆ ಆಟವಾಡುತ್ತಿದ್ದಾನೆ. ಧರ್ಮನಿಗೆ ಆಶ್ಚರ್ಯದಿಂದ ನೋಡುತ್ತಿದ್ದಾನೆ. ಚಾರ್ಲಿ snow ನೋಡಿ ಬೊಗಳುತ್ತಾ ಜಿಗಿಯುತ್ತಿದ್ದಾಳೆ. ಧರ್ಮ cigarette ಬಾಯಿಂದ ತೆಗೆದು,

DHARMA

Snow

INTERVAL

CUT TO

INT. DAY. DHARMA'S HOUSE

* ಧರ್ಮ fridge ಬಾಗಿಲು ತೆರೆಯುತ್ತಾನೆ. ಒಳಗಿಟ್ಟಿದ್ದ Beer bottle ಕೆಳಗೆ ಬಿದ್ದು ಬಾಟಲಿ ಒಡೆಯುತ್ತದೆ.

* ಧರ್ಮ dining table ಪಕ್ಕದಲ್ಲಿ ಕುಳಿತಿದ್ದಾನೆ.

DHARMA (V.O)

ಪ್ರತೀ ಸರ್ತಿ TV ನೋಡ್ಕೊಂಡು ಕುಣ್ದಾಗ ice cream ಗೆ ಅಂದ್ಕೊಂಡಿದ್ದೆ. Snow

* ಚಾರ್ಲಿ helmet ಕಚ್ಚಿಕೊಂಡು ಬಂದು ಧರ್ಮನ ಮುಂದೆ ಕುಳಿತುಕೊಳ್ಳುತ್ತಾಳೆ.ಧರ್ಮ ಬೇಸರದಿಂದ ಚಾರ್ಲಿಯನ್ನು ನೋಡಿ ಕುಳಿತಲ್ಲಿಂದ ಎದ್ದು ಹೋಗುತ್ತಾನೆ. ಚಾರ್ಲಿ ತಿರುಗಿ ನೋಡುತ್ತಾಳೆ.

BEELKODUGE SONG STARTS

* ಚಾರ್ಲಿ helmet ಕಚ್ಚಿಕೊಂಡು storeroom ಹತ್ತಿರ ಬಂದು ನಿಲ್ಲುತ್ತಾಳೆ.

CUT TO

INT. DAY. DHARMA'S HOUSE (BEELKODUGE SONG)

* ಧರ್ಮ storeroom ಒಳಗಡೆ wardrobe ನಿಂದ ಒಂದು photo frame ಕೈಗೆತ್ತಿಕೊಂಡು ನೋಡುತ್ತಿದ್ದಾನೆ. ಧರ್ಮನನ್ನು ನೋಡಿದ ಚಾರ್ಲಿ ಬಾಯಲ್ಲಿರುವ helmet ಕೆಳಗಿಡುತ್ತಾಳೆ. Photo ನಲ್ಲಿ ಧರ್ಮ ತನ್ನ ಮನೆಯವರ ಭಾವಚಿತ್ರ ನೋಡುತ್ತಿದ್ದಾನೆ. ಚಾರ್ಲಿ helmetನ ಮುಂದೆ ತಳ್ಳುತ್ತಾಳೆ. ಚಾರ್ಲಿಯನ್ನು ಗಮನಿಸಿದ ಧರ್ಮ ಕಣ್ಣೀರು ಒರೆಸಿ ಮುಗುಳ್ನಗುತ್ತಾ,

DHARMA

ಹೊರಡೋಣ ಚಾರ್ಲಿ.

* ಆ ಮಾತನ್ನು ಕೇಳಿದ ತಕ್ಷಣ ಚಾರ್ಲಿ ಬೊಗಳುತ್ತಾ ಖುಷಿಯಿಂದ ಜಿಗಿಯುತ್ತಾಳೆ. ಧರ್ಮ ಖುಷಿಯಿಂದ ನೋಡುತ್ತಿದ್ದಾನೆ.

CUT TO

INT. NIGHT. DHARMA'S HOUSE (BEELKODUGE SONG)

* ಧರ್ಮ dining table ಹತ್ತಿರ ಕುಳಿತು ಒಂದೊಂದೇ ವಸ್ತುಗಳನ್ನು bag ಗೆ ತುಂಬಿಸುತ್ತಿದ್ದಾನೆ.

* ಚಾರ್ಲಿ ಒಂದೊಂದೇ ವಸ್ತುಗಳನ್ನು(Teddybear, food bowl etc) ಧರ್ಮನ ಹತ್ತಿರ ತಂದಿಟ್ಟು, ಕೊನೆಗೆ medicine kit ಕಚ್ಚಿಕೊಂಡು ಬಂದು ಧರ್ಮನ ಮುಂದೆ ಕುಳಿತುಕೊಳ್ಳುತ್ತಾಳೆ. ಧರ್ಮ ತುಂಬಿಸುವುದನ್ನು ನಿಲ್ಲಿಸಿ ಚಾರ್ಲಿಯನ್ನು ನೋಡುತ್ತಿದ್ದಾನೆ.

CUT TO

EXT. NIGHT. DHARMA'S HOUSE (BEELKODUGE SONG)

* ಧರ್ಮ Side carಗೆ luggage career weld ಮಾಡುತ್ತಾ Shed ಒಳಗಡೆ ನೋಡಿದಾಗ ಅಲ್ಲಿರುವ walking stick ಕಾಣಿಸುತ್ತದೆ. ಧರ್ಮ welding glass ತೆಗೆದು ಅದನ್ನು ನೋಡುತ್ತಿದ್ದಾನೆ.

CUT TO

JUMPCUTS:

* ಧರ್ಮ walking stick ತಯಾರಿಸಲು weld ಮಾಡುತ್ತಿದ್ದಾನೆ.

* ಧರ್ಮ walking stick ಗೆ paint ಮಾಡುತ್ತಿದ್ದಾನೆ.

ಧರ್ಮ walking stick ಹಿಡಿದುಕೊಂಡು ಯೋಚಿಸುತ್ತಾ ಕುಳಿತಿದ್ದಾನೆ.

CUT TO

INT. NIGHT. DHARMA'S HOUSE (BEELKODUGE SONG)

* Paint ಡಬ್ಬಗಳು ಅದೇ ಜಾಗದಲ್ಲಿವೆ. ಧರ್ಮ ಮಂಚದಲ್ಲಿ ಮಲಗಿದ್ದಾನೆ. ಚಾರ್ಲಿ ಧರ್ಮನ ಎದೆ ಮೇಲೆ ತಲೆಯಿಟ್ಟು ಮಲಗಿದ್ದಾಳೆ. ಧರ್ಮ ಅವನ್ನು ನೋಡುತ್ತಿದ್ದಾನೆ.

CUT TO

INT.DAY. DHARMA'S HOUSE (BEELKODUGE SONG)

* ಧರ್ಮ bag ಧರಿಸಿ ಹೊರಡಲು ಸಿದ್ದನಾಗಿ ನಿಂತು ಗೋಡೆಯ ಮೇಲಿರುವ ಚಾರ್ಲಿ ಚಾಪ್ಲಿನ್ artwork ನೋಡುತ್ತಿದ್ದಾನೆ.

CUT TO

EXT. DAY. DHARMA'S HOUSE (BEELKODUGE SONG)

* ಧರ್ಮ ಮನೆ ಹೊರಗಡೆ ಬಂದು ಬಾಗಿಲು lock ಮಾಡಿ bikeshed ಬಳಿ ನೋಡಿದಾಗ ಚಾರ್ಲಿ ಹಾಗೂ ಆದ್ರಿಕಾ bullet ಹತ್ತಿರ ನಿಂತಿದ್ದಾರೆ. ಚಾರ್ಲಿ sidecarನಲ್ಲಿ ಕುಳಿತು ಆದ್ರಿಕಾಳ ಮುಖ ನೆಕ್ಕುತ್ತಿದ್ದಾಳೆ. ಧರ್ಮ ಅವರಿಬ್ಬರನ್ನು ನೋಡುತ್ತಿದ್ದಾನೆ. ಧರ್ಮನನ್ನು ನೋಡಿದ ತಕ್ಷಣ ಆದ್ರಿಕಾ ಕೈಯಲ್ಲಿದ್ದ teddybear ಅಲ್ಲೇ ಬಿಟ್ಟು ಓಡಿ ಬಂದು ಧರ್ಮನನ್ನು ಅಪ್ಪಿಕೊಳ್ಳುತ್ತಾಳೆ.

ADRIKA
ಅಂಕಲ್.. ನೀವಿಬ್ರು ಯಾವಾಗ ಬರ್ತೀರ?

DHARMA
ಆದಷ್ಟು ಬೇಗ ಬರ್ತೀವಿ..

ADRIKA
Hmm..ಬೇಗ ಬನ್ನಿ.. ನೀವಿಲ್ಲ ಅಂದ್ರೆ ನಂಗೆ ತುಂಬಾ ಬೇಜಾರಾಗುತ್ತೆ. ಆಮೇಲೆ ಚಾರ್ಲಿಗೆ ನೀರಲ್ಲಿ ಆಟ ಆಡೋಕೆ ಬಿಡ್ಬೇಡಿ.. ಅವ್ಳಿಗೆ cold ಆಗ್ಬಿಡುತ್ತೆ.

* ಧರ್ಮ ಏನೂ ಉತ್ತರಿಸದೆ ಚಾರ್ಲಿಯನ್ನು ನೋಡುತ್ತಿದ್ದಾನೆ. ಚಾರ್ಲಿ sidecarನಲ್ಲಿ ಕುಳಿತು ಧರ್ಮನನ್ನು ನೋಡುತ್ತಿದ್ದಾಳೆ.

ADRIKA
ಅಂಕಲ್, ನನ್ school fancy dress ಮುಂಚೆ ಚಾರ್ಲಿನ ವಾಪಸ್ ಕರ್ಕೊಂಡ್ ಬನ್ನಿ. ಈ ಸತ್ತಿ ಚಾಪ್ಲಿನ್ ವೇಷ ಹಾಕ್ತಿದ್ದೀನಿ. ಚಾರ್ಲಿಗೆ ಹೇಳ್ಬೇಡಿ..
(ಗುಟ್ಟಾಗಿ)
Surprise ಕೊಡೋಣ.

* ಧರ್ಮ ಕಷ್ಟಪಟ್ಟು ಮುಗುಳ್ನಗುತ್ತಾನೆ.

CUT TO

EXT. DAY. COLONY (BEELKODUGE SONG)

* ಧರ್ಮ ಹಾಗೂ ಚಾರ್ಲಿ bulletನಲ್ಲಿ ಮನೆ ಹೊರಗಡೆ ಬರುತ್ತಾರೆ. ಚಾರ್ಲಿ sidecarನಲ್ಲಿ ಕುಳಿತಿದ್ದಾಳೆ. ಆದ್ರಿಕಾ ಧರ್ಮನ ಮನೆ gate ಮುಂದೆ ನಿಂತಿದ್ದಾಳೆ. ಆದ್ರಿಕಾ ಮುಂದೆ ನೋಡುತ್ತಾ

ADRIKA
Uncle..

* ಧರ್ಮ ಗಾಡಿ ನಿಲ್ಲಿಸಿ ಹಿಂದೆ ತಿರುಗಿ ನೋಡುತ್ತಾನೆ.

ADRIKA
ಅವತ್ತು ನಿಜವಾಗ್ಲೂ ಚಾರ್ಲಿ thanks ಮಾಡಿತ್ತು Uncle.

* ಧರ್ಮ ತಲೆಯಾಡಿಸುತ್ತಾನೆ. ಆದ್ರಿಕಾ ಚಾರ್ಲಿಯನ್ನು ನೋಡುತ್ತಾಳೆ. ಧರ್ಮ bullet ಹೊರಡಿಸಿ ಮುಂದೆ ಹೋಗುತ್ತಾನೆ. ಚಾರ್ಲಿ ಆದ್ರಿಕಾಳತ್ತ ನೋಡುತ್ತಿದ್ದಾಳೆ. ಆದ್ರಿಕಾ ಅಳುತ್ತಿದ್ದಾಳೆ.

CUT TO

INT/EXT. DAY. AJJI SHOP (BEELKODUGE SONG)

* ಧರ್ಮ ಹಾಗೂ ಚಾರ್ಲಿ ಅಜ್ಜಿ ಅಂಗಡಿಗೆ ತಲುಪುತ್ತಾರೆ. ಧರ್ಮ bulletನಿಂದ ಇಳಿದು walking stick ಕೈಗೆತ್ತಿಕೊಂಡು ಅಜ್ಜಿ ಅಂಗಡಿಗೆ ಬರುತ್ತಾನೆ. ಅಜ್ಜ ಹಾಗೂ ಅಜ್ಜಿ ಮಾತನಾಡಿಕೊಳ್ಳುತ್ತಾ,

AJJA
ಈಗ್ ಸರಿ ಆಯ್ತಲ್ವಾ?

AJJI
ಅದು ಹಂಗಲ್ಲ. ಇಲ್ ಕೊಡಿ

AJJA
ಏಯ್ ಸುಮ್ನಿರೇ. ನಿಂಗೇನ್ ಗೊತ್ತು? ಉಪಯೋಗ್ಸೋನು ನಾನು. ನಂಗೊತ್ತು

* ಧರ್ಮ ಮುಂದೆ ನೋಡಿದಾಗ ಅಜ್ಜ ಹೊಸ walking stick ಹಿಡಿದು ನಿಂತಿದ್ದಾರೆ. ಧರ್ಮನಿಗೆ ನಿರಾಶೆಯಿಂದ ನೋಡುತ್ತಿದ್ದಾನೆ.

AJJI
ಚನ್ನಾಗಿದೆ.. ಆಹಾಹಾ!

AJJI
ನೋಡಿ.. ಆ ಕಾಲು ಚನ್ನಾಗ್ ಊರ್ಬೇಕು.

AJJA

ಎಲ್ಲಾ ಊರಿದೆ

*ಚಾರ್ಲಿ ಬೊಗಳುತ್ತಾಳೆ. ಅಜ್ಜಿ ಮುಂದೆ ನೋಡಿ,

AJJI (O.S)

ಒಹ್ ಮಗಾ. ಯಾವಾಗ್ ಬಂದೆ?

* ಧರ್ಮ ತನ್ನ ಕೈಯಲ್ಲಿದ್ದ walking stick ನ ಬೆನ್ನ ಹಿಂದೆ ಅಡಗಿಸುತ್ತಾನೆ.

AJJI

(Walking stickನತ್ತ ಕೈ ತೋರಿಸುತ್ತಾ)

ಹೊಸಾದು.. ಪೇಟೆಯಿಂದ ತಂದಿದ್ದು. ಚನ್ನಾಗಿದ್ಯಾ?

* ಅಜ್ಜ walking stick ಎತ್ತಿ ಹಿಡಿದು ತೋರಿಸುತ್ತಿದ್ದಾರೆ. ಧರ್ಮ ಮುಗುಳ್ನಗುತ್ತಾ ತಲೆಯಾಡಿಸುತ್ತಾನೆ.

CUT TO

EXT. DAY. ROAD (BEELKODUGE SONG)

CLOSE SHOT: BULLET ಮುಂದೆ ಚಲಿಸುತ್ತಿದೆ. ಗಾಡಿ ಬದಿಯಲ್ಲಿ WALKING STICK ಕಾಣಿಸುತ್ತಿದೆ.

* ಧರ್ಮ ಗಾಡಿ ಚಲಾಯಿಸುತ್ತಾ ಎಡ ಬದಿಗೆ ತಿರುಗಿ ನೋಡುತ್ತಾನೆ. ಚಾರ್ಲಿ SIDECAR ನಲ್ಲಿ ಕುಳಿತಿದ್ದಾಳೆ. BULLET HANDLE ನಲ್ಲಿ  ಇಡ್ಲಿ PACKET ಕಾಣಿಸುತ್ತಿದೆ.

CUT TO

* HELICAM SHOT: ದೂರದಲ್ಲಿ ಧರ್ಮನ BULLET ಪ್ರಯಾಣಿಸುವುದು ಕಾಣಿಸುತ್ತದೆ.

CUT TO

EXT. EVENING. TEA SHOP (BEELKODUGE SONG)

* ಧರ್ಮ ಒಂದು TEA ಅಂಗಡಿಯ ಮುಂದೆ ಗಾಡಿ ನಿಲ್ಲಿಸುತ್ತಾನೆ.

* ಧರ್ಮ bench ಮೇಲೆ ಕೈಯಲ್ಲಿ ಇಡ್ಲಿ packet ಬಿಡಿಸಿ ಯೋಚಿಸುತ್ತಾ ಕುಳಿತಿದ್ದಾನೆ. ಪಕ್ಕದಲ್ಲಿ ಕುಳಿತಿರುವ ಚಾರ್ಲಿ food bowlನಲ್ಲಿ ಇಡ್ಲಿ ತಿನ್ನುತ್ತಿದ್ದಾಳೆ. ಧರ್ಮ ಚಾರ್ಲಿಯನ್ನು ನೋಡುತ್ತಾನೆ.

CUT TO

EXT. LATE EVENING. ROAD (BEELKODUGE SONG)

* ಧರ್ಮ ಗಾಡಿ ಓಡಿಸುತ್ತಿದ್ದಾನೆ. ಚಾರ್ಲಿ ಹಿಂದುಗಡೆ ಮುಖ ಮಾಡಿ ಧರ್ಮನ ಹೆಗಲ ಮೇಲೆ ತಲೆಯಿಟ್ಟು ಕುಳಿತಿದ್ದಾಳೆ.

CUT TO

EXT. NIGHT. DABA(BEELKODUGE SONG)

* ರಸ್ತೆ ಬದಿಯಲ್ಲಿರುವ ಮುಚ್ಚಿರುವ ಡಾಬಾದ ಹೊರಗಡೆ ಧರ್ಮನ ಗಾಡಿ ನಿಂತಿದೆ. ಧರ್ಮ ಡಾಬಾ ಹೊರಗಡೆ ಕುಳಿತು beer ಕುಡಿಯುತ್ತಿದ್ದಾನೆ. ಚಾರ್ಲಿ ಪಕ್ಕದಲ್ಲಿ ಮಲಗಿದ್ದಾಳೆ.

BEELKODUGE SONG SONG ENDS

CUT TO

EXT. DAY. ROADSIDE

* ಧರ್ಮ ರಸ್ತೆ ಬದಿಯಲ್ಲಿರುವ ನಳ್ಳಿ ತಿರುಗಿಸಿ ಮುಖ ತೊಳೆದುಕೊಳ್ಳುತ್ತಾನೆ.

* ಧರ್ಮ bullet ಹೊರಡಿಸುತ್ತಾನೆ. ಚಾರ್ಲಿ sidecarನಲ್ಲಿ ಕುಳಿತಿದ್ದಾಳೆ.

CUT TO

EXT. DAY. STATIONARY SHOP

* ಧರ್ಮ ಪುಸ್ತಕದ ಅಂಗಡಿಯಿಂದ Map ಖರೀದಿಸಿ ಹೊರಗಡೆ ಬರುತ್ತಾನೆ. ಪಕ್ಕದಲ್ಲಿ ಕುಳಿತಿರುವ ಚಾರ್ಲಿಯನ್ನು ನೋಡಿ,

DHARMA
ಬಾ ಚಾರ್ಲಿ..

CUT TO

EXT. DAY. BEACH/PSYCHO'S HOUSE

* ಧರ್ಮ beach ನಲ್ಲಿ bench ಮೇಲೆ ಕುಳಿತಿದ್ದಾನೆ. ಚಾರ್ಲಿ ನೀರಿನಲ್ಲಿ ಆಟವಾಡುತ್ತಿದ್ದಾಳೆ. ಧರ್ಮ ಚಾರ್ಲಿ ಕಡೆ ನೋಡಿ, map ನಲ್ಲಿ shimla ಹೆಸರಿನ ಮೇಲೆ round mark ಮಾಡುತ್ತಾನೆ. ಪಕ್ಕದಲ್ಲಿರುವ ಧರ್ಮನ phone ring ಆಗುತ್ತದೆ. Screen ಮೇಲೆ Dr Ashwin Kumar ಎಂದು ಕಾಣಿಸುತ್ತಿದೆ. ಧರ್ಮ phone receive ಮಾಡಿ,

DOCTOR ASHWIN (O.S)
ಧರ್ಮ.

DHARMA
Sir..

DOCTOR ASHWIN
ಚಾರ್ಲಿಯನ್ನ first time ಕರ್ಕೊಂಡು ಬಂದಾಗ ಅವಳು injection ನೋಡಿ ಹೆದರಿದ್ಲು. ನೆನಪುಂಟಾ?

DHARMA
ಹಾ ಹೌದು..

DOCTOR ASHWIN
ಒಂದು ನಿಮಿಷ. Whatsapp ಅಲ್ಲಿ ಒಂದು video ಕಳಿಸ್ತಾ ಇದ್ದೇನೆ. ಬೇಗ ನೋಡಲ್ಲ

* ಧರ್ಮ phone cut ಮಾಡಿ whatsapp ನೋಡುತ್ತಾನೆ. ಒಂದು video ಕಾಣಿಸುತ್ತದೆ. ಧರ್ಮ video play ಮಾಡುತ್ತಾನೆ. Videoದಲ್ಲಿ ವ್ಯಕ್ತಿಯೊಬ್ಬ (Psycho) ಕೈಯಲ್ಲಿ siringe ಹಿಡಿದು ಪುಟ್ಟ ನಾಯಿಮರಿಯನ್ನು ಹೆದರಿಸುತ್ತಿದ್ದಾನೆ.

PSYCHO
(ವಿಕೃತ ಸ್ವರದಿಂದ)
ಏಯ್. Come on keaton, Come on..

* ಧರ್ಮ ಗಾಬರಿಯಿಂದ video ನೋಡುತ್ತಿದ್ದಾನೆ.

PSYCHO (O.S)
(ಗಹಗಹಿಸಿ ನಗುತ್ತಾ)
This is going to be fun..

* Psycho siringe ಹಿಡಿದು ನಾಯಿಮರಿಯನ್ನು ಹೆದರಿಸುತ್ತಾ,

PSYCHO
Oh! Are you scared??

* FLASH CUT: ಡಾಕ್ಟರ್ ಅಶ್ವಿನ್ ಕೈಯಲ್ಲಿರುವ SIRINGE ನೋಡಿ ಚಾರ್ಲಿ ಬೊಗಳುತ್ತಾಳೆ.

DOCTOR ASHWIN
ಇದೆಂತ ಹೆದ್ರುದು ಮಾರ್ರೆ ಸೂಜಿ ಕಂಡ್ರೆ? ಇದಕ್ಕಿಂತ ಮುಂಚೆ injection ಹಾಕ್ಸಿದ್ದೀಯ?

BACK TO

* ಧರ್ಮ video ನೋಡುತ್ತಿದ್ದಾನೆ. Psycho ನಾಯಿಮರಿಯ ಕತ್ತು ಹಿಡಿದು ಹೆದರಿಸುತ್ತಾ,

PSYCHO
You naughty bitch..

* ಧರ್ಮ ನಾಯಿಮರಿಯ ಕುತ್ತಿಗೆಗೆ ಕಟ್ಟಿರುವ 'keaton' tag ಗಮನಿಸುತ್ತಾನೆ.

* Flash Cut: ಧರ್ಮ gate ಹತ್ತಿರ ಬಿದ್ದಿದ್ದ keaton tag ಕೈಗೆತ್ತಿಕೊಂಡು ನೋಡುತ್ತಿದ್ದಾನೆ.

PSYCHO (O.S)
You.. You think you can escape from me?? Huh?

BACK TO

* ಧರ್ಮ ಕಷ್ಟಪಟ್ಟು VIDEO ನೋಡುತ್ತಿದ್ದಾನೆ.

PSYCHO
NO.. Never
(ನಾಯಿಮರಿಯ ಕುತ್ತಿಗೆ ಹಿಡಿದು ಹಿಂಸಿಸುತ್ತಾ)
See what I'll do to you..

* Video ದಲ್ಲಿ ನಾಯಿಮರಿ ಕಿರುಚುತ್ತಿರುವ ಶಬ್ದ ಕೇಳಿಸುತ್ತಿದೆ. ಸಮುದ್ರದಲ್ಲಿ ಜೋರಾಗಿ ಅಲೆಗಳು ಬರುತ್ತಿವೆ.

PSYCHO (O.S)
(ವಿಚಿತ್ರ ಸ್ವರದಲ್ಲಿ ನಗಾಡುತ್ತಾ)
Now taste the cigarette..

* ಧರ್ಮನ ಕಣ್ಣುಗಳಿಂದ ನೀರು ಸುರಿಯುತ್ತಿವೆ. ಕೈಗಳು ನಡುಗುತ್ತಿವೆ. ಧರ್ಮನಿಗೆ Video ನೋಡಲು ಸಾಧ್ಯವಾಗದೆ phone off ಮಾಡುತ್ತಾನೆ. ಧರ್ಮ ಚಾರ್ಲಿಯನ್ನು ನೋಡುತ್ತಾನೆ. ಚಾರ್ಲಿ ಸಮುದ್ರ ನೋಡುತ್ತಿದ್ದಾಳೆ.

DHARMA
(ಜೋರಾದ ಸ್ವರದಲ್ಲಿ)
KEATON

* ಆ ಹೆಸರು ಕೇಳಿದ ತಕ್ಷಣ ಚಾರ್ಲಿ ತಿರುಗಿ ನೋಡುತ್ತಾಳೆ ಧರ್ಮನಿಗೆ ಚಾರ್ಲಿಯೇ keaton ಎಂದು ಅರಿವಾಗುತ್ತದೆ. ಚಾರ್ಲಿ ಅಲ್ಲಿರುವ ಬಂಡೆ ಹಿಂದೆ ಅವಿತು ಭಯದಿಂದ ನೋಡುತ್ತಿದ್ದಾಳೆ

CUT TO

EXT. DAY. VARIOUS ROADS

* 3 SHOTS IN DIFFERENT LOCATIONS: ಧರ್ಮ ಸಿಟ್ಟಿನಿಂದ BULLET ಓಡಿಸುತ್ತಿದ್ದಾನೆ.

DOCTOR (V.O)
ಇದೂ Address ಸಿಕ್ಕಿದೆ ಆಯ್ತಾ ಅವಂದು. Police station ಗೆ ನಾನೇ complaint ಕೊಡ್ತೇನೆ. ಆದ್ರೆ ಅದಕ್ಕಿಂತ ಮುಂಚೆ ಪುರ್ಸೋತ್ತಿದ್ರೆ ಒಂದು hi ಹೇಳಿ ಬಾ. ಸ್ವಲ್ಪ strong ಆಗಿ ಹೇಳಾಯ್ತಾ!

CUT TO

EXT. DAY. PSYCHO HOUSE

* ಧರ್ಮ PSYCHO ಮನೆ ಬರುತ್ತಿದ್ದಾನೆ. Sidecar ನಲ್ಲಿ ಕುಳಿತಿರುವ ಚಾರ್ಲಿ ಬೊಗಳುತ್ತಿದ್ದಾಳೆ. ಧರ್ಮ psycho ಮನೆ ಮುಂದೆ bullet ನಿಲ್ಲಿಸಿ ಕೆಳಗಿಳಿದು ಚಾರ್ಲಿಗೆ leash ಹಾಕುತ್ತಾನೆ.

* ಧರ್ಮ ಚಾರ್ಲಿಯನ್ನು ಕರೆದುಕೊಂಡು ಮನೆ gate ತರೆದು ಒಳಗಡೆ ನಡೆದುಕೊಂಡು ಹೋಗುತ್ತಾನೆ. ಅಂಗಳದ ಎರಡೂ ಬದಿಯಲ್ಲಿ ಸಾಲಾಗಿ ಇಟ್ಟಿರುವ cagesಗಳಲ್ಲಿ ನಾಯಿಗಳನ್ನು ಕೂಡಿ ಹಾಕಲಾಗಿದೆ. ನಾಯಿಗಳು ಬೊಗಳಲು ಶುರು ಮಾಡುತ್ತವೆ. ಧರ್ಮ ಅವುಗಳನ್ನು ನೋಡುತ್ತಾ ಮುಂದೆ ಹೋಗುತ್ತಾನೆ.

JUMPCUTS:

* ಧರ್ಮ Psycho ಮನೆ ಮುಂದಿರುವ ಘಂಟೆಯನ್ನು ಒಂದೆರಡು ಬಾರಿ ಹೊಡೆಯುತ್ತಾನೆ.

* ಧರ್ಮ ಚಾರ್ಲಿಯ leashಅನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತಾನೆ. ಚಾರ್ಲಿ ಮುಂದೆ ನೋಡುತ್ತಾ ಜೋರಾಗಿ ಬೊಗಳುತಿದ್ದಾಳೆ.ಚಾರ್ಲಿಯತ್ತ ನೋಡುತ್ತಿದ್ದ ಧರ್ಮ ಬಾಗಿಲು ತೆರೆದ ಶಬ್ದ ಕೇಳಿದಾಗ ಮುಂದೆ ನೋಡುತ್ತಾನೆ. PSYCHO ಬಾಗಿಲು ತೆರೆದು ಹೊಸ್ತಿಲಲ್ಲಿ ನಿಲ್ಲುತ್ತಾನೆ. ಧರ್ಮ ದಿಟ್ಟಿಸಿ ನೋಡುತ್ತಿದ್ದಾನೆ. Psychoನ ಕೈಯಲ್ಲಿ tattoo ಕಾಣಿಸುತ್ತಿದೆ. ಚಾರ್ಲಿ ಬೊಗಳುತ್ತಾಳೆ. Psycho ಚಾರ್ಲಿಯನ್ನು ನೋಡುತ್ತಾನೆ. ಚಾರ್ಲಿ ಬೊಗಳುತ್ತಾ ಒಂದು ಹೆಜ್ಜೆ ಹಿಂದಿಡುತ್ತಾಳೆ. Psycho ಧರ್ಮನನ್ನು ನೋಡಿ,

PSYCHO
Who are you?

* ಧರ್ಮ ಉತ್ತರಿಸುತ್ತಿಲ್ಲ. ಚಾರ್ಲಿ ಬೊಗಳುತ್ತಿದ್ದಾಳೆ. Psycho ಮತ್ತೆ ಚಾರ್ಲಿಯನ್ನು ನೋಡುತ್ತಾನೆ. ಚಾರ್ಲಿ ಧರ್ಮನ ಕಾಲುಗಳ ಮಧ್ಯ ಬಂದು ನಿಂತು Psycho ನ ನೋಡಿ ಬೊಗಳುತ್ತಾಳೆ. Psycho ಧರ್ಮನನ್ನು ನೋಡಿ,

PSYCHO
What do you want?

DHARMA
ಹಾರೆ ಇದ್ಯ?

PSYCHO
(ಅಸಹನೆಯಿಂದ)
What?

DHARMA
ಸಲಾಕೆ?

* ಚಾರ್ಲಿ ಒಂದೇ ಸಮನೆ ಬೊಗಳುತ್ತಿದ್ದಾಳೆ. ಧರ್ಮ ಚಾರ್ಲಿಯನ್ನು ನೋಡಿ,

DHARMA
ಏಯ್.. ನಾನ್ ಮಾತಾಡ್ತಿದ್ದೀನಲ್ಲಾ? ನೀನ್ ಸುಮ್ನಿರು.

* ಚಾರ್ಲಿ ಧರ್ಮನನ್ನು ನೋಡಿ ಬೊಗಳುತ್ತಾಳೆ.

DHARMA
(Psychoನ ನೋಡಿ)
ಇವ್ನ್ ನೆನ್ಪಿದ್ಯಾ?

* Psycho ಒಂದು ಕ್ಷಣ ಯೋಚಿಸಿದ ನಂತರ ಆತನ ಮುಖಭಾವ ಬದಲಾಗುತ್ತದೆ. ಧರ್ಮ ಮುಷ್ಠಿ ಹಿಡಿದದ್ದ leashನ ಕೆಳಗೆ ಬಿಡುತ್ತಾನೆ. ಎಡಗೈಯಲ್ಲಿ ಹಿಡಿದಿದ್ದ chain ಅನ್ನು ಬಿಗಿಗೊಳಿಸುತ್ತಾ,

DHARMA
Keaton..Syringe..

* Psycho ಭಯದಿಂದ ಧರ್ಮನನ್ನು ನೋಡುತ್ತಿದ್ದಾನೆ.

DHARMA
Cigarette.

* ಎಂದು ಹೇಳಿ ಸಿಟ್ಟಿನಿಂದ ಘಂಟೆ ಸಮೇತ chain ಎಳೆಯುತ್ತಾನೆ. ಹಿನ್ನಲೆಯಲ್ಲಿ ಘಂಟೆಯಲ್ಲಿ psycho ಗೆ ಜೋರಾಗಿ ಹೊಡೆದ ಸದ್ದು ಕೇಳಿಸುತ್ತದೆ.

FADE OUT

* ಚಾರ್ಲಿ ಮಣ್ಣು ಎಳೆದು ಹಾಕುತ್ತಿದ್ದಾಳೆ. ಪಕ್ಕದಲ್ಲಿ psychoನ ಹೂತು ಹಾಕಲಾಗಿದೆ. Psychoನ ತಲೆ ಮಾತ್ರ ಕಾಣಿಸುತ್ತಿದೆ. ಧರ್ಮ ಕಾಲಿನಲ್ಲಿ ಮಣ್ಣು ಹಾಕಿ phone ನಲ್ಲಿ ಮಾತನಾಡುತ್ತಾ,

DHARMA
Sir, ನಾನ್ ಮಾತಾಡಿದ್ನಲ್ಲ ಆಯ್ತು..ಇವ್ನಿಲ್ಲಿ safe ಆಗಿದ್ದಾನೆ. ಇನ್ನು ನೀವು ಆರಾಮಾಗಿ complaint ಕೊಡ್ಬೋದು.

* ಎಂದು ಹೇಳಿ psycho ಪಕ್ಕ ಕುಳಿತು call cut ಮಾಡುತ್ತಾನೆ. ಧರ್ಮ selfie pose ನಲ್ಲಿ ಕುಳಿತು ಚಾರ್ಲಿಯನ್ನು ಕರೆಯುತ್ತಾನೆ.

DHARMA
ಚಾರ್ಲಿ..

* ಚಾರ್ಲಿ ಮುಂದೆ ಬಂದು ಧರ್ಮನ ಮೇಲೆ ಕಾಲಿಟ್ಟು ನಿಂತು pose ಕೊಡುತ್ತಾಳೆ. ಧರ್ಮ selfie click ಮಾಡುತ್ತಾನೆ. ಚಾರ್ಲಿ leash ಕಚ್ಚಿಕೊಂಡು ಕುಳಿತಿದ್ದಾಳೆ. ಧರ್ಮ psycho ನ ನೋಡಿ,

DHARMA
Every dog has its day, Today is ಚಾರ್ಲಿ's..

* ಎಂದು ಹೇಳಿ ಧರ್ಮ ಹೊರಡುತ್ತಾನೆ. ಚಾರ್ಲಿ ಧರ್ಮನನ್ನು ಹಿಂಬಾಲಿಸುತ್ತಾಳೆ.

CUT TO

EXT. DAY. COLONY

* ದೇವಿಕಾ ಧರ್ಮನ ಬಗ್ಗೆ ವಿಚಾರಿಸಲು ಕಾಲನಿಗೆ ಬಂದಿದ್ದಾಳೆ.

DEVIKA
ಏನ್ ಕೆಲ್ಸದ್ ಮೇಲೆ ಹೋಗ್ತಿದ್ದಾನೆ ಅಂತ ಹೇಳಿಲ್ವಾ?

VICKY

ಅದನ್ನೆಲ್ಲಾ ನಮ್ಮೆಲ್ ಹೇಳ್ತಾನ್ ಮೇಡಂ ಅವ್ನು? ತಿಕ್ಲ ನನ್ ಮಗ

DEVIKA
ನಾಯಿನ ಚನ್ನಾಗ್ ನೋಡ್ಕೊಂತಿದ್ನಾ?

VICKY
ಮನುಷ್ಯರಿಗೆ torture ಕೊಡೋನು ಅವ್ನು. ಇನ್ನು ನಾಯೀನ್ ಚನ್ನಾಗ್ ನೋಡ್ಕೊಂತಾನಾ? ಪಾಪದ್ ನಾಯಿ ಹೇಗಿತ್ತೋ ಅವ್ನ ಜೊತೆ..

DEVIKA
ನಂಗ್ ಮೊದ್ಲೇ ಅವ್ನ್ಮೇಲೆ doubt ಇತ್ತು.

VICKY
ಹೌದು ಮೇಡಂ.. ಒಂದ್ torture ಕೊಡ್ತಿದ್ದ..

DEVIKA
ಹೌದು. ನೀವಿಷ್ಟೊಂದು concern ತೋರಿಸ್ತೀದ್ದೀರಾ, ಆದ್ರೆ ಹೊರಗಡೆ pets not allowed ಅಂತ board ಇದೆ?

VICKY
(ಕಕ್ಕಾಬಿಕ್ಕಿಯಾಗಿ)
ಇದೆ.. ಅಂದ್ರೆ ಈಗಿಲ್ಲ. Rules change ಆಗಿದೆ. ನಾನೇ ಮಾಡ್ಸಿದ್ದು.

DEVIKA
ನಿಮ್ಮಂತ pet lovers ಬೇಕು. ನಮ್ಹತ್ರ ಒಂದಷ್ಟು Rescued dogs ಇದ್ದಾವೆ. ಒಂದ್ನ ನೀವ್ adopt ಮಾಡ್ಕೊಳ್ಳ ಬೇಕು. ನಿಮ್ number ಕೊಡಿ..

VICKY
(ಅವಸರದಿಂದ bike start ಮಾಡಿ)
ಮಾಡೋಣ ಮೇಡಂ. Next time ಮಾಡಣ. Bike uu serviceಗೆ ಕೊಡ್ಬೇಕು.

* ಎಂದು ಹೇಳಿ ಹೊರಡುತ್ತಾನೆ. ದೇವಿಕಾ ಆಶ್ಚರ್ಯದಿಂದ ನೋಡುತ್ತಿದ್ದಾಳೆ.

VICKY(O.S)
ಆ ಹುಚ್ಚನ ಸಹವಾಸಕ್ಕೆಲ್ಲ  ಹೋಗ್ಬೇಡಿ ಮೇಡಂ..

* ದೇವಿಕಾ phone ನಲ್ಲಿ tracking app open ಮಾಡುತ್ತಾಳೆ. Map ನಲ್ಲಿ 'ವಿಜಯಪುರ' ಎಂಬ location ಕಾಣಿಸುತ್ತಿದೆ. Zoom ಮಾಡಿದಾಗ 'Chu chu' ಎಂದು pin point ಕಾಣಿಸುತ್ತಿದೆ. ತಕ್ಷಣ phone ring ಆಗುತ್ತದೆ. ದೇವಿಕಾ call receive ಮಾಡಿ,

DEVIKA
Hello ma'am, ಇಲ್ಲೇ ಹೊರಗಡೆ ಬಂದಿದ್ದೆ..
(ಆಶ್ಚರ್ಯದಿಂದ)
ಹೌದಾ? Location ಕಳ್ಸಿ. ಈಗ್ಲೇ ಹೋಗ್ತೀನಿ.. ಸರಿ

* Phone cut ಮಾಡಿ location ನೋಡಿದಾಗ 'ವಿಜಯಪುರ' ಎಂದು ತೋರಿಸುತ್ತಿದೆ.

DEVIKA
(ಆಶ್ಚರ್ಯದಿಂದ)
Same location..

CUT TO

EXT. DAY. PSYCHO HOUSE

JUMPCUTS

* Volunteers psycho ಮನೆ ಅಂಗಳದಲ್ಲಿರುವ cage ಒಳಗಿರುವ ನಾಯಿಮರಿಗಳನ್ನು ಹೊರಗಡೆ ತೆಗೆಯುತ್ತಿದ್ದಾರೆ.

* Volunteers rescue ಮಾಡಿರುವ ನಾಯಿಮರಿಗಳಿಗೆ ನೀರು ಕುಡಿಸುತ್ತಿದ್ದಾರೆ.

* ಒಬ್ಬ Volunteer ಓಡುತ್ತಿರುವ ನಾಯಿಮರಿಯೊಂದನ್ನು ಬಲೆ ಬೀಸಿ ಹಿಡಿಯಲು ಪ್ರಯತ್ನಿಸುತ್ತಿದ್ದಾನೆ.

* Volunteer DSLRನಲ್ಲಿ cage ಒಳಗಿನ ಫೋಟೋ ಕ್ಲಿಕ್ ಮಾಡುತ್ತಿದ್ದಾನೆ.

* ಇನ್ನೊಬ್ಬ Volunteer aggressive ನಾಯಿಗಳನ್ನು ಹಿಡಿಯಲು ಬಲೆ ಬೀಸುತ್ತಿದ್ದಾನೆ.

* Volunteer ನಾಯಿಮರಿಗಳನ್ನು ಒಂದೊಂದಾಗೇ ತಂದು ಕಾರಿನ ಒಳಗೆ ಕೂರಿಸುತ್ತಿದ್ದಾನೆ.

* Volunteer cage ಒಳಗಿನಿಂದ ನಾಯಿಗಳ ಮಲ ಸಂಗ್ರಹಿಸಿ plastic cover ಒಳಗಡೆ ಹಾಕುತ್ತಿದ್ದಾನೆ.

PSYCHO (O.S)
(ಸಿಟ್ಟಿನಿಂದ)
You'll pay for it..

PRAGATHI (O.S)
Ah, ಇದಿಕ್ಕೆ First Aid ಆಯ್ತಾ ಸರ್?

* Psycho ಮನೆ ಮುಂದೆ ನಾಯಿಮರಿಗಳ ರಕ್ಷಣಾ ಕಾರ್ಯ ನಡೆಯುತ್ತಿದೆ. ಹೊರಗಡೆ Rescue ಗಾಡಿಗಳು, Police ಗಾಡಿಗಳು ನಿಂತಿವೆ. ಪೋಲೀಸರು ಸ್ಥಳದಲ್ಲಿದ್ದಾರೆ. ಪ್ರಗತಿ ಹಾಗೂ ಕೆಂಪರಾಜು ನಾಯಿಗಳ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಪೋಲೀಸರು psychoವನ್ನು ಮಣ್ಣಿನಿಂದ ಮೇಲೆತ್ತಿ ಬಂಧಿಸುತ್ತಾರೆ. ದೇವಿಕಾ ಸ್ಥಳಕ್ಕೆ ಆಗಮಿಸಿ scooter ನಿಂದ ಇಳಿದು ಮುಂದೆ ನೋಡುತ್ತಾ ಬರುತ್ತಿದ್ದಾಳೆ.

PRAGATHI
Hi ma'am..

DEVIKA
(ಕೈಯಲ್ಲಿರುವ bag ಅನ್ನು ಪ್ರಗತಿಗೆ ಕೊಟ್ಟು)
Total ಎಷ್ಟ್ dogs ಇದ್ದಾವೆ?

PRAGATHI
115 ma'am

DEVIKA
Puppies ಎಷ್ಟಿದ್ದಾವೆ?

PRAGATHI
(ಕೈಯಲ್ಲಿರುವ report ನೋಡುತ್ತಾ)
Ah.. 77

DEVIKA
Photos ಎಲ್ಲ ತಗೊಂಡ್ರುಲ್ಲಾ?

KEMPARAJU
ಹಾನ್. ತಗೊಂಡಿದ್ದೀನಿ ಮೇಡಂ.

* ದೇವಿಕಾ ಮುಂದೆ ನೋಡಿದಾಗ ಪೊಲೀಸರು Psychoವನ್ನ ಬಂಧಿಸಿ ಕರೆದುಕೊಂಡು ಹೋಗುತ್ತಿದ್ದಾರೆ. ದೇವಿಕಾ ಆಶ್ಚರ್ಯದಿಂದ ನೋಡುತ್ತಾ ಮನೆ ಬಾಗಿಲ ಬಳಿ ನೋಡಿದಾಗ constable ಬಾಗಿಲು lock ಮಾಡುತ್ತಿದ್ದಾನೆ. ದೇವಿಕಾ ತಕ್ಷಣ phoneನಲ್ಲಿ tracking app open ಮಾಡುತ್ತಾಳೆ. Mapನಲ್ಲಿ 'Chu chu' navigation point ಮುಂದೆ ಚಲಿಸುತ್ತಿದೆ.

DEVIKA
(ಆಶ್ಚರ್ಯದಿಂದ)
ಇವ್ನೆಲ್ಲಿ ಹೋಗ್ತಿದ್ದಾನೆ..

JOURNEY SONG STARTS

CUT TO

EXT. DAY. RAILWAY TRACK ROAD (JOURNEY SONG)

* ರೈಲು frame exit ಅದಾಗ ಧರ್ಮ bullet ನಲ್ಲಿ ಕುಳಿತಿರುವುದು ಕಾಣಿಸುತ್ತದೆ. ಚಾರ್ಲಿ sidecarನಲ್ಲಿ ಕುಳಿತಿದ್ದಾಳೆ. ಧರ್ಮ bullet ಹೊರಡಿಸಿ ಮುಂದೆ ಹೋಗುತ್ತಾನೆ.

CUT TO

EXT. DAY. ROAD (JOURNEY SONG)

* ಧರ್ಮ bullet ಓಡಿಸುತ್ತಿದ್ದಾನೆ.

DEVIKA (O.S)
ಇನ್ನೊಬ್ಬ criminal escape ಆಗಿದ್ದಾನೆ. ನಾನ್ ಅವ್ನನ್ನ follow ಮಾಡ್ತೀನಿ.

CUT TO

EXT. DAY. PSYCHO HOUSE (JOURNEY SONG)

* ದೇವಿಕಾ scooterಗೆ mobile fix ಮಾಡುತ್ತಾಳೆ. ಪಕ್ಕದಲ್ಲಿ ಕೆಂಪರಾಜು ಹಾಗೂ ಪರಗತಿ ನಿಂತುಕೊಂಡಿದ್ದಾರೆ. ಅವರಿಬ್ಬರನ್ನು ನೋಡಿದ ದೇವಿಕಾ,

DEVIKA (CONT'D)
ನೀವು CCTV footages check ಮಾಡಿ ನಂಗೆ update ಮಾಡಿ.

* ಎಂದು ಹೇಳಿ scooter ನಲ್ಲಿ ಹೊರಡುತ್ತಾಳೆ.

CUT TO

EXT. DAY. ROAD(JOURNEY SONG)

* ದೇವಿಕಾ scooter ಓಡಿಸುತ್ತಿದ್ದಾಳೆ.

CUT TO

EXT. DAY. ROAD (JOURNEY SONG)

* ಧರ್ಮ ಗಾಡಿ ಓಡಿಸುತ್ತಿದ್ದಾನೆ. ಚಾರ್ಲಿ SIDECARನಲ್ಲಿ SPECS ಹಾಕಿಕೊಂಡು ಕುಳಿತಿದ್ದಾಳೆ.

CUT TO

EXT. DAY. ROAD (JOURNEY SONG)

* ಧರ್ಮ MILESTONE ದಾಟಿ ಮುಂದೆ ಹೋಗುತ್ತಾನೆ

CUT TO

EXT. DAY. ROAD (JOURNEY SONG)

* SPLIT SCREEN: ಧರ್ಮ ಬೇರೆ ಬೇರೆ ರಸ್ತೆಗಳಲ್ಲಿ ಗಾಡಿ ಓಡಿಸುತ್ತಿದ್ದಾನೆ. ದೇವಿಕಾಳ ಗಾಡಿ ನಿಧಾನವಾಗಿ ಚಲಿಸುತ್ತಿದೆ.

CUT TO

EXT. DAY. ROAD (JOURNEY SONG)

* ಚಾರ್ಲಿ ಕನ್ನಡಕ ಧರಿಸಿ sidecar ನಲ್ಲಿ ಕುಳಿತಿದ್ದಾಳೆ. ಧರ್ಮ ಗಾಡಿ ಓಡಿಸುತ್ತಿದ್ದಾನೆ.

CUT TO

EXT. DAY. ROAD (JOURNEY SONG)

TOP ANGLE SHOT (MAP TRANSITION)

* ಧರ್ಮ ಪ್ರಯಾಣಿಸುತ್ತಿದ್ದಾನೆ.

TRANISITION TO MAP

* ಧರ್ಮ ಪ್ರಯಾಣಿಸುತ್ತಿರುವ SHOT MAP ಆಗಿ ಬದಲಾಗುತ್ತದೆ. MAP ನಲ್ಲಿ 'CHU CHU' PIN POINT ಕಾಣಿಸುತ್ತಿದೆ. ZOOM OUT ಆದಾಗ ದೇವಿಕಾಳ SCOOTERನ MOBILE SCREEN ಕಾಣಿಸುತ್ತದೆ. ದೇವಿಕಾ MAP ನೋಡುತ್ತಾ ಗಾಡಿ ಓಡಿಸುತ್ತಿದ್ದಾಳೆ. SPEEDOMETER ನಲ್ಲಿ SCOOTER BATTERY LOW ಎಂದು ಕಾಣಿಸುತ್ತಿದೆ.
ಗಾಡಿ ನಿಧಾನವಾಗಿ OFF ಆಗಿ ನಿಲ್ಲುತ್ತದೆ. ದೇವಿಕಾ ಅಸಹನೆಗೊಳ್ಳುತ್ತಾಳೆ.

CUT TO

EXT. DAY. ROAD (JOURNEY SONG)

* ಚಾರ್ಲಿ ಧರ್ಮನ bulletನ petrol tank ಮೇಲೆ ಕುಳಿತಿದ್ದಾಳೆ. ಧರ್ಮ sidecarನಲ್ಲಿ ಮಲಗಿದ್ದಾನೆ.

* HELICAM SHOT: TEMPO ಧರ್ಮನ BULLET ಅನ್ನು TOW ಮಾಡುತ್ತಿದೆ.

DEVIKA (O.S)
Battery ಖಾಲಿಯಾಗಿದೆ ಅಂತ ಮೊದ್ಲೇ ಹೇಳೋಕಾಗಲ್ವಾ?

CUT TO

EXT. EVENING. ROADSIDE (JOURNEY SONG)

* ದೇವಿಕಾ ರಸ್ತೆ ಬದಿಯಲ್ಲಿ scooter ನಿಲ್ಲಿಸಿ phoneನಲ್ಲಿ ಮಾತನಾಡುತ್ತಾ ನಿಂತಿದ್ದಾಳೆ.

KEMPARAJU (O.S)
ಅದು charge ಖಾಲಿ ಆದ್ಮೇಲೆ ಗೊತ್ತಾಗುತ್ತೆ ಅಂದ್ಕೊಂಡೆ.

DEVIKA
ನಿನ್ ಪಿಂಡ.. ಗಾಡಿ ಬಿಸಾಕಿರೋ location ಕಳ್ಸಿದೀನಿ, ಏನ್ ಬೇಕಿದ್ರು ಮಾಡ್ಕೋ..

CUT TO

EXT. EVENING. PETROL BUNK

* ಧರ್ಮ petrol bunkನಲ್ಲಿ bulletನಲ್ಲಿರುವ petrol canಗೆ petrol ತುಂಬಿಸುತ್ತಿದ್ದಾನೆ. ಧರ್ಮ ಮುಂದೆ ನೋಡುತ್ತಾನೆ. Petrol bunkನ ಮಹಿಳಾ ಉದ್ಯೋಗಿಗಳು ಚಾರ್ಲಿಯನ್ನು ಮುದ್ದು ಮಾಡುತ್ತಾ ಅವಳ ಜೊತೆ selfie ತೆಗೆದುಕೊಳ್ಳುತ್ತಿದ್ದಾರೆ. ಧರ್ಮ ತನ್ನ phone ನಲ್ಲಿ ಅವರ photo click ಮಾಡುತ್ತಾನೆ.

CUT TO

* Petrol machine ನಲ್ಲಿ bill print ಆಗಿ ಬರುತ್ತದೆ.

* ಧರ್ಮ ಚಾರ್ಲಿಯ ಜೊತೆಗೆ ಅಲ್ಲಿಂದ ಹೊರಡುತ್ತಾನೆ.

CUT TO

EXT. LATE EVENING. FERRY

* Boat ಪ್ರಯಾಣಿಸುತ್ತಿದೆ. ಧರ್ಮನ bullet boat ನಲ್ಲಿ ನಿಂತಿದೆ. ಚಾರ್ಲಿ sidecar ನಲ್ಲಿ ಕುಳಿತಿದ್ದಾಳೆ.

* BOAT ಪ್ರಯಾಣಿಸುತ್ತಿರುವ SHOTS

* Boat ದಡ ತಲುಪಿದ ಮೇಲೆ ಧರ್ಮ ಗಾಡಿ ಹೊರಡಿಸುತ್ತಾನೆ.

FADE OUT

INT. NIGHT. HOTEL 1

JOURNEY SONG STOPS

* ಧರ್ಮ hotel ಒಳಗಡೆ RECEPTIONIST ಎದುರುಗಡೆ ನಿಂತು,

DHARMA
Hi. Rooms available ಇದ್ಯಾ ?

MALE RECEPTIONIST 1
ಇದೆ ಸರ್. ಸಿಂಗಲ್ ಬೇಕಾ ಡಬ್ಬಲ್ ಆ?

* ಎಂದು ಹೇಳಿ ಕೆಳಗೆ ನೋಡಿದಾಗ ಪಕ್ಕದಲ್ಲಿ ಕುಳಿತಿರುವ  ಚಾರ್ಲಿ ತಲೆ ಮೇಲೆತ್ತಿ ಧರ್ಮನನ್ನು ನೋಡುತ್ತಾಳೆ.

CUT TO

INT. NIGHT. HOTEL 2

RECEPTIONIST 2
ಇದೆ ಸರ್, ಆದ್ರೆ ..

CUT TO

INT. NIGHT. HOTEL 3

WATCHMEN
ನಾಯಿನೆಲ್ಲ ಒಳ್ಗಡೆ ಬಿಡಲ್ಲ Sir..

CUT TO

INT. NIGHT. HOTEL 4

* ಚಾರ್ಲಿ hotel sofa ಮೇಲೆ ಕುಳಿತು ಮುಂದೆ ನೋಡುತ್ತಿದ್ದಾಳೆ. Receptionist ಹಿಂದೆ ಒಂದು Snow AD poster ಕಾಣಿಸುತ್ತಿದೆ.

RECEPTIONIST
But room ಅಲ್ಲಿ ನಾಯಿ ಬೊಗಳಿದ್ರೆ ಬೇರೆ guestsಗೆ problem ಆಗುತ್ತೆ ಸರ್..

DHARMA
ಅಯ್ಯೋ ಅದ್ರ ಬಗ್ಗೆ ಏನು tension ಏ ಮಾಡ್ಕೋಬೇಡಿ. ಇದು ನನ್ ಮನೆಗ್ ಬಂದಾಗಿಂದ ಒಮ್ಮೇನೂ ಬಾಯೇ ತೆಗ್ದಿಲ್ಲ.

* ತಕ್ಷಣ ಚಾರ್ಲಿ ಬೊಗಳುತ್ತಾಳೆ. ಧರ್ಮ ಪೆಚ್ಚು ಮುಖದಿಂದ ನೋಡುತ್ತಾನೆ.

CUT TO

EXT. LATE NIGHT. ROADSIDE FOOTPATH

* ಧರ್ಮ ರಸ್ತೆ ಬದಿಯಲ್ಲಿ ಯೋಚಿಸುತ್ತಾ ಕುಳಿತಿದ್ದಾನೆ. ಪಕ್ಕಕ್ಕೆ ತಿರುಗಿ ನೋಡಿದಾಗ ಚಾರ್ಲಿ ಕಟ್ಟು ಮೇಲೆತ್ತಿ ನೋಡುತ್ತಿದ್ದಾಳೆ. ಧರ್ಮ ಮೇಲ್ಗಡೆ ನೋಡಿದಾಗ LIC Jeevan Labh Ad poster ಕಾಣಿಸುತ್ತದೆ. Posterನಲ್ಲಿ ಕುರುಡನೊಬ್ಬ stick ಹಿಡಿದು ನಾಯಿಯ ಸಹಾಯದಿಂದ ರಸ್ತೆ ದಾಟುತ್ತಿದ್ದಾನೆ. ಧರ್ಮ ಚಾರ್ಲಿಯನ್ನು ನೋಡುತ್ತಾನೆ.

CUT TO

* ಧರ್ಮ ಚಾರ್ಲಿಯ ಕನ್ನಡಕ ಧರಿಸಿಕೊಂಡು ಕೈಯಲ್ಲಿ chaplin stick ಹಿಡಿದು ಕುರುಡನಂತೆ ನಟಿಸುತ್ತಾ ಚಾರ್ಲಿ ಜೊತೆಗೆ ಮುಂದೆ ನಡೆಯುತ್ತಿದ್ದಾನೆ.

CUT TO

INT. NIGHT. HOTEL NARAYANA

* Hotel receptionist ತನ್ನ ಮುಂದಿರುವ computer screen ನೋಡುತ್ತಿದ್ದಾನೆ. ಧರ್ಮ ಚಾರ್ಲಿ ಜೊತೆಗೆ hotel reception ಮುಂದೆ ಕುರುಡನಂತೆ ನಟಿಸುತ್ತಾ ಬರುತ್ತಾನೆ. ಅವರಿಬ್ಬರನ್ನೂ ನೋಡಿದ receptionist,

HOTEL NARAYANA RECEPTIONIST
Excuse me Sir..

DHARMA
(ಅಲ್ಲಿಯೇ ನಿಂತು ಮೆಲ್ಲನೆ ತಿರುಗಿ ನೋಡುತ್ತಾ)
ಸರ್?

HOTEL NARAYANA RECEPTIONIST
Sorry sir, Pets not allowed

DHARMA
ಅಯ್ಯೋ ..ಇದು ನನ್ ಕಣ್ ಇದ್ದಂಗೆ ಸರ್. ಇದು ಇಲ್ದೆ ನಂಗೆ ಒಂದ್ ಹೆಜ್ಜೇನು ಮುಂದೆ ಇಡೋಕಾಗಲ್ಲ.

HOTEL NARAYANA RECEPTIONIST
Sorry Sir.. Hotel rules.

DHARMA
ಸರ್ ನೀವೇ ಯೋಚ್ನೆ ಮಾಡಿ.. ಒಬ್ಬ ಅಂಧ. ಅದೂ ಈ ಕತ್ತಲೇಲಿ ಎಲ್ಲಿಗೆ ಅಂತ ಹೋಗ್ತಾನೆ?

* Receptionist ದಯನೀಯವಾಗಿ ಧರ್ಮನನ್ನು ನೋಡಿ ನಂತರ ಪಕ್ಕದಲ್ಲಿ ಕುಳಿತಿರುವ ಚಾರ್ಲಿಯನ್ನು ನೋಡುತ್ತಾನೆ.

CUT TO

INT. NIGHT. DEVIKA'S HOTEL

* Room boy ಬಾಗಿಲು ತೆರೆದು key ಪಕ್ಕದಲ್ಲಿಟ್ಟು ಹೊರಗೆ ಹೋಗುತ್ತಾನೆ. ದೇವಿಕಾ phone ನಲ್ಲಿ ಮಾತನಾಡುತ್ತಾ,

DEVIKA
ಇಲ್ಲ ಅಮ್ಮ, office ನವ್ರು ಒಳ್ಳೇ room ನೇ book ಮಾಡ್

* ದೇವಿಕಾ ಮಾತು ನಿಲ್ಲಿಸಿ ರೂಮ್ ನೋಡುತ್ತಿದ್ದಾಳೆ. ರೂಮ್ ಪೂರ್ತಿ ಅಸಹ್ಯವಾಗಿದೆ. ಮಂಚದ ಮೇಲಿಂದ ಒಂದು ಇಲಿ ಓಡಿ ಹೋಗುತ್ತದೆ. ದೇವಿಕಾ ಅಸಹ್ಯಗೊಂಡು ನೋಡುತ್ತಿದ್ದಾಳೆ.

CUT TO

* ದೇವಿಕಾ ಮಂಚದ ಮೇಲೆ bag ಎಸೆದು ಕುಳಿತುಕೊಳ್ಳುತ್ತಾಳೆ. Phone ನಲ್ಲಿ traking app open ಮಾಡಿ ನೋಡಿದಾಗ Map ನಲ್ಲಿ HOTEL NARAYANA  ಎಂದು pin point ಕಾಣಿಸುತ್ತಿದೆ.

DEVIKA
ಹೋಟೆಲ್ ನಾರಾಯಣ..

* ತಕ್ಷಣ phone battery ಖಾಲಿಯಾಗಿ switchoff ಆಗುತ್ತದೆ.

FADE OUT

EXT. EARLY MORNING. LAKE. (JOURNEY SONG)

JOURNEY SONG CONT'D

* ಧರ್ಮ ಹಾಗೂ ಚಾರ್ಲಿ ಈಜಾಡುತ್ತಿದ್ದಾರೆ.

CUT TO

EXT. EARLY MORNING. FIELD (JOURNEY SONG)

JUMPCUTS:

* ಬೆಳಗಿನ ಜಾವ. ಚಾರ್ಲಿ ಗದ್ದೆಯೊಂದರಲ್ಲಿ ಓಡುತ್ತಾ, ಉರುಳಾಡುತ್ತಾ ಆಟವಾಡುತ್ತಿದ್ದಾಳೆ.

* ಧರ್ಮ ಚಹಾ ಕುಡಿಯುತ್ತಿದ್ದಾನೆ. ಚಾರ್ಲಿ food bowlನಲ್ಲಿ pedigree ತಿನ್ನುತ್ತಿದ್ದಾಳೆ.

CUT TO

EXT. DAY. ROAD (JOURNEY SONG)

PERSON TO PERSON TRANSITION:

* ಧರ್ಮನ ಗಾಡಿ ಓಡಿಸುತ್ತಿದ್ದಾನೆ. Sidecarನಲ್ಲಿ ಚಾರ್ಲಿಯ ಜೊತೆಗೆ ಒಬ್ಬ ಸಣ್ಣ ವಿದ್ಯಾರ್ಥಿ ಕುಳಿತುಕೊಂಡಿದ್ದಾನೆ.

CUT TO

* ಧರ್ಮನ ಗಾಡಿ ಓಡಿಸುತ್ತಿದ್ದಾನೆ. Sidecarನಲ್ಲಿ ಚಾರ್ಲಿಯ ಜೊತೆಗೆ ವಯಸ್ಸಾದ ವ್ಯಕ್ತಿಯೊಬ್ಬರು ಕುಳಿತುಕೊಂಡಿದ್ದಾರೆ.

CUT TO

* ಧರ್ಮನ ಗಾಡಿ ಓಡಿಸುತ್ತಿದ್ದಾನೆ. Sidecarನಲ್ಲಿ ಚಾರ್ಲಿಯ ಜೊತೆಗೆ ಮಧ್ಯ ವಯಸ್ಸಿನ ವ್ಯಕ್ತಿಯೊಬ್ಬ ಕುಳಿತುಕೊಂಡಿದ್ದಾನೆ.

CUT TO

* ಧರ್ಮನ ಗಾಡಿ ಓಡಿಸುತ್ತಿದ್ದಾನೆ. Sidecarನಲ್ಲಿ ಚಾರ್ಲಿಯ ಜೊತೆಗೆ ಹೆಂಗಸೊಬ್ಬರು ಕುಳಿತುಕೊಂಡಿದ್ದಾಳೆ.

CUT TO

INT. DAY. HOTEL NARAYANA (JOURNEY SONG)

* ದೇವಿಕಾ Hotel Narayana ಒಳಗಡೆ ಬಂದು receptionist ಎದುರು ನಿಂತು,

DEVIKA
Excuse me, ನಿನ್ನೆ ಧರ್ಮ ಅಂತ ಒಬ್ರು Check in ಮಾಡಿದ್ರು?

HOTEL NARAYANA RECEPTIONIST
(ಸ್ವಲ್ಪ ಯೋಚಿಸಿ)
ಹಾನ್ ಹೌದು ಮೇಡಂ.. ಅಂಧ ಅಲ್ವಾ? ನಾಯಿ ಜೊತೆ ಬಂದಿದ್ರು

DEVIKA
(ಆಶ್ಚರ್ಯದಿಂದ)
ಅಂಧಾನಾ?

HOTEL NARAYANA RECEPTIONIST
ಹಾನ್.

DEVIKA
ಆನ್. ಹೌದು. ಅಂಧ.. ಒಂದು 10 ನಿಮಿಷ mobile chargeಗೆ ಹಾಕ್ತೀರಾ?

CUT TO

INT/EXT. DAY. SUPER MARKET

DHARMA
10 ನಿಮಿಷ ಇಲ್ಲೇ ಇರು. ಬರ್ತೀನಿ.

* ಚಾರ್ಲಿ head down ಮಾಡಿ ಮಲಗುತ್ತಾಳೆ.
Super Market ಒಂದರ ಹೊರಗಡೆ ಚಾರ್ಲಿಯನ್ನು ice cream standyಗೆ ಕಟ್ಟಲಾಗಿದೆ. ಧರ್ಮ super market ಒಳಗಡೆ ಹೋಗುತ್ತಾನೆ.

JOURNEY SONG ENDS

CUT TO

EXT. DAY. SUPER MARKET

* ಚಾರ್ಲಿ ಮುಂದೆ ನೋಡಿದಾಗ footpath ನ ಕೊಳಚೆ ಗುಂಡಿಯೊಳಗಿನಿಂದ ಒಂದು ಇಲಿ ಹೊರ ಬರುತ್ತದೆ. ತಕ್ಷಣ ಚಾರ್ಲಿ ತಲೆಯೆತ್ತಿ ನೋಡುತ್ತಾಳೆ.

CUT TO

INT. DAY. SUPERMARKET

* ಧರ್ಮ shopping bags ಹಿಡಿದು billing Counter ನಲ್ಲಿ ನಿಂತಿದ್ದಾನೆ. ಯುವತಿ ಧರ್ಮನಿಗೆ receipt ಕೊಡುತ್ತಾ ಆಶ್ಚರ್ಯದಿಂದ ಹೊರಗಡೆ ನೋಡುತ್ತಾಳೆ. ಅವಳ ಮುಖಭಾವ ನೋಡಿದ ಧರ್ಮ ಹಿಂದೆ ತಿರುಗಿ ನೋಡುತ್ತಾನೆ. ಹೊರಗಡೆಯಿರುವ standie ಆ ಕಡೆ ಈ ಕಡೆ ಚಲಿಸುತ್ತಿದೆ.

CUT TO

EXT. DAY. SUPERMARKET/STREET

* Supermarket ಹೊರಗಡೆ ಚಾರ್ಲಿ standie ಜೊತೆಗೆ ಓಡುತ್ತಾಳೆ. ಧರ್ಮ ಹೊರಗಡೆ ಓಡಿ ಬರುತ್ತಾ,

DHARMA

ಏಯ್ ಚಾರ್ಲಿ.

CUT TO

EXT. DAY. VARIOUS STREETS

* ಚಾರ್ಲಿ ರಸ್ತೆಯಲ್ಲಿ ಓಡುತ್ತಿದ್ದಾಳೆ. ಧರ್ಮ bags ಹಿಡಿದುಕೊಂಡು ಹಿಂದಿನಿಂದ ಓಡಿ ಬರುತ್ತಿದ್ದಾನೆ

DHARMA

ಚಾರ್ಲಿ.. ನಿಲ್ಲೇ..

CUT TO

* ಚಾರ್ಲಿ ಬೇರೊಂದು ರಸ್ತೆಯಲ್ಲಿ ಓಡುತ್ತಿದ್ದಾಳೆ. ಧರ್ಮ ಚಾರ್ಲಿಯನ್ನು ನಿಲ್ಲಿಸಲು ಪ್ರಯತ್ನಿಸುತ್ತಾ,

DHARMA

ಚಾರ್ಲಿ.. ಚಾರ್ಲಿ..

CUT TO

* ಚಾರ್ಲಿ ವೇಗವಾಗಿ ಓಡುತ್ತಿದ್ದಾಳೆ. ಧರ್ಮ ಹಿಂದಿನಿಂದ ಓಡಿ ಬರುತ್ತಿದ್ದಾನೆ. ಚಾರ್ಲಿ ಒಂದು ಮನೆಯ ಮುಂದೆ ಓಡುತ್ತಾಳೆ. ಆ ಮನೆಯೊಳಗಿದ್ದ ನಾಯಿ ಚಾರ್ಲಿಯನ್ನು ನೋಡಿ ಬೊಗಳುತ್ತದೆ.

* ಧರ್ಮ ಚಾರ್ಲಿಯನ್ನು ಓಡಿಸುತ್ತಾ,

DHARMA

ಚಾರ್ಲಿ ಓಡ್ಬೇಡ ನಿಲ್ಲು.. ಚಾರ್ಲಿ.

* Foreign ಹೆಂಗಸೊಬ್ಬಳು ಒಂದು ಬಟ್ಟೆಯನ್ನು ಹಗ್ಗದ ಮೇಲೆ ಒಣಗಲು ಹಾಕಿ ಇನ್ನೊಂದು ಬಟ್ಟೆ ಹಾಕಲು ಎತ್ತಿಕೊಳ್ಳುವಷ್ಟರಲ್ಲಿ ಮೊದಲು ಹಾಕಿದ್ದ ಬಟ್ಟೆಯನ್ನು ಚಾರ್ಲಿ standie ಸಮೇತ

ಎಳೆದುಕೊಂಡು ಹೋಗುತ್ತಾಳೆ. ಧರ್ಮ ಚಾರ್ಲಿಯನ್ನು ಓಡಿಸುತ್ತಿದ್ದಾನೆ. ಹೆಂಗಸು ಕಕ್ಕಾಬಿಕ್ಕಿಯಾಗಿ ನೋಡುತ್ತಿದ್ದಾಳೆ.

DHARMA
(ಸುಸ್ತಾಗಿ)
ಚಾರ್ಲಿ..

* ಚಾರ್ಲಿ ಓಡುತ್ತಾ ಬಂದು ಸುಸ್ತಾಗಿ footpath ನಲ್ಲಿ ನಿಧಾನವಾಗಿ ಮುಂದೆ ನಡೆಯುತ್ತಿದ್ದಾಳೆ. ಧರ್ಮ ಸುಸ್ತಾಗಿ ಹಿಂದಿನಿಂದ ಬರುತ್ತಾನೆ.

DHARMA
ಚಾರ್ಲಿ..

* ಚಾರ್ಲಿ ಹಿಂದೆ ತಿರುಗಿ ನೋಡುತ್ತಾಳೆ. ಧರ್ಮ ಮೇಲ್ಗಡೆ ನೋಡಿದಾಗ standie ಒಂದು ಅಂಗಡಿಯ ಹೊರಗಡೆ ನೇತುಹಾಕಿರುವ flower wase ಗೆ ತಾಗುತ್ತಿದೆ. Flower wase ಇನ್ನೇನು ಬೀಳುವ ಹಂತದಲ್ಲಿದೆ. ಅದನ್ನು ನೋಡುತ್ತಾ ಧರ್ಮ ಕೆಳಗಡೆ ನೋಡಿದರೆ police jeep ನಿಂತಿದೆ.

DHARMA
ಚಾರ್ಲಿ.. ಅಲ್ಲೇ ಇರು

* ಚಾರ್ಲಿ ಧರ್ಮನನ್ನು ನೋಡಿ ಒಂದು ಹೆಜ್ಜೆ ಮುಂದಿಡುತ್ತಾಳೆ. Flower wase ಅಲುಗಾಡುತ್ತಿದೆ. ಧರ್ಮ ಕೈಯಲ್ಲಿದ bags ಅನ್ನು ಕೆಳಗಿಟ್ಟು,

DHARMA
ಚಾರ್ಲಿ.. Stay..

* ಚಾರ್ಲಿ ಇನ್ನೊಂದು ಹೆಜ್ಜೆ ಮುಂದಿಟ್ಟಾಗ flower waste ಕೆಳಗೆ ಬೀಳುತ್ತದೆ. ಧರ್ಮ ಕಕ್ಕಾಬಿಕ್ಕಿಯಾಗಿ ಹಿಂದೆ ತಿರುಗುತ್ತಾನೆ. ಗಾಜು ಒಡೆದ ಶಬ್ದ ಕೇಳಿಸುತ್ತದೆ. ಧರ್ಮ ಅಸಹಾಯಕನಾಗಿ ಹಿಂದೆ ತಿರುಗಿ ನೋಡಿದಾಗ flower waste Police jeep ನ ಮೇಲೆ ಬಿದ್ದು ಗಾಜು ಒಡೆದಿದೆ. Inspector ಸಿಟ್ಟಿನಿಂದ ನಿಂತಿದ್ದಾರೆ. ಪಕ್ಕದಲ್ಲಿ Constable ಚಾರ್ಲಿಯನ್ನು leash ಜೊತೆಗೆ ಹಿಡಿದು ನಿಂತಿದ್ದಾನೆ.

CUT TO

INT. DAY. POLICE STATION

* ಧರ್ಮ police station cell ಒಳಗಡೆ ಪೆಚ್ಚು ಮೋರೆ ಹಾಕಿ ಕುಳಿತಿದ್ದಾನೆ. ಚಾರ್ಲಿ ಕಿಟಕಿಯಿಂದ ಬರುತ್ತಿರುವ ಬೆಳಕಿನ ಕಿರಣಗಳನ್ನು ನೋಡಿ ಬೊಗಳುತ್ತಾಳೆ. Inspector constable ಜೊತೆ ಮಾತನಾಡುತ್ತಿದ್ದಾರೆ. ಧರ್ಮ ಚಾರ್ಲಿಯನ್ನು ನೋಡಿ,

DHARMA
police station ಒಂದು ನೋಡೋದು ಬಾಕಿ ಇತ್ತು.
ಅದನ್ನು ತೋರಿಸ್ಬಿಟ್ಟೆ.

* ಧರ್ಮ ಎದ್ದು ನಿಂತು ಮುಂದೆ ಬಂದು,

DHARMA
ಪಾಪ ಮೂಕ ಪ್ರಾಣಿ sir, ಏನೋ ಗೊತ್ತಿಲ್ದೆ ಮಾಡಿದ್ದಕ್ಕೆ
lockup ಅಲ್ಲೆಲ್ಲಾ ಹಾಕಿದ್ದೀರಲ್ಲ?

INSPECTOR
Owner ಆದೋರಿಗೆ ನಾಯಿ ಬಗ್ಗೆ ಜವಾಬ್ದಾರಿ ಬೇಕು.
(Constableನ ನೋಡಿ)
ಒಂದು ಹತ್ತು ಸಾವಿರ ಕೊಡ್ಲಿಕ್ ಹೇಳು.

CONSTABLE
ಸರಿ ಸಾಹಬ್ರೇ..

* ಎಂದು ಹೇಳಿ ಅಲ್ಲಿಂದ ಹೋಗುತ್ತಾನೆ. ದೇವಿಕಾ police station ಒಳಗಡೆ ಬಂದು ನೋಡಿದಾಗ Constable ಧರ್ಮನ ಜೊತೆ ಮಾತನಾಡುತ್ತಿದ್ದಾನೆ.

CONSTABLE
(ನಗಾಡುತ್ತಾ)
ರೊಕ್ಕ ಇಲ್ಲಾಂದ್ರೆ ಇಲ್ಲೇ ಕುಂದ್ರಿಬೇಕಾಗುತ್ತೆ ನೋಡಪ್ಪ..

DHARMA
(Purse ತೋರಿಸುತ್ತಾ)
ಬೇಕಿದ್ರೆ ನೀವೇ ನೋಡಿ..

* ಚಾರ್ಲಿ ಬೊಗಳುತ್ತಾಳೆ. Constable ಗಾಬರಿಯಾಗುತ್ತಾನೆ.

DHARMA (CONT'D)
ಇರೋದು ಎರಡೇ ಸಾವ್ರ..

* ದೇವಿಕಾ ಸಿಟ್ಟಿನಿಂದ ನೋಡುತ್ತಾ ಕೆಳಗೆ ಕುಳಿತಿರುವ ಚಾರ್ಲಿಯನ್ನು ನೋಡುತ್ತಾಳೆ.

DHARMA (O.S.)
ಇದನ್ನ ಹಿಡ್ಕೊಂಡು ಹಿಮಾಚಲ್ ವರೆಗೂ ಹೋಗ್ಬೇಕು.

CONSTABLE (O.S)
ಹಿಮಾಚಲ್ ಆ? ಇದು ನಿನ್ petrol ಗೂ
ಸಾಕಾಗಂಗಿಲ್ವಲ್ಲೋ?

DHARMA
ನನ್ನತ್ರ ಇರೋದೇ ಇಷ್ಟು..

* ಎಂದು ಹೇಳಿ ದೇವಿಕಾ ಬಂದಿರುವುದನ್ನು ಗಮನಿಸುತ್ತಾನೆ.

CONSTABLE
ಏಯ್ ತಮ್ಮ ಇಷ್ಟಕ್ಕೆಲ್ಲಾ workout ಆಗಂಗಿಲ್ವೋ..

* ದೇವಿಕಾ ಸಿಟ್ಟಿನಿಂದ ನೋಡುತ್ತಿದ್ದಾಳೆ.

* ದೇವಿಕಾ Inspector ಮುಂದೆ ಬಂದು ಕುಳಿತು,

DEVIKA
Sir, ಒಂದ್ complaint ಕೊಡ್ಬೇಕಿತ್ತು.

* Inspector ಬಾಯಲ್ಲಿದ್ದ ಬೀಡಾ ಚೊಂಬಿಗೆ ಉಗಿದು ಪಕ್ಕಕ್ಕಿಡುತ್ತಾನೆ.

INSPECTOR
ಹೇಳಿ.

DEVIKA
ಆ ನಾಯಿ ನಂದು.

* INSPECTOR ಆಶ್ಚರ್ಯದಿಂದ ನೋಡುತ್ತಾನೆ.

DEVIKA
ಒಳಗಿರೋ ನಾಯಿ ನಂದು. ಅವ್ನು ಕದ್ಕೊಂಡು ಬಂದಿದಾನೆ

INSPECTOR
(ಆಶ್ಚರ್ಯದಿಂದ)
ಓಹ್!

* ಅಷ್ಟರಲ್ಲಿ Constable,

CONSTABLE
ಇವ್ರತ್ರು ಬರೀ ಎರಡ್ ಸಾವ್ರ ರೂಪಾಯಿ ಅಷ್ಟೇ ಅಯ್ತ್ರೀ..

INSPECTOR
ಪರ್ವಾಗಿಲ್ಲ ಬಿಡು. ಮಿಕ್ಕಿದ್ದು ಅದ್ರ owner ಬಂದಿದಾರೆ. ಅವ್ರ್ ಕೊಡ್ತಾರೆ. ಅಲ್ವೇನಮ್ಮ?

DEVIKA
(ಆಶ್ಚರ್ಯದಿಂದ)
ನಾನಾ, ಯಾಕ್ ಸರ್?

INSPECTOR
ನಿಮ್ ನಾಯಿ ನಮ್ ಜೀಪಿನ ಗಾಜು ಒಡ್ದು ಹಾಕಿದೆ.. ಅದಿಕ್ಕೆ.
(Constable ಕಡೆ ನೋಡಿ)
ಏಯ್ ಬಿಟ್ಬಿಡೋ ಅವ್ರನ್ನ..

DEVIKA
Sir, ಬೇಕಿದ್ರೆ ಆ ಎರಡ್ ಸಾವ್ರ ನಾನೇ ಕೊಡ್ತೀನಿ. ಅವ್ನ ಮಾತ್ರ release ಮಾಡ್ಬೇಡಿ ಸರ್.

DHARMA (O.S)
ಸರ್, ಒಂಚೂರು ಬೇಗ ತೆಗೀರಿ..

INSPECTOR
ದುಡ್ಡಿಸ್ಕೊಂಡು ಅವ್ನ ಇಲ್ಲಿ ಇಟ್ಕೊಳಕ್ಕೆ ಇದೇನ್ lodge ಏನಮ್ಮ?

* ದೇವಿಕಾ ಅಸಹನೆಯಿಂದ ನೋಡುತ್ತಿದ್ದಾಳೆ.

INSPECTOR (CONT'D)
(Constable ಕಡೆ ನೋಡಿ)
ಏಯ್.. Sign ಹಾಕ್ಸಿ ಕಳಿಸ್ರೀ ಅವ್ನ..

CONSTABLE
ಸರಿ ಸರ್..

* ಎಂದು ಹೇಳಿ cell ಬೀಗ ತೆರೆಯಲು ಹೊರಡುತ್ತಾನೆ. ದೇವಿಕಾ ಸಿಟ್ಟಿನಿಂದ ಹಿಂದೆ ತಿರುಗಿ ನೋಡುತ್ತಾಳೆ. Inspector ಎದ್ದು ನಿಂತು ದೇವಿಕಾಳನ್ನು ನೋಡಿ,

INSPECTOR
ನಿನ್ ದುಡ್ ಕೊಟ್ಟು ನಿನ್ ನಾಯೀನ ಕರ್ಕೊಂಡು ಹೋಗು.

* ಎಂದು  ಹೇಳಿ ನೀರು ಕುಡಿಯಲು ಹೋಗುತ್ತಾರೆ. ದೇವಿಕಾ inspector ನ ನೋಡಿ,

DEVIKA
ಸರ್ ನೀವ್ ಇವನನ್ನ ಬಿಡೋ ಹಾಗಿಲ್ಲ..ನಾನ್ animal welfare officer. ನನ್ನತ್ರ proof ಇದೆ. ಈ ಮನುಷ್ಯ ಆ ನಾಯೀನ..

* Constable ಹಿಂದಿನಿಂದ ಬಂದು ದೇವಿಕಾ ಮಾತಿಗೆ ಅಡ್ಡ ಬಾಯಿ ಹಾಕಿ,

CONSTABLE
ಮೇಡಂ ಅವ್ರೆ.. ನಿಮ್ ನಾಯಿ ರೀ.

* ಎಂದು ಹೇಳಿ leash ಸಮೇತ ಚಾರ್ಲಿಯನ್ನು ಒಪ್ಪಿಸುತ್ತಾನೆ. ಧರ್ಮ ಪಕ್ಕದಲ್ಲಿ ಬಂದು ನಿಲ್ಲುತ್ತಾನೆ. ದೇವಿಕಾ leash ತೆಗೆದುಕೊಂಡು,

DEVIKA
ಈ ಮನುಷ್ಯ ಆ ನಾಯಿಗೆ torture ಕೊಡ್ತಿದ್ದಾನೆ ಅಂತ.

* ಧರ್ಮ ದೇವಿಕಾಳನ್ನು ದಿಟ್ಟಿಸಿ ನೋಡುತ್ತಾನೆ.

DEVIKA (CONT'D)
ಅಷ್ಟೇ ಅಲ್ಲ ಒಬ್ಬ criminal ಜೊತೆ ಸೇರಿ illegal breeding center ಕೂಡಾ ನಡೆಸ್ತಾ ಇದ್ದಾನೆ.

* ಧರ್ಮ ಚಾರ್ಲಿಯನ್ನು ನೋಡುತ್ತಾನೆ. ಚಾರ್ಲಿ ಮುಂದೆ ನೋಡುತ್ತಿದ್ದಾನೆ. ಧರ್ಮ ಮುಂದೆ ನೋಡಿದಾಗ ಗೋಡೆಯಲ್ಲಿರುವ ಭಾವಚಿತ್ರದ ಮೇಲೆ ಬೆಳಕಿನ ಕಿರಣ ಚಲಿಸುತ್ತಿದೆ. ಧರ್ಮ table ಮೇಲೆ ನೋಡಿದಾಗ spring clockನಿಂದ ಬೆಳಕು ಪ್ರತಿಫಲಿಸುತ್ತಿದೆ.

DEVIKA (O.S)
IPC section 428 ಹಾಗೂ 429 ಪ್ರಕಾರ it's an offense to kill or hurt any animal including stray dog.
ಅಂತದ್ರಲ್ಲಿ ಇವ್ನು ಮತ್ತೆ ಇವ್ನ boss ಸೇರ್ಕೊಂಡು ಅದೆಷ್ಟು ಮೂಕ ಪ್ರಾಣಿಗಳಿಗೆ ಹಿಂಸೆ ಕೊಟ್ಟಿದ್ದಾರೆ ಗೊತ್ತಾ?

* ಧರ್ಮ spring clockಅನ್ನು ಕದಲಿಸುತ್ತಾನೆ. ಬೆಳಕಿನ ಕಿರಣ inspector ಮೈ ಮೇಲೆ ಬೀಳುತ್ತಿದೆ.

DEVIKA (O.S. CONT'D)
ಇವ್ನು ಮಾಡಿರೋದೆಲ್ಲ CCTV ಲಿ capture ಆಗಿದೆ ಸರ್.
With proof ಎಲ್ಲಾದನ್ನೂ submit ಮಾಡ್ತೀನಿ.

* ಧರ್ಮ ಚಾರ್ಲಿಯನ್ನು ನೋಡುತ್ತಾನೆ. ಚಾರ್ಲಿ ಬೆಳಕಿನ ಕಿರಣವನ್ನೇ ನೋಡುತ್ತಿದ್ದಾಳೆ. ಧರ್ಮ spring clockಅನ್ನು ಸ್ವಲ್ಪ ಕೆಳಗಡೆ ಸರಿಸಿದಾಗ ಬೆಳಕಿನ ಕಿರಣ inspectorನ ಹಿಂಭಾಗಕ್ಕೆ ಬೀಳುತ್ತಿದೆ.

DEVIKA (O.S. CONT'D)
ನೀವ್ ನೋಡಿದ್ರೆ ದುಡ್ ಇಸ್ಕೊಂಡು release ಮಾಡ್ತಿದ್ದೀರ.
ನನ್ team ಬರೋವರೆಗೂ ನೀವ್ ಇವ್ನನ್ನ release ಮಾಡೋ ಹಾಗಿಲ್ಲ.

* ಚಾರ್ಲಿ ಬೆಳಕಿನ ಕಿರಣವನ್ನೇ ನೋಡುತ್ತಿದ್ದಾಳೆ.

DEVIKA (CONT'D)
(ಎದ್ದುನಿಂತು)
ನೀವೇನಾದ್ರೂ ಹಾಗ್ ಮಾಡಿದ್ರೆ ನಾನ್ ನಿಮ್ ಮೇಲೂ strick action ತಗೋಬೇಕಾಗುತ್ತೆ.

* ಚಾರ್ಲಿ ತಕ್ಷಣ ಓಡಿ ಹೋಗಿ inspectorನ ಹಿಂಭಾಗಕ್ಕೆ ಬಾಯಿ ಹಾಕುತ್ತಾಳೆ. Inspector ನೋವಿನಿಂದ ಕಿರುಚಿ ಹಿಂದೆ ತಿರುಗುತ್ತಾನೆ. ಧರ್ಮ ದೇವಿಕಾಳ ಮುಖ ನೋಡುತ್ತಿದ್ದಾನೆ. ದೇವಿಕಾ ಗಾಬರಿಯಿಂದ ಮುಂದೆ ನೋಡುತ್ತಿದ್ದಾಳೆ. Inspector ದೇವಿಕಾಳನ್ನ ನೋಡಿ ಸಿಟ್ಟಿನಿಂದ,

INSPECTOR
ದುಡ್ ಕೊಟ್ಟು ಕರ್ಕೊಂಡ್ ಹೋಗ್ರಿ ನಿಮ್ ನಾಯೀನಾ.

* ಧರ್ಮ ದೇವಿಕಾಳನ್ನು ನೋಡುತ್ತಾನೆ. ದೇವಿಕಾ ಕಕ್ಕಾಬಿಕ್ಕಿಯಾಗಿ ನಿಂತಿದ್ದಾಳೆ,

CUT TO

EXT. DAY. KARWAR POLICE STATION

* Police station ಹೊರಗಡೆ ಧರ್ಮ ಚಾರ್ಲಿಗೆ food bowl ನಲ್ಲಿ ನೀರು ಕುಡಿಸುತ್ತಿದ್ದಾನೆ. ದೇವಿಕಾ ಹೊರಗಡೆ ಬಂದು ಸ್ವಲ್ಪ ದೂರದಲ್ಲಿ ನಿಂತು ಧರ್ಮನ photo click ಮಾಡುತ್ತಾಳೆ. ಧರ್ಮ tablet ತೆಗದು ಚಾರ್ಲಿಗೆ ತಿನ್ನಿಸುತ್ತಾನೆ. ಅದನ್ನು ನೋಡಿದ ತಕ್ಷಣ ದೇವಿಕಾ ಓಡಿ ಬಂದು,

DEVIKA
ಏಯ್.. ಏನ್ ಕೊಡ್ತಿದ್ದೀಯ?

* ಧರ್ಮ ಉತ್ತರಿಸದೆ ಗಾಡಿಯಲ್ಲಿ ಹತ್ತಿ ಕುಳಿತುಕೊಳ್ಳುತ್ತಾಳೆ. ದೇವಿಕಾ ಕೂಡಾ sidecarನಲ್ಲಿ ಕುಳಿತು ಧರ್ಮನನ್ನು ದಿಟ್ಟಿಸಿ ನೋಡುತ್ತಿದ್ದಾಳೆ. ಧರ್ಮ ದೇವಿಕಾಳನ್ನು ನೋಡಿ ಅಸಹನೆಯಿಂದ,

DHARMA
ಕೆಳಗಿಳಿ.

DEVIKA
ನಮ್ team ಬರೋವರೆಗೂ ನಾನ್ ಇದರ ಜೊತೇನೇ ಇರ್ತೀನಿ.

* ಧರ್ಮ ಸಿಟ್ಟಿನಿಂದ,

DHARMA
ಮರ್ಯಾದೆಯಿಂದ ಕೆಳಗಿಳಿ..

DEVIKA
(ಸಿಟ್ಟಿನಿಂದ)
ನೀನೆಂತಾ ಕ್ರೂರಿ ಅಂತ ನನಿಗ್ ಗೊತ್ತಿಲ್ಲಾ ಅಂತ ಅನ್ಕೊಂಡಿದೀಯಾ? ನೀನಿದನ್ನ ಎಲ್ಲಿಗ್ ಎಲ್ಲಿಗ್ ಕರ್ಕೊಂಡು ಹೋಗ್ತಿದೀಯಾ ಅಂತನೂ ಚನ್ನಾಗ್ ಗೊತ್ತು..

INSPECTOR (O.S)
ಏಯ್ ಇಬ್ರೂ ಹೊರಡ್ತೀರಾ ಇಲ್ಲ ಒದ್ದು ಒಳಗ್ ಹಾಕ್ಲಾ?

* ಧರ್ಮ bullet start ಮಾಡುತ್ತಾನೆ.

* KATEY SONG STARTS

CUT TO

EXT. DAY. VARIOUS ROADS (KATEY SONG)

2 SHOTS IN VARIOUS LOCATIONS

* ಧರ್ಮ bullet ಓಡಿಸುತ್ತಿದ್ದಾನೆ. ದೇವಿಕಾ sidecarನಲ್ಲಿ ಸಿಡುಕು ಮುಖ ಮಾಡಿ ಚಾರ್ಲಿ ಜೊತೆಗೆ ಕುಳಿತಿದ್ದಾಳೆ.

CUT TO

EXT. EVENING. BRIDGE (KATEY SONG)

* HELICAM SHOT: BRIDGE ಮೇಲೆ ಧರ್ಮನ ಗಾಡಿ ಹೋಗುತ್ತಿದೆ.

CUT TO

EXT. NIGHT. ROAD (KATEY SONG)

2 SHOTS IN VARIOUS LOCATIONS

* ರಾತ್ರಿಯಾಗುತ್ತದೆ. ಧರ್ಮ ಗಾಡಿ ಓಡಿಸುತ್ತಿದ್ದಾನೆ. ದೇವಿಕಾ sidecarನಲ್ಲಿ ಚಾರ್ಲಿ ಜೊತೆಗೆ ಕುಳಿತಿದ್ದಾಳೆ.

CUT TO

EXT. DAY. ROAD (KATEY SONG)

* ಧರ್ಮ ಗಾಡಿ ಓಡಿಸುತ್ತಿದ್ದಾನೆ.ದೇವಿಕಾ sidecarನಲ್ಲಿ ಚಾರ್ಲಿ ಜೊತೆಗೆ ಕುಳಿತಿದ್ದಾಳೆ.

CUT TO

EXT. DAY. ROAD (KATEY SONG)

* ಧರ್ಮನ ಗಾಡಿ ಹಾದು ಹೋದಂತೆ ಮೈಲುಗಲ್ಲು ಕಾಣಿಸುತ್ತದೆ.

CUT TO

EXT. DAY. ROAD (KATEY SONG)

* HELICAM SHOT: ಧರ್ಮ, ದೇವಿಕಾ ಹಾಗೂ ಚಾರ್ಲಿ ಪ್ರಯಾಣಿಸುತ್ತಿದ್ದಾರೆ.

CUT TO

EXT. EVENING. ROADSIDE

* ಧರ್ಮ ರಸ್ತೆ ಬದಿಯಲ್ಲಿ ಗಾಡಿ ನಿಲ್ಲಿಸಿ ಮೂತ್ರ ವಿಸರ್ಜಿಸಲು ಇಳಿದು ಹೋಗುತ್ತಾನೆ. ದೇವಿಕಾ ತಕ್ಷಣ ಗಾಡಿಯಿಂದ ಇಳಿದು ಧರ್ಮನ bag ತೆರೆದು ಒಂದೊಂದೇ ವಸ್ತುಗಳನ್ನು ಪರೀಕ್ಷಿಸುತ್ತಾಳೆ. Bag ನಲ್ಲಿ welding equipments ಕಾಣಿಸುತ್ತವೆ. ದೇವಿಕಾ ಗಾಬರಿಗೊಳ್ಳುತ್ತಾಳೆ. ದೇವಿಕಾಳನ್ನು ನೋಡಿ ಚಾರ್ಲಿ ಬೊಗಳುತ್ತಾಳೆ. ದೇವಿಕಾ ಚಾರ್ಲಿಯನ್ನು ನೋಡಿ,

DEVIKA

ಏಯ್.. ಬೊಗಳ್ಬೇಡ. ನಾನ್ ನಿನ್ನನ್ನ save ಮಾಡೋಕ್ ಬಂದಿರೋದು..

* ತಿರುಗಿ ನೋಡಿದಾಗ ಧರ್ಮ ವಾಪಸ್ ಬರುತ್ತಿದ್ದಾನೆ. ದೇವಿಕಾ bagನಿಂದ ತೆಗೆದಿರುವ ಎಲ್ಲಾ ವಸ್ತುಗಳನ್ನು ಮತ್ತೆ ತುಂಬಿಸಿಡುತ್ತಾಳೆ.

* ಧರ್ಮ bullet start ಮಾಡಿ ಹೊರಡುತ್ತಾನೆ. ದೇವಿಕಾ ಚಾರ್ಲಿಯ ಜೊತೆಗೆ sidecarನಲ್ಲಿ ಕುಳಿತಿದ್ದಾಳೆ.

CUT TO

EXT. EVENING. ROAD

* ಧರ್ಮ ಗಾಡಿ ಓಡಿಸುತ್ತಿದ್ದಾನೆ. ದೇವಿಕಾ ತನ್ನ bag ನಲ್ಲಿ ಇರುವ Pepper spray ತೆಗೆದು ನೋಡಿ ಧರ್ಮನನ್ನು ಓರೆಗಣ್ಣಿನಿಂದ ನೋಡುತ್ತಾಳೆ.

KATEY SONG ENDS

ರಸ್ತೆಯಲ್ಲಿ ಹಲ್ಲಿಯೊಂದು ಓಡಿ ಹೋಗುತ್ತದೆ. ಅದನ್ನು ಗಮನಿಸಿದ ಚಾರ್ಲಿ ಬೊಗಳುತ್ತಾಳೆ. ಧರ್ಮ ಚಾರ್ಲಿಯನ್ನು ನೋಡಿ,

DHARMA

ಒಳ್ಳೆಯವ್ರ ಅಂತ? ನೀವ್ ವಾಪಸ್ ಬಂದ್ಬಿಡಿ. ಸುಮ್ನೆ ಅಷ್ಟು ದೂರ ಹೋಗಿ..

* ದೇವಿಕಾ ಕಕ್ಕಾಬಿಕ್ಕಿಯಾಗಿ phone cut ಮಾಡಿ ಮುಜುಗರಗೊಂಡು ಧರ್ಮನನ್ನು ನೋಡುತ್ತಾಳೆ. ಚಾರ್ಲಿ ತಲೆಯೆತ್ತಿ ಧರ್ಮನನ್ನು ನೋಡುತ್ತಾಳೆ. ಧರ್ಮ ದೇವಿಕಾಳನ್ನು ದಿಟ್ಟಿಸಿ ನೋಡುತ್ತಿದ್ದಾನೆ. ಚಾರ್ಲಿ ಮತ್ತೆ ದೇವಿಕಾಳನ್ನು ನೋಡುತ್ತಾಳೆ. ದೇವಿಕಾ ಚಾರ್ಲಿಯನ್ನು ನೋಡಿ,

DEVIKA

ಬಾ ಚಾರ್ಲಿ..

CUT TO

EXT/INT. NIGHT. TENT

* ರಾತ್ರಿ ಹೊತ್ತು. Dessert ನಲ್ಲಿ Tent ಸಿದ್ಧಪಡಿಸಲಾಗಿದೆ. ಹೊರಗಡೆ Campire ಹಾಕಲಾಗಿದೆ. ದೇವಿಕಾ campfire ಪಕ್ಕದಲ್ಲಿ ಕುಳಿತು ಬಿಸಿಕಾಯಿಸಿಕೊಳ್ಳುತ್ತಿದ್ದಾಳೆ. ಚಾರ್ಲಿ tent ಒಳಗಡೆ ಮಲಗಿದ್ದಾಳೆ. ಧರ್ಮ Bullet ಹತ್ತಿರ ನಿಂತುಕೊಂಡಿದ್ದಾನೆ. ದೇವಿಕಾ ಧರ್ಮನನ್ನು ನೋಡಿ,

DEVIKA

Breeder ಮನೆಲಿದ್ದ dogs ಎಲ್ಲ safe ಆಗಿದೆ. Thank you.

* ಧರ್ಮ bullet ಗೆ ಕಟ್ಟಿರುವ bag ನಿಂದ ಕೆಲವು ವಸ್ತುಗಳನ್ನು ಹೊರತೆಗೆಯುತ್ತಿದ್ದಾನೆ.

DEVIKA

ನಾಳೆ ವಾಪಸ್ ಹೋಗ್ತೀನಿ.. ಅಮ್ಮಂಗೆ ಹೇಳ್ದೆ ಕೇಳ್ದೆ ಬಂದ್ಬಿಟ್ಟಿದ್ದೀನಿ. So.. ಸಾಧ್ಯ ಆದ್ರೆ ಹತ್ರದ airport ಗೆ drop ಮಾಡಿ..

* ಧರ್ಮ ಕಂಬಳಿಯನ್ನು ದೇವಿಕಾಗೆ ಕೊಡುತ್ತಾ,

DHARMA

ನೀವ್ ಒಳಗ್ ಹೋಗಿ ಮಲ್ಕೊಬೋದು..

* ದೇವಿಕಾ ಎದ್ದು ನಿಂತು ಕಂಬಳಿ ತೆಗೆದುಕೊಂಡು,

DEVIKA

Thanks..

* ಎಂದು ಹೇಳಿ tent ಒಳಗಡೆ ಹೋಗುತ್ತಾಳೆ. ಧರ್ಮ ಪಕ್ಕದಲ್ಲಿ ಸಿದ್ಧಪಡಿಸಿದ್ದ ಹಾಸಿಗೆಯಲ್ಲಿ ಮಲಗುತ್ತಾನೆ.

ದೇವಿಕಾ ಚಾರ್ಲಿ ಪಕ್ಕದಲ್ಲಿ ಮಲಗುತ್ತಾಳೆ. ಚಾರ್ಲಿ ಎಚ್ಚರಗೊಂಡು ದೇವಿಕಾಳನ್ನು ನೋಡುತ್ತಾಳೆ. ಹೊರಗಡೆ ನೋಡಿದಾಗ ಧರ್ಮ ಕಾಣಿಸುತ್ತಾನೆ. ಚಾರ್ಲಿ ಅಲ್ಲಿಂದ ಎದ್ದು ಹೋಗಿ ಧರ್ಮನ ಪಕ್ಕದಲ್ಲಿ ಮಲಗುತ್ತಾಳೆ. ಧರ್ಮ ಚಾರ್ಲಿಯನ್ನು ಹಿಡಿದುಕೊಳ್ಳುತ್ತಾನೆ. ದೇವಿಕಾ ಆಶ್ಚರ್ಯದಿಂದ ನೋಡುತ್ತಿದ್ದಾಳೆ.

NIGHT TO DAY TRANSITION

* TIMELAPSE SHOT:

* Campfire ನ ಬೆಂಕಿ ಆರುತ್ತದೆ. ಸೂರ್ಯೋದಯವಾಗುತ್ತದೆ. ಮೂವರೂ ಎಚ್ಚರಗೊಳ್ಳುತ್ತಾರೆ. ಧರ್ಮ ಹಾಸಿಗೆ ಮಡಚುತ್ತಾನೆ. ದೇವಿಕಾ ಮುಖ ತೊಳೆದುಕೊಳ್ಳುತ್ತಾಳೆ. ಇಬ್ಬರೂ ಬಟ್ಟೆ ಬದಲಾಯಿಸಿಕೊಳ್ಳುತ್ತಾರೆ. ಧರ್ಮ tent ಮಡಚಿ ಎಲ್ಲಾ ವಸ್ತುಗಳನ್ನು bag ಗೆ ತುಂಬಿಸುತ್ತಾನೆ.

* ಮೂವರೂ bullet ನಲ್ಲಿ ಹೋಗುತ್ತಿದ್ದಾರೆ.

CUT TO

EXT. DAY. ATM

* ATM ಎದುರುಗಡೆ ಧರ್ಮನ BULLET ನಿಂತಿದೆ. ದೇವಿಕಾ ಪಕ್ಕದಲ್ಲಿ ನಿಂತು PHONEನಲ್ಲಿ ಮಾತನಾಡುತ್ತಿದ್ದಾಳೆ.

KEMPARAJU (O.S)
(Phone Voice)
ಮೇಡಂ.. Direct flight ನಾಳೆ evening ಏ ಇರೋದು. ಅದನ್ನೇ book ಮಾಡ್ಲಾ ಮೇಡಂ?

DEVIKA
Hmm, ಸರಿ..

* Call cut ಮಾಡಿ ATM ನತ್ತ ನೋಡುತ್ತಾಳೆ. ಚಾರ್ಲಿ ಹೊರಗಡೆ ಮಲಗಿದ್ದಾಳೆ.

CUT TO

INT. DAY. ATM

* ಧರ್ಮ ATM ಒಳಗಡೆ ಇದ್ದಾನೆ. ATM MACHINE ನಿಂದ ದುಡ್ಡು ಹೊರಗಡೆ ಬರುತ್ತದೆ. ಧರ್ಮ ATM SCREEN ನೋಡಿದಾಗ 'AVAILABLE BALANCE: 2122.00' ಎಂದು ಕಾಣಿಸುತ್ತದೆ. ಧರ್ಮ ಬೇಸರದಿಂದ ನೋಡುತ್ತಾನೆ.

CUT TO

EXT. DAY. ATM

* ಧರ್ಮ ಹೊರಗಡೆ ಬಂದು bullet ಹತ್ತಿ ಕುಳಿತುಕೊಳ್ಳುತ್ತಾನೆ. ಚಾರ್ಲಿ ಧರ್ಮನ ಹಿಂದೆ ಬಂದು sidecar ನಲ್ಲಿ ಕುಳಿತುಕೊಳ್ಳುತ್ತಾಳೆ. ದೇವಿಕಾ sidecar ನಲ್ಲಿ ಕುಳಿತು ಧರ್ಮನನ್ನು ನೋಡಿ,

DEVIKA
ಎಲ್ ಹೋದ್ರೂ ನಿಮ್ ಹಿಂದೇನೇ ಬರ್ತಾಳೆ?

* ಧರ್ಮ ಗಾಡಿ kick start ಮಾಡಿ,

DHARMA
ಅವ್ಳ್ ಹಂಗೆ.. Strangersನೆಲ್ಲ ನಂಬಲ್ಲ.

* ದೇವಿಕಾ ಅಸಹನೆಯಿಂದ ನೋಡುತ್ತಾಳೆ. ಧರ್ಮ ಗಾಡಿ ಹೊರಡಿಸುತ್ತಾನೆ.

CUT TO

EXT. DAY. ROAD

* ದೂರದ ಆಕಾಶದಲ್ಲಿ Paragliding ಹಾರಾಡುತ್ತಿದೆ.

DEVIKA
ನಾನು ladakಗೆಲ್ಲ ಹೋಗಿದ್ದೀನಿ.. Bullet ಅಲ್ಲಿ.. ಅದು solo trip So ನೀವ್ ಎಲ್ಲಿವರೆಗೂ travel ಮಾಡೋ plan ಇದೆ?

* ಚಾರ್ಲಿ ಆಕಾಶದತ್ತ ನೋಡಿ ಬೊಗಳುತ್ತಿದ್ದಾಳೆ. ದೇವಿಕಾ ಹಾಗೂ ಧರ್ಮ ಆಕಾಶದತ್ತ ನೋಡುತ್ತಾರೆ. ಆಕಾಶದಲ್ಲಿ paragliding ಮಾಡುತ್ತಿರುವುದು ಕಾಣಿಸುತ್ತಿದೆ. ಚಾರ್ಲಿ

ಬೊಗಳುತ್ತಿದ್ದಾಳೆ. ಧರ್ಮ ಚಾರ್ಲಿಯನ್ನು ನೋಡಿ ತಕ್ಷಣ ಗಾಡಿಯನ್ನು ಆ ಕಡೆಗೆ ತಿರುಗಿಸುತ್ತಾನೆ.

DEVIKA
(ಆಶ್ಚರ್ಯದಿಂದ)
ಏಯ್. ಎಲ್ಲೋಗಿದ್ದೀರ?

CUT TO

EXT. DAY. PARAGLIDING SPOT

* ಮೂವರೂ paragliding ನಡೆಯುತ್ತಿರುವ ಸ್ಥಳಕ್ಕೆ ತಲುಪುತ್ತಾರೆ. ಧರ್ಮ bullet ನಿಲ್ಲಿಸಿದ ತಕ್ಷಣ ಚಾರ್ಲಿ ಇಳಿದು ಓಡುತ್ತಾಳೆ. ಧರ್ಮ ಚಾರ್ಲಿಯನ್ನು ನೋಡುತ್ತಾನೆ. ಚಾರ್ಲಿ paragliding ಮಾಡುತ್ತಿರುವ ಸ್ಥಳಕ್ಕೆ ಹೋಗಿ ಮೇಲೆ ನೋಡುತ್ತಾ ಬೊಗಳುತ್ತಿದ್ದಾಳೆ. ಧರ್ಮ ಮೇಲ್ಗಡೆ ನೋಡಿದಾಗ ಆಕಾಶದಲ್ಲಿ parachute ಹಾರುತ್ತಿರುವುದು ಕಾಣಿಸುತ್ತದೆ.

CUT TO

* ಧರ್ಮ Paragliding instructor ಮುಂದೆ ನಿಂತಿದ್ದಾನೆ.

DHARMA
Excuse me sir..

INSTRUCTOR
Han ji..

DHARMA
Kya aap mere kutte ko paragliding kar sakthe ho?

INSTRUCTOR
Kutta? Nahi nahi. Kutte ko paragliding kon le jatha hai?

* ದೇವಿಕಾ ಹಿಂದಿನಿಂದ ಬಂದು,

DEVIKA
Hi Sir..

INSTRUCTOR
(ದೇವಿಕಾಳನ್ನು ನೋಡಿ ಹಲ್ಲು ಕಿಸಿಯುತ್ತಾ)
Hanji boliye..

CUT TO

* ನಡೆದುಕೊಂಡು ಬರುತ್ತಾ,

DEVIKA
ಹೋಗ್ಬೋದು. ಆದ್ರೆ ಅವ್ನ್ ಜೊತೆ ಯಾರಾದ್ರೂ ಹೋಗ್ಬೇಕಂತೆ.

* ಧರ್ಮ ದೇವಿಕಾಳನ್ನು ಹಿಂಬಾಲಿಸುತ್ತಾ,

DHARMA
ಅವ್ರೆ ಇದ್ದಾರಲ್ಲಾ? ಅವರಲ್ಲೇ ಯಾರದ್ರೂ ಹೋಗ್ಲಿ..

DEVIKA
ನಮ್ ಕಡೆಯವ್ರು ಹೋಗ್ಬೇಕು ಅಂತ ಹೇಳ್ತಿದಾರೆ.. ನೀವೇ ಹೋಗಿ ಆಲ್ವಾ?

DHARMA
ನಾನ? ನಂಗ್ ಆಗಲ್ಲ..

DEVIKA
(ಒಂದು ಕ್ಷಣ ನಿಂತು)
ಯಾಕೆ? ಭಯಾನಾ?

DHARMA
ಭಯ ಏನಿಲ್ಲ.. interest ಇಲ್ಲ ಅಷ್ಟೇ..

* ದೇವಿಕಾ ಮತ್ತೆ ಮುಂದೆ ನಡೆಯುತ್ತಾಳೆ. ಧರ್ಮ ಅವಳನ್ನು ಹಿಂಬಾಲಿಸುತ್ತಾ,

DHARMA (CONT'D)
ನೀವ್ ಹೋಗ್ಬೋದಲ್ವ? ಪಾಪ ಚಾರ್ಲಿನೂ ಖುಷಿ ಆಗ್ತಾಳೆ.

DEVIKA
ಚಾರ್ಲಿ strangers ನ ನಂಬಲ್ವಲ್ಲ? ನೀವ್ ಹೋಗಿ.. ಏನೂ ಆಗಲ್ಲ..

* ಧರ್ಮ ಭಯದಿಂದ ಮುಂದೆ ನೋಡುತ್ತಾನೆ. ಚಾರ್ಲಿ ಮೇಲೆ ನೋಡಿ ಜಿಗಿಯುತ್ತಾ ಬೊಗಳುತ್ತಿದ್ದಾಳೆ.

CUT TO

EXT. DAY. PARAGLIDING SPOT

JUMPCUTS:

* ಚಾರ್ಲಿಗೆ hook ಸಿಕ್ಕಿಸುತ್ತಾರೆ.

* ಧರ್ಮನ ಸೊಂಟಕ್ಕೆ belt ಸಿಕ್ಕಿಸಿ tight ಮಾಡುತ್ತಾರೆ.

* ಧರ್ಮ ಹಾಗೂ ಚಾರ್ಲಿ paragliding ಮಾಡಲು ಸಿದ್ದರಾಗಿದ್ದಾರೆ. ಧರ್ಮ ಭಯದಿಂದ ಕುಳಿತಿದ್ದಾನೆ. ಕ ಹಾರಲಿ ಧರ್ಮನ ಎದುರುಗಡೆ ಕುಳಿತಿದ್ದಾಳೆ. ಅವರಿಬ್ಬರ ಹಿಂದೆ ಕುಳಿತಿರುವ Operator ಹೊರಡಲು ಸಿದ್ದಗೊಳಿಸುತ್ತಿದ್ದಾನೆ. ದೇವಿಕಾ ದೂರದಲ್ಲಿ ನಿಂತು photo click ಮಾಡುತ್ತಿದ್ದಾಳೆ.

* ವ್ಯಕ್ತಿಯೊಬ್ಬ ರೆಕ್ಕೆಗಳನ್ನು ತಿರುಗಿಸಿದಾಗ motor start ಆಗುತ್ತದೆ. ಧರ್ಮ ಭಯದಿಂದ grip ಅನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತಾನೆ. ವ್ಯಕ್ತಿ ಮುಂದೆ ಬಂದು paraglide ನ ತಳ್ಳುತ್ತಾನೆ. Parachute open ಆಗುತ್ತದೆ. Paraglide ಮುಂದೆ ಚಲಿಸಿದಂತೆ ಧರ್ಮ ಕಣ್ಣು ಮುಚ್ಚಿಕೊಳ್ಳುತ್ತಾನೆ. Parachute ಮೇಲೆ ಹಾರುತ್ತಿದೆ. ಧರ್ಮ ಭಯದಿಂದ ಕಣ್ಣು ಮುಚ್ಚಿಕೊಂಡಿದ್ದಾನೆ.

* Parachute ಹಾರುತ್ತಿರುವ SHOTS

* Parachute ಸ್ವಲ್ಪ ಎತ್ತರಕ್ಕೆ ತಲುಪಿದಾಗ ಧರ್ಮ ನಿಧಾನಕ್ಕೆ ಕಣ್ಣು ತೆರೆದು ಸುತ್ತಲೂ ನೋಡುತ್ತಾನೆ. ಧರ್ಮನ ಮುಖಭಾವ ಬದಲಾಗುತ್ತದೆ. ಸುಂದರವಾದ view ಕಾಣಿಸುತ್ತಿದೆ. ಅದನ್ನು ನೋಡುತ್ತಾ ಧರ್ಮ ಖುಷಿಯಾಗುತ್ತಾನೆ. ಸ್ವಲ್ಪ ಹೊತ್ತು ಹಾರಡಿದ ನಂತರ ಧರ್ಮ ಖುಷಿಯಿಂದ ಜೋರಾಗಿ ಕಿರುಚಲು ಪ್ರಾರಂಭಿಸುತ್ತಾನೆ. Parachute ಹಾರಾಡುತ್ತಿದೆ.

* ಧರ್ಮ ಖುಷಿಯಿಂದ ಕಿರುಚುತ್ತಾ,

DHARMA
ಚಾರ್ಲಿ..

* ಚಾರ್ಲಿ ಹಿಂದೆ ತಿರುಗಿ ನೋಡುತ್ತಾಳೆ.

* DIFFERENT SHOTS OF DHARMA AND CHARLIE FLYING

* Parachute ನಿಧಾನವಾಗಿ ಕೆಳಗೆ ತಲುಪುತ್ತದೆ. Parachute ನಿಂತ ತಕ್ಷಣ ಚಾರ್ಲಿ ಕೆಳಗಿಳಿಯುತ್ತಾಳೆ. ಧರ್ಮ ನಿಧಾನಕ್ಕೆ ಅದೇ ಗುಂಗಿನಲ್ಲಿ ಕೆಳಗಿಳಿದು ನಿಧಾನಕ್ಕೆ ಮುಂದೆ ನಡೆಯುತ್ತಾನೆ.

CUT TO

EXT. DAY. ROAD

* ಧರ್ಮ ಗಾಡಿ ಓಡಿಸುತ್ತಿದ್ದಾನೆ. ದೇವಿಕಾ ಹಾಗೂ ಚಾರ್ಲಿ sidecar ನಲ್ಲಿ ಕುಳಿತಿದ್ದಾರೆ. ದೇವಿಕಾ ಧರ್ಮನನ್ನು ನೋಡಿ,

DEVIKA
ಚಾರ್ಲಿ ಹೆಸ್ರು ಹೇಳಿ ಇನ್ಯಾರೋ ಖುಷೀಲಿ ತೇಲಾಡ್ತಿದ್ರುಪ್ಪ.

* ಧರ್ಮ ತಿರುಗಿ ನೋಡುತ್ತಾನೆ.

CUT TO

EXT. NIGHT. HUT

* ರಾತ್ರಿಯಾಗಿದೆ. ಚಾರ್ಲಿ ಎರಡು ಕೈ ಮೇಲೆ ಮಾಡಿ ಮಲಗಿದ್ದಾಳೆ. ದೇವಿಕಾ ಹಾಗೂ ಧರ್ಮ farm house ಹೊರಗಡೆ ಕುಳಿತಿದ್ದಾರೆ. ಧರ್ಮ ಚಾರ್ಲಿಯ medicines ನ bag ಒಳಗಡೆ ಇಡುತ್ತಿದ್ದಾನೆ. ದೇವಿಕಾ ಚಾರ್ಲಿ ಮಲಗಿರುವುದನ್ನು ನೋಡಿ,

DEVIKA
ನಿಮಿಗ್ ಒಂದ್ ವಿಷ್ಯ ಗೊತ್ತಾ?

* ಧರ್ಮ ದೇವಿಕಾಳನ್ನು ನೋಡುತ್ತಾನೆ.

DEVIKA (CONTD)
Dogs ಮಲ್ಗೋ ಒಂದೊಂದ್ position ಕೂಡ ಅವುಗಳ feelings ಹೇಳುತ್ತೆ. ಯಾರ್ನಾದ್ರು ತುಂಬಾ ಹಚ್ಕೊಂಡು safe feel ಆದಾಗ ಮಾತ್ರ ಈ ಥರ ಮಲ್ಕೊಳೋದು.

* ಧರ್ಮ ಚಾರ್ಲಿ ಮಲಗಿರುವುದನ್ನು ನೋಡುತ್ತಾನೆ.

DEVIKA (CONTD)
ನಿಮ್ಮನ್ನ ತುಂಬಾ ನಂಬಿದ್ದಾಳೆ.

* ಧರ್ಮ ದೇವಿಕಾಳನ್ನು ನೋಡುತ್ತಾನೆ.

CUT TO

EXT. DAY. MARKET

2 SHOTS: ಧರ್ಮ, ದೇವಿಕಾ ಹಾಗೂ ಚಾರ್ಲಿ BULLETನಲ್ಲಿ ಪ್ರಯಾಣಿಸುತ್ತಿದ್ದಾರೆ.

CUT TO

EXT. EVENING ROADSIDE

* Bullet ರಸ್ತೆ ಬದಿಯಲ್ಲಿ ನಿಂತಿದೆ. ಧರ್ಮ jerry can ನಿಂದ bulletಗೆ petrol ತುಂಬಿಸುತ್ತಿದ್ದಾನೆ. ಪಕ್ಕದಲ್ಲಿ ಗೂಡಂಗಡಿ ಕಾಣಿಸುತ್ತದೆ. ದೇವಿಕಾ phone ನಲ್ಲಿ ಮಾತಾಡುತ್ತಿದ್ದಾಳೆ.

DEVIKA
Ya I'm so happy to be a part of this event. See you soon..

* ದೇವಿಕಾ call cut ಮಾಡುತ್ತಾಳೆ. ಧರ್ಮ petrol ತುಂಬಿಸುತ್ತಾ,

DHARMA
ಚಾರ್ಲಿ, ನಾಳೆಯಿಂದ sidecar full ನಿಂದೆ.

* ಎಂದು ಹೇಳಿ ಚಾರ್ಲಿಯನ್ನು ನೋಡುತ್ತಾನೆ. ಚಾರ್ಲಿ ಮೈ ತುರಿಸಿಕೊಳ್ಳುತ್ತಿದ್ದಾಳೆ.

DHARMA
ಏನಾಯ್ತು?

* ಚಾರ್ಲಿ ಒಂದೇ ಸಮನೆ ಮೈ ತುರಿಸಿಕೊಳ್ಳುತ್ತಿದ್ದಾಳೆ.

DHARMA
ಇರು ಬಂದೆ..

* ಎನ್ನುತ್ತಾ jerry can ಕೆಳಗಿಟ್ಟು ಚಾರ್ಲಿಯ ಹತ್ತಿರ ಬಂದು ಕುಳಿತುಕೊಳ್ಳುತ್ತಾನೆ.

DHARMA
(ಚಾರ್ಲಿಯ harness ತೆಗೆಯುತ್ತಾ)
ಬಿಡು.. ನಿಂಗೆ ಮಣ್ಣಲ್ಲಿ ಉರುಳಾಡ್ಬೇದ ಅಂದ್ರೆ..

* ಎನ್ನುತ್ತಾ harness ತೆಗೆದಾಗ ಅದರಲ್ಲಿ ಪೂರ್ತಿ ಚಾರ್ಲಿಯ ಕೂದಲು ಅಂಟಿಕೊಂಡಿದೆ. Harness ಕೆಳಗೆ ಸರಿಸಿ ನೋಡಿದಾಗ ಚಾರ್ಲಿಯ ಮೈಯಲ್ಲಿ ಕಜ್ಜು ಕಾಣಿಸುತ್ತದೆ. ಧರ್ಮನಿಗೆ ಆಘಾತದಿಂದ ನೋಡುತ್ತಿದ್ದಾನೆ.

DEVIKA (O.S)
ಹೋಗೋಣ? ಸಂಜೆ 6 ಘಂಟೆಗೆ airport ಅಲ್ಲಿ ಇರ್ಬೇಕು.

* ಎಂದು ಹೇಳಿ ಮುಂದೆ ನೋಡಿದಾಗ ಧರ್ಮ harness ಹಿಡಿದುಕೊಂಡಿರುವುದು ಕಾಣಿಸುತ್ತದೆ.

DEVIKA (O.S)
Oh my God..
(ಸಿಟ್ಟಿನಿಂದ)
ನಿಂಗೇನ್ ತಲೆ ಕೆಟ್ಟಿದಿಯ? ಇದನ್ನೆಲ್ಲಾ ಅವಾಗ್ ಅವಾಗ check ಮಾಡ್ಬೇಕಲ್ವಾ? ಏಳು..

* ಎನ್ನುತ್ತಾ ಧರ್ಮನನ್ನು ತಳ್ಳಿ ಚಾರ್ಲಿಯ ಪಕ್ಕ ಕುಳಿತುಕೊಳ್ಳುತ್ತಾಳೆ. ಧರ್ಮ ಏನೂ ತೋಚದೆ ಅಲ್ಲಿಂದ ಎದ್ದು ಹೋಗುತ್ತಾನೆ.

DEVIKA (CONTD.)
Skin infection ಆಗಿದೆ.. ಇದೆಲ್ಲ ಎಷ್ಟ್ dangerous ಅಂತ ಗೊತ್ತ? ಸರಿಯಾಗ್ ನೋಡ್ಕೊಳ್ಳೋಕ್ ಆಗಲ್ಲ ಅಂದ್ರೆ ಯಾಕ್ ಬೇಕು ಈ ಶೋಕಿ ಎಲ್ಲ? ಚಾರ್ಲಿ ಎಷ್ಟು ಗಾಯ ಮಾಡ್ಕೊಂಡಿದ್ದೀಯ?

* ಧರ್ಮ ಪಕ್ಕದಲ್ಲಿರುವ tea ಅಂಗಡಿ ಮುಂದೆ ಬಂದು,

DHARMA
Cigarette..

* ಚಾರ್ಲಿ ಧರ್ಮನನ್ನು ನೋಡುತ್ತಿದ್ದಾಳೆ.

DEVIKA
ಒಂದ್ ನಿಮಿಷ, ಇಲ್ಲೇ ಇರು..

* ಎಂದು bullet ಹತ್ತಿರ ಹೋಗುತ್ತಾಳೆ. Cigarette ಹಿಡಿದು ಕುಳಿತಿದ್ದ ಧರ್ಮ ಚಾರ್ಲಿಯತ್ತ ನೋಡುತ್ತಾನೆ. ಚಾರ್ಲಿ ಧರ್ಮನನ್ನೇ ನೋಡುತ್ತಿದ್ದಾಳೆ. ಧರ್ಮ cigarette ಎಸೆದು ಚಾರ್ಲಿಯನ್ನು ನೋಡಿ 'ಬಾ' ಎಂಬಂತೆ ಸನ್ನೆ ಮಾಡುತ್ತಾನೆ. ಚಾರ್ಲಿ ನಡೆದುಕೊಂಡು ಬಂದು bench ಹತ್ತಿ ಧರ್ಮನ ಪಕ್ಕ ಕುಳಿತುಕೊಳ್ಳುತ್ತಾಳೆ. ಧರ್ಮ ಚಾರ್ಲಿಯನ್ನು ಅಪ್ಪಿಕೊಳ್ಳುತ್ತಾನೆ. ದೇವಿಕಾ ಧರ್ಮನ bagನಲ್ಲಿರುವ medical report ನೋಡುತ್ತಾಳೆ. Report ಓದಿದಾಗ ಚಾರ್ಲಿಗೆ cancer ಇರುವುದು ತಿಳಿಯುತ್ತದೆ. ದೇವಿಕಾ ಬೇಸರದಿಂದ ಧರ್ಮ ಹಾಗೂ ಚಾರ್ಲಿಯ ಕಡೆ ನೋಡುತ್ತಾಳೆ. ಧರ್ಮ ಚಾರ್ಲಿಯನ್ನು ಅಪ್ಪಿಕೊಂಡು ಕುಳಿತಿದ್ದಾನೆ.

O'GA SONG STARTS

* 2 SHOTS IN VARIOUS LOCATIONS: ಧರ್ಮ, ದೇವಿಕಾ ಹಾಗೂ ಚಾರ್ಲಿ BULLETನಲ್ಲಿ ಪ್ರಯಾಣಿಸುತ್ತಿದ್ದಾರೆ.

CUT TO

INT. NIGHT. HOTEL (O'GA SONG)

* ಧರ್ಮ ಚಾರ್ಲಿಯನ್ನು ಎತ್ತಿಕೊಂಡು hotel ಗೆ ಬಂದಿದ್ದಾನೆ. ದೇವಿಕಾ ಹಿಂದಿನಿಂದ ಬಂದು ಅವರಿಬ್ಬರನ್ನೂ ನೋಡುತ್ತಿದ್ದಾಳೆ.

CUT TO

INT. NIGHT. HOTEL (O'GA SONG)

* ದೇವಿಕಾ ತನ್ನ room ಒಳಗೆ phone ನಲ್ಲಿ ಮಾತನಾಡುತ್ತಿದ್ದಾಳೆ.

DEVIKA
ಅಮ್ಮ, flight miss ಆಯ್ತಮ್ಮ.. ಸರಿ..

* ದೇವಿಕಾ phone cut ಮಾಡುತ್ತಾಳೆ.

SLIDER SHOT TRANSITION TO

INT. NIGHT. HOTEL (O'GA SONG)

* ಧರ್ಮ room ಒಳಗಡೆ ಹಾಸಿಗೆಯ ಮೇಲೆ ಕುಳಿತಿದ್ದಾನೆ. ಚಾರ್ಲಿ ಧರ್ಮನ ಮಡಿಲಲ್ಲಿ ಮಲಗಿದ್ದಾಳೆ. Table ಮೇಲಿರುವ ಧರ್ಮನ phone ring ಆಗುತ್ತದೆ. Phone screen ನಲ್ಲಿ 'Adrika Mom' ಎಂದು ಕಾಣಿಸುತ್ತಿದೆ.

CUT TO

EXT. DAY. STREET (O'GA SONG)

* ಧರ್ಮ, ದೇವಿಕಾ ಹಾಗೂ ಚಾರ್ಲಿ bullet ನಲ್ಲಿ ಪ್ರಯಾಣಿಸುತ್ತಿದ್ದಾರೆ.

CUT TO

EXT. DAY. HUT (O'GA SONG)

* ಧರ್ಮ ಒಂದು ಡಾಬಾ ಹೊರಗಡೆ bullet tyre ಗೆ ಗಾಳಿ ತುಂಬಿಸುತ್ತಿದ್ದಾನೆ. ದೇವಿಕಾ ಹೊರಗಡೆ benchನಲ್ಲಿ ಕುಳಿತು ಚಾರ್ಲಿಗೆ Injection ಕೊಡುತ್ತಿದ್ದಾಳೆ. ಧರ್ಮ ಅವರಿಬ್ಬರನ್ನು ನೋಡುತ್ತಿದ್ದಾನೆ.

CUT TO

EXT. EVENING. SHEEPYARD (O'GA SONG)

* ಧರ್ಮ ಹಾಗೂ ದೇವಿಕಾ ಬಯಲು ಪ್ರದೇಶದಲ್ಲಿ ಒಂದು bench ಮೇಲೆ ಕುಳಿತಿದ್ದಾರೆ. ಎದುರುಗಡೆ ಕುರಿಗಳ ಗುಂಪು ಕಾಣಿಸುತ್ತಿದೆ.

DHARMA
ದಿನ ice creamಗೋಸ್ಕರ ಕುಣಿತಿದ್ದಾಳೆ ಅನ್ಕೊಂಡಿದ್ದೆ..Snow ಅಂತ ಆಮೇಲ್ ಗೊತ್ತಾಯ್ತು..

* ಚಾರ್ಲಿ ಕುರಿಗಳ ಗುಂಪಿನಲ್ಲಿ ಆಟವಾಡುತ್ತಿದ್ದಾಳೆ.

DHARMA (CONT'D)
ಅವಳಿಗೆ ಏನಾದ್ರೂ ಆಗೋ ಮುಂಚೆ ಒಮ್ಮೆ snow ತೋರ್ಸ್ಬೇಕು ಅಂತ ಅಷ್ಟೇ.

DEVIKA
(ಧರ್ಮನ ಹೆಗಲ ಮೇಲೆ ಕೈಯಿಟ್ಟು)
Hey don't worry, she will be alright.. ನಿಮ್ ಪ್ರೀತಿ ಅವಳನ್ನ strong ಆಗಿಡುತ್ತೆ.

* ಧರ್ಮ ತಲೆಯಾಡಿಸುತ್ತಾನೆ.

CUT TO

EXT. DAY. ROAD (O'GA SONG)

* ದೇವಿಕಾ bullet ಓಡಿಸುತ್ತಿದ್ದಾಳೆ. ಧರ್ಮ ಚಾರ್ಲಿಯನ್ನು ತಬ್ಬಿಕೊಂಡು sidecarನಲ್ಲಿ ಮಲಗಿದ್ದಾನೆ. ದೇವಿಕಾ ಅವರಿಬ್ಬರನ್ನೂ ನೋಡುತ್ತಾಳೆ.

CUT TO

EXT. NIGHT. CAMPFIRE (O'GA SONG)

* Campfire ಹಾಕಲಾಗಿದೆ. ಸುತ್ತಲೂ ಜನರು ಕುಳಿತಿದ್ದಾರೆ. ಇಬ್ಬರು Hippie singers guitar ನುಡಿಸಿಕೊಂಡು street song ಹಾಡುತ್ತಿದ್ದಾರೆ. ಚಾರ್ಲಿ ಧರ್ಮನ ಮಡಿಲಲ್ಲಿ ಮಲಗಿದ್ದಾಳೆ. ದೇವಿಕಾ ಪಕ್ಕದಲ್ಲಿ ಕುಳಿತಿದ್ದಾಳೆ. Foreigners ಹಾಡನ್ನು ಕೇಳಿಸಿಕೊಳ್ಳುತ್ತಿದ್ದಾರೆ. Singers ಹಾಡು ಮುಗಿಸುತ್ತಾರೆ.

O'GA SONG ENDS

CUT TO

EXT. DAY. DABA

* ಧರ್ಮನ bullet ಒಂದು ಡಾಬಾ ಹೊರಗಡೆ ನಿಂತಿದೆ. ಡಾಬಾ ಹೊರಗಡೆ ಕುಳಿತಿರುವ ಧರ್ಮ ನೀರು ಕುಡಿಯುತ್ತಿದ್ದಾನೆ. ಚಾರ್ಲಿ ಧರ್ಮನ ಪಕ್ಕದಲ್ಲಿ ಕುಳಿತು ಮೊಸರು ಕುಡಿಯುತ್ತಿದ್ದಾಳೆ. ದೇವಿಕಾ ಯಾರನ್ನೋ ಕಾಯುತ್ತಾ ಕುಳಿತಿದ್ದಾಳೆ. ಧರ್ಮ ಚಾರ್ಲಿಯನ್ನು ನೋಡಿ,

DHARMA
ಬೇಗ ಮುಗ್ಸು ಚಾರ್ಲಿ. ಹೊರಡೋಣ.

* ಡಾಬಾ ಮುಂದಿನ ರಸ್ತೆಯಲ್ಲಿ ಒಂದು car ಬರುತ್ತಿದೆ. ದೇವಿಕಾ car ಬರುತ್ತಿರುವುದನ್ನು ನೋಡಿ ಮುಗುಳ್ನಗುತ್ತಾಳೆ. Car ಡಾಬಾ ಮುಂದೆ ಬಂದು ನಿಲ್ಲುತ್ತದೆ. ಧರ್ಮ ತಿರುಗಿ ನೋಡುತ್ತಾನೆ. ಒಬ್ಬ ವ್ಯಕ್ತಿ ಹಾಗೂ photographer carನಿಂದ ಇಳಿಯುತ್ತಾರೆ. ಆ ವ್ಯಕ್ತಿ

ದೇವಿಕಾಳನ್ನು ನೋಡಿ,

KARSHAN ROY
Hey Devikaa..

* ಇಬ್ಬರೂ ಡಾಬಾ ಕಡೆಗೆ ನಡೆದುಕೊಂಡು ಬರುತ್ತಾರೆ. ದೇವಿಕಾ ಅವನನ್ನು ನೋಡಿ ಎದ್ದುನಿಂತು smile ಮಾಡುತ್ತಾಳೆ. ಧರ್ಮ ಆಶ್ಚರ್ಯದಿಂದ ನೋಡುತ್ತಿದ್ದಾನೆ.

KARSHAN ROY(CONT'D)
Hey. You look nice. It's been a while since I've seen you.
(ದೇವಿಕಾಳನ್ನು ಅಪ್ಪಿಕೊಳ್ಳುತ್ತಾ)
KARSHAN ROY (CONT'D)
How are you?

DEVIKA
I'm good.

KARSHAN ROY
I finally get to meet you..
(ಚಾರ್ಲಿಯನ್ನು ನೋಡುತ್ತಾ)
This must be Charlie..
(ಚಾರ್ಲಿಯ ತಲೆ ಸವರುತ್ತಾ)
Hey Charlie.. Hey Dharma

* ಧರ್ಮ ಅವನ ಕೈ ಕುಲುಕುತ್ತಾ,

DHARMA
Hi.

* ದೇವಿಕಾ ಕುಳಿತುಕೊಳ್ಳುತ್ತಾಳೆ. Karshan Roy ದೇವಿಕಾಳ ಪಕ್ಕ ಕುಳಿತುಕೊಂಡು ಧರ್ಮನನ್ನು ನೋಡಿ,

KARSHAN ROY
I am KARSHAN Roy. I work for Travel Diaries, it's an International Travel Magazine. Devika ನಿಮ್ ಬಗ್ಗೆ ಎಲ್ಲ ಹೇಳಿದಾಳೆ. I thought it's really interesting. So ಈ ಸಲದ cover story ಅಲ್ಲಿ ನಿಮ್ ಬಗ್ಗೆ ಬರಿಯೋಣ ಅಂತ I've decieded. I mean.. ನಿಮ್ Charlie ಬಗ್ಗೆ..So, ನಿಮ್ journey ಬಗ್ಗೆ ಹೇಳ್ಬೋದಲ್ವಾ?

* ಧರ್ಮ ಏನೂ ಉತ್ತರಿಸದೆ ದೇವಿಕಾಳನ್ನು ನೋಡುತ್ತಾನೆ. ದೇವಿಕಾ 'ಹೇಳಿ' ಎನ್ನುವಂತೆ ಸನ್ನೆ ಮಾಡುತ್ತಾಳೆ. ಧರ್ಮ ಚಾರ್ಲಿಯನ್ನು ನೋಡಿ ನಂತರ Karshan Roy ನ ನೋಡಿ 'ಆಯ್ತು' ಎನ್ನುವಂತೆ ತಲೆಯಾಡಿಸುತ್ತಾನೆ.

KARSHAN ROY
Let's Go.

* ಕರ್ಷನ್ ರಾಯ್ phone ನಲ್ಲಿ recording button ಒತ್ತುತ್ತಾನೆ.

JUMPCUTS:

Interview ಪ್ರಾರಂಭವಾಗುತ್ತದೆ. Photographer ಧರ್ಮ ಹಾಗೂ ಚಾರ್ಲಿಯ photo click ಮಾಡುತ್ತಾನೆ. Karshan Roy ಕುತೂಹಲದಿಂದ ಧರ್ಮ ಹೇಳುತ್ತಿರುವುದನ್ನು ಕೇಳುತ್ತಿದ್ದಾನೆ. ಧರ್ಮ ಚಾರ್ಲಿಯ ಕಥೆಯನ್ನು ವಿವರಿಸುತ್ತಿದ್ದಾನೆ. ಕಥೆ ಕೇಳುತ್ತಾ Karshan Roy ಹಾಗೂ ದೇವಿಕಾ ಮುಗುಳ್ನಗುತ್ತಿದ್ದಾರೆ. ಒಂದು ಹಂತದಲ್ಲಿ ಧರ್ಮ ವಿವರಿಸುತ್ತಿರುವಾಗ ಇಬ್ಬರೂ ಬೇಸರಗೊಳ್ಳುತ್ತಾರೆ.

ಚಾರ್ಲಿ ಧರ್ಮನನ್ನು ತಿರುಗಿ ನೋಡುತ್ತಾಳೆ. ಧರ್ಮ ಮಾತನಾಡುತ್ತಿದ್ದಾನೆ. ಚಾರ್ಲಿ ಧರ್ಮನ ಕೈ ಮುಟ್ಟುತ್ತಾಳೆ. ಧರ್ಮ ಮಾತನಾಡುವುದನ್ನು ನಿಲ್ಲಿಸಿ ಚಾರ್ಲಿಯನ್ನು ತಿರುಗಿ ನೋಡುತ್ತಾನೆ. ದೇವಿಕಾ ಅವರಿಬ್ಬರನ್ನೂ ನೋಡುತ್ತಿದ್ದಾಳೆ. Photographer ಕೂಡ photo ತೆಗೆಯುವುದನ್ನು ನಿಲ್ಲಿಸಿ ಧರ್ಮ ಹಾಗೂ ಚಾರ್ಲಿಯನ್ನು ಆಶ್ಚರ್ಯದಿಂದ ನೋಡುತ್ತಾನೆ.

* ಧರ್ಮ ಮಾತು ಮುಗಿಸುತ್ತಾನೆ. ಮೂವರೂ ಮೌನದಿಂದ ಕುಳಿತಿದ್ದಾರೆ.

KARSHAN ROY
Wow.. Unbelievable.

* ಧರ್ಮ ಸುಮ್ಮನೆ ಕುಳಿತಿದ್ದಾನೆ.

KARSHAN ROY(CONT'D)
I am sure ಚಾರ್ಲಿ ಎಲ್ಲಾ ಆಸೆ ಈಡೇರುತ್ತೆ. I will pray for her and for you.
(After a pause)
And thank you very much for your valuable time.

* ಧರ್ಮ ಅವರಿಬ್ಬರನ್ನೂ ನೋಡುತ್ತಿದ್ದಾನೆ.

KARSHAN ROY(CONT'D)
Alright let's go?

DEVIKA
ನೀನ್ ಹೋಗಿರು, ನಾನ್ ಬಂದೆ.

KARSHAN ROY
Sure..

* ಎಂದು ಹೇಳಿ ಎದ್ದು ನಿಂತು ಧರ್ಮನ ಕೈ ಕುಲುಕುತ್ತಾನೆ.

KARSHAN ROY
Lovely meeting you Dharma..
(ಚಾರ್ಲಿಯ ತಲೆ ಸವರುತ್ತಾ)
Bye Charlie.. Right let's go..

* ಕರ್ಷನ್ ರಾಯ್ ಹಾಗೂ photgrpaher ಅಲ್ಲಿಂದ ಹೊರಡುತ್ತಾರೆ. ಧರ್ಮ ಹಾಗೂ ದೇವಿಕಾ ಅವರಿಬ್ಬರನ್ನೂ ನೋಡುತ್ತಾರೆ. ದೇವಿಕಾ ಎದ್ದು ನಿಂತು ಧರ್ಮನ ಮುಂದೆ ಬಂದು,

DEVIKA
He's my close friend. Bangalore ಅಲ್ಲಿ ನಾವಿಬ್ರೂ ಜೊತೆಗೇ ಓದಿದ್ದು. ಅವ್ನು ಇಲ್ಲೇ ಇರೋದು. ನಾನ್ ಬಂದಿದೀನಿ ಅಂತ ಗೊತ್ತಾದ್ ಮೇಲೆ ಮನೆಗ್ ಬಾ ಅಂತ force ಮಾಡ್ತಿದ್ದ. ಹಾಗೇ ನಿಮ್ನ meet ಮಾಡ್ಸೋಣ ಅಂತ ಕರ್ಸ್ದೆ.

* ಧರ್ಮ ಏನೂ ಮಾತಾಡದೆ ಕುಳಿತಿದ್ದಾನೆ.

DEVIKA (CONTD.)
ಅದು ಅಲ್ಲ.. ನಂಗ್ ಬೇರೆ program ಇದೆ. ನಾನ್ ಹೋಗ್ಲೇ ಬೇಕು. It was really a memorable journey..
(ಚಾರ್ಲಿ ಬೇಸರದಿಂದ ನೋಡುತ್ತಿದ್ದಾಳೆ)
ಚಾರ್ಲಿಗೆ ಏನೂ ಆಗಲ್ಲ, ಎಲ್ಲ ಸರಿ ಆಗುತ್ತೆ.

* ಧರ್ಮ ತಲೆಯಾಡಿಸುತ್ತಾನೆ.

DEVIKA (CONTD.)

ನಿಮಿಗ್ ಏನೇ help ಬೇಕಿದ್ರೂ you can call me anytime.

* ದೇವಿಕಾ ಚಾರ್ಲಿಯನ್ನು ನೋಡಿ,

DEVIKA
Bye Charlie..

* ಎಂದು ಹೇಳಿ  ಚಾರ್ಲಿಯ ತಲೆಗೆ ಮುತ್ತಿಡುತ್ತಾಳೆ. ನಂತರ ಧರ್ಮನನ್ನು ನೋಡಿ,

DEVIKA
Bye

DHARMA
Bye

* ದೇವಿಕಾ ಹೊರಡುತ್ತಾಳೆ. ಚಾರ್ಲಿ ಬೇಸರದಿಂದ ದೇವಿಕಾ ಹೋಗುತ್ತಿರುವುದನ್ನು ನೋಡುತ್ತಿದ್ದಾಳೆ. ಧರ್ಮನೂ ಸಪ್ಪೆ ಮುಖದಿಂದ ನೋಡುತ್ತಿದ್ದಾನೆ. ದೇವಿಕಾ car ಹತ್ತಿರ ಬಂದು,

DEVIKA
Let's go?

* ಧರ್ಮ ಹಾಗೂ ಚಾರ್ಲಿ ಅತ್ತ ಕಡೆ ನೋಡುತ್ತಿದ್ದಾರೆ.

KARSHAN ROY (O.S)
Yes, jump in..

* Car ಮುಂದೆ ಹೋಗುತ್ತದೆ. ಧರ್ಮ ಸಪ್ಪೆ ಮುಖದಿಂದ ಕುಳಿತಿದ್ದಾನೆ. ಚಾರ್ಲಿ ಧರ್ಮನನ್ನು ನೋಡುತ್ತಾಳೆ. ಧರ್ಮ ಚಾರ್ಲಿಯನ್ನು ನೋಡುತ್ತಾ,

DHARMA
ಏನು?

* ಚಾರ್ಲಿ ಧರ್ಮನ ಮುಖ ನೆಕ್ಕುತ್ತಾಳೆ.

DHARMA
ಸಾಕ್ ಸಾಕು.. ಸಾಕು.

CUT TO

EXT. DAY. ROAD

* ಧರ್ಮ ಹಾಗೂ ಚಾರ್ಲಿ bulletನಲ್ಲಿ ಹೋಗುತ್ತಿದ್ದಾರೆ. ಚಾರ್ಲಿ ಬೇಸರದಿಂದ sidecarನಲ್ಲಿ ಕುಳಿತಿದ್ದಾಳೆ. ಧರ್ಮ ಚಾರ್ಲಿಯನ್ನು ನೋಡಿ,

DHARMA
ಇದಕ್ಕೆಲ್ಲ ಬೇಜಾರ್ ಮಾಡ್ಕೋಬೇಡ ಚಾರ್ಲಿ. ನಾವಿಬ್ರೇ ಹೊರಟಿದ್ವಲ್ವಾ? ಇಬ್ರೇ ಹೋದ್ರಾಯ್ತು.

* ಸ್ವಲ್ಪ ಮುಂದೆ ಹೋದಂತೆ bullet ನಿಲ್ಲುತ್ತದೆ.

JUMPCUTS:

* ಧರ್ಮ petrol tank ಒಳಗೆ ಕಡ್ಡಿ ಹಾಕಿ ನೋಡುತ್ತಿದ್ದಾನೆ.

* ಧರ್ಮ ಕಿಕ್ ಹೊಡೆಯುತ್ತಾ ಗಾಡಿ ಸ್ಟಾರ್ಟ್ ಮಾಡಲು ಪ್ರಯತ್ನಿಸುತ್ತಿದ್ದಾನೆ. ಚಾರ್ಲಿ sidecarನಲ್ಲಿ ಕುಳಿತಿದ್ದಾಳೆ.

* ಧರ್ಮ ಗಾಡಿಯನ್ನು ದೂಡುತ್ತಾ ಸ್ಟಾರ್ಟ್ ಮಾಡಲು ಪ್ರಯತ್ನಿಸುತ್ತಿದ್ದಾನೆ. ಚಾರ್ಲಿ ಸ್ವಲ್ಪ ದೂರದಲ್ಲಿ ಕುಳಿತು ಮುಂದೆ ನೋಡುತ್ತಿದ್ದಾಳೆ.

* ಧರ್ಮ ರಸ್ತೆ ಬದಿಯಲ್ಲಿ ನಿಂತು lift ಕೇಳುತ್ತಿದ್ದಾನೆ. ಯಾವ ಗಾಡಿಯವರೂ ನಿಲ್ಲಿಸುತ್ತಿಲ್ಲ.

* ಚಾರ್ಲಿ ಮತ್ತು ಧರ್ಮ ಸುಸ್ತಾಗಿ ಕುಳಿತಿದ್ದಾರೆ. ಧರ್ಮ ನೀರಿನ ಬಾಟಲಿ ಹಿಡಿದು ಚಾರ್ಲಿಯನ್ನು ನೋಡುತ್ತಾ,

DHARMA
ನಾಯಿ ಪಾಡು ಅಂದ್ರೆ ಇದೇ ಅನ್ಸುತ್ತೆ. ಆಲ್ವಾ ಚಾರ್ಲಿ?

* ಎಂದು ಹೇಳಿ ನೀರು ಕುಡಿಯುತ್ತಾನೆ. ಒಂದು ಪಿಕಪ್ ಟ್ರಕ್ ವೇಗವಾಗಿ ಪಾಸ್ ಆಗುತ್ತದೆ. ತಕ್ಷಣ break ಹಾಕಿದ ಶಬ್ದ ಕೇಳಿಸುತ್ತದೆ. ಟ್ರಕ್ ನಿಧಾನವಾಗಿ ಹಿಂದೆ ಬಂದು ಧರ್ಮ ಹಾಗೂ ಚಾರ್ಲಿಯ ಮುಂದೆ ನಿಲ್ಲುತ್ತದೆ. ಧರ್ಮ ಎದ್ದು ನಿಂತು ನೋಡುತ್ತಾನೆ. Driver seat ನಲ್ಲಿ ವಂಶಿನಾಥನ್ cigarette ಸೇದುತ್ತಾ ಹೊರಗೆ ನೋಡುತ್ತಿದ್ದಾನೆ. ಅವನ ಪಕ್ಕದಲ್ಲಿ ಆತನ ನಾಯಿ ಕರುಪ್ಪು ಕುಳಿತಿದ್ದಾನೆ. ಕರುಪ್ಪು ಚಾರ್ಲಿಯನ್ನು ನೋಡುತ್ತಿದ್ದಾನೆ. ವಂಶಿನಾಥನ್ ತನ್ನ ಗಾಡಿಯ ಸೈಡ್ ಮಿರರ್ ನೋಡಿದಾಗ ಧರ್ಮನ ಗಾಡಿಯ number plate ಕಾಣಿಸುತ್ತಿದೆ. ವಂಶಿನಾಥನ್ ಧರ್ಮನನ್ನು ನೋಡುತ್ತಾನೆ.

VAMSHINATHAN (O.S)
ಕರ್ನಾಟಕದಲ್ಲಿ ಎಲ್ಲಿ?

* ವಂಶಿನಾಥನ್ ಟ್ರಕ್ ಓಡಿಸುತ್ತಿದ್ದಾನೆ. ಟ್ರಕ್ ಹಿಂದುಗಡೆ ಧರ್ಮನ ಗಾಡಿಯನ್ನು ಇಡಲಾಗಿದೆ. ಧರ್ಮ ಮತ್ತು ಚಾರ್ಲಿ ಹಿಂದೆ ಕುಳಿತಿದ್ದಾರೆ. ಧರ್ಮ ವಂಶಿನಾಥನ್ ನ ನೋಡಿ,

DHARMA
ಸರ್ ಮೈಸೂರು.

VAMSHINATHAN(O.S)
ನಾ Tamilnaadu, Tamil ಬರುತ್ತಾ?

DHARMA
Konjam theriyum Sir..

VAMSHINATHAN
(ಹಿಂದೆ ತಿರುಗಿ ಧರ್ಮನನ್ನು ನೋಡಿ)
Oh Nice..

VAMSHINATHAN
Unga peru?

DHARMA
ಧರ್ಮ

VAMSHINATHAN
Myself Vamshi. Vamshinathan.
(ಕರುಪ್ಪುವನ್ನು ನೋಡುತ್ತಾ)
ಇವ ಎನ್ನ ಪಯ್ಯ ಕರುಪ್ಪು. ನಿಮ್ ಮಗನ ಹೆಸ್ರು?

DHARMA
ಮಗ್ಳು, ಚಾರ್ಲಿ ಅಂತ

VAMSHINATHAN
Oh..
(ಕರುಪ್ಪನ ತಲೆ ಸವರುತ್ತಾ)
ಏಯ್ ಕರುಪ್ಪಾ.. No

* ಧರ್ಮ ಮುಗುಳ್ನಗುತ್ತಾನೆ. ವಂಶಿನಾಥನ್ ಹಿಂದೆ ತಿರುಗಿ ಚಾರ್ಲಿಯನ್ನು ನೋಡಿ,

VAMSHINATHAN
Hi Charlie.. Welcome to my home

CUT TO

EXT. NIGHT. FARM HOUSE

* ರಾತ್ರಿಯಾಗಿದೆ. ಟ್ರಕ್ ವಂಶಿನಾಥನ್ ಮನೆ(Farm house) ಹೊರಗೆ ಬಂದು ನಿಲ್ಲುತ್ತದೆ.

CUT TO

INT. NIGHT. FARM HOUSE

* ಧಮ luggage ಜೊತೆ ಮನೆಯೊಳಗೆ ಪ್ರವೇಶಿಸುತ್ತಾನೆ. ಗೋಡೆಯಲ್ಲಿ ಹಲವಾರು photo frameಗಳಿವೆ. ಹಲವಾರು ಟ್ರೋಫಿಗಳು ಸಾಲಾಗಿ ಇಟ್ಟಿವೆ. ಧರ್ಮ ಅವುಗಳನ್ನೆಲ್ಲಾ ನೋಡುತ್ತಿದ್ದಾನೆ. ವಂಶಿನಾಥನ್ ಹಿಂದಿನಿಂದ ಬರುತ್ತಾನೆ. ಧರ್ಮ ವಂಶಿನಾಥನ್ ಹಾಗೂ ಅವನ ಹೆಂಡತಿಯ photo frame ನ ಗಮನಿಸುತ್ತಾನೆ. ಧರ್ಮನನ್ನು ನೋಡಿದ ವಂಶಿನಾಥನ್,

VAMSHINATHAN
Idellam namma paiyya Karuppa Dog Show le aduccha medals.
(After a pause)
Ah Dharma right?

DHARMA
ಹೌದು..

BOBBY SIMHA
Ya! Eppudi ippave sapudlama illa fresh ayyi sapudlama?

DHARMA
ಪರವಾಗಿಲ್ಲ ಸರ್. Fresh up ಆದ್ಮೇಲೆ..

* ಎನ್ನುವಷ್ಟರಲ್ಲಿ ಏನೋ ಶಬ್ದ ಕೇಳುತ್ತದೆ. ಆ ಕಡೆ ನೋಡಿದಾಗ ಚಾರ್ಲಿ ಗಬಗಬನೆ pedigree ತಿನ್ನುತ್ತಿದ್ದಾಳೆ. ಅದನ್ನು ನೋಡಿದ ವಂಶಿನಾಥನ್ ಮುಗುಳ್ನಗುತ್ತಾನೆ.

CUT TO

EXT. NIGHT. FARM HOUSE

* ರಾತ್ರಿಯಾಗಿದೆ. ಮನೆ ಹೊರಗಡೆ barbeque setup ಮಾಡಲಾಗಿದೆ. ವಂಶಿನಾಥನ್ barbequeನಲ್ಲಿ ಚಿಕನ್ ಫ್ರೈ ಮಾಡುತ್ತಿದ್ದಾನೆ. ಪಕ್ಕದಲ್ಲಿ ಕರುಪ್ಪ ಕುಳಿತಿದ್ದಾನೆ. ಧರ್ಮ beer ಕುಡಿಯುತ್ತಿದ್ದಾನೆ. ಚಾರ್ಲಿ ಧರ್ಮನ ಪಕ್ಕದಲ್ಲಿ ಮಲಗಿದ್ದಾಳೆ.

VAMSHINATHAN
So.. Snow paaka kalumbutinge?
(ವಂಶಿನಾಥನ್ ಚಿಕನ್ ತುಂಡನ್ನು ತಟ್ಟೆಗೆ ಹಾಕಿ ಕರುಪ್ಪನಿಗೆ ಕೊಡುತ್ತಾ)
Vada vada..
(ಧರ್ಮನ ಮುಂದೆ ಕುಳಿತುಕೊಳ್ಳುತ್ತಾ)
Apraum. Romba nerukkamana namma vittu ponale romba kashtma da irukku. Illada karuppa?

DHARMA
Sir ನಿಮ್ wife?

VAMSHINATHAN
Avapatthi na sollave ille alle? Av peru Rani. Nammella 'first sight at love'. Maneli oplilla..Apraum odi vandu indha, indha oorule settle aanadhi. Avlukki inge irukkire nearby bank le oru nalla vele kedchudhi. Navibru semma.. Semma happy.
(After a pause)
Nalla life. Aana ennana namage makkalagilla. Neriya doctors patho. Namage makkalagalla andru. Tappella namma mele.
(ನಗಾಡುತ್ತಾ ಒಂದು puff ಎಳೆದು)
Adhuk-apraum Dharma naanu konjum Depression ge hode. Apraum ye wife enuk oru semma semma gift onnu kudtha. Enna theriyuma? Helu?
(After a pause)
Namma payya karuppandha.. Iva vandadhuk apraundha life ee maarichi Dharma.
(After a pause)
Aana oru naal, nan raani ondh dodda surprise kotlu. Table le oru letter. Nan odle illa. Namma velusami anna irukkarelle? Avaru helidru, yaro obba colleague jothe
(ಕರುಪ್ಪುವನ್ನು ಸಮಾಧಾನಿಸುತ್ತಾ)
oru colleague kude apde odipoyitta... Leave it..
(ಒಂದು puff ಎಳೆದು)
Avalu papa alva? Epdi indha rendu nayigala vecchi samaalikkiridhi..
(ನಗಾಡುತ್ತಾ)
Vittu poyitta..

* ಚಾರ್ಲಿ ವಂಶಿಯನ್ನು ನೋಡುತ್ತಿದ್ದಾಳೆ.

VAMSHINATHAN(CONT'D)
(ಕರುಪ್ಪುವನ್ನು ನೋಡಿ)
Eyy. Neeyu appana vittu poyiduviya? Pona mavane konne viduve.. Eyy, Eyy. Dance adla va? Vada vada vada..Va

* ಎಂದು ಹೇಳಿ ಕರುಪ್ಪನನ್ನು ಎತ್ತಿಕೊಂಡು ಬಂದು ಡಾನ್ಸ್ ಮಾಡುತ್ತಾನೆ. ಧರ್ಮ ಅವರಿಬ್ಬರನ್ನೂ ನೋಡುತ್ತಿದ್ದಾನೆ. ವಂಶಿನಾಥನ್ ಖುಷಿಯಿಂದಿದ್ದಾನೆ.

CUT TO

EXT. DAY. FARM HOUSE

* ವಂಶಿನಾಥನ್ ಮನೆ ಹೊರಗೆ ಗಾಡಿ ನಿಲ್ಲಿಸುತ್ತಾನೆ.

CUT TO

INT. DAY. FARM HOUSE

* ಧರ್ಮ ನಿದ್ರಿಸುತ್ತಿದ್ದಾನೆ. ಚಾರ್ಲಿ ಮಂಚದ ಮೇಲೆ ಹಾರಿ ಬಂದು ಧರ್ಮನ ಮುಖ ನೆಕ್ಕುತ್ತಿದ್ದಾಳೆ. ಕರುಪ್ಪು ಕೂಡ ಮಂಚದ ಮೇಲೆ ಇದ್ದಾನೆ. ಧರ್ಮನಿಗೆ ಎಚ್ಚರವಾಗುತ್ತದೆ.

DHARMA
(ಅಸಹನೆಯಿಂದ)
ಏಯ್. ಚಾರ್ಲಿ..

* ಧರ್ಮ ಏಳುತ್ತಿದ್ದಂತೆ ಚಾರ್ಲಿ ಹಾಗೂ ಕರುಪ್ಪ ಓಡಿ ಹೋಗುತ್ತಾರೆ. ಧರ್ಮ ಎದ್ದು ಕುಳಿತು ಕಿಟಕಿಯ ಹೊರಗಡೆ ನೋಡುತ್ತಾನೆ.

CUT TO

EXT. DAY. FARM HOUSE

* ಧರ್ಮ ಮನೆ ಹೊರಗಡೆ ಬಂದಿದ್ದಾನೆ. ವಂಶಿನಾಥನ್ ಮಡಿಕೆಗಳಲ್ಲಿ ಶೇಂದಿ ಹಿಡಿದುಕೊಂಡು ಬರುತ್ತಾನೆ. ಅಲ್ಲಿಯೇ ಧರ್ಮನನ್ನು ನೋಡಿ,

VAMSHINATHAN (O.S)
Hey Dharma Good morning..

DHARMA (O.S)
Morning Sir..

VAMSHINATHAN
Epdi? Nalla thookama?

DHARMA
Aama Sir.. Nalla thookam.

VAMSHINATHAN
Fresh aa meen pudcchit vandhurike. Refresh aayittu vandhuringe. Oru pudi pudchidla? Enna??

* ಧರ್ಮ ಮುಗುಳ್ನಗುತ್ತಾ ಮುಂದೆ ನೋಡಿದಾಗ ಚಾರ್ಲಿ ಕರುಪ್ಪನ ಜೊತೆ ಆಟವಾಡುತ್ತಿದ್ದಾಳೆ. ಧರ್ಮ ಅವರಿಬ್ಬರನ್ನೂ ನೋಡುತ್ತಿದ್ದಾನೆ.

CUT TO

EXT. DAY. FARMHOUSE (FARMHOUSE SONG)

FARMHOUSE SONG STARTS

JUMPCUTS:

* ಧರ್ಮ ಹಾಗೂ ವಂಶಿನಾಥನ್ ತಿಂಡಿ ತಿನ್ನುತ್ತಿದ್ದಾರೆ. ಪಕ್ಕದಲ್ಲಿ ಚಾರ್ಲಿ ಹಾಗೂ ಕರುಪ್ಪ ಕೂಡಾ ತಿನ್ನುತ್ತಿದ್ದಾರೆ.

* ಧರ್ಮ ಹಾಗೂ ವಂಶಿನಾಥನ್ ಖುಷಿಯಿಂದ ಮಾತನಾಡುತ್ತಿದ್ದಾರೆ.

CUT TO

* ಚಾರ್ಲಿ ಹಾಗೂ ಕರುಪ್ಪ ಒಂದೇ ತಟ್ಟೆಯಲ್ಲಿ ತಿನ್ನುತ್ತಿದ್ದಾರೆ.

CUT TO

* ಚಾರ್ಲಿ ಹಾಗೂ ಧರ್ಮ ಓಡುತ್ತಾ ಆಟವಾಡುತ್ತಿದ್ದಾರೆ.

CUT TO

* ವಂಶಿನಾಥನ್ ಕರುಪ್ಪನನ್ನು ಮುದ್ದಿಸುತ್ತಿದ್ದಾನೆ

CUT TO

* ಚಾರ್ಲಿ ಹಾಗೂ ಕರುಪ್ಪ ನೀರಿನಲ್ಲಿ ಆಟವಾಡುತ್ತಿದ್ದಾರೆ.

CUT TO

EXT. NIGHT. FARMHOUSE (FARMHOUSE SONG)

JUMPCUTS

* ಧರ್ಮ ಹಾಗೂ ವಂಶಿನಾಥನ್ beer ಕುಡಿಯುತ್ತಿದ್ದಾರೆ. ಕರುಪ್ಪ ವಂಶಿನಾಥನ್ ಪಕ್ಕದಲ್ಲಿ ಕುಳಿತಿದ್ದಾನೆ. ಧರ್ಮ ಚಾರ್ಲಿಯನ್ನು ಕರೆಯುತ್ತಾನೆ.

CUT TO

EXT. DAY. FARMHOUSE (FARMHOUSE SONG)

* ಚಾರ್ಲಿ ಹಾಗೂ ಕರುಪ್ಪ ಆಟವಾಡಿಕೊಂಡು ಪೊದೆಯ ಹಿಂದೆ ಹೋಗುತ್ತಾರೆ.

CUT TO

* ಧರ್ಮ ಮಲಗಿದ್ದಾನೆ. ಚಾರ್ಲಿ ಮಲಗಿದಲ್ಲಿಯೇ spin ಮಾಡುತ್ತಾ ಆಟವಾಡುತ್ತಿದ್ದಾಳೆ. ಧರ್ಮ ಮುಗುಳ್ನಗುತ್ತಿದ್ದಾನೆ.

CUT TO

* ಧರ್ಮ ಹಾಗೂ ವಂಶಿನಾಥನ್ ಕುದುರೆ ಓಡಿಸುತ್ತಿದ್ದಾರೆ.

CUT TO

* ಕರುಪ್ಪ ಮಲಗಿದ್ದಾನೆ. ಚಾರ್ಲಿ ಕರುಪ್ಪನ ಮೇಲೆ ತಲೆಯಿಟ್ಟು ಕುಳಿತಿದ್ದಾಳೆ.

CUT TO

* ಕರುಪ್ಪ agility task ಅನ್ನು ಸಲೀಸಾಗಿ ಮಾಡುತ್ತಿದ್ದಾಳೆ. ಚಾರ್ಲಿ ಪಕ್ಕದಲ್ಲಿ ಕುಳಿತು ನೋಡುತಿದ್ದಾಳೆ.

* ಕರುಪ್ಪ task ಮಾಡುತ್ತಾ sea stand ಮೇಲೆ ಹತ್ತಿ ನಿಂತು ಚಾರ್ಲಿಯನ್ನು ನೋಡಿ ಬೊಗಳುತ್ತಾನೆ. ಚಾರ್ಲಿ ದೂರದಲ್ಲಿ ಕುಳಿತು ಕರುಪ್ಪನನ್ನು ನೋಡಿ ಬೊಗಳುತ್ತಾಳೆ.

CUT TO

EXT. DAY. FARM HOUSE

* ವಂಶಿನಾಥನ್ ಕುದುರೆಗಳಿಗೆ ಸ್ನಾನ ಮಾಡಿಸುತ್ತಿದ್ದಾನೆ. ಚಾರ್ಲಿ ಹಾಗೂ ಕರುಪ್ಪ ಮುರಿದಿರುವ ಉಯ್ಯಾಲೆಯ ಪಕ್ಕದಲ್ಲಿ ಕುಳಿತಿದ್ದಾರೆ. ಕರುಪ್ಪ ವಂಶಿಯನ್ನು ನೋಡಿ ಬೊಗಳುತ್ತಿದ್ದಾನೆ.

VAMSHINATHAN

Eyy Karuppa.. Ada katta-yirikkille? Rendu peru andha pakka poyi veleyaadunge.. Nan aprauma sari panre.

* ಬಟ್ಟೆಗಳನ್ನು ಒಣಗಲು ಹಾಕುತ್ತಿದ್ದ ಧರ್ಮ ಮುರಿದಿರುವ ಉಯ್ಯಾಲೆಯನ್ನು ಗಮನಿಸುತ್ತಾನೆ.

CUT TO

INT/EXT. DAY. FARMHOUSE

* ಧರ್ಮ ಹಾಗೂ ಚಾರ್ಲಿ ಮಲಗಿದ್ದಾರೆ. ಧರ್ಮನ bullet ಶಬ್ದ ಕೇಳಿಸುತ್ತದೆ. ಚಾರ್ಲಿ ಥಟ್ಟನೆ ಎದ್ದು ಹೊರಗಡೆ ನೋಡಿ ಮಂಚದಿಂದ ಕೆಳಗಿಳಿದು ಹೋಗುತ್ತಾಳೆ. ಧರ್ಮ ಎಚ್ಚರಗೊಂಡು ಹೊರಗಡೆ ನೋಡುತ್ತಾನೆ. ವಂಶಿನಾಥನ್ ಧರ್ಮನ bullet ಜೊತೆ ನಿಂತಿದ್ದಾನೆ. ವಂಶಿನಾಥನ್ ಹಾಗೂ Mechanic ಮಾತನಾಡಿಕೊಳ್ಳುತ್ತಿದ್ದಾರೆ.

MECHANIC (O.S)
(In Punjabi language)
Veerji, pure vi hazaar ho gaye.

VAMSHINATHAN(O.S)
Vī hazaār?

MECHANIC (O.S)
Han ji..

VAMSHINATHAN
Oye, phul gāya. Ajē tun mērē khōde'ān di deal te vī pēśaé kamāuṇe hain na.

MECHANIC
Haānji. O deal tāh hō ga'ē samjho.

VAMSHINATHAN
Tāh ae fado pandarān hazaār. Sat sri akaāl.

* ಎಂದು ಹೇಳಿ ವಂಶಿನಾಥನ್ Mechanicಗೆ ದುಡ್ಡು ಕೊಡುತ್ತಾನೆ.

MECHANIC (O.S)
Teek hai saabh.. Hojayega

MECHANIC
Ok Veerji, Sat sri akaāl..

* ಧರ್ಮ ಅವರಿಬ್ಬರನ್ನು ನೋಡುತ್ತಿದ್ದಾನೆ.

FADE OUT

INT. DAY. FARMHOUSE

JUMPCUTS:

* ವಂಶಿನಾಥನ್ ಧರ್ಮನ bullet ಓಡಿಸುತ್ತಿದ್ದಾನೆ. ಕರುಪ್ಪ ಹಾಗೂ ಚಾರ್ಲಿ sidecar ನಲ್ಲಿ ಕುಳಿತಿದ್ದಾರೆ. ಧರ್ಮ ಖುಷಿಯಿಂದ ನೋಡುತ್ತಿದ್ದಾನೆ.

CUT TO

INT. DAY. FARMHOUSE LAKE

* ಧರ್ಮ ಚಾರ್ಲಿಗೆ ಸ್ನಾನ ಮಾಡಿಸಿ ಅವಳ ಮೈ ಒರೆಸುತ್ತಿದ್ದಾನೆ. ಕರುಪ್ಪ ಓಡಿ ಬಂದು ಕೆರೆಗೆ ಹಾರುತ್ತಾನೆ. ಧರ್ಮನಿಗೆ ಚಾರ್ಲಿಯ ಮೈ ಒರೆಸುತ್ತಾ ಅವಳ ಮೇಲಿರುವ ಗಾಯಗಳನ್ನು ಗಮನಿಸುತ್ತಾನೆ. ನೀರಿನಲ್ಲಿ ಆಟವಾಡುತ್ತಿದ್ದ ಕರುಪ್ಪ ಅಲ್ಲಿಂದ ಓಡುತ್ತಾನೆ. ಚಾರ್ಲಿ ತಕ್ಷಣ ಕರುಪ್ಪನ ಹಿಂದೆ ಓಡುತ್ತಾಳೆ. ಧರ್ಮ ಅವರಿಬ್ಬರನ್ನೂ ನೋಡುತ್ತಿದ್ದಾನೆ.

CUT TO

INT. DAY. FARM HOUSE

* ಧರ್ಮ ವಾಪಸ್ ಹೊರಡಲು ತಯಾರಾಗಿ bag ಧರಿಸಿಕೊಂಡು table ಬಳಿ ನಿಂತಿದ್ದಾನೆ.

VAMSHINATHAN (O.S)
Eyy Come on Come on.. Charlie Charlie come on.. Ey ey Karuppa inga vada.. Eyy eyy vada.. Come on..

* ಧರ್ಮ ಕೆಲವು ನೋಟುಗಳನ್ನು ಎಣಿಸಿ ಅವನ್ನು table ಮೇಲಿಡುತ್ತಾನೆ. ನಂತರ ತನ್ನಲ್ಲಿ ಉಳಿದಿರುವ ದುಡ್ಡನ್ನು ಎಣಿಸುತ್ತಾ ನಿರಾಷೆಗೊಳ್ಳುತ್ತಾನೆ.

CUT TO

EXT. DAY. FARMHOUSE

* Farmhouse ಹೊರಗಡೆ ಧರ್ಮನ bike ಗೆ luggage bags ಕಟ್ಟಲಾಗಿದೆ. ಚಾರ್ಲಿ sidecar ನಲ್ಲಿ ಕುಳಿತಿದ್ದಾಳೆ. ಕರುಪ್ಪ ಕೆಳಗಡೆ ಕುಳಿತಿದ್ದಾನೆ. ವಂಶಿನಾಥನ್ ಚಾರ್ಲಿ ಹಾಗೂ ಕರುಪ್ಪನ photos click ಮಾಡುತ್ತಿದ್ದಾನೆ.

VAMSHINATHAN
Eyy  eyy yess. Made for each other.

CUT TO

INT. DAY. FARMHOUSE

* ಧರ್ಮ ನೋಟುಗಳನ್ನು table ಮೇಲಿರುವ ವಂಶಿನಾಥನ್ ನ photo frame ಕೆಳಗಡೆ ಇಟ್ಟಿರುವುದು ಕಾಣಿಸುತ್ತದೆ. ಧರ್ಮ ಹಿನ್ನಲೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾನೆ.

CUT TO

EXT. DAY. FARMHOUSE

* ಕರುಪ್ಪ ಚಾರ್ಲಿಯನ್ನು ಬೇಸರದಿಂದ ನೋಡುತ್ತಾ ಬೊಗಳುತ್ತಾನೆ. ಚಾರ್ಲಿ sidecarನಲ್ಲಿ ಕುಳಿತು ಕರುಪ್ಪನನ್ನು ನೋಡುತ್ತಿದ್ದಾಳೆ. ಧರ್ಮ ನಡೆದುಕೊಂಡು ಗಾಡಿಯ ಹತ್ತಿರ ಬರುತ್ತಾನೆ.

VAMSHINATHAN
(ಕರುಪ್ಪನನ್ನು ಮುದ್ದಿಸುತ್ತಾ)
Ennada? Fellings ah?
(ಧರ್ಮನನ್ನು ನೋಡಿ)
Neenga kalambringene nama karuppak ore feelings dha..

* ಧರ್ಮ ಮುಗುಳ್ನಗುತ್ತಾ ಕರುಪ್ಪನನ್ನು ನೋಡುತ್ತಾನೆ.

VAMSHINATHAN (CONT'D)
Apraun Kalumbaacha?

DHARMA
ಹೌದು. Thank you so much..

VAMSHINATHAN
Dharma, nammaloda state vereya irrukulam, aana

kudikkire thanni onnudha..

* ಎಂದು ಹೇಳಿ ಧರ್ಮನನ್ನು ಅಪ್ಪಿಕೊಳ್ಳುತ್ತಾನೆ. ಕರುಪ್ಪ ಹಾಗೂ ಚಾರ್ಲಿ ಬೇಸರದಿಂದ ಮುಖ ಮುಖ ನೋಡಿಕೊಳ್ಳುತ್ತಿದ್ದಾರೆ.

VAMSHINATHAN (CONT'D)
Namakulle no formalities. Ok?
(ತಿರುಗಿ ಹೊರಟ ಧರ್ಮನನ್ನು ತಡೆದು)
Ah Dharma. I have something for you. Ah, idh next week ludhina le nadukkure National Level Dog Show oda pass.. Indha vaati naa po poradhille. Ningenadru time sikkidre hog nodu. It's a dog world. You and Charlie will have a best experience. Trust me.

DHARMA
Sure..

* ಧರ್ಮ pass ತೆಗೆದುಕೊಂಡು ಹೊರಡುತ್ತಾನೆ. ಕರುಪ್ಪ ಬೇಸರದಿಂದ ಚಾರ್ಲಿಯನ್ನು ನೋಡುತ್ತಿದ್ದಾನೆ.

VAMSHINATHAN
Dharma.. Neenge indha trip muducchi varumbodhu rendu periyu khandipa paathittudha ponu. Ok? Bye..

* ಧರ್ಮ 'ಆಯ್ತು' ಎಂಬಂತೆ ತಲೆಯಾಡಿಸಿ ಅಲ್ಲಿಂದ ಹೊರಡುತ್ತಾನೆ. ಚಾರ್ಲಿ ಕರುಪ್ಪನನ್ನು ನೋಡುತ್ತಿದ್ದಾಳೆ. ಕರುಪ್ಪ ಚಾರ್ಲಿಯನ್ನು ನೋಡಿ ಬೊಗಳುತ್ತಾನೆ.

VAMSHINATHAN
Konjum painaadha irukku. Cheri vada karuppa, nama fishing pola.
(ಪಕ್ಕದಲ್ಲಿ ನೋಡುತ್ತಾ)
Eyy Karuppaa..

* ವಂಶಿನಾಥನ್ ಆ ಕಡೆ ನೋಡಿದಾಗ ಕರುಪ್ಪ ರಿಪೇರಿಯಾಗಿರುವ ಉಯ್ಯಾಲೆಯಲ್ಲಿ ಕುಳಿತು ಆಟವಾಡುತ್ತಿದ್ದಾನೆ. ವಂಶಿನಾಥನ್ ಆಶ್ಚರ್ಯದಿಂದ ನೋಡುತ್ತಿದ್ದಾನೆ.

CUT TO

INT/EXT. DAY. DOG SHOW STADIUM

* Dog Show stadium establish ಆಗುತ್ತಿದೆ. ಸಾವಿರಾರು ಜನ ಸೇರಿದ್ದಾರೆ. ಸ್ಪರ್ಧೆ ನಡೆಯುವ ಜಾಗದಲ್ಲಿ huddles, dog jumping, agility competition, high jumping ಮುಂತಾದ taskಗಳಿಗೆ ಬೇಕಾಗಿರುವ ವಸ್ತುಗಳು ಜೋಡಿಸಲ್ಪಟ್ಟಿವೆ. ಸ್ಪರ್ಧಿಗಳು ತಮ್ಮ ತಮ್ಮ ನಾಯಿಗಳ ಜೊತೆ ಕುಳಿತುಕೊಂಡಿದ್ದಾರೆ. ಹಲವಾರು ವೀಕ್ಷಕರು ತಮ್ಮ ತಮ್ಮ ಜಾಗಗಳಲ್ಲಿ ಆಸೀನರಾಗುತ್ತಿದ್ದಾರೆ. ಇಬ್ಬರು ನಿರೂಪಕರು Mic ನಲ್ಲಿ ವೀಕ್ಷಕರನ್ನು ಸ್ವಾಗತಿಸುತ್ತಿದ್ದಾರೆ.

FEMALE ANCHOR
The Nobel laureate Konrad Lorenz once said, "The bond with a true dog is as lasting as the ties of this earth will ever be."

* National Agility Dog Championship 2020 banner ಕಾಣಿಸುತ್ತಿದೆ. ತೀರ್ಪುಗಾರರು ಕುಳಿತುಕೊಳ್ಳಲು ನಾಲ್ಕು ಆಸನಗಳನ್ನು ಸಿದ್ಧಪಡಿಸಲಾಗಿದೆ.

MALE ANCHOR (O.S)
Welcome to the National Agility Dog Championship 2020. In association with the Animal Welfare Association of India.

* ಅಲಂಕೃತಗೊಂಡಿರುವ Stadium ಒಳಗೆ ಜನರು ಸಾಲಾಗಿ ಹೋಗುತ್ತಿದ್ದಾರೆ. ಧರ್ಮ ಕೂಡಾ ಅವರ ಜೊತೆ ನಡೆದುಕೊಂಡು ಹೋಗುತ್ತಿದ್ದಾನೆ. Stadium ಒಳಗಡೆ Championship ಟ್ರೋಫಿ ಇಟ್ಟಿದೆ.

MALE ANCHOR (O.S) CONT'D
A warm welcome to all the participants who have gathered at this event and have made this into a massive one.

VOLUNTEER 1
Excuse me Sir?

MALE ANCHOR (O.S)
Today we have gathered here at Ludhiana, Fields of Dreams stadium for this wonderful championship.

* ಧರ್ಮ ಕೈಯಲ್ಲಿರುವ pass ಅನ್ನು Volunteer ಕೈಗೆ ಕೊಡುತ್ತಾನೆ. ಆತ ಅದನ್ನು ನೋಡಿ,

VOLUNTEER 1
Sir, please.

* ಎಂದು ಹೇಳಿ pass ಅನ್ನು ಮತ್ತೆ ಧರ್ಮನಿಗೆ ಕೊಡುತ್ತಾನೆ.

MALE ANCHOR (O.S) CONT'D
We are truly overwhelmed with the amazing response we have received for this event.

* Stadium ಒಳಗಡೆ ದಂಪತಿಗಳು ತಮ್ಮ ಮಗುವನ್ನು seat ಮೇಲೆ ಕೂರಿಸುತ್ತಿದ್ದಾರೆ. ಧರ್ಮ stadium ಒಳಗಡೆ ಪ್ರವೇಶಿಸುತ್ತಾನೆ. ಸಾವಿರಾರು ಜನ ಸೇರಿರುವುದನ್ನು ದಂಗಾಗಿ ನೋಡುತ್ತಿದ್ದಾನೆ.

VOLUNTEER 2 (O.S)
Sir, this way

MALE ANCHOR
Nationwide ke best participants or unke best dogs.

* ಧರ್ಮ ಸ್ಪರ್ಧಿಗಳು ಕುಳಿತಿರುವ ಕಡೆ ಕುಳಿತುಕೊಳ್ಳುತ್ತಾನೆ. Volunteer Chest number 7 ನ ಧರ್ಮನ ಕೈಗೆ ತೊಡಿಸುತ್ತಾಳೆ.

MALE ANCHOR (O.S)
Aur first time participants bhi. Thoda nervous, thoda excited.

MALE ANCHOR
Relax and enjoy. This is what the Agility Championship is all about friends.

VOLUNTEER 2
All the best Sir..

* ಧರ್ಮ ಕಕ್ಕಾಬಿಕ್ಕಿಯಾಗಿ ನೋಡುತ್ತಿದ್ದಾನೆ. ಪಕ್ಕದಲ್ಲಿ ಸ್ಪರ್ಧಿಗಳು ತಮ್ಮ ತಮ್ಮ ನಾಯಿಗಳ ಜೊತೆ ಕುಳಿತುಕೊಂಡಿದ್ದಾರೆ.

MALE ANCHOR (O.S)
Fun for the dogs

FEMALE ANCHOR
Fun for the handlers

MALE ANCHOR (O.S) CONT'D
And fun for the spectators watching this show across the globe!

* ಧರ್ಮ ಎದ್ದು ನಿಲ್ಲಲು ಹೊರಡುತ್ತಾನೆ. ಪ್ರೇಕ್ಷಕರು ಎದ್ದು ನಿಂತು ಜೋರಾಗಿ cheer ಮಾಡುತ್ತಾರೆ. ಧರ್ಮ ಗಲಿಬಿಲಿಯಿಂದ ನೋಡುತ್ತಿದ್ದಾನೆ.

CUT TO

MALE ANCHOR
Without taking much of your time, let's get the show started right away. Welcome our Judges on board for this year's show. His pets have not only saved people from danger, but also bravely stood by the nation during war crisis. Please welcome Mr. Pradham Singh from Amritsar.

FEMALE ANCHOR
Welcome on board sir.

* ಪ್ರಧಮ್ ಸಿಂಗ್ ಪ್ರೇಕ್ಷಕರಿಗೆ ನಮಸ್ಕಾರ ಮಾಡುತ್ತಾ stadium ಪ್ರವೇಶಿಸುತ್ತಾರೆ. ಧರ್ಮ ಅವರ ಕಡೆ ನೋಡುತ್ತಾನೆ.

FEMALE ANCHOR (O.S.) CONT'D
And from Kolkata we have our dog psychologist Namratha Banerjee.

* ನಮೃತಾ ಬ್ಯಾನರ್ಜೀ ಪ್ರೇಕ್ಷಕರತ್ತ ಕೈ ಬೀಸುತ್ತಾ ತಮ್ಮ ಜಾಗದಲ್ಲಿ ಬಂದು ಕುಳಿತುಕೊಳ್ಳುತ್ತಾರೆ. ಚಾರ್ಲಿ ಅವರತ್ತ ನೋಡುತ್ತಿದ್ದಾಳೆ.

MALE ANCHOR (O.S)
The founder of the Pets Care Foundation & Adoption Centre, Mr. Vivan Sharma from Delhi.

* ವಿವಾನ್ ಶರ್ಮ stadium ಪ್ರವೇಶಿಸುತ್ತಾ ಪ್ರೇಕ್ಷಕರತ್ತ ಕೈ ಬೀಸುತ್ತಾರೆ. ಪ್ರೇಕ್ಷಕರು ಜೋರಾಗಿ ಚಪ್ಪಾಳೆ ತಟ್ಟುತ್ತಿದ್ದಾರೆ.

FEMALE ANCHOR (O.S.)
And the most awarded Animal Welfare Officer from Karnataka Ms. Devika Aradhya.

* ದೇವಿಕಾ ಪ್ರೇಕ್ಷಕರತ್ತ ಕೈ ಬೀಸುತ್ತಾ ಬರುತ್ತಿದ್ದಾಳೆ. ಧರ್ಮ ಆಶ್ಚರ್ಯದಿಂದ ನೋಡುತ್ತಿದ್ದಾನೆ. ದೇವಿಕಾ ನಮಸ್ಕಾರ ಮಾಡಿ ತನ್ನ ಜಾಗದಲ್ಲಿ ಬಂದು ಕುಳಿತುಕೊಳ್ಳುತ್ತಾಳೆ. ದೇವಿಕಾ ಪಕ್ಕದಲ್ಲಿ ಕುಳಿತಿದ್ದ ಪ್ರಧಮ್ ಸಿಂಗ್ ಕೈ ಕುಲುಕುತ್ತಾ,

DEVIKA
Hello..

(ಇನ್ನಿಬ್ಬರು ತೀರ್ಪುಗಾರರತ್ತ ನೋಡಿ)
Hi..

* ಧರ್ಮ ತಬ್ಬಿಬ್ಬಾಗಿ ನೋಡುತ್ತಿದ್ದಾನೆ. ಪ್ರೇಕ್ಷಕರು ಚಪ್ಪಾಳೆ ತಟ್ಟುವುದನ್ನು ನಿಲ್ಲಿಸುತ್ತಾರೆ.

FEMALE ANCHOR
When we have such prestigious judges here with us today, what more can be asked for?

* ಸ್ಪರ್ಧಿಗಳು ತಮ್ಮ ತಮ್ಮ ನಾಯಿಗಳ ಜೊತೆ ಸ್ಪರ್ಧಿಸಲು ತಯಾರಾಗಿ ಕುಳಿತಿದ್ದಾರೆ.

FEMALE ANCHOR (O.S.) CONT'D
Let's give it up for our first participants, Mr. Ashok Rathod and Sarama. Our three times championship winner here at NADC.

* ಧರ್ಮನ ಜೊತೆ ಕುಳಿತಿರುವ ವ್ಯಕ್ತಿ ತನ್ನ ನಾಯಿಯ ಜೊತೆ ಎದ್ದು ನಿಲ್ಲುತ್ತಾನೆ. ಪ್ರೇಕ್ಷಕರು ಜೋರಾಗಿ ಕಿರುಚುತ್ತಾ, ಚಪ್ಪಾಳೆ ತಟ್ಟುತ್ತಾ ಪ್ರೋತ್ಸಾಹಿಸುತ್ತಾರೆ. ಪ್ರೇಕ್ಷಕಿಯೊಬ್ಬರು ಸ್ಪರ್ಧಿಯನ್ನು ನೋಡಿ,

SPECTATOR
Come on Ashok..

* ಎಂದು cheer ಮಾಡುತ್ತಾ ಚಪ್ಪಾಳೆ ತಟ್ಟುತ್ತಾರೆ. ಅಶೋಕ್ ರಾಥೋಡ್ ತನ್ನ ನಾಯಿಯ ಜೊತೆ ಸ್ಪರ್ಧಿಸಲು ಮುಂದೆ ಬರುತ್ತಾರೆ.

FEMALE ANCHOR (O.S.)
They look pretty confident. Let's see if they can the trophy home this year.

* ಸರಮ double hurdle ಮೇಲೆ ಹಾರುತ್ತದೆ. ಅಶೋಕ್ ರಾಥೋಡ್ ಸರಮ ಹಿಂದೆ ಓಡುತ್ತಿದ್ದಾನೆ.

MALE ANCHOR (O.S)
That's a quick start with a smooth double hurdle jump.

* ಸರಮ tunnel ಒಳಗೆ ಪ್ರವೇಶಿಸಿ ಹೊರಗೆ ಬರುತ್ತದೆ.

MALE ANCHOR (O.S) CONT'D
Moving past the tunnel.

* ಸರಮ dog walk ಮೇಲ್ಗಡೆ ಹತ್ತಿ ಇಳಿದು ಬರುತ್ತದೆ.

MALE ANCHOR (O.S) CONT'D
Quickly through the dog walk.

* ಸರಮ ring jump ಮಾಡುತ್ತದೆ.

MALE ANCHOR (O.S) CONT'D
A smooth ring jump

* ಸರಮ wave pool task ಸಲೀಸಾಗಿ ಮಾಡುತ್ತದೆ.

MALE ANCHOR (O.S) CONT'D
Tricky yet amazingly past the wave pool.

* Galleryಯಲ್ಲಿ ಕುಳಿತಿರುವ ತಾಯಿಯೊಬ್ಬರು ತನ್ನ ಮಗುವಿಗೆ ಸರಮ task ಮಾಡುತ್ತಿರುವುದನ್ನು ತೋರಿಸುತ್ತಿದ್ದಾರೆ. ಸರಮ ಇನ್ನೊಂದು task ಮುಗಿಸಿ ಮುಂದೆ ಓಡುತ್ತದೆ.

MALE ANCHOR (O.S) CONT'D
There seems to be a bit of a contact with the obstacle.

* ಸರಮ 2 long jump bar ಹಾರಿ ಮುಂದೆ ಓಡುತ್ತದೆ.

MALE ANCHOR (O.S) CONT'D
Swiftly through the long bar jump.

* ಸರಮ ಎರಡನೇ ಬಾರಿ tunnel ಒಳಗೆ ಪ್ರವೇಶಿಸಿ ಸಲೀಸಾಗಿ ಹೊರಗೆ ಬರುತ್ತದೆ.

MALE ANCHOR (O.S) CONT'D
Inside the tunnel again.

* ಸರಮ see-saw ಹತ್ತಿ ಕೆಳಗಿಳಿಯುತ್ತದೆ.

MALE ANCHOR (O.S) CONT'D
Moving through the see-saw.

* ಸರಮ A frame ಹತ್ತಿ ಇಳಿಯುತ್ತದೆ.

MALE ANCHOR (O.S) CONT'D
Leading to the A-frame.

* ಸರಮ ಕೊನೆಯದಾಗಿ double hurdle ಹಾರಿ task ಮುಗಿಸುತ್ತದೆ.

MALE ANCHOR (O.S) CONT'D
And the final jump!

* ಪ್ರೇಕ್ಷಕರು ಜೋರಾಗಿ ಚಪ್ಪಾಳೆ ತಟ್ಟುತ್ತಾರೆ.

MALE ANCHOR (O.S) CONT'D
What a spectacular performance by Sarama, a two and half year old Belgian Malinois.

* ಎಲ್ಲಾ ತೀರ್ಪುಗಾರರು ಚಪ್ಪಾಳೆ ತಟ್ಟುತ್ತಾರೆ, ಅಂಕವನ್ನು note ಮಾಡಿಕೊಳ್ಳುತ್ತಾರೆ. ಧರ್ಮ ಸ್ತಬ್ಧನಾಗಿ ನೋಡುತ್ತಿದ್ದಾನೆ. ಸಹ ಸ್ಪರ್ಧಿಗಳು ಚಪ್ಪಾಳೆ ತಟ್ಟುತ್ತಿದ್ದಾರೆ. ದೇವಿಕಾ ಸ್ಪರ್ಧಿಗಳ ಕಡೆ ನೋಡುತ್ತಾಳೆ.

FEMALE ANCHOR (O.S.)
And now, lets give a huge around of applause for our second participant, Mr.Kashi from Lucknow along with his 2 year old doberman who was the first runner up of the 24th NADC.

* ಚಾರ್ಲಿ ಮುಂದೆ ನೋಡುತ್ತಿದ್ದಾಳೆ. ಧರ್ಮ leash ಹಿಡಿದು ಕುಳಿತಲ್ಲಿಂದ ಹೊರಡಲು ಎದ್ದು ನಿಲ್ಲುವಷ್ಟರಲ್ಲಿ ದೇವಿಕಾಳನ್ನು ನೋಡುತ್ತಾನೆ.

DEVIKA
(ಧರ್ಮನನ್ನು ನೋಡಿ ಖುಷಿಯಿಂದ)
Hi..

FEMALE ANCHOR (O.S.)

Along with his 2 year old doberman who was the first runner up of the 24th NADC.

* ಧರ್ಮ ಏನೂ ಪ್ರತಿಕ್ರಯಿಸದೆ ಕುಳಿತುಕೊಳ್ಳುತ್ತಾನೆ.

DEVIKA
(ಪಿಸುಗುಟ್ಟುತ್ತಾ)
ಏನಿಲ್ಲಿ?

* ಧರ್ಮ ಕಕ್ಕಾಬಿಕ್ಕಿಯಾಗಿದ್ದಾನೆ.

DEVIKA
(ಪಿಸುಗುಟ್ಟುತ್ತಾ)
Participant?

* ಧರ್ಮ 'ಅಲ್ಲ' ಎನ್ನುವಂತೆ ತಲೆಯಾಡಿಸುತ್ತಾನೆ.

DEVIKA
(With excitement)
All the best

* ಧರ್ಮ ಅಸಹಾಯಕನಾಗಿ ತಲೆಯಾಡಿಸುತ್ತಾನೆ. ಎರಡನೇ ಸ್ಪರ್ಧಿ ತನ್ನ ನಾಯಿಯನ್ನು ಸಿದ್ಧಗೊಳಿಸುತ್ತಿದ್ದಾನೆ. ಪ್ರೇಕ್ಷಕರು ಎದ್ದು ನಿಂತು ಚಪ್ಪಾಳೆ ತಟ್ಟುತ್ತಾ ಪ್ರೋತ್ಸಾಹಿಸುತ್ತಿದ್ದಾರೆ.

* ಎರಡನೇ ಸ್ಪರ್ಧಿಯ ನಾಯಿ ಒಂದೊಂದಾಗೇ task ಮುಗಿಸುತ್ತದೆ. ಧರ್ಮ ದಂಗಾಗಿ ನೋಡುತ್ತಿದ್ದಾನೆ. ಪ್ರೇಕ್ಷಕರು ಚಪ್ಪಾಳೆ ತಟ್ಟುತ್ತಾ ಪ್ರೋತ್ಸಾಹಿಸುತ್ತಿದ್ದಾರೆ.

JUMPCUTS

* ಮುಂದಿನ ಸ್ಪರ್ಧಿಗಳು ಒಬ್ಬೊಬ್ಬರಾಗಿ ತಮ್ಮ ನಾಯಿಗಳ ಜೊತೆ task ಮುಗಿಸುತ್ತಾರೆ.

* ತೀರ್ಪುಗಾರರು ಸ್ಪರ್ಧಿಗಳನ್ನು ಗಮನಿಸುತ್ತಿದ್ದಾರೆ.

* ಕೆಲವು ಪ್ರೇಕ್ಷಕರು ಸ್ಪರ್ಧಿಗಳನ್ನು ನೋಡಿ ನಗಾಡುತ್ತಿದ್ದಾರೆ.

* Referee ನಾಯಿಗಳು task ಸರಿಯಾಗಿ ಮುಗಿಸಿದಂತೆ ಕೈ ಮೇಲೆತ್ತಿ signal ಮಾಡುತ್ತಾನೆ.

* ಸ್ಪರ್ಧಿಗಳು task ಮುಗಿಸುತ್ತಿದ್ದಂತೆ ತೀರ್ಪುಗಾರರು ಅಂಕಗಳನ್ನು ಬರೆದಿಟ್ಟುಕೊಳ್ಳುತ್ತಿದ್ದಾರೆ.

* ಕೊನೆಯ ಸ್ಪರ್ಧಿ ತನ್ನ ನಾಯಿಯ ಜೊತೆ task ಪ್ರಾರಂಭಿಸುತ್ತಾನೆ. ನಾಯಿ ಎತ್ತರದಿಂದ hurdle jump ಮಾಡುತ್ತದೆ. ಪ್ರೆಕ್ಷಕಿಯೊಬ್ಬಳು ದಂಗಾಗಿ ನೋಡುತ್ತಾಳೆ.

MALE ANCHOR (O.S)
They take the first jump over the hurdle.Remarkable pace. Truly tremendously through the tunnel. Remarkable pace. Truly tremendously through the tunnel.

* ತೀರ್ಪುಗಾರರು ಪರಸ್ಪರ ಮಾತನಾಡಿಕೊಳ್ಳುತ್ತಿದ್ದಾರೆ.

MALE ANCHOR (O.S) CONT'D
Good connect with the dog over the ramp. And nice smooth jump from the ring. Nicely through the wave pools.

* ಆರನೇ ಸ್ಪರ್ಧಿಯ ನಾಯಿ task ಮಾಡುತ್ತಾ ಅತ್ಯಂತ ಎತ್ತರಕ್ಕೆ ಸಲೀಸಾಗಿ ಹಾರುತ್ತದೆ. ಧರ್ಮ

ಗಾಬರಿಯಿಂದ ಅದನ್ನು ನೋಡುತ್ತಾ ಪಕ್ಕದಲ್ಲಿರುವ ಚಾರ್ಲಿಯನ್ನು ನೋಡುತ್ತಾನೆ.

MALE ANCHOR (O.S) CONT'D
It's lovely to watch them perform together. That's the highest jump any dog has taken so far, ladies and gentlemen.

* ಚಾರ್ಲಿ ನಾಲಿಗೆ ಹೊರಗೆ ಹಾಕಿ ಸ್ವಲ್ಪ ದೂರದಲ್ಲಿ ಇಟ್ಟಿರುವ pedigree ಮೂಟೆ ನೋಡುತ್ತಿದ್ದಾಳೆ.

MALE ANCHOR (O.S) CONT'D
They seem to be doing great for the first time. That's the final jump that has been taken. And they finish it.

* ಆರನೇ ಸ್ಪರ್ಧಿಯ task ಮುಗಿಯುತ್ತದೆ. ಧರ್ಮ ನಿರಾಸೆಗೊಂಡು ಕುಳಿತಿದ್ದಾನೆ. Anchor ಧರ್ಮ ಹಾಗೂ ಚಾರ್ಲಿಯ ಹೆಸರು ಕೂಗುತ್ತಾರೆ.

FEMALE ANCHOR (O.S.)
So let's welcome our next participant Dharma and Charlie. a one and half year old female Labrador.

* ಪ್ರೇಕ್ಷಕರು ಜೋರಾಗಿ ಕೂಗುತ್ತಾ, ಚಪ್ಪಾಳೆ ತಟ್ಟುತ್ತಾ ಪ್ರೋತ್ಸಾಹಿಸುತ್ತಿದ್ದಾರೆ. ತನ್ನ ಹೆಸರು ಕೇಳಿದ ತಕ್ಷಣ ಧರ್ಮ ಗಲಿಬಿಲಿಗೊಳ್ಳುತ್ತಾನೆ. ಚಾರ್ಲಿ ಆತುರದಿಂದ ಕುಳಿತಲ್ಲಿಂದ ಎದ್ದು ಮುಂದೆ ಹೋಗುತ್ತಾಳೆ. ಧರ್ಮ leash ಹಿಡಿದು ಮೆಲ್ಲನೆ ಮುಂದೆ ಬರುತ್ತಾನೆ. ದೇವಿಕಾ ಅವರಿಬ್ಬರನ್ನು ನೋಡುತ್ತಿದ್ದಾಳೆ. ಧರ್ಮ ತನ್ನ ಹೆಗಲಲ್ಲಿರುವ bag ಅನ್ನು volunteer ಕೈಗೆ ಕೊಡುತ್ತಾನೆ.

MALE ANCHOR (O.S)
Look at the energy and the enthusiasm of Charlie. Looks like she wants to quickly finish and take the trophy home.

* ಧರ್ಮ ಚಾರ್ಲಿಯ leash ತೆಗೆಯುತ್ತಾನೆ. ತಕ್ಷಣ ಚಾರ್ಲಿ ಅಲ್ಲಿಂದ ಓಡುತ್ತಾಳೆ.

DHARMA
Charlie..

* ಧರ್ಮ ಚಾರ್ಲಿಯನ್ನು ಹಿಡಿಯಲು ಓಡುತ್ತಾನೆ. ಆ ಸನ್ನಿವೇಶವನ್ನು ನೋಡಿ ಜನರು ನಗಾಡುತ್ತಿದ್ದಾರೆ. ಚಾರ್ಲಿ ದೂರದಲ್ಲಿ ಇಟ್ಟಿದ್ದ pedigree ಮೂಟೆ ಇಟ್ಟಿದ್ದ table ಮೇಲೆ ಕಾಲಿಟ್ಟು ಬೊಗಳುತ್ತಿದ್ದಾಳೆ. ಧರ್ಮ ಚಾರ್ಲಿಯನ್ನು ಹಿಡಿದು leash ಹಾಕಿಸಲು ಪ್ರಯತ್ನಿಸುತ್ತಾನೆ. ಪ್ರೇಕ್ಷಕರು ಜೋರಾಗಿ ನಗಾಡುತ್ತಿದ್ದಾರೆ.

FEMALE ANCHOR (O.S.)
Uh-oh. That was bit of a wrong start to the agility.

* ತೀರ್ಪುಗಾರರು ಆಶ್ಚರ್ಯದಿಂದ ನೋಡುತ್ತಿದ್ದಾರೆ. ಧರ್ಮ ಮುಜುಗರದಿಂದ ಅವರನ್ನು ನೋಡುತ್ತಾನೆ.

VIVAN SHARMA
What's happening there?

NAMRATA BANERJEE (O.S)
I think for food..

FEMALE ANCHOR (O.S) CONT'D
Well, she certainly seems to be entertaining the spectators and the judges in a totally different way.

* ಧರ್ಮ ಕಷ್ಟಪಟ್ಟು ಚಾರ್ಲಿಯನ್ನು ಸಮಾಧಾನಗೊಳಿಸಿ ಮುಜುಗರದಿಂದ ಮುಂದೆ ನಡೆದುಕೊಂಡು ಬರುತ್ತಾನೆ.

PRADHAM SINGH (O.S)
Hello, excuse me!

* ಧರ್ಮ ಹಿಂದೆ ತಿರುಗಿ ನೋಡುತ್ತಾನೆ

PRADHAM SINGH (O.S)CONT'D
What the hell is happening man?
(ಸಿಟ್ಟಿನಿಂದ)
Khud ka pet sambhaala nahi ja raha hai? Kab se dekh raha hun timepass kiya ja rahe ho.

DHARMA
Sir actually we are not here to participate..

PRADHAM SINGH
Oh Bhai mere.. Do you even understand where you are standing right now?

* ಪ್ರೇಕ್ಷಕಿಯೊಬ್ಬಳು ಬೇಸರದಿಂದ ನೋಡುತ್ತಿದ್ದಾಳೆ.

PRADHAM SINGH (CONT'D)
Ye kya mazak chal raha hai kya?

VIVAN SHARMA (O.S)
(Sircastically)
Wahi samajh na hai.

* ಚಾರ್ಲಿ leash ಕಚ್ಚಿಕೊಂಡು ಧರ್ಮನ  ಹತ್ತಿರ ಬಂದು ನಿಲ್ಲುತ್ತಾಳೆ.

VIVAN SHARMA (O.S)
Kya nam bataya?

DEVIKA (O.S)
Charlie..

VIVAN SHARMA
(ವ್ಯಂಗ್ಯವಾಗಿ)
Charlie.. Chaplin. Good Combination

* ಧರ್ಮ ಬೇಸರದಿಂದ ನೋಡುತ್ತಿದ್ದಾನೆ.

PRADHAM SINGH
In my 13 years of experience, I have never seen anything like this.

* ಚಾರ್ಲಿ ಪ್ರಧಮ್ ಸಿಂಗ್ ನತ್ತ ನೋಡಿ ನಂತರ ಧರ್ಮನನ್ನು ನೋಡುತ್ತಾಳೆ. ಧರ್ಮ ಮುಜುಗರದಿಂದ ತಲೆ ತಗ್ಗಿಸಿ ನಿಂತಿದ್ದಾನೆ.

PRADHAM SINGH (O.S)
Saara mohalla kharab kar diya..

* ಚಾರ್ಲಿ ಒಂದೇ ಸಮನೆ ಬೊಗಳುತ್ತಾಳೆ. ಪ್ರೇಕ್ಷಕರು ಆಶ್ಚರ್ಯದಿಂದ ನೋಡುತ್ತಿದ್ದಾರೆ. ಧರ್ಮ ಸಿಟ್ಟುಗೊಂಡಿದ್ದಾನೆ.

VIVAN SHARMA
(ವ್ಯಂಗ್ಯದಿಂದ ನಗುತ್ತಾ)
Are! Tumse zyada, wahi samaz na raha hai.

* ಚಾರ್ಲಿ ಬೊಗಳುತ್ತಿದ್ದಾಳೆ. ಧರ್ಮ ತನ್ನ ಎದುರುಗಡೆ ಕುಳಿತಿರುವ ಪ್ರೇಕ್ಷಕರತ್ತ ನೋಡುತ್ತಾನೆ. ಚಿಕ್ಕ ಹುಡುಗಿಯೊಬ್ಬಳು ಬೇಸರದಿಂದ ನೋಡುತ್ತಿದ್ದಾಳೆ. ಧರ್ಮ ಅವಳನ್ನು ನೋಡಿದ ನಂತರ ತಕ್ಷಣ ಜೋರಾಗಿ ಕಿರುಚುತ್ತಾನೆ.

DHARMA
Shut up..

* ಚಾರ್ಲಿ ಗಾಬರಿಯಾಗುತ್ತಾಳೆ. ತೀರ್ಪುಗಾರರು ಗಾಬರಿಯಿಂದ ಮಾತು ನಿಲ್ಲಿಸುತ್ತಾರೆ. Stadium ಪೂರ್ತಿ ಪ್ರೇಕ್ಷಕರು ಒಂದು ಕ್ಷಣ ಮೌನವಾಗುತ್ತಾರೆ. ನಿರೂಪಕರು ಸ್ತಬ್ದರಾಗಿ ನೋಡುತ್ತಿದ್ದಾರೆ. ಧರ್ಮ ಚಾರ್ಲಿಯನ್ನು ನೋಡಿ,

DHARMA
(ಸಿಟ್ಟಿನಿಂದ)
ತಿನ್ನೋದು, ತಿರ್ಗೋದು, ಮಲ್ಗೋದು. ಇದು ಮೂರು ಬಿಟ್ಟು ಬೇರೇನಾದ್ರೂ ಬರುತ್ತಾ ನಿಂಗೆ?

* ತೀರ್ಪುಗಾರರು ಆಶ್ಚರ್ಯದಿಂದ ನೋಡುತ್ತಿದ್ದಾರೆ. ಪ್ರೇಕ್ಷಕರು ಏನೂ ಮಾತಾಡದೆ ನೋಡುತ್ತಿದ್ದಾರೆ.

DHARMA (CONT'D)
ಇನ್ಯಾವತ್ತೂ ನಿನ್ ಮುಖ ತೋರಿಸ್ಬೇಡ.

* ಎಂದು ಹೇಳಿ ಅಲ್ಲಿಂದ ಹೋಗುತ್ತಾನೆ. ಚಾರ್ಲಿ ಬೇಸರದಿಂದ ನೋಡುತ್ತಿದ್ದಾಳೆ.

SAHAPAATHI SONG STARTS

* ಚಾರ್ಲಿ ಧರ್ಮನನ್ನು ಹಿಂಬಾಲಿಸಿ ಬಂದು ಪಕ್ಕದಲ್ಲಿ ಕುಳಿತುಕೊಂಡು paw ಮಾಡುತ್ತಾಳೆ. ಧರ್ಮ ಚಾರ್ಲಿಯನ್ನು ನಿರ್ಲಕ್ಷಿಸಿ ಮುಂದೆ ಹೋಗುತ್ತಾನೆ. ಚಾರ್ಲಿ ಧರ್ಮನನ್ನು ನೋಡುತ್ತಿದ್ದಾಳೆ. Gallery ಯಲ್ಲಿ ಕುಳಿತಿರುವ ಒಬ್ಬಳು ಪ್ರೇಕ್ಷಕಿ ಗೊಂದಲದಿಂದ ನೋಡುತ್ತಿದ್ದಾಳೆ. ಧರ್ಮ wall jump stand ಮೇಲೆ ಕುಳಿತುಕೊಳ್ಳುತ್ತಾನೆ. ಚಾರ್ಲಿ ಧರ್ಮನ ಮುಂದೆ ಬಂದು ಕುಳಿತು ಪುನಃ paw ಮಾಡುತ್ತಾಳೆ. ಧರ್ಮ ಮುಖ ತಿರುಗಿಸಿ ಕುಳಿತಿದ್ದಾನೆ. ಧರ್ಮ ಚಾರ್ಲಿಯ ಕೈ ತೊಲಗಿಸುತ್ತಾನೆ. ಚಾರ್ಲಿ ಪುನಃ paw ಮಾಡುತ್ತಾಳೆ. ತೀರ್ಪುಗಾರರು ಆಶ್ಚರ್ಯದಿಂದ ನೋಡುತ್ತಿದ್ದಾಳೆ. ದೇವಿಕಾ ಮುಗುಳ್ನಗುತ್ತಿದ್ದಾಳೆ. ಪ್ರೇಕ್ಷಕರು ಕೂಡಾ ಚಾರ್ಲಿಯನ್ನು ನೋಡಿ ಖುಷಿಯಾಗುತ್ತಾರೆ. ಚಾರ್ಲಿ ಧರ್ಮನ ಎದೆ ಮೇಲೆ ತಲೆ ಬಗ್ಗಿಸಿಟ್ಟು ಕ್ಷಮೆ ಕೇಳುತ್ತಿದ್ದಾಳೆ. ಪ್ರೇಕ್ಷಕರು ಮೌನದಿಂದ ನೋಡುತ್ತಿದ್ದಾರೆ. ಧರ್ಮ ಅಲ್ಲಿಂದ ಎದ್ದು ಹೊರಟು ಸ್ವಲ್ಪ ಮುಂದೆ ಹೋಗಿ ನೆಲದ ಮೇಲೆ ತಲೆ ತಗ್ಗಿಸಿ ಕುಳಿತುಕೊಳ್ಳುತ್ತಾನೆ. ಚಾರ್ಲಿ ಧರ್ಮನನ್ನು ಹಿಂಬಾಲಿಸಿ ಬಂದು ಆತನ ಮುಂದೆ ಕುಳಿತು ತನ್ನ ಕೈಯನ್ನು ಧರ್ಮನ ಕೈ ಮೇಲಿಟ್ಟು ತಲೆ ತಗ್ಗಿಸುತ್ತಾಳೆ.

ROUND TROLLEY TRANSITION

* ಆದ್ರಿಕಾ ಧರ್ಮನ ಮನೆಯ ಹೊರಗಡೆ ಅದೇ ಭಂಗಿಯಲ್ಲಿ ಕುಳಿತಿದ್ದಾಳೆ. ಚಾರ್ಲಿ ಕೂಡಾ ಅದೇ ಭಂಗಿಯಲ್ಲಿ ಮುಂದೆ ಕುಳಿತಿದ್ದಾಳೆ.

BACK TO

* ಚಾರ್ಲಿ ಧರ್ಮನ ಕೈಯೊಳಗಿನಿಂದ ಹೋಗಿ ಆತನ ಮುಖ ನೆಕ್ಕುತ್ತಾಳೆ. ಈ ಮುಂಚೆ

ಬೇಸರದಿಂದ ನೋಡುತ್ತಿದ್ದ ಮಗು ಈಗ ಖುಷಿಯಿಂದ ಚಾರ್ಲಿಯನ್ನು ನೋಡುತ್ತಿದ್ದಾಳೆ. ಧರ್ಮ ಕುಳಿತಲ್ಲಿಂದ ಎದ್ದು ಒಂದೆರಡು ಹೆಜ್ಜೆ ಹಿಂದಿಡುತ್ತಾನೆ. ಹಿಂದೆಯಿರುವ hurdle stand ಗೆ ಕಾಲು ತಾಗಿ ಧರ್ಮ  ಮುಗ್ಗರಿಸಿ ಬೀಳುತ್ತಾನೆ. ತೀರ್ಪುಗಾರರು ಒಂದು ಕ್ಷಣ ಗಾಬರಿಗೊಳ್ಳುತ್ತಾರೆ. ಪ್ರೇಕ್ಷಕರು ಕೂಡಾ ಗಾಬರಿಯಿಂದ ನೋಡುತ್ತಿದ್ದಾರೆ. ಚಾರ್ಲಿ ತಕ್ಷಣ ಓಡಿ ಬಂದು ಧರ್ಮನ ಎದೆಯ ಮೇಲೆ paw ಮಾಡುತ್ತಾ ಬೊಗಳುತ್ತಾಳೆ. ಧರ್ಮ ಓರೆಗಣ್ಣಿನಿಂದ ಚಾರ್ಲಿಯನ್ನು ನೋಡುತ್ತಾನೆ. ಪ್ರೇಕ್ಷಕರು ಆಶ್ಚರ್ಯದಿಂದ ನೋಡುತ್ತಿದ್ದಾರೆ. ಧರ್ಮ ಮೆಲ್ಲನೆ ಎದ್ದು ಕುಳಿತುಕೊಳ್ಳುತ್ತಾನೆ. ಚಾರ್ಲಿ ಪಕ್ಕದಲ್ಲಿ ಕುಳಿತು paw ಮಾಡುತ್ತಾಳೆ. ಪ್ರಥಮ್ ಸಿಂಗ್ ಹಾಗೂ ದೇವಿಕಾ ಖುಷಿಯಿಂದ ನೋಡುತ್ತಿದ್ದಾರೆ. ಧರ್ಮ ಚಾರ್ಲಿಯನ್ನು ನೋಡಿ pet ಮಾಡುತ್ತಾನೆ. ನಿರೂಪಕರು ಖುಷಿಯಿಂದ ನೋಡುತ್ತಿದ್ದಾರೆ. ಧರ್ಮ pet ಮಾಡಿ ಕೈ ಹಿಂದೆ ತೆಗೆದ ತಕ್ಷಣ ಚಾರ್ಲಿ ಪುನಃ paw ಮಾಡುತ್ತಾಳೆ. ಧರ್ಮ ಮತ್ತೆ ಚಾರ್ಲಿಯನ್ನು pet ಮಾಡುತ್ತಾನೆ. ದೇವಿಕಾ ಆ ದೃಶ್ಯವನ್ನು ನೋಡುತ್ತಿದ್ದಾಳೆ. ಧರ್ಮ ಅಲ್ಲಿಂದ ಎದ್ದು ಮುಂದೆ ಹೋಗುತ್ತಾನೆ. ಚಾರ್ಲಿ ಅಲ್ಲೇ ಕುಳಿತು ಧರ್ಮನನ್ನು ನೋಡುತ್ತಿದ್ದಾಳೆ.

SAHAPAATHI SONG ENDS

* ಧರ್ಮ long jump stand ಹತ್ತಿರ ಬಂದು ಕೆಳಗಡೆಯಿರುವ ಎರಡನೇ ಕೋಲನ್ನು ಅತೀ ಎತ್ತರಕ್ಕೆ adjust ಮಾಡುತ್ತಾನೆ. ತೀರ್ಪುಗಾರರು ಆಶ್ಚರ್ಯದಿಂದ ನೋಡುತ್ತಾರೆ. ಧರ್ಮ ಮುಂದೆ ನಡೆದುಕೊಂಡು ಹೋಗುತ್ತಾ ಚಿಕ್ಕ ಹುಡುಗಿಯನ್ನು ನೋಡುತ್ತಾನೆ. ಅವಳು ಧರ್ಮನನ್ನೇ ನೋಡುತ್ತಿದ್ದಾಳೆ. ಧರ್ಮ ಸ್ವಲ್ಪ ಮುಂದೆ ಹೋಗಿ ನಿಂತು ಚಾರ್ಲಿಯನ್ನು ನೋಡುತ್ತಾನೆ. ಚಾರ್ಲಿ hurdle stand ಹಿಂದೆ ಕುಳಿತು ಧರ್ಮನನ್ನು ನೋಡುತ್ತಿದ್ದಾಳೆ.

JOURNALIST (O.S)
Camera 3, pan to the dog..

* ಪ್ರೇಕ್ಷಕರು ಗೊಂದಲದಿಂದ ಅವರವರೇ ಮಾತನಾಡಿಕೊಳ್ಳುತ್ತಿದ್ದಾರೆ. ಧರ್ಮ ಒಂದು ಕ್ಷಣ ಅವರತ್ತ ನೋಡಿ ನಂತರ ಚಾರ್ಲಿಯನ್ನು ನೋಡುತ್ತಾನೆ. ಚಾರ್ಲಿ ಧರ್ಮನನ್ನೇ ನೋಡುತ್ತಿದ್ದಾಳೆ.

FEMALE ANCHOR
(ಆಶ್ಚರ್ಯದಿಂದ)
You think she can make it?

MALE ANCHOR
(ಹಿಂಜರಿಕೆಯಿಂದ)
Impossible..

* ಧರ್ಮ ಮಂದಹಾಸದಿಂದ ಚಾರ್ಲಿಯನ್ನು ನೋಡಿ ಎರಡೂ ಕೈಗಳನ್ನು ಮುಂದೆ ಚಾಚುತ್ತಾನೆ. ಚಾರ್ಲಿ ಓಡಲು ಪ್ರಾರಂಭಿಸುತ್ತಾಳೆ. ತೀರ್ಪುಗಾರರು ಹಾಗೂ ನಿರೂಪಕರು ಕುತೂಹಲದಿಂದ ನೋಡುತ್ತಿದ್ದಾರೆ. ಚಾರ್ಲಿ hurdle stand ನ  ಸಲೀಸಾಗಿ ಹಾರುತ್ತಾಳೆ. ಒಂದಷ್ಟು ಪ್ರೇಕ್ಷಕರು ಕುತೂಹಲದಿಂದ ಎದ್ದು ನಿಲ್ಲುತ್ತಾರೆ. ಚಾರ್ಲಿ ಧರ್ಮನ ಮೇಲೆ ಹಾರುತ್ತಾಳೆ. ಧರ್ಮ ಚಾರ್ಲಿಯನ್ನು ಹಿಡಿದುಕೊಳ್ಳುತ್ತಾನೆ. ಹಿನ್ನಲೆಯಲ್ಲಿ ಸೀಟಿ ಶಬ್ದ ಕೇಳಿಸುತ್ತದೆ. ಚಿಕ್ಕ ಹುಡುಗಿ ಸ್ತಬ್ಧಳಾಗಿ ನೋಡುತ್ತಿದ್ದಾಳೆ. ಪ್ರೇಕ್ಷಕರು ಕಿರುಚುತ್ತಾ ಚಪ್ಪಾಳೆ ತಟ್ಟುತ್ತಾರೆ. ದೇವಿಕಾ ಖುಷಿಯಿಂದ ಎದ್ದು ನಿಂತು ಚಪ್ಪಾಳೆ ತಟ್ಟುತ್ತಾ,

DEVIKA
Wow..

* ತೀರ್ಪುಗಾರರೆಲ್ಲರೂ ಖುಷಿಯಿಂದ ನೋಡುತ್ತಿದ್ದಾರೆ. ಸಹ  ಸ್ಪರ್ಧಿಗಳು ಹಾಗೂ ಎಲ್ಲಾ ಪ್ರೇಕ್ಷಕರು ಎದ್ದು ನಿಂತು ಚಪ್ಪಾಳೆ ಹೊಡೆಯುತ್ತಾರೆ. ಚಾರ್ಲಿ ಧರ್ಮನ ಮುಖ ನೆಕ್ಕುತ್ತಿದ್ದಾಳೆ.

FEMALE ANCHOR (O.S.)
Ladies and gentlemen this is truly impressive. Histroy has been made out here with this performance at the 25th National Agility Dog Championship.I mean look at the audience around us all of them standing on their feet, giving a fantastic standing ovation. Watching this truly beautiful bond!

* ಚಿಕ್ಕ ಹುಡುಗಿ ಎದ್ದು ನಿಂತು ಖುಷಿಯಿಂದ ಚಪ್ಪಾಳೆ ತಟ್ಟುತ್ತಿದ್ದಾಳೆ. ಇನ್ನೊಬ್ಬಳು ಚಿಕ್ಕ ಮಗು ಜೋರಾದ ಧ್ವನಿನಿಂದ,

RANDOM KID
Love you Charlie..

* ಎಂದು ಕಿರುಚುತ್ತಾಳೆ. ಪ್ರಥಮ್ ಸಿಂಗ್ ಎದ್ದು ನಿಂತು ಚಪ್ಪಾಳೆ ತಟ್ಟುತ್ತಾರೆ. ಚಾರ್ಲಿ ಧರ್ಮನ ಮುಖ ನೆಕ್ಕುತ್ತಿದ್ದಾಳೆ. Stadium ಪೂರ್ತಿ 'ಚಾರ್ಲಿ, ಚಾರ್ಲಿ' ಎಂಬ ಉದ್ಗಾರ ಕೇಳಿಸುತ್ತದೆ. ಧರ್ಮ ಖುಷಿಯಿಂದ ಚಾರ್ಲಿಯನ್ನು ಕೆಳಗಿಳಿಸಿ stadium ಸುತ್ತಲೂ ಪ್ರೇಕ್ಷಕರನ್ನು ನೋಡುತ್ತಿದ್ದಾನೆ. ಎಲ್ಲಾರೂ ಖುಷಿಯಿಂದ ಚಪ್ಪಾಳೆ ತಟ್ಟುತ್ತಾ ಪ್ರೋತ್ಸಾಹಿಸುತ್ತಿದ್ದಾರೆ. ಧರ್ಮನಿಗೆ ಖುಷಿಯಿಂದ ಕಣ್ಣೀರು ತುಂಬಿಕೊಳ್ಳುತ್ತದೆ. ಪಕ್ಕದಲ್ಲಿ ಕುಳಿತಿರುವ ಚಾರ್ಲಿಯನ್ನು ನೋಡುತ್ತಾನೆ. ಚಾರ್ಲಿ ತಲೆಯೆತ್ತಿ ಧರ್ಮನನ್ನು ನೋಡುತ್ತಾಳೆ.

CUT TO

EXT. DAY. DOG SHOW STADIUM

* ಧರ್ಮ ಹಾಗೂ ದೇವಿಕಾ dog show stadium ಹೊರಗಡೆ ಕುಳಿತಿದ್ದಾರೆ. ಚಾರ್ಲಿ ಧರ್ಮನ ಪಕ್ಕದಲ್ಲಿ ಕುಳಿತಿದ್ದಾಳೆ.

DEVIKA
Anyways ನನ್ ಮನೇಲೂ ಸುಮಾರ್ ಚಾರ್ಲಿಗಳಿದ್ದಾವೆ. ನಾನಿಲ್ದೆ ಎಲ್ಲಾ ಊಟ ಕೂಡ ಬಿಟ್ಟು ಕೂತಿದ್ದಾವೆ ಅಂತ ಅಮ್ಮ call ಮಾಡಿ ಅಳ್ತಾ ಇದ್ರು. So.. ನಾನ್ ಹೊರಟೆ..

* ದೇವಿಕಾ ನಡೆದುಕೊಂಡು ಮುಂದೆ ಹೋಗುತ್ತಾ,

DEVIKA
First time ಮನೆಗ್ ಬಂದಾಗ ಚಾರ್ಲಿಗೆ tracker fix ಮಾಡಿದ್ದೆ.. ಚಾರ್ಲಿ ನೋಡ್ಬೇಕು ಅನ್ಸಾಗ ಹುಡ್ಕೊಂಡ್ ಬರ್ತೀನಿ..okay ಆಲ್ವಾ?

* ಧರ್ಮ ಆಶ್ಚರ್ಯದಿಂದ ನೋಡುತ್ತಿದ್ದಾನೆ

CUT TO

EXT. DAY. ROAD

* ಧರ್ಮ ಚಾರ್ಲಿಯ ಜೊತೆಗೆ ಪ್ರಯಾಣಿಸುತ್ತಿದ್ದಾನೆ.

DHARMA (V.O)
ಚೌಕಟ್ಟಲ್ಲಿ ಜೀವ್ನ ಕಟ್ಕೊಂಡೋನಿಗೆ ಬದುಕೆಷ್ಟು beautiful ಅಂತ ಹೊರಗೆ ಬಂದು ಗೊತ್ತಾಗಿದ್ದು.ಜೀವ್ನಕ್ಕೊಂದು ಹೊಸ ಬಣ್ಣ, ಪ್ರತಿಯೊಂದು ತಿರುವಲ್ಲೂ ಹೊಸಾ ನೆನಪುಗಳು. ಈ ಪ್ರಯಾಣ ಹೀಗೆ ಕೊನೆ ಮುಟ್ಟದೇ ಇದ್ರೆ ಎಷ್ಟ ಚಂದ? ಮನಸ್ಸ್ ಕೇಳ್ತಾ ಇತ್ತು.

CUT TO

EXT. NIGHT. BUS STAND

* ಧರ್ಮ ಹಾಗೂ ಚಾರ್ಲಿ bus stand ನಲ್ಲಿ ಕುಳಿತಿದ್ದಾರೆ. ಧರ್ಮ ಚಾರ್ಲಿಗೆ ಮಾತ್ರೆ ತಿನ್ನಿಸುತ್ತಾನೆ. ಧರ್ಮ Tablet Stripನಲ್ಲಿ ಕೆಲವೇ ಮಾತ್ರೆಗಳು ಉಳಿದಿರುವುದನ್ನು ಗಮನಿಸುತ್ತಾನೆ. ತಕ್ಷಣ ಚಾರ್ಲಿಯ ಪಕ್ಕ ಒಂದು beer bottle ಬೀಳುತ್ತದೆ. ಚಾರ್ಲಿ ಗಾಬರಿಗೊಳ್ಳುತ್ತಾಳೆ. ರಸ್ತೆಯತ್ತ ನೋಡಿದಾಗ, ಕಾರಿನಲ್ಲಿ ಕೆಲವು ಪೋಲಿ ಹುಡುಗರು ಜೋರಾಗಿ ಕಿರುಚುತ್ತಾ ವೇಗವಾಗಿ ಹೋಗುತ್ತಾರೆ. ಧರ್ಮ ಬೇಸರದಿಂದ ನೋಡುತ್ತಿದ್ದಾನೆ.

CUT TO

INT. DAY. MEDICAL STORE

* ಧರ್ಮ medical store ನಲ್ಲಿ ಔಷಧಿ ಖರೀದಿಸಿ bill amount ನೋಡುತ್ತಿದ್ದಾನೆ. ಖರೀದಿಸಿದ್ದ ಒಂದಷ್ಟು ಔಷಧಿಗಳನ್ನು ಪುನಃ ವಾಪಸ್ ಕೊಟ್ಟು Pharmacist ಗೆ ಐನೂರು ರೂಪಾಯಿ ಕೊಡುತ್ತಾನೆ. Pharmacist ಧರ್ಮನನ್ನು ಆಶ್ಚರ್ಯದಿಂದ ನೋಡುತ್ತಾನೆ.

CUT TO

INT. DAY. STREET

TIMELAPSE SHOTS

* ಬೀದಿಯಲ್ಲಿ ಹಲವಾರು ಜನರು ಓಡಾಡುತ್ತಿದ್ದಾರೆ

* ಧರ್ಮ ಚಾರ್ಲಿಯ ಜೊತೆಗೆ ಕುಳಿತುಕೊಂಡಿದ್ದಾನೆ.

CUT TO

INT. DAY. FIELD

* ಹುಲ್ಲುಗದ್ದೆ ಪ್ರದೇಶವೊಂದರಲ್ಲಿ ಧರ್ಮನ bullet park ಮಾಡಲಾಗಿದೆ. ಪಕ್ಕದಲ್ಲಿ Tent ಕಾಣಿಸುತ್ತಿದೆ. ಜೋರಾಗಿ ಬಿರುಗಾಳಿ ಬೀಸುತ್ತಿದೆ. ಧರ್ಮ ಹಾಗೂ ಚಾರ್ಲಿ Tent ಒಳಗಡೆ ಇದ್ದಾರೆ. ಧರ್ಮ tent zip ಮುಚ್ಚಲು ಪ್ರಯತ್ನಿಸುತ್ತಿದ್ದಾನೆ. ಆದರೆ ಜೋರಾದ ಬಿರುಗಾಳಿಗೆ tent ಹಾರಿ ಹೋಗುತ್ತದೆ.

CUT TO

INT. EVENING. JUNKYARD

* ಜೋರಾಗಿ ಮಳೆ ಸುರಿಯುತ್ತಿದೆ. ಹಳೆಯದಾದ bus ಒಳಗಡೆ ತನ್ನ bag ಎಸೆದು ಧರ್ಮ ಚಾರ್ಲಿಯನ್ನು ಎತ್ತಿಕೊಂಡು ಒಳಗಡೆ ಬಂದು ಕುಳಿತುಕೊಳ್ಳುತ್ತಾನೆ. ಇಬ್ಬರೂ ಚಳಿಯಿಂದ ನಡುಗುತ್ತಿದ್ದಾರೆ. ಧರ್ಮ ಚಾರ್ಲಿಯ ಮೈ ಸವರುತ್ತಿದ್ದಾನೆ.

CUT TO

INT. NIGHT. FOOTPATH

* ಧರ್ಮ ಹಾಗೂ ಚಾರ್ಲಿ ರಸ್ತೆ ಬದಿಯಲ್ಲಿ ಮಲಗಿದ್ದಾರೆ. ಯಾವುದೋ ನಾಯಿ ಬೊಗಳುವ ಶಬ್ದ ಕೇಳಿ ಚಾರ್ಲಿ ಎಚ್ಚರಗೊಳ್ಳುತ್ತಾಳೆ. ಕೆಲವರು ಜೋರಾಗಿ ಮಾತನಾಡಿಕೊಳ್ಳುತ್ತಿದ್ದಾರೆ. ಧರ್ಮನೂ ಎಚ್ಚರಗೊಂಡು ಚಾರ್ಲಿಯನ್ನು ಮಲಗಿಸುತ್ತಾನೆ.

CUT TO

INT. DAY. JUNKYARD

* ಚಾರ್ಲಿ ಒಂದು ಗುಜರಿ ಗಾಡಿಯೊಳಗೆ ಮಲಗಿದ್ದಾಳೆ. ಧರ್ಮ ಹೊರಗಡೆ phone ನಲ್ಲಿ ಮಾತನಾಡುತ್ತಿದ್ದಾನೆ.

DHARMA

ಒಂದ್ ದಿನಾನೂ ರಜ ತಗೊಳ್ದೆ ಕೆಲ್ಸ ಮಾಡಿಲ್ವಾ? ಎಷ್ಟ್ ದಿನ ಅಂತ ಕಾಯೋದು ಸರ್? ಇಲ್ಲ, ಆಗಲ್ಲ ಸರ್ .. ಅದೆಂಗ್ ಸರ್ salary hold ಮಾಡ್ತಾರೆ? ಏನ್ inform ಮಾಡ್ಬೇಕಿತ್ತು ಸರ್? ಕೆಲ್ಸ ಮಾಡಿಲ್ವಾ? ಕೆಲ್ಸ ಮಾಡಿದ್ದಕ್ಕೆ ತಾನೆ salary ಕೇಳ್ತಿರೋದು?

(After a pause)
ಬೇಕಾಗಿಲ್ಲ ಸರ್ ನನ್ salary ಹೆಂಗ್ ತಗೋಬೇಕು ಅಂತ..

* ಎನ್ನುವಷ್ಟರಲ್ಲಿ phone cut ಆಗುತ್ತದೆ. Phone shut down ಆಗುತ್ತದೆ. ಧರ್ಮ ಹತಾಶನಾಗಿ ಜೋರಾಗಿ ಕಿರುಚುತ್ತಾನೆ. ಹಿಂದೆ ತಿರುಗಿ ನೋಡಿದಾಗ ಚಾರ್ಲಿ ಧರ್ಮನನ್ನೇ ನೋಡುತ್ತಿದ್ದಾಳೆ.

DHARMA
ಚಾರ್ಲಿ..

* ಚಾರ್ಲಿ ಧರ್ಮನನ್ನು ನೋಡುತ್ತಿದ್ದಾಳೆ.

CUT TO

EXT. DAY. ROADSIDE

* ಧರ್ಮ ರಸ್ತೆ ಬದಿಯಲ್ಲಿ ಕುಳಿತಿದ್ದಾನೆ. ಚಾರ್ಲಿ ಧರ್ಮನ  ಕೈ ಮೇಲೆ ತಲೆಯಿಟ್ಟು ಕುಳಿತಿದ್ದಾಳೆ. ಸ್ವಲ್ಪ ದೂರದಲ್ಲಿ ಒಬ್ಬ ಭಿಕ್ಷುಕ ತನ್ನ ನಾಯಿಗೆ ಊಟ ತಿನ್ನಿಸುತ್ತಿದ್ದಾನೆ. ಧರ್ಮ ಆತನನ್ನು ನೋಡುತ್ತಾ ತನ್ನ ಕೈಯಲ್ಲಿರುವ ನಾಣ್ಯಗಳನ್ನು ನೋಡುತ್ತಾನೆ.

CUT TO

EXT. DAY. ROAD

* ಧರ್ಮ ಗಾಡಿಯಲ್ಲಿ ಬರುತ್ತಿದ್ದಾನೆ. ಚಾರ್ಲಿ sidecarನಲ್ಲಿ ಕುಳಿತಿದ್ದಾಳೆ. ಸ್ವಲ್ಪ ಮುಂದೆ ಬಂದಾಗ ಗಾಡಿ off ಆಗುತ್ತದೆ.

* ಧರ್ಮ petrol can ನಲ್ಲಿ ಉಳಿದಿರುವ ಸ್ವಲ್ಪ petrol ಅನ್ನು ಗಾಡಿಗೆ ತುಂಬಿಸುತ್ತಿದ್ದಾನೆ. Can ನಲ್ಲಿರುವ Petrol ಖಾಲಿಯಾಗಿದೆ. ಧರ್ಮ ಸಿಟ್ಟಿನಿಂದ can ಅನ್ನು ರಸ್ತೆಗೆ ಎಸೆಯುತ್ತಾನೆ. ಚಾರ್ಲಿ ಧರ್ಮನನ್ನು ನೋಡುತ್ತಿದ್ದಾಳೆ.

CUT TO

EXT. DAY. UDUPI HOTEL

* ಧರ್ಮ bullet ತಳ್ಳುತ್ತಾ 'NEW UDUPI HOTEL' ಮುಂದೆ ಬರುತ್ತಾನೆ.

CUT TO

INT. DAY. UDUPI HOTEL

* ಧರ್ಮ counter ಮುಂದೆ ನಿಂತು ತನ್ನ phone ಅನ್ನು table ಮೇಲಿಡುತ್ತಾನೆ. ಹೋಟೆಲ್ ಮಾಲೀಕ ಧರ್ಮನನ್ನು ನೋಡುತ್ತಾನೆ

DHARMA
ನಮಸ್ಕಾರ ಸರ್, ನಾನು ಮೈಸೂರಿಂದ ಬಂದಿದ್ದೀನಿ.
ಕೈಯಲ್ಲಿದ್ದ ಕಾಸ್ ಖಾಲಿಯಾಗಿ..

* ಎಂದು ಹೇಳಿ ಹೊರಗಡೆ ನೋಡುತ್ತಾನೆ. ಹೋಟೆಲ್ ಮಾಲೀಕ ಹೊರಗಡೆ ನೋಡಿದಾಗ ಚಾರ್ಲಿ sidecar ನಲ್ಲಿ ಕುಳಿತಿದ್ದಾಳೆ.

DHARMA (O.S) CONT'D
ನನ್ ನಾಯಿ ನಿನ್ನೆಯಿಂದ ಏನೂ ತಿಂದಿಲ್ಲ

* ಧರ್ಮ phone ಅನ್ನು ಮುಂದೆ ದೂಡುತ್ತಾ,

DHARMA

ಈ ಮೊಬೈಲ್ ಇಟ್ಕೊಂಡು ಏನಾದ್ರು ತಿನ್ನೋಕೆ ಕೊಡ್ತೀರಾ?

* ಹೋಟೆಲ್ ಮಾಲೀಕ ಧರ್ಮನ ಪರಿಸ್ಥಿಸಿ ನೋಡಿ phone ಅನ್ನು ಪುನಃ ಅವನತ್ತ ತಳ್ಳುತ್ತಾನೆ.

HOTEL OWNER (O.S)
ಏಯ್ ಚೋಟು.

CUT TO

EXT. DAY. UDUPI HOTEL

* ಚಾರ್ಲಿ ಗಬಗಬನೆ ತಿನ್ನುತ್ತಿದ್ದಾಳೆ. ಧರ್ಮ ಪಕ್ಕದಲ್ಲಿ ಕುಳಿತಿದ್ದಾನೆ. ತಟ್ಟೆಯಲ್ಲಿ ಮೂರು ಇಡ್ಲಿ ಇದೆ. ಧರ್ಮ ಏನೂ ತಿನ್ನದೆ ಯೋಚಿಸುತ್ತಾ ಕುಳಿತಿದ್ದಾನೆ.

CUT TO

EXT/INT. DAY. COIN PHONE BOOTH

* ಧರ್ಮ Phone booth ಒಳಗಡೆ receiver ಹಿಡಿದುಕೊಂಡು ನಿಂತಿದ್ದಾನೆ. Phone ring ಆಗುತ್ತಿದೆ.

AJJI (O.S)
Hello..

AJJA (O.S)
ಯಾರೇ phone ಮಾಡಿದ್ದು?

* ಚಾರ್ಲಿ sidecarನಲ್ಲಿ ಕುಳಿತು ಧರ್ಮನನ್ನು ನೋಡುತ್ತಿದ್ದಾಳೆ. ಧರ್ಮನಿಗೆ ಮಾತನಾಡಲು ಸಾಧ್ಯವಾಗುತ್ತಿಲ್ಲ.

AJJI (O.S)
ಯಾರೋ ಮಾತಾಡ್ತಿಲ್ಲ. Hello..

* ಚಾರ್ಲಿ ಬೊಗಳುತ್ತಾಳೆ.

AJJI (O.S)
ಮಗ?
(after a pause)
ಧರ್ಮ??

* ಧರ್ಮ ಉತ್ತರಿಸದೆ receiver ಕೆಳಗಿಡುತ್ತಾನೆ.

CUT TO

EXT. DAY. ROAD

* ಧರ್ಮ bullet ತಳ್ಳಿಕೊಂಡು ಹೋಗುತ್ತಿದ್ದಾನೆ. ಚಾರ್ಲಿ sidecarನಲ್ಲಿ ಸುಸ್ತಾಗಿ ಕುಳಿತಿದ್ದಾಳೆ.

CUT TO

EXT. EVENING. ROAD

* ಸಂಜೆಯಾಗಿದೆ. ಧರ್ಮ bullet ತಳ್ಳಿಕೊಂಡು ಹೋಗುತ್ತಿದ್ದಾನೆ.

CUT TO

EXT. EVENING. MECHANIC SHOP

* ಧರ್ಮ ಒಂದು garaage ಹೊರಗಡೆ ನಿಂತಿದ್ದಾನೆ. Mechanic ದುಡ್ಡು ಎಣಿಸುತ್ತಿದ್ದಾನೆ. ಧರ್ಮ ತನ್ನ ಗಾಡಿಯನ್ನು ಮಾರಾಟ ಮಾಡುತ್ತಿದ್ದಾನೆ. Mechanic ದುಡ್ಡನ್ನು ಎಣಿಸಿ ಧರ್ಮನ ಕೈಗೆ ಕೊಡುತ್ತಾನೆ. ಚಾರ್ಲಿ sidecarನಲ್ಲಿ ಕುಳಿತು ಬೇಸರದಿಂದ ಧರ್ಮನನ್ನು ನೋಡುತ್ತಿದ್ದಾಳೆ. ಧರ್ಮ ದುಡ್ಡನ್ನು ಎಣಿಸಿದ ನಂತರ ಚಾರ್ಲಿಯನ್ನು ನೋಡಿ,

DHARMA
ಬಾ ಚಾರ್ಲಿ ಹೋಗೋಣ.

* ಎಂದು ಹೇಳುತ್ತಾನೆ. ಚಾರ್ಲಿ ಕುಳಿತಲ್ಲಿಂದಲೇ whining ಮಾಡುತ್ತಾಳೆ.

DHARMA
ಅದು ನಮ್ದಲ್ಲ ಚಾರ್ಲಿ.. ಬಾ ಹೋಗೋಣ.

* ಚಾರ್ಲಿ ಕೆಳಗಿಳಿಯಲು ನಿರಾಕರಿಸಿ ಬೊಗಳುತ್ತಾಳೆ. ಧರ್ಮ ಪಕ್ಕದಲ್ಲಿಟ್ಟಿದ್ದ ತನ್ನ bag ಅನ್ನು ಕೈಗೆತ್ತಿಕೊಂಡು ಚಾರ್ಲಿಯನ್ನು ನೋಡಿ,

DHARMA
ಚಾರ್ಲಿ.. Please..

* ಎಂದು ಹೇಳುತ್ತಾನೆ. ಚಾರ್ಲಿ ಕೆಳಗಿಳಿಯುತ್ತಿಲ್ಲ. ಧರ್ಮ ಅಲ್ಲಿಂದ ಹೊರಡುತ್ತಾನೆ. ಚಾರ್ಲಿ sidecar ನಿಂದ ಕೆಳಗಿಳಿದು ಧರ್ಮನನ್ನು ಹಿಂಬಾಲಿಸುತ್ತಾಳೆ.

CUT TO

EXT. DAY. ROAD

* ಧರ್ಮ ನಡೆದುಕೊಂಡು ಹೋಗುತ್ತಿದ್ದಾನೆ. ಚಾರ್ಲಿ ಧರ್ಮನನ್ನು ಹಿಂಬಾಲಿಸುತ್ತಿದ್ದಾಳೆ.

'THE HYMN OF DHARMA' SONG STARTS

* ಚಾರ್ಲಿ ಒಂದು ಕ್ಷಣ ನಿಂತು ಧರ್ಮನನ್ನು ನೋಡುತ್ತಾಳೆ. ಧರ್ಮ ಮುಂದೆ ನಡೆಯುತ್ತಿದ್ದಾನೆ. ಚಾರ್ಲಿ ಧರ್ಮನನ್ನು ಹಿಂಬಾಲಿಸುತ್ತಾಳೆ.

CUT TO

EXT. DAY. BRIDGE (THE HYMN OF DHARMA SONG)

* ಧರ್ಮ ಹಾಗೂ ಚಾರ್ಲಿ brige ನಲ್ಲಿ ನಡೆದುಕೊಂಡು ಹೋಗುತ್ತಿದ್ದಾರೆ.

CUT TO

EXT. DAY. ROAD (THE HYMN OF DHARMA SONG)

* ಪ್ರವಾಸಿಗರ ಗುಂಪೊಂದು bus ಮೇಲ್ಗಡೆ ಪ್ರಯಾಣಿಸುತ್ತಿದ್ದಾರೆ. ಒಂದು ಹಾಡಿನ ಪಲ್ಲವಿ ಭಾಗವನ್ನು ಗುನುಗುತ್ತಿದ್ದಾರೆ.

helicam shot: Bus ಚಲಿಸುತ್ತಿದೆ. ಧರ್ಮ ಚಾರ್ಲಿಯ ಜೊತೆಗೆ ನಿಂತು ಕೈ ಎತ್ತುತ್ತಾನೆ. bus ಅವರಿಬ್ಬರ ಪಕ್ಕ ಬಂದು ನಿಲ್ಲುತ್ತದೆ.

* ಒಬ್ಬ ಹಾಡುಗಾರ ಹಾಡಲು ಪ್ರಾರಂಭಿಸುತ್ತಾರೆ. ಸಂಗಡಿಗರು ಕೂಡಾ ಆ ಹಾಡನ್ನು ಗುನುಗುತ್ತಾರೆ. ಧರ್ಮ ಚಾರ್ಲಿಯ ಜೊತೆಗೆ bus ಮೇಲ್ಗಡೆ ಕುಳಿತಿದ್ದಾನೆ. ಚಾರ್ಲಿ ಧರ್ಮನ ಮಡಿಲಿನಲ್ಲಿ ಮಲಗಿದ್ದಾಳೆ. ಪಕ್ಕದಲ್ಲಿ ಇನ್ನಿತರ ಪ್ರಯಾಣಿಕರು ಕುಳಿತಿದ್ದಾರೆ. ಧರ್ಮ ಬೇಸರದಿಂದ ಕುಳಿತಿದ್ದಾನೆ. ಹಾಡುಗಾರರು ಹಾಡನ್ನು ಮುಂದುವರೆಸುತ್ತಿದ್ದಾರೆ. ಸ್ವಲ್ಪ ಹೊತ್ತಲ್ಲಿ ಚಾರ್ಲಿ ವಾಂತಿ ಮಾಡುತ್ತಾಳೆ. ಧರ್ಮ ಗಾಬರಿಯಿಂದ ನೋಡುತ್ತಿದ್ದಾನೆ. ಪಕ್ಕದಲ್ಲಿ ಕುಳಿತ ಪ್ರಯಾಣಿಕ ಕೂಡಾ ಗಾಬರಿಯಿಂದ ನೋಡುತ್ತಿದ್ದಾನೆ. ಧರ್ಮ ಅಸಹಾಯಕನಾಗಿ ಗಾಡಿಯಿಂದ ಚಾರ್ಲಿಯನ್ನು ಎತ್ತಿಕೊಂಡು ಕೆಳಗಿಳಿಯುತ್ತಾನೆ. ಗಾಡಿ ಮುಂದೆ ಹೋಗುತ್ತದೆ.

CUT TO

EXT/INT. NIGHT. ROADSIDE (THE HYMN OF DHARMA SONG)

* ಕತ್ತಲಾಗಿದೆ. ಧರ್ಮ ರಸ್ತೆ ಬದಿಯಲ್ಲಿ ಚಾರ್ಲಿಯ ಮೈ ಸವರುತ್ತಾ ಕುಳಿತಿದ್ದಾನೆ. ಸ್ವಲ್ಪ ದೂರದಲ್ಲಿ ಒಂದು ಜಟಕಾ ಗಾಡಿ ಬರುತ್ತದೆ.

CUT TO

* ಧರ್ಮ ಚಾರ್ಲಿಯ ಜೊತೆಗೆ ಜಟಕಾ ಗಾಡಿಯಲ್ಲಿ ಕುಳಿತಿದ್ದಾನೆ. ಗಾಡಿ ಮುಂದೆ ಚಲಿಸುತ್ತದೆ.

CUT TO

EXT. NIGHT. AYURVEDIC HOME (THE HYMN OF DHARMA SONG)

* ಜಟಕಾ ಗಾಡಿ ಯಾವುದೋ ಒಂದು ಚಿಕಿತ್ಸಾಲಯದ ಮುಂದೆ ನಿಲ್ಲುತ್ತದೆ. ಧರ್ಮ ತಕ್ಷಣ ಗಾಡಿಯಿಂದ ಚಾರ್ಲಿಯನ್ನು ಎತ್ತಿಕೊಂಡು ಕೆಳಗಿಳಿಯುತ್ತಾನೆ. ಅಲ್ಲಿದ್ದ ಒಬ್ಬ ವ್ಯಕ್ತಿ ಧರ್ಮನ bags ಎತ್ತಿಕೊಂಡು ಧರ್ಮನ ಹಿಂದೆ ಹೋಗುತ್ತಾನೆ.

CUT TO

INT. DAY. AYURVEDIC HOME (THE HYMN OF DHARMA SONG)

* ಚಿಕಿತ್ಸಾಲಯದ ಒಳಗಡೆ ವೈದ್ಯೆಯೊಬ್ಬರು ಮಂತ್ರ ಹೇಳುತ್ತಾ ಚಾರ್ಲಿಗೆ ಆಯುರ್ವೇದ ಚಿಕಿತ್ಸೆ ನೀಡುತ್ತಿದ್ದಾರೆ. ಪಕ್ಕದಲ್ಲಿ ಇಬ್ಬರು ದಾದಿಯರು ಕುಳಿತಿದ್ದಾರೆ. ವೈದ್ಯೆ ಮಂತ್ರ ಹೇಳುತ್ತಾ ಚಾರ್ಲಿಯ ಹೊಟ್ಟೆಯ ಭಾಗವನ್ನು ಮುಟ್ಟಿ ನೋಡುತ್ತಾ ತಕ್ಷಣ  ಮಂತ್ರ ಹೇಳುವುದನ್ನು ನಿಲ್ಲಿಸುತ್ತಾರೆ. ಚಾರ್ಲಿಯ ಹೊಟ್ಟೆಯನ್ನು ಒಂದು ಕ್ಷಣ ನೋಡಿ ನಂತರ ಧರ್ಮನನ್ನು ನೋಡುತ್ತಾರೆ.

CUT TO

EXT. DAY. AYURVEDIC HOME (THE HYMN OF DHARMA SONG)

* ಧರ್ಮ ಹಾಗೂ ದಾದಿ ಚಿಕಿತ್ಸಾಲಯದ ಹೊರಗಡೆ ನಿಂತಿದ್ದಾರೆ.

NURSE
Abhi kuch kehnahi sakti ki apko kitna din yaha rukna padega. Wo pregant thi, par ab unki sari bacchi nahi rahi.

* ಧರ್ಮನ ಕಣ್ಣಲ್ಲಿ ನೀರು ತುಂಬಿಕೊಂಡಿದೆ.

CUT TO

EXT. DAY. AYURVEDIC HOME (THE HYMN OF DHARMA SONG)

* ಧರ್ಮ ಚಿಕಿತ್ಸಾಲಯದ ಹೊರಗಡೆ ಕುಳಿತು ಜೋರಾಗಿ ಅಳುತ್ತಾನೆ.

CUT TO

EXT. DAY. AYURVEDIC HOME (THE HYMN OF DHARMA SONG)

JUMPCUTS

* ಒಳಗಡೆ ದಾದಿಯರು ಔಷಧಿ ತಯಾರಿಸುತ್ತಿದ್ದಾರೆ.

* ಚಾರ್ಲಿ ಮಲಗಿದ್ದಾಳೆ. ವೈದ್ಯೆ ಮಂತ್ರ ಜಪಿಸುತ್ತಾ ಚಾರ್ಲಿಗೆ ಚಿಕಿತ್ಸೆ ನೀಡುತ್ತಿದ್ದಾರೆ.

* ವೈದ್ಯೆ ಚಾರ್ಲಿಯ ಮೈ ಮೇಲೆ ಔಷಧಿ ಹಚ್ಚಿ cotton ತುಂಡನ್ನು ಇಟ್ಟು bandage ಕಟ್ಟುತ್ತಾರೆ.

CUT TO

EXT. DAY. AYURVEDIC HOME (THE HYMN OF DHARMA SONG)

* ಚಾರ್ಲಿ ಮಂಚದ ಮೇಲೆ ಮಲಗಿದ್ದಾಳೆ. ಧರ್ಮ ದುಃಖದಿಂದ ಚಾರ್ಲಿಯನ್ನು ನೋಡುತ್ತಾ ಅವಳ ತಲೆ ಸವರುತ್ತಾನೆ.

CUT TO

* ಧರ್ಮ ಕಿಟಕಿಗೆ ಹಾಕಿರುವ curtain ತೊಲಗಿಸುತ್ತಾನೆ. ಚಾರ್ಲಿಯ ಮುಖದ ಮೇಲೆ ಬೆಳಕು ಪ್ರಕಾಶಿಸುತ್ತಿದೆ. ಆದರೆ ಚಾರ್ಲಿ ಸ್ಪಂದಿಸುತ್ತಿಲ್ಲ. ಧರ್ಮ  ಬೇಸರದಿಂದ ನೋಡುತ್ತಿದ್ದಾನೆ.

CUT TO

EXT. DAY. TEMPLE (THE HYMN OF DHARMA SONG)

. ಪ್ರಾರ್ಥನಾ ಮಂದಿರದ ಮುಂದೆ ಹಲವಾರು ಜನ ಸೇರಿದ್ದಾರೆ. ಜನರು ಭಜನೆ ಮಾಡುತ್ತಿದ್ದಾರೆ. ಧರ್ಮ ಅವರ ಜೊತೆ ಕುಳಿತಿದ್ದಾನೆ. ಒಳಗಡೆ ದೇವರಿಗೆ ಪೂಜೆ ನಡೆಯುತ್ತಿದೆ. ಧರ್ಮ ದೇವರಿಗೆ ಕೈ ಮುಗಿಯುತ್ತಾನೆ. ಜನರೆಲ್ಲಾ ದೇವರಿಗೆ ನಮಸ್ಕರಿಸುತ್ತಾರೆ.

* ಧರ್ಮ ಮಂದಿರದ ಹೊರಗಡೆ ಒಬ್ಬರು ಸಾಧುವಿನ ಕೈಯಿಂದ ಮಂತ್ರದ ದಾರ ತೆಗೆದುಕೊಳ್ಳುತ್ತಾನೆ.

CUT TO

EXT. NIGHT. AYURVEDIC HOME(THE HYMN OF DHARMA SONG)

* ರಾತ್ರಿ ಹೊತ್ತು. ಚಾರ್ಲಿ ಮಲಗಿದ್ದಾಳೆ. ಧರ್ಮ ಚಾರ್ಲಿಯ ಪಕ್ಕದಲ್ಲೇ ಮಲಗಿದ್ದಾನೆ. ಕಣ್ಣೀರಿಡುತ್ತಾ ಚಾರ್ಲಿಯ ಮುಖ ಸವರುತ್ತಾನೆ.

CUT TO

EXT. DAY. AYURVEDIC HOME (THE HYMN OF DHARMA SONG)

* ಸೂರ್ಯೋದಯವಾಗುತ್ತದೆ. ಧರ್ಮ ಚಾರ್ಲಿಯ ಮೇಲೆ ಕೈಯಿಟ್ಟು ಮಲಗಿದ್ದಾಳೆ. ಚಾರ್ಲಿ ಕಣ್ಣು ತೆರೆಯುತ್ತಾಳೆ. ಧರ್ಮ ನಿದ್ರಿಸುತ್ತಿದ್ದಾನೆ. ಚಾರ್ಲಿ ಧರ್ಮನನ್ನು ನೋಡಿ paw ಮಾಡುತ್ತಾಳೆ. ಧರ್ಮ ಎಚ್ಚರಗೊಳ್ಳುತ್ತಾನೆ.

DHARMA

ಚಾರ್ಲಿ..

THE HYMN OF DHARMA SONG STOPS

CUT TO

EXT. DAY. BARREN LAND

* ಧರ್ಮ ಹಾಗೂ ಚಾರ್ಲಿ ನಿರ್ಜನ ಪ್ರದೇಶವೊಂದರಲ್ಲಿ ಕುಳಿತಿದ್ದಾರೆ. ಚಾರ್ಲಿ ಸ್ವಲ್ಪ ದೂರದಲ್ಲಿ ಮುಂದೆ ನೋಡುತ್ತಾ ಕುಳಿತಿದ್ದಾಳೆ. ಸ್ವಲ್ಪ ಹಿಂದೆ ಕುಳಿತಿರುವ ಧರ್ಮ ಚಾರ್ಲಿಯನ್ನು ನೋಡಿ,

DHAMRA

ಚಾರ್ಲಿ..

* ಎಂದು ಕರೆಯುತ್ತಾನೆ. ಚಾರ್ಲಿ ಹಿಂದೆ ತಿರುಗಿ ಧರ್ಮನನ್ನು ನೋಡುತ್ತಾಳೆ.

DHARMA
ನನ್ನ ಎಷ್ಟು ಪ್ರೀತಿ ಮಾಡ್ತೀಯ ಚಾರ್ಲಿ?

* ಚಾರ್ಲಿ ಕುಳಿತಲ್ಲಿಂದ ಎದ್ದು ಬಂದು ಧರ್ಮನ ಮೇಲೆ ಹತ್ತಿ ತಬ್ಬಿಕೊಳ್ಳುತ್ತಾಳೆ. ಧರ್ಮ ಚಾರ್ಲಿಯನ್ನು ತಬ್ಬಿಕೊಳ್ಳುತ್ತಾನೆ. ಚಾರ್ಲಿ whining ಮಾಡುತ್ತಿದ್ದಾಳೆ.

DHARMA
I love you too Charlie..

* ಧರ್ಮ ಚಾರ್ಲಿಯನ್ನು ತಬ್ಬಿಕೊಂಡು ಕುಳಿತಿದ್ದಾನೆ.

CUT TO

EXT. DAY. AYURVEDIC TREATMENT HOME. (THE HYMN OF DHARMA SONG)

THE HYMN OF DHARMA SONG CONT'D

* ಧರ್ಮ ಆಯುರ್ವೇದ ಚಿಕಿತ್ಸಾಲಯದಿಂದ ಹೊರಡುತ್ತಾನೆ. ಜಟಕಾ ಗಾಡಿ ಮುಂದೆ ಹೋಗುತ್ತಿದೆ. ಧರ್ಮ ಗಾಡಿಯೊಳಗೆ ಕುಳಿತಿದ್ದಾನೆ. ಚಾರ್ಲಿ ಧರ್ಮನ ಮಡಿಲಿನಲ್ಲಿ ಮಲಗಿದ್ದಾಳೆ

CUT TO

EXT. DAY. STREET (THE HYMN OF DHARMA SONG)

* ಧರ್ಮ ಒಂದು ಅಂಗಡಿಯ ಹೊರಗಡೆ ಕುಳಿತು ತಿನ್ನುತ್ತಿದ್ದಾನೆ. ಚಾರ್ಲಿ ತನ್ನ ತಟ್ಟೆಯಲ್ಲಿದ್ದ ಊಟವನ್ನು ತಿಂದು ಮುಗಿಸಿ ಧರ್ಮನನ್ನು ನೋಡುತ್ತಾಳೆ. ಧರ್ಮ ತಿನ್ನುವುದನ್ನು ನಿಲ್ಲಿಸಿ ತನ್ನ ತಟ್ಟೆಯನ್ನು ಚಾರ್ಲಿಯ ಮುಂದೆ ಇಡುತ್ತಾನೆ. ಚಾರ್ಲಿ ಅದರಲ್ಲಿರುವ ತಿಂಡಿಯನ್ನು ತಿನ್ನುತ್ತಾಳೆ.

CUT TO

EXT. EXT. STREET (THE HYMN OF DHARMA SONG)

* ರಾತ್ರಿಯಾಗಿದೆ. ಧರ್ಮ ಬೀದಿ ಬದಿಯಲ್ಲಿರುವ sofaದಲ್ಲಿ ಕುಳಿತು ಅವಳ harness ಕೆಡವುತ್ತಿದ್ದಾನೆ. ಚಾರ್ಲಿ ಪಕ್ಕದಲ್ಲಿ ಕುಳಿತಿದ್ದಾಳೆ. ಇಬ್ಬರು ಚಿಕ್ಕ ಮಕ್ಕಳು ಚಾರ್ಲಿಯನ್ನು ನೋಡಿ ಖುಷಿಯಿಂದ ಓಡಿ ಬರುತ್ತಾರೆ. ಹಿಂದಿನಿಂದ ಅವರ ತಂದೆ ತಾಯಿ ಬರುತ್ತಾರೆ. ಸಣ್ಣ ಹುಡುಗ ಚಾರ್ಲಿಯ ಮೈ ಸವರುತ್ತಾ ಮುದ್ದಿಸುತ್ತಾನೆ. ಚಾರ್ಲಿಯ ಮೈ ಮೇಲಿರುವ ಹುಣ್ಣನ್ನು ನೋಡಿದ ತಾಯಿ,

RANDOM LADY
No.. Don't touch

* ಎಂದು ಹೇಳಿ ಮಕ್ಕಳನ್ನು ಕರೆದುಕೊಂಡು ಅಲ್ಲಿಂದ ಹೋಗುತ್ತಾರೆ. ಧರ್ಮ ಅವರತ್ತ ನೋಡುತ್ತಾನೆ. ಚಾರ್ಲಿ ಬೇಸರದಿಂದ ಕುಳಿತು ನೋಡುತ್ತಿದ್ದಾಳೆ. ಧರ್ಮ ಚಾರ್ಲಿಯನ್ನು ಅಸಹಾಯಕನಾಗಿ ನೋಡುತ್ತಾನೆ.

CUT TO

INT. NIGHT. BUS (THE HYMN OF DHARMA SONG)

* ಧರ್ಮ bus ನಲ್ಲಿ ಪ್ರಯಾಣಿಸುತ್ತಿದ್ದಾನೆ. ಚಾರ್ಲಿ ಧರ್ಮನ ಮಡಿಲಿನಲ್ಲಿ ಮಲಗಿದ್ದಾಳೆ. ಚಾರ್ಲಿ ರಕ್ತಸಿಕ್ತವಾದ ವಾಂತಿ ಮಾಡುತ್ತಾಳೆ. ಧರ್ಮ ಗಾಬರಿಯಿಂದ ನೋಡುತ್ತಾ,

DHARMA
Stop.. Stop

* ಎಂದು ಕಿರುಚುತ್ತಾನೆ. Bus ನಿಲ್ಲುತ್ತದೆ.

THE HYMN OF DHARMA STOPS

CUT TO

EXT. DAY. STREET

* ಧರ್ಮ bag ಸಮೇತ ಒಂದು ಕಡೆ ಕುಳಿತು ಯೋಚಿಸುತ್ತಿದ್ದಾನೆ. ಚಾರ್ಲಿ ಪಕ್ಕದಲ್ಲಿ ಮಲಗಿದ್ದಾಳೆ.

DOCTOR ASHWIN(V.O)
ಧರ್ಮ, ಇವಾಗ ಅವ್ಳ condition ನೋಡಿದ್ರೆ ಜಾಸ್ತಿ ಸಮಯ ಇಲ್ಲ ಅನ್ನಿಸ್ತದೆ. ಅದೆಂತ ಮಾಡ್ಲಿಕುಂಟ ಆದಷ್ಟು ಬೇಗ ಮಾಡಿ ಮುಗ್ಸ..

CUT TO

EXT. DAY. ROAD

* ಧರ್ಮ busನಲ್ಲಿ ಪ್ರಯಾಣಿಸುತ್ತಿದ್ದಾನೆ. ಚಾರ್ಲಿ ಧರ್ಮನನ್ನು ತಬ್ಬಿಕೊಂಡು ಮಲಗಿದ್ದಾಳೆ. ಮುಂದೆ ಕುಳಿತಿರುವ ಚಿಕ್ಕ ಹುಡುಗಿ ಚಾರ್ಲಿಯನ್ನು ನೋಡಿ ಮುಗುಳ್ನಗುತ್ತಿದ್ದಾಳೆ. ಧರ್ಮ ಅವಳನ್ನು ಗಮನಿಸುತ್ತಾನೆ. ಅವಳು ಚಾರ್ಲಿ ಸುಂದರವಾಗಿದ್ದಾಳೆ ಎಂಬಂತೆ ಕೈ ಸನ್ನೆ ಮಾಡುತ್ತಾಳೆ. ಧರ್ಮ ಕೂಡಾ ಅವಳನ್ನು ನೋಡಿ ನಿನ್ನ ಮುಖವೂ ಸುಂದರವಾಗಿದೆ ಎಂದು ಕೈ ಸನ್ನೆ ಮಾಡುತ್ತಾನೆ. ಆ ಹುಡುಗಿ ನಾಚುತ್ತಾಳೆ. ಧರ್ಮ ಮುಗುಳ್ನಗುತ್ತಾನೆ. ಧರ್ಮ bus ಹೊರಗಡೆ ನೋಡಿದಾಗ ಆಶ್ಚರ್ಯಗೊಳ್ಳುತ್ತಾನೆ.

DHARMA
ಚಾರ್ಲಿ..

* ಎಂದು ಕರೆದು ಚಾರ್ಲಿಯನ್ನು ಎಬ್ಬಿಸುತ್ತಾನೆ. ಚಾರ್ಲಿ ಹೊರಗೆ ನೋಡುತ್ತಾಳೆ. ದೂರದಲ್ಲಿ ಸುಂದರವಾದ ಮಂಜಿನ ಪರ್ವತ ಕಾಣಿಸುತ್ತದೆ. ಧರ್ಮ ಹಾಗೂ ಚಾರ್ಲಿ ಅದನ್ನು ನೋಡುತ್ತಿದ್ದಂತೆ ತಕ್ಷಣ bus ನಿಲ್ಲುತ್ತದೆ. ಧರ್ಮ ಮುಂದೆ ನೋಡುತ್ತಾನೆ. Bus ಎದುರುಗಡೆ ಹಲವಾರು ವಾಹನಗಳು ನಿಂತಿವೆ. Army officers ಸ್ಥಳದಲ್ಲಿದ್ದಾರೆ.

BHAKSHI
Aage landslide hua hai, rastha bandh hai. Rastha khulne mein time lagega. Aap sabse request hai ki please cooperate kijiye.

* ಸುಮಾರು ದೂರದುದ್ದಕ್ಕೂ ಸಾವಿರಾರು ವಾಹನಗಳು ಸಾಲಾಗಿ ನಿಂತಿವೆ. ಮೇಲ್ಗಡೆ helicopters ಹಾರಾಡುತ್ತಿವೆ.

BHAKSHI
Kohi gaadi aage nahi jaane chahiye. Convoy thodi dher main paunchne wali hain. Aur rescuers ki sari list mujhe chahiye. Teek hai?

* ಧರ್ಮ ಗಾಡಿಯಿಂದ ಕೆಳಗಿಳಿದು Army officer ಹತ್ತಿರ ಬಂದು,

DHARMA
Sir, what happened?

ARMY OFFICER 1
Aage landslide hua hai.

DHARMA
Aage kabhi jaa sakta hai?

BHAKSHI
Are bola na aage nahi ja sakte? Rastha bandh hai. Landslide hua hai. Gaadi mein jaake baito.

DHARMRA
Sir that's not possible Sir. I can't go back. I've travelled too far Sir. I need to reach there before it's too late

ARMY OFFICER 1
Aapko ek bari mein bath samaj nahi aati? Main kya bol raha hun tabse? Aage landslide hua hai. People have died.

DHARMA
(Shouting at him)
ಅದೆಲ್ಲ ನಂಗೊತ್ತಿಲ್ಲ ಸರ್.. ನಾನ್ ತುಂಬಾ ದೂರ್ದಿಂದ ಬಂದಿದ್ದೀನಿ. ನನ್ ಜೊತೆ ಒಂದ್ ನಾಯಿ ಬೇರೆ ಇದೆ ಸರ್. ಅವ್ಳ್ ಸಾಯ್ತಿದ್ದಾಳೆ ಅಲ್ಲಿ..

BHAKSHI
Kya bol raha hai yar? Leke jao isko. Leke jao isko yaha se. Main bhi dektha hun tu aage kaise jayega, kaise jayega tu aage? Go back..
(ಗದರಿಸುತ್ತಾ)
I said go back..

* ಪಕ್ಕದಲ್ಲಿರುವ officer ಧರ್ಮನ ಕೈ ಹಿಡಿದು ಆಚೆ ಕಳಿಸಲು ಪ್ರಯತ್ನಿಸುತ್ತಾನೆ.

DHARMA
Sir. Please Sir. Sir Sir.. Please Sir.. ಏನ್ ಮಾಡ್ತಿದ್ದೀರ ಸರ್.. ಸರ್ ದಯವಿಟ್ಟು ಅರ್ಥ ಮಾಡ್ಕೊಳ್ಳಿ, ನಂಗಲ್ಲಿ ಹೋಗ್ಬೇಕು ಸರ್.. ಸರ್ please ಸರ್..ಸರ್ ದಯವಿಟ್ಟು

* ಅಷ್ಟರಲ್ಲಿ ಇನ್ನೊಬ್ಬ officer ಅಲ್ಲಿಗೆ ಬಂದು,

BHAKSHI
I sai..

SUHASTHA CHAWLA (O.S)
Bhakshi, What's going on?

ARMY OFFICER 1
Sir, iska dhimak kharab hai. Kab se samja raha hun ki aage rastha bandh hai bandh hai bandh hai, lekin wo maan ne ki tayyari nahi hain.

DHARMA
ಸರ್ ಇವ್ರು ನನ್ನ ಆ ಕಡೆ ಹೋಗೋಕೆ ಬಿಡ್ತಿಲ್ಲ ಸರ್.. ಸರ್ ದಯವಿಟ್ಟು ಸರ್..ನನ್ನ ಆ ಕಡೆ ಕಳ್ಸ್ಕೊಡಿ please.. ಸರ್ ನನ್ ನಾಯಿಗ್ ಬೇರೆ ಹುಷಾರಿಲ್ಲ.

* ಭಕ್ಷಿ ಚಾರ್ಲಿಯನ್ನು ನೋಡುತ್ತಾರೆ. ಚಾರ್ಲಿ ಕುಳಿತಲ್ಲಿಂದಲೇ ತಲೆ ಹೊರಗೆ ಹಾಕಿ ನೋಡುತ್ತಿದ್ದಾಳೆ.

DHARMA (CONT'D)
ಆದಷ್ಟು ಬೇಗ ಅವ್ಳಿಗೆ snow ತೋರಿಸ್ಬೇಕು. ಇವತ್ತು ತೋರ್ಸಿಲ್ಲ ಅಂದ್ರೆ ಮತ್ತೆ ಆಗುತ್ತೋ ಇಲ್ವೋ ಗೊತ್ತಿಲ್ಲ ಸರ್.
(ಕೈ ಮುಗಿಯುತ್ತಾ)
ಸರ್ ದಯವಿಟ್ಟು ನಿಮ್ ಕೈ ಮುಗಿತೀನಿ. Please ಸರ್.. Please. ಸರ್ ದಯವಿಟ್ಟು.. ದಯವಿಟ್ಟು ಸರ್..

* ಸುಹಾಸ್ತಾ ಚಾವ್ಲ ಧರ್ಮನನ್ನು ನೋಡುತ್ತಿದ್ದಾರೆ.

CUT TO

INT. DAY. ARMY CAMP

* ವಿಶಾಲವಾದ ಕಣಿವೆಯ ದಡದಲ್ಲಿ Army tentsಗಳು ಕಾಣಿಸುತ್ತವೆ. Army officers ಹೊರಗಡೆ ನಿಂತಿದ್ದಾರೆ. Camp ಒಳಗಡೆ ಸುಹಸ್ತಾ ಚಾವ್ಲ ಒಂದು tea cup ನ ಧರ್ಮನಿಗೆ ಕೊಟ್ಟು ಕುಳಿತುಕೊಳ್ಳುತ್ತಾರೆ. ಧರ್ಮ ಅವರ ಮುಂದೆ ಕುಳಿತಿದ್ದಾನೆ. ಚಾರ್ಲಿ ಪಕ್ಕದಲ್ಲಿ ಮಲಗಿದ್ದಾಳೆ. ಸುಹಾಸ್ತಾ ಚಾವ್ಲಾ tea cup ಕೆಳಗಿಟ್ಟು ಧರ್ಮನನ್ನು ನೋಡುತ್ತಾ,

SUHASTHA CHAWLA
So, how's Charlie now?

DHAMRA
(ಚಾರ್ಲಿಯನ್ನು ತಿರುಗಿ ನೋಡಿ)
She's okay.

SUHASTHA CHAWLA
When I got to know your story, mujhe mere army dogs yad agaya.

* ಧರ್ಮ ಅವರನ್ನು ನೋಡುತ್ತಿದ್ದಾನೆ.

SUHASTHA CHAWLA (CONT'D)
Ya tho wo hame chodke chale jate hai, ya hum une. Jaye kohi bhi. Jo reh jatha hai separation ka pain uskeliye same hi hai.
(ಒಂದು ಗುಟುಕು Tea ಕುಡಿದು walkie talkie ಯನ್ನು off ಮಾಡುತ್ತಾರೆ)
Listen Dharma. I know what this journey means to you and Charlie. But aage landslide hua hai. And the situation is really bad. Aur mujhe nahi patha ye kab teek hoga. Lekin hamara ek convoy kal Kashmir ja raha hai. Baraf tho waha pe bhi hai. I'll make the arrangements. You can stay here for the night.

* ಎಂದು ಹೇಳುತ್ತಾ ಎದ್ದು ನಿಲ್ಲುತ್ತಾರೆ. ಧರ್ಮ ಅವರನ್ನು ನೋಡಿ,

DHARMA
Sir.. How do you know about me and Charlie?

* ಸುಹಸ್ತಾ ಚಾವ್ಲಾ ಮತ್ತೆ ಕುಳಿತುಕೊಳ್ಳುತ್ತಾರೆ.

SUHASTHA CHAWLA

Oh! You're famous my friend.
(Table ಮೇಲೆ ಏನನ್ನೋ ಹುಡುಕುತ್ತಾ)
Where's it? Ya
(ಪಕ್ಕದಲ್ಲಿರುವ Magazine ಕೈಗೆತ್ತಿಕೊಂಡು ನೋಡುತ್ತಾ)
A tale of Dharmaraj in Kaliyug.

* ಎಂದು ಹೇಳಿ Magazine ಅನ್ನು ಧರ್ಮನಿಗೆ ಕೊಡುತ್ತಾರೆ.

SUHASTHA CHAWLA (O.S) CONT'D
The whole world knows your story.

* ಧರ್ಮ Magazine ನ ಮುಖಪುಟ ನೋಡುತ್ತಿದ್ದಾನೆ.

SUHASTHA CHAWLA (O.S)
Best wishes my friend.

* ಎನ್ನುತ್ತಾ ಎದ್ದು ನಿಂತು ಪಕ್ಕದಲ್ಲಿ ನೇತುಹಾಕಿದ್ದ ಕಂಬಳಿಯನ್ನು ಧರ್ಮನ ಕೈಗೆ ಕೊಡುತ್ತಾರೆ.

SUHAHSTHA CHAWLA
Yaha raat ko thand bad jati hai. Take care..

* ಎಂದು ಹೇಳಿ ಅಲ್ಲಿಂದ ಹೊರಡುತ್ತಾರೆ.

CUT TO

INT. NIGHT. ARMY CAMP

* ರಾತ್ರಿ ಹೊತ್ತು. ಧರ್ಮ ಯೋಚಿಸುತ್ತಾ ಕುಳಿತಿದ್ದಾನೆ. ಚಾರ್ಲಿ ನಿದ್ರಿಸುತ್ತಿದ್ದಾಳೆ.

DHARMA (V.O)
ನಾಳೆ ಕಾಶ್ಮೀರ್ ಕಡೆ ಹೋದ್ರೆ snow ನೋಡ್ಬೋದು ಅಂತ ಹೇಳಿದ್ರು.

* ಧರ್ಮ ಬೇಸರದಿಂದ ಚಾರ್ಲಿಯನ್ನು ನೋಡುತ್ತಿದ್ದಾನೆ.

DHARMA (V.O) CONT'D
ಆದ್ರೆ ಅಲ್ಲಿ ತನಕ time ಇದ್ಯಾ? ಚಾರ್ಲಿ ಪ್ರತೀ ಉಸಿರು ಇಲ್ಲ ಇಲ್ಲ  ಅಂತ ಅನ್ನಿಸ್ತಾ ಇತ್ತು.

* ಧರ್ಮ ಎದ್ದು ಬಂದು ಚಾರ್ಲಿಯ ಮೈ ಸವರುತ್ತಾ ಅವಳ ಹಣೆಗೆ ಮುತ್ತಿಡುತ್ತಾನೆ. ಧರ್ಮ ಒಂದು ಕ್ಷಣ ಯೋಚಿಸಿ ತಕ್ಷಣ ಹೊರಗೆ ನೋಡುತ್ತಾನೆ.

* ಧರ್ಮ curtain ಸರಿಸಿ ಹೊರಗೆ ನೋಡುತ್ತಾನೆ. ಹೊರಗಡೆ ಒಂದಷ್ಟು Army officers ಕಾಣಿಸುತ್ತಿದ್ದಾರೆ. ಧರ್ಮ ತನ್ನ bagನಲ್ಲಿರುವ ವಸ್ತುಗಳನ್ನು ಒಂದೊಂದಾಗೇ ಹೊರ ತೆಗೆದಿಡುತ್ತಾನೆ.

* ಧರ್ಮ ಚಾರ್ಲಿಯನ್ನು bag ಒಳಗೆ ಕೂರಿಸಿ ಹೆಗಲಿಗೆ ಧರಿಸಿಕೊಂಡು tent ಹೊರಗೆ ಬರುತ್ತಾನೆ. Army officers ಹೊರಗಡೆ ಕುಳಿತಿದ್ದಾರೆ. ಧರ್ಮ ಅವರ ಕಣ್ಣು ತಪ್ಪಿಸಿ ಅಲ್ಲಿಂದ ಓಡಿ ಹೋಗುತ್ತಾನೆ. `

CUT TO

EXT. NIGHT. WAY TO SNOW MOUNTAIN

* ನಸುಕಿನ ಸಮಯ. ಇನ್ನೂ ಬೆಳಕು ಹರಿದಿರುವುದಿಲ್ಲ. ಧರ್ಮ ಚಾರ್ಲಿಯನ್ನು ಹೆಗಲ ಮೇಲೆ ಹೊತ್ತುಕೊಂಡು ಕೈಯಲ್ಲಿ torch ಹಿಡಿದುಕೊಂಡು ಆತುರದಿಂದ ನಡೆಯುತ್ತಿದ್ದಾನೆ.

HELICAM SHOT: ಧರ್ಮ ಚಾರ್ಲಿಯನ್ನು ಕರೆದುಕೊಂಡು ಹೋಗುತ್ತಿದ್ದಾನೆ. CAMERA TILT UP ಆದಂತೆ ದೂರದಲ್ಲಿ ಮಂಜಿನ ಪರ್ವತ ಕಾಣಿಸುತ್ತಿದೆ.

* ಧರ್ಮ ಚಾರ್ಲಿಯನ್ನು ಹೊತ್ತುಕೊಂಡು ನಡೆಯುತ್ತಿದ್ದಾನೆ.

DHARMA

ಚಾರ್ಲಿ..

* ಚಾರ್ಲಿ whining ಮಾಡುತ್ತಿದ್ದಾಳೆ. ಧರ್ಮ ಮುಂದೆ ನೋಡಿ ಒಂದು ಕ್ಷಣ ನಿಲ್ಲುತ್ತಾನೆ. ಮೇಲ್ಗಡೆಯಿಂದ ಸುಮಾರು ಮಂಜಿನ ಹನಿಗಳು ಬೀಳುತ್ತಿವೆ. ಧರ್ಮ ಇನ್ನೂ ಆತುರದಿಂದ ಒಡಲು ಪ್ರಾರಂಭಿಸುತ್ತಾನೆ.

DHARMA

ಚಾರ್ಲಿ.. ನೀನ್ ಇದ್ಕಿಂತ ಮುಂಚೆ ಯಾವತ್ತಾದ್ರೂ snow ನೋಡಿದ್ದೀಯಾ? ನಾನಂತೂ life ಅಲ್ಲಿ first time ನೋಡ್ತಿರೋದು.

* ಧರ್ಮ ಚಾರ್ಲಿಯನ್ನು ಹೊತ್ತುಕೊಂಡು ಮುಂದೆ ಹೋಗುತ್ತಾನೆ.

CUT TO

EXT. DAY. SNOW MOUNTAIN

* ಧರ್ಮ ಮಂಜಿನ ಪರ್ವತಕ್ಕೆ ತಲುಪಿದ್ದಾನೆ. ಎತ್ತರದ ಪ್ರದೇಶ ಹತ್ತಿ snow ಮೇಲೆ ನಡೆದುಕೊಂಡು ಬಂದು ನಿಲ್ಲುತ್ತಾನೆ. ಚಾರ್ಲಿ ತಲೆಯೆತ್ತಿ ಎದುರುಗಡೆ ನೋಡುತ್ತಾಳೆ. ಮುಂದುಗಡೆ ಮಂಜಿನ ರಾಶಿ ಕಾಣಿಸುತ್ತಿದೆ. ಮೇಲಿನಿಂದ ಜೋರಾಗಿ ಮಂಜು ಸುರಿಯುತ್ತಿದೆ. ಧರ್ಮ ಆಶ್ಚರ್ಯದಿಂದ ಮುಂದೆ ನೋಡುತ್ತಾ ಮೆಲ್ಲನೆ bag ಸಮೇತ ಚಾರ್ಲಿಯನ್ನು ಕೆಳಗಿಳಿಸುತ್ತಾನೆ. ಚಾರ್ಲಿ ಮುಂದುಗಡೆ ನಡೆದುಕೊಂಡು ಹೋಗುತ್ತಾಳೆ. ಚಾರ್ಲಿ snow ನೋಡಿ ಪ್ರತಿಕ್ರಿಯಿಸುತ್ತಿಲ್ಲ. ಧರ್ಮ ಗೊಂದಲದಿಂದ ಚಾರ್ಲಿಯನ್ನು ನೋಡುತ್ತಿದ್ದಾನೆ. ಚಾರ್ಲಿ snow ನೋಡಿದ ನಂತರ ಹಿಂದೆ ತಿರುಗಿ ಧರ್ಮನನ್ನು ನೋಡುತ್ತಾಳೆ. ಧರ್ಮ ಏನೂ ಪ್ರತಿಕ್ರಿಯಿಸದೆ ನಿಂತುಕೊಂಡಿದ್ದಾನೆ. ಚಾರ್ಲಿ ಪುನಃ ಮುಂದೆ ತಿರುಗಿ ಮಂಜಿನ ರಾಶಿಯ ಮೇಲೆ ಓಡುತ್ತಾಳೆ. ಧರ್ಮ ಖುಷಿಯಿಂದ ನೋಡುತ್ತಾ ಅಲ್ಲೇ ಕುಳಿತುಕೊಳ್ಳುತ್ತಾನೆ. ಚಾರ್ಲಿ ಮಂಜಿನ ರಾಶಿಯ ಮೇಲೆ ಜಿಗಿಯುತ್ತಿದ್ದಾಳೆ. ನಂತರ ಓಡಿ ಬಂದು ಧರ್ಮನ ಮೈ ಮೇಲೆ ಬೀಳುತ್ತಾಳೆ. ಧರ್ಮ ಕುಳಿತಲ್ಲೇ ಕೆಳಗೆ ಬೀಳುತ್ತಾನೆ. ಚಾರ್ಲಿ ಧರ್ಮನ ಮುಖ ನೆಕ್ಕುತ್ತಾಳೆ.

JUMPCUTS

* ಧರ್ಮ ಮಂಜಿನ ರಾಶಿಯ ಮೇಲೆ ಓಡುತ್ತಿದ್ದಾನೆ. ಚಾರ್ಲಿ ಹಿಂದಿನಿಂದ ಓಡುತ್ತಿದ್ದಾಳೆ. ಧರ್ಮ ಓಡುತ್ತಾ ಆಟವಾಡುವ ರೀತಿಯಲ್ಲಿ ಕುಸಿದು ಬೀಳುತ್ತಾನೆ.

* ಚಾರ್ಲಿ ಮಂಜಿನ ಮೇಲೆ ಉರುಳಾಡುತ್ತಿದ್ದಾಳೆ. ಧರ್ಮ ಸ್ವಲ್ಪ ದೂರದಲ್ಲಿ ಕುಳಿತು ಖುಷಿಯಿಂದ ಚಾರ್ಲಿಯನ್ನು ನೋಡುತ್ತಿದ್ದಾನೆ.

* ಚಾರ್ಲಿ ಧರ್ಮನನ್ನು ನೋಡುತ್ತಾ ಬೊಗಳುತ್ತಾಳೆ.

DHARMA

ನಂಗ್ ಆಗ್ತಿಲ್ಲ ಚಾರ್ಲಿ. ನೀನ್ ಹೋಗ್ ಆಡು.

* ಚಾರ್ಲಿ ಬೊಗಳುತ್ತಿದ್ದಾಳೆ.

* ಧರ್ಮ ಹಾಗೂ ಚಾರ್ಲಿ ಓಡುತ್ತಾ ಆಟವಾಡುತ್ತಿದ್ದಾರೆ. ಧರ್ಮ ಓಡಿ ಬಂದು ಚಾರ್ಲಿಯನ್ನು ಹಿಡಿಯುತ್ತಾನೆ. ಚಾರ್ಲಿಯನ್ನು ತಬ್ಬಿಕೊಂಡು ಆಟವಾಡುತ್ತಾನೆ. ಚಾರ್ಲಿ ಧರ್ಮನ ಜೊತೆಗೆ ಆಟವಾಡುತ್ತಿದ್ದಾಳೆ.

* ಧರ್ಮ bag ಧರಿಸಿಕೊಂಡು ವಾಪಸ್ ಹೋಗುತ್ತಿದ್ದಾನೆ. ಚಾರ್ಲಿ ಧರ್ಮನನ್ನು ಹಿಂಬಾಲಿಸುತ್ತಿದ್ದಾಳೆ.

CUT TO

EXT. DAY. ARMY CAMP

* ಚಾರ್ಲಿ tent ಒಳಗಡೆ ಮಲಗಿ ಹೊರಗಡೆ ನೋಡುತ್ತಿದ್ದಾಳೆ.

DHARMA (O.S)
ಹೌದು ಸರ್ ನೀವ್ ನೋಡ್ಬೇಕಿತ್ತು. snow ನೋಡಿ ಎಷ್ಟು ಖುಷಿಯಾಗಿದ್ಲು ಅಂತಂದ್ರೆ full ಕುಣೀತಾ ಇದ್ಲು..

ARMY OFFICER
Kaha gaye the?

DHARMA
Main yahi pe.. Pas me tha.

CUT TO

INT. NIGHT. ARMY CAMP

* ಧರ್ಮ video call ಮಾಡಿ ಚಾರ್ಲಿಗೆ ಆದ್ರಿಕಾಳನ್ನು ತೋರಿಸುತ್ತಿದ್ದಾನೆ.

ADRIKA (PHONE VOICE)
I miss you charlie

DHARMA
ಆದ್ರಿಕಾ ಇವ್ಳು thanks ಅಂತೂ ಮಾಡೇ ಇಲ್ಲ..

* ಚಾರ್ಲಿ ಆದ್ರಿಕಾಳನ್ನು ನೋಡುತ್ತಿದ್ದಾಳೆ.

ADRIKA
ಹೌದಾ ಚಾರ್ಲಿ? ನೀನ್ thanks ಮಾಡಿಲ್ವಾ?

CUT TO

* Video Call ನಲ್ಲಿ ವಂಶಿನಾಥನ್ ಮಾತನಾಡುತ್ತಿದ್ದಾನೆ.

VAMSHINATHAN (PHONE VOICE)
Dharma.. As you said, nee vandh ennayu en karuppanu paathittudha ponu. Ok?

* ಧರ್ಮ ಮುಗುಳ್ನಗುತ್ತಾನೆ. ಚಾರ್ಲಿ ಮಲಗಿದಲ್ಲಿಂದಲೇ phone screen ನೋಡುತ್ತಿದ್ದಾಳೆ.

CUT TO

* ಧರ್ಮ ದೇವಿಕಾ ಜೊತೆ phoneನಲ್ಲಿ ಮಾತನಾಡುತ್ತಿದ್ದಾನೆ.

DEVIKA (O.S)
Wow, ಇವಾಗ ಏನ್ ಮಾಡ್ತಿದ್ದಾಳೆ?

DHARMA
(ಖುಷಿಯಿಂದ)
ಒಳ್ಳೆ ನಿದ್ದೆ..

* ಚಾರ್ಲಿ ನಿದ್ರಿಸುತ್ತಿದ್ದಾಳೆ.

DEVIKA (O.S)
Oh! We shall meet as soon as you comeback..

DHARMA
Sure..

DEVIKA (O.S)
Good night.

DHARMA
Good night.

FADE OUT

* ಧರ್ಮ ಮಲಗಿದ್ದಾನೆ. ಚಾರ್ಲಿ ಪಕ್ಕದಲ್ಲಿ ನಿದ್ರಿಸುತ್ತಿದ್ದಾಳೆ.

DHARMA
ಖುಷಿನಾ ಚಾರ್ಲಿ? ನಂಗೊತ್ತು ಇವತ್ತಿನ್ ದಿನ ನಿಂಗ್
ಯಾವತ್ತೂ ಮರ್ಯೋರ್ಕಾಗಲ್ಲ ಅಂತ. ನಂಗೂ ಕೂಡಾ..
(ಚಾರ್ಲಿಯತ್ತ ನೋಡಿ)
ವಾಪಸ್ ಹೋಗ್ಬೇಕಾದ್ರೆ flight ಅಲ್ಲಿ ಹೋಗೋಣ.
ನಿಂಗೋಸ್ಕರ ಅಲ್ಲಿ ಎಲ್ರೂ ಕಾಯ್ತಿದ್ದಾರೆ.
(After a pause)
Good night ಚಾರ್ಲಿ..

* ಎಂದು ಹೇಳಿ ಕಣ್ಣು ಮುಚ್ಚುತ್ತಾನೆ

CUT TO

EXT. DAY. COLONY ROAD

INSERT: DHARMA'S DREAM

* ಚಿನ್ಮಯ ಕಾಲನಿ ಮುಂದಿರುವ ಮುಖ್ಯರಸ್ತೆಯಲ್ಲಿ ಒಂದು auto ಬಂದು ನಿಲ್ಲುತ್ತದೆ. ಆದ್ರಿಕಾ ಕಾಲನಿ ರಸ್ತೆಯಲ್ಲಿ ನಿಂತು ಖುಷಿಯಿಂದ ನೋಡುತ್ತಿದ್ದಾಳೆ. ಧರ್ಮ autoದಿಂದ ಇಳಿಯುತ್ತಾನೆ. ಚಾರ್ಲಿ ಆದ್ರಿಕಾಳನ್ನು ನೋಡಿ ಓಡಿ ಬರುತ್ತಿದ್ದಾಳೆ.

ADRIKA
(With excitement)
ಚಾರ್ಲಿ..

* ಆದ್ರಿಕಾ ಅಲ್ಲೇ ಕುಳಿತು ಚಾರ್ಲಿಯತ್ತ ಕೈ ಚಾಚುತ್ತಾಳೆ. ಚಾರ್ಲಿ ಓಡಿ ಬಂದು ಆದ್ರಿಕಾಳ ಮುಖ ನೆಕ್ಕುತ್ತಾಳೆ. ಧರ್ಮ bag ಧರಿಸಿಕೊಂಡು ನಡೆದುಕೊಂಡು ಬರುತ್ತಿದ್ದಾನೆ. ಆದ್ರಿಕಾ ಓಡಿ ಬಂದು ಧರ್ಮನನ್ನು ತಬ್ಬಿಕೊಳ್ಳುತ್ತಾಳೆ.

BACK TO

INT/EXT. DAY. ARMY CAMP

* ಧರ್ಮ ಕನಸಿನಿಂದ ಎಚ್ಚರಗೊಂಡಿದ್ದಾನೆ. ಧರ್ಮ ಎದ್ದು ಕುಳಿತು ಪಕ್ಕಕ್ಕೆ ನೋಡುತ್ತಾನೆ. ಚಾರ್ಲಿ ಕಾಣಿಸುತ್ತಿಲ್ಲ. ಧರ್ಮ ಆತಂಕದಿಂದ ಅತ್ತಿತ್ತ ನೋಡುತ್ತಾನೆ.

DHARMA
ಚಾರ್ಲಿ..

* ಧರ್ಮ tent ಹೊರಗಡೆ ಬಂದು ನೋಡುತ್ತಾನೆ.

DHAMRA
(ಆತಂಕದಿಂದ)
ಚಾರ್ಲಿ?

* ಧರ್ಮ ಅಲ್ಲೇ ಪಕ್ಕದಲ್ಲಿ ಕುಳಿತಿರುವ Army Officer ಬಳಿ,

DHARMA
Sir aapne charlie ko dekha?

ARMY OFFICER 1
Nahi dekha..

* ಧರ್ಮ ಇನ್ನೊಂದು tent ಹತ್ತಿರ ಬಂದು ಅಲ್ಲಿರುವ officer ಬಳಿ,

DHARMA
Mere Charlie ko dekha?

ARMY OFFICER 2
Nahi nahi.. Main ne nahi dekha..

DHARMA
(With loud voice)
ಚಾರ್ಲಿ..

* ಧರ್ಮ ಅಲ್ಲೇ ಪಕ್ಕದಲ್ಲಿರುವ tent ಒಳಗಡೆ ಹುಡುಕುತ್ತಾನೆ. ನಂತರ ಇನ್ನೊಂದು tent ಒಳಗಡೆ ಬಂದು ನೋಡುತ್ತಾನೆ. ಭಕ್ಷಿ ಬಟ್ಟೆ ಧರಿಸುತ್ತಿದ್ದಾರೆ.

BHAKSHI
Kya Hua?

DHARMA
Sir.. Charlie ko dekha hai Sir?

BHAKSHI
Main ne nahi dekha

* ಧರ್ಮ ಹೊರಗೆ ಬಂದು ಪಕ್ಕದಲ್ಲಿರುವ ಇನ್ನೊಂದು tent ಒಳಗಡೆ ನೋಡುತ್ತಾನೆ. ಚಾರ್ಲಿ ಕಾಣಿಸುವುದಿಲ್ಲ..

DHARMA
ಚಾರ್ಲಿ..

* ಧರ್ಮ ಸುತ್ತಮುತ್ತಲೂ ಓಡುತ್ತಾ ಚಾರ್ಲಿಯನ್ನು ಹುಡುಕುತ್ತಾನೆ.

DHARMA
ಚಾರ್ಲಿ.. ಚಾರ್ಲಿ..
(After a pause)
ಚಾರ್ಲಿ..

* ಧರ್ಮ ಪುನಃ tent ಕಡೆ ಬಂದು ಹುಡುಕುತ್ತಾ ಮುಂದೆ ಬಂದಾಗ ಅಲ್ಲಿರುವ ಕುರ್ಚಿಯನ್ನು ಎಡವುತ್ತಾನೆ. ಭಕ್ಷಿ ಧರ್ಮನ ಕೈ ಹಿಡಿದು,

BHAKSHI
Hey. What happened?

* ಧರ್ಮ ಏನೂ ಉತ್ತರಿಸದೆ ಆತಂಕದಿಂದ ಮುಂದೆ ಬಂದು ನಿಂತು ನೋಡುತ್ತಾನೆ. ದೂರದಲ್ಲಿ

ಮಂಜಿನ ಪರ್ವತ ಕಾಣಿಸುತ್ತಿದೆ.

CUT TO

INT. DAY. WAY TO SNOW MOUNTAIN

* ಧರ್ಮ WALKING STICK ಹಿಡಿದುಕೊಂಡು ಹಿಂದಿನ ದಿನ ಹೋಗಿದ್ದ ದಾರಿಯಲ್ಲೇ ಚಾರ್ಲಿಯನ್ನು ಹುಡುಕುತ್ತಾ ಹೋಗುತ್ತಾನೆ.

MONTAGES: ಧರ್ಮ ಚಾರ್ಲಿಯನ್ನು ಜೋರಾಗಿ ಕರೆಯುತ್ತಾ ಮುಂದೆ ಹೋಗುತ್ತಿದ್ದಾನೆ. ಜೋರಾಗಿ ಗಾಳಿ ಬೀಸುತ್ತಿದೆ ಹಾಗೂ snowfall ಆಗುತ್ತಿದೆ.

HELICAM SHOT: ಧರ್ಮ ಚಾರ್ಲಿಯನ್ನು ಕರೆಯುತ್ತಾ ಮುಂದೆ ಹೋಗುತ್ತಿದ್ದಾನೆ. CAMERA TILT UP ಆದಂತೆ ದೂರದಲ್ಲಿ ಮಂಜಿನ ಪರ್ವತ ಕಾಣಿಸುತ್ತಿದೆ.

* ಧರ್ಮ ಚಾರ್ಲಿಯನ್ನು ಕರೆಯುತ್ತಾ ಓಡಿ ಬರುತ್ತಿದ್ದಾನೆ. ಒಂದು ಮರದ ಹತ್ತಿರ ಬಂದು ಸುಸ್ತಾಗಿ ಏದುಸಿರು ಬಿಡುತ್ತಾ ನಿಲ್ಲುತ್ತಾನೆ. ಕೆಳಗೆ ನೋಡಿದಾಗ ಚಾರ್ಲಿಯ ಹೆಜ್ಜೆಗುರುತುಗಳು ಕಾಣಿಸುತ್ತವೆ.

* ಧರ್ಮ ಮತ್ತೆ ಚಾರ್ಲಿಯನ್ನು ಕೂಗುತ್ತಾ ಅಲ್ಲಿಂದ ಓಡುತ್ತಾನೆ. ಓಡಿ ಬರುವ ರಭಸದಲ್ಲಿ ಮುಂದಿರುವ ಮರವೊಂದಕ್ಕೆ ಗುದ್ದಿ ಬೀಳುತ್ತಾನೆ.

FADE OUT

* ಧರ್ಮ ಬಿದ್ದುಕೊಂಡಿದ್ದಾನೆ. ಚಳಿಯಿಂದ ನಡುಗುತ್ತಾ ಥಟ್ಟನೆ ಎಚ್ಚರಗೊಳ್ಳುತ್ತಾನೆ.

HELICAM SHOT: ಧರ್ಮ ಚಾರ್ಲಿಯನ್ನು ಕೂಗುತ್ತಾ ನಡೆದುಕೊಂಡು ಹೋಗುತ್ತಿದ್ದಾನೆ.

FADE OUT

INT. DAY. SNOW MOUNTAIN

* ಧರ್ಮ ಚಾರ್ಲಿಯನ್ನು ಜೋರಾಗಿ ಕೂಗುತ್ತಾ ಮಂಜಿನ ಪರ್ವತ ಹತ್ತುತ್ತಿದ್ದಾನೆ.

CUT TO

* ಧರ್ಮ ನಡೆದುಕೊಂಡು ಬರುತ್ತಾ ಮಂಜಿನ ಪರ್ವತದ ತುದಿಗೆ ತಲುಪುತ್ತಾನೆ. ಜೋರಾಗಿ ಗಾಳಿ ಬೀಸುತ್ತಿದೆ. ಧರ್ಮ ಮುಖಕ್ಕೆ ತನ್ನ ಕೈ ಅಡ್ಡ ಹಿಡಿಯುತ್ತಾ ಮುಂದೆ ನೋಡಿದಾಗ ದೂರದಲ್ಲಿ ಒಂದು ಗುಡಿಸಲು ಕಾಣಿಸುತ್ತದೆ. ಜೋರಾಗಿ ಗಾಳಿ ಬೀಸಿ ಸರಿದಾಗ ಚಾರ್ಲಿ ಹೊರಗಡೆ ಕುಳಿತಿರುವುದು ಕಾಣಿಸುತ್ತದೆ. ಧರ್ಮ ಚಾರ್ಲಿಯತ್ತ ನಡೆದುಕೊಂಡು ಬರುತ್ತಾನೆ. ಚಾರ್ಲಿ ಧರ್ಮನನ್ನು ನೋಡುತ್ತಿದ್ದಾಳೆ. ಗುಡಿಸಿಲಿನ ಹೊರಗಿರುವ ಘಂಟೆ ಗಾಳಿಯ ರಭಸಕ್ಕೆ ಹೊಡೆದುಕೊಳ್ಳುತ್ತಿದೆ. ಧರ್ಮ ನಿಧಾನಕ್ಕೆ ನಡೆದು ಬಂದು ಚಾರ್ಲಿಯ ಪಕ್ಕದಲ್ಲಿ ಕುಳಿತುಕೊಳ್ಳುತ್ತಾನೆ. ಚಾರ್ಲಿ ಧರ್ಮನನ್ನು ನೋಡಿ paw ಮಾಡುತ್ತಾಳೆ. ಧರ್ಮ ಬೇಸರದಿಂದ ಕುಳಿತಿದ್ದಾನೆ. ಚಾರ್ಲಿ ಮೆಲ್ಲನೆ ಧರ್ಮನ ಮೇಲೆ ಹತ್ತಿ ಕುಳಿತುಕೊಳ್ಳುತ್ತಾಳೆ.

* ಗುಡಿಸಲಿನ ಘಂಟೆ ಹೊಡೆಯುತ್ತಿದೆ. ಧರ್ಮ ಚಾರ್ಲಿಯನ್ನು ಎತ್ತಿಕೊಂಡು ಕುಳಿತಿದ್ದಾನೆ. ಚಾರ್ಲಿ ನಿಶ್ಶಕ್ತಿಯಿಂದ ಕುಳಿತಿದ್ದಾಳೆ.

DHAMRA

ನೀನ್ ನನ್ನನ್ನ ಬಿಟ್ ಬಂದಿದ್ದಾ ಚಾರ್ಲಿ? ನಿನ್ನನ್ನು ಎಲ್ಲೆಲ್ಲಿ ಹುಡ್ಕಿದ್ದೆ ಗೊತ್ತಾ?

(ಅಳುತ್ತಾ)

ನಾನ್ ಪ್ರೀತಿ ಮಾಡಿದೋರನ್ನೆಲ್ಲಾ ಕಳ್ಕೊಂಡೆ.ನಿನ್ನನ್ನು ಮಾತ್ರ ಹೆಂಗಾದ್ರೂ ಮಾಡಿ ಉಳಿಸ್ಕೋತೀನಿ ಅಂತಿದ್ದೆ ಚಾರ್ಲಿ. ನಂಗ್ ತುಂಬಾ ನೋವಾಗ್ತಿದೆ ಚಾರ್ಲಿ. ನಂಗೆ ಇನ್ನೇನ್ ಮಾಡ್ಬೇಕು ಅಂತ ಗೊತ್ತಾಗ್ತಿಲ್ಲ.

* ಚಾರ್ಲಿ ಧರ್ಮನನ್ನು ನೋಡುತ್ತಿದ್ದಾಳೆ.

DHARMA (CONT'D)
ನನ್ ಕೈಲಿ ಎಷ್ಟ್ ಸಾಧ್ಯಾನೋ ಅಷ್ಟ್ ಪ್ರಯತ್ನ ಪಟ್ಟಿದ್ದೀನಿ. ಡಾಕ್ಟ್ರು, ದೇವ್ರು. ಆದ್ರೆ ನಿನ್ನನ್ನು ಉಳಿಸ್ಕೊಳ್ಳೋಕೆ ನನ್ ಕೈಲಿ ಆಗ್ಲಿಲ್ಲ ಚಾರ್ಲಿ..

* ಧರ್ಮ ಚಾರ್ಲಿಯನ್ನು ತಬ್ಬಿಕೊಂಡು ಜೋರಾಗಿ ಅಳುತ್ತಾನೆ. ಚಾರ್ಲಿ ತನ್ನ ಎರಡೂ ಕೈ ಮೇಲೆ ಮಾಡಿ thanks ಮಾಡುತ್ತಾ ಧರ್ಮನನ್ನು ನೋಡುತ್ತಾಳೆ.

ADRIKA (V.O)
ಚಾರ್ಲಿ ಅವಾಗ ನೀನು ಕೈ ಹಿಂಗೆ ಮಾಡಿ thanks ಮಾಡಿದ್ಯಲ್ವಾ? ಅದನ್ನ ಮಾಡು ಚಾರ್ಲಿ..

* ಧರ್ಮ ಚಾರ್ಲಿಯನ್ನು ತಬ್ಬಿಕೊಂಡು ಇನ್ನೂ ಜೋರಾಗಿ ಅಳುತ್ತಾನೆ.

FLASHCUTS

* ಕತ್ತಲಲ್ಲಿ ತುಂಬಿಕೊಂಡ ಹೊಗೆಯ ಮಧ್ಯೆ ಧರ್ಮ chicken leg piece ತಿನ್ನುತ್ತಾ ನಡೆದುಕೊಂಡು ಬರುತ್ತಾನೆ. ಚಾರ್ಲಿ ಧರ್ಮ ನಡೆದುಕೊಂಡು ಹೋಗುತ್ತಿರುವುದನ್ನು ನೋಡುತ್ತಿದ್ದಾಳೆ.

DHARMA (V.O)
ನನ್ನನ್ನ ಎಷ್ಟ್ ಪ್ರೀತಿ ಮಾಡ್ತೀಯ ಚಾರ್ಲಿ? ಚಾರ್ಲಿ ನೀನು ಇದ್ಕಿಂತ ಮುಂಚೆ ಯಾವತ್ತಾದ್ರೂ snow ನೋಡಿದ್ದೀಯಾ?

* ಚಾರ್ಲಿ ಮೀನನ್ನು ತಿನ್ನುತ್ತಿದ್ದಾಳೆ. ಒಂದು ಕ್ಷಣ ತಿನ್ನುವುದನ್ನು ನಿಲ್ಲಿಸಿ ಮುಂದೆ ನೋಡುತ್ತಾಳೆ.

* ಚಾರ್ಲಿ ice ರಾಶಿ ಮೇಲೆ ಉರುಳಾಡುತ್ತಿದ್ದಾಳೆ.

DHARMA (V.O) CONT'D
ನಾನಂತೂ life ಅಲ್ಲಿ first time ನೋಡ್ತಿರೋದು.

* ಧರ್ಮ ಚಾರ್ಲಿಯ ಪಕ್ಕದಲ್ಲಿ ಮಲಗಿದ್ದಾನೆ. ಚಾರ್ಲಿ ಮಂಜಿನ ರಾಶಿಯ ಮೇಲೆ ಉರುಳಾಡುತ್ತಿದ್ದಾಳೆ.

* ಚಹರ್ಲಿ ಕಾಲನಿ ರಸ್ತೆಯಲ್ಲಿ ಧರ್ಮನನ್ನು ಹಿಂಬಾಲಿಸುತ್ತಿದ್ದಾಳೆ. ಧರ್ಮ ಹಿಂದೆ ತಿರುಗಿ ಚಾರ್ಲಿಯನ್ನು ದಿಟ್ಟಿಸಿ ನೋಡುತ್ತಿದ್ದಾನೆ.

* ಚಾರ್ಲಿ dumpster ಪಕ್ಕದಲ್ಲಿ ಮಲಗಿದ್ದಾಳೆ. Dumpster ಒಳಗಡೆ ಒಂದು ಇಡ್ಲಿ ಪ್ಯಾಕೆಟ್ ಬೀಳುತ್ತದೆ. ಚಾರ್ಲಿ ಎದ್ದು ಕುಳಿತು ತಲೆಯೆತ್ತಿ ನೋಡಿದಾಗ ಧರ್ಮ ಕಾಣಿಸುತ್ತಾನೆ.

* ಧರ್ಮ ಮೂರ್ಛೆ ತಪ್ಪಿ ಬಿದ್ದಿದ್ದಾನೆ. ಚಾರ್ಲಿ ಧರ್ಮನನ್ನು paw ಮಾಡುತ್ತಾ ಬೊಗಳುತ್ತಿದ್ದಾಳೆ.

* Ambulance ವೇಗವಾಗಿ ಹಾದು ಹೋಗುತ್ತದೆ. ಚಾರ್ಲಿ Ambulance ಹಿಂದಿನಿಂದ ವೇಗವಾಗಿ ಓಡಿ ಬರುತ್ತಿದ್ದಾಳೆ.

HOSPITAL SECURITY
ಸರ್ ಅದು Ambulance ಹಿಂದೇನೇ ಓಡ್ಕೊಂಡ್ ಬಂತು..

* ಧರ್ಮ ಆಸ್ಪತ್ರೆಯ bed ಮೇಲೆ ಕುಳಿತು ಆಶ್ಚರ್ಯದಿಂದ ನೋಡುತ್ತಿದ್ದಾನೆ.

VAMSHINATHAN
Iva vandadhuk apraundha life ee maarichi Dharma..

ADRIKA
Uncle, ನೀವು ಯಾಕ್ smile ಏ ಮಾಡೋದಿಲ್ಲ?

* ಧರ್ಮ ಜೋರಾಗಿ ಚಾರ್ಲಿಯ ಹೆಸರು ಕೂಗುತ್ತಾ paragliding ಮಾಡುತ್ತಿದ್ದಾನೆ.

DHARMA
ಇದ್ ನನ್ ನಾಯಿ.

* ಚಿಕ್ಕ ಧರ್ಮ ನಿದ್ರಿಸುತ್ತಿದ್ದಾನೆ. ಧರಣಿ ಕಿಟಕಿಯ curtain ಸರಿಸುತ್ತಾ,

DHARANI (V.O)
ಅಣ್ಣ please ಬಾರೋ..

* ಧರ್ಮ ಮಲಗಿದ್ದಾನೆ. ಚಾರ್ಲಿ curtain ಸರಿಸಿ ಧರ್ಮನ ಮುಖ ನೆಕ್ಕುತ್ತಾಳೆ.

* ಧರ್ಮ cigarette ಸೇದುತ್ತಾ ಕೆಲಸ ಮಾಡುತ್ತಿದ್ದಾನೆ. ಪಕ್ಕದಲ್ಲಿ ಕುಳಿತಿದ್ದ ಚಾರ್ಲಿ paw ಮಾಡುತ್ತಾಳೆ. ಧರ್ಮ ಚಾರ್ಲಿಯನ್ನು ನೋಡುತ್ತಾನೆ.

DHARMA (V.O)
ನಾನ್ cigarette ಬಿಟ್ಟಿದ್ದೀನಿ..

RAJU
ಧರ್ಮ ಸರ್ full change ಆಗಿದ್ದಾರಲ್ವಾ?

* ಧರ್ಮ ಚಾರ್ಲಿ ಹಾಗೂ ಅದ್ರಿಕಾ ಜೊತೆಗೆ selfie ತೆಗೆದುಕೊಳ್ಳುತ್ತಾನೆ.

* ಧರ್ಮ ಚಾರ್ಲಿಯನ್ನು ಹುಡುಕುತ್ತಾ ಜೋರಾಗಿ ಕೂಗುತ್ತಾನೆ.

* ಚಾರ್ಲಿ ಹಾಗೂ ಕರುಪ್ಪು ಒಟ್ಟಿಗೆ ಮಲಗಿದ್ದಾರೆ.

VAMSHINATHAN
Charlie mele ore love aa?

* ಧರ್ಮ ದೇವಿಕಾ ಜೊತೆಗೆ ಪ್ರಯಾಣಿಸುತ್ತಿರುವ SHOTS

SPLIT SCREEN

LEFT SIDE: ಚಾರ್ಲಿ ಎರಡೂ ಕೈಗಳನ್ನು ಮೇಲೆ ಮಾಡಿ ನಿದ್ರಿಸುತ್ತಿದ್ದಾಳೆ.

RIGHT SIDE: ಧರ್ಮ ಚಾರ್ಲಿಯನ್ನು ತಬ್ಬಿಕೊಂಡು ಕುಳಿತಿದ್ದಾನೆ

DEVIKA (O.S)
Dogs ಮಲ್ಗೋ ಒಂದೊಂದ್ position ಕೂಡ ಅವುಗಳ feelings ಹೇಳುತ್ತೆ.

* Compounder ಚಾರ್ಲಿಯನ್ನು ಎತ್ತಿಕೊಂಡು ಹೋಗುತ್ತಿದ್ದಾನೆ.

DEVIKA (V.O) CONT'D
ನಿಮ್ಮನ್ನ ತುಂಬಾ ನಂಬಿದ್ದಾಳೆ.

* ಧರ್ಮ ಚಾರ್ಲಿಯನ್ನು ತಬ್ಬಿಕೊಂಡು ಕುಳಿತಿದ್ದಾನೆ.

* Dog Show ಸ್ಪರ್ಧೆಯಲ್ಲಿ ಚಾರ್ಲಿ ಧರ್ಮನತ್ತ ಓಡಿ ಬರುತ್ತಿದ್ದಾಳೆ. ಪ್ರೇಕ್ಷಕರು ಕುತೂಹಲದಿಂದ ಎದ್ದು ನಿಲ್ಲುತ್ತಾರೆ. Foster Family ಮನೆಯಲ್ಲಿ ಚಾರ್ಲಿ ಧರ್ಮನ ಮೇಲೆ ಹಾರುತ್ತಾಳೆ.

TRANSITION TO

* Dog Show ಸ್ಪರ್ಧೆಯಲ್ಲಿ ಚಾರ್ಲಿ ಧರ್ಮನ ಮೇಲೆ ಹಾರುತ್ತಾಳೆ. ಧರ್ಮ ಚಾರ್ಲಿಯನ್ನು ಹಿಡಿದುಕೊಳ್ಳುತ್ತಾನೆ.

FEMALE ANCHOR (V.O)
A performance to remember out here.. Let's give it up for Dharma and Charlie and that beautiful love they share.

* ದೇವಿಕಾ ಎದ್ದು ನಿಂತು ಚಪ್ಪಾಳೆ ತಟ್ಟುತ್ತಾಳೆ. ಚಾರ್ಲಿ ಧರ್ಮನ ಮುಖ ನೆಕ್ಕುತ್ತಿದ್ದಾಳೆ.

TRANSITION TO

* Foster Family ದೃಶ್ಯದಲ್ಲಿ ಚಾರ್ಲಿ ಧರ್ಮನ ಮುಖ ನೆಕ್ಕುತ್ತಿದ್ದಾಳೆ.

SPLIT SCREEN

LEFT SIDE: DOG SHOW STADIUM ಒಳಗಡೆ ಧರ್ಮ ಹಾಗೂ ಚಾರ್ಲಿ ಸ್ಪರ್ಧೆ ಮುಗಿಸಿದ ನಂತರ ಎಲ್ಲಾ ಪ್ರೇಕ್ಷಕರು ಎದ್ದು ನಿಂತು ಚಪ್ಪಾಳೆ ತಟ್ಟುತ್ತಿದ್ದಾರೆ.

RIGHT SIDE:

SUHAHSTHA CHAWLA
A tale of Dharmaraj in Kaliyug.

* ಧರ್ಮ ಚಾರ್ಲಿಯ ಜೊತೆಗೆ ಪ್ರಯಾಣಿಸುತ್ತಿದ್ದಾನೆ.

* ಚಾರ್ಲಿ vet clinic ನಲ್ಲಿ streacher ಮೇಲೆ ಮಲಗಿದ್ದಾಳೆ. ಧರ್ಮ ಚಾರ್ಲಿಯನ್ನು ನೋಡುತ್ತಿದ್ದಾನೆ.

* Psycho ಕೀಟನ್ ಗೆ ಹಿಂಸೆ ಕೊಡುತ್ತಿದ್ದಾನೆ.

* ಧರ್ಮ psycho ಮನೆ ಹೊರಗಿರುವ ಘಂಟೆಯನ್ನು ಸಿಟ್ಟಿನಿಂದ ಎಳೆದು ತೆಗೆಯುತ್ತಾನೆ.

* ಧರ್ಮ ಕಣ್ಣೀರಿಡುತ್ತಾ ಚಾರ್ಲಿಯ ಪಕ್ಕದಲ್ಲಿ ಮಲಗಿದ್ದಾನೆ.

* ಚಾರ್ಲಿ ಧರ್ಮನನ್ನು ತಬ್ಬಿಕೊಂಡಿದ್ದಾಳೆ. ಚಾರ್ಲಿಯ ಕಣ್ಣಲ್ಲಿ ನೀರು ಕಾಣಿಸುತ್ತಿದೆ.

* ಹಾಡುಗಾರರ ಗುಂಪು ಹಾಡನ್ನು ಗುನುಗುತ್ತಿದ್ದಾರೆ.

* ಧರ್ಮ ಸಿಟ್ಟಿನಿಂದ ಕಿರುಚುತ್ತಾನೆ.

* ಚಾರ್ಲಿ TV Screen ನಲ್ಲಿ Snow Ad ನೋಡುತ್ತಾ ಜಿಗಿಯುತ್ತಿದ್ದಾಳೆ. ಧರ್ಮ ಆಶ್ಚರ್ಯಗೊಂಡು ಚಾರ್ಲಿಯನ್ನು ನೋಡುತ್ತಾನೆ.

* ಧರ್ಮ ಚಾರ್ಲಿಯ ಜೊತೆ ಪ್ರಯಾಣಿಸುತ್ತಿರುವ Shots.

* ಧರ್ಮ ಚಾರ್ಲಿಯನ್ನು ಎತ್ತಿಕೊಂಡು bus ಒಳಗಡೆ ಕುಳಿತಿದ್ದಾನೆ.

* ಚಾರ್ಲಿ dumpster ಒಳಗಿನಿಂದ ಮೇಲೆಳುತ್ತಾಳೆ. ತಲೆಯ ಮೇಲ್ಗಡೆ ಇಡ್ಲಿ ಪ್ಯಾಕೆಟ್ ಕಾಣಿಸುತ್ತದೆ.

* ಧರ್ಮ ಆದ್ರಿಕಾ ಕೊಟ್ಟಿರುವ drwaing sheet ನೋಡುತ್ತಿದ್ದಾನೆ. ಆದ್ರಿಕಾ ಬಿಡಿಸಿರುವ ಚಿತ್ರದಲ್ಲಿ ಧರ್ಮ ಚಾರ್ಲಿಯ ಜೊತೆ ಒಂದು ಪುಟ್ಟ ಗುಡಿಸಲಿನ ಹೊರಗಡೆ ಕುಳಿತಿದ್ದಾನೆ.

BACK TO

* ಧರ್ಮ ಚಾರ್ಲಿಯನ್ನು ತಬ್ಬಿಕೊಂಡು ಕುಳಿತಿದ್ದಾನೆ. ಗುಡಿಸಲು ಹೊಗೆ ಹೊಡೆಯುತ್ತಿದ್ದ ಘಂಟೆ

ನಿಧಾನಕ್ಕೆ ನಿಲ್ಲುತ್ತದೆ. ಚಾರ್ಲಿಯ ಜೀವ ಹೋಗಿದೆ. ಧರ್ಮ ಜೋರಾಗಿ ಕಿರುಚುತ್ತಾ ಅಳುತ್ತಾನೆ.

DHARMA
(ಬಿಕ್ಕಿ ಬಿಕ್ಕಿ ಅಳುತ್ತಾ)
ನನ್ ಕೈಲಾಗ್ಲಿಲ್ಲ ಚಾರ್ಲಿ..

* ಧರ್ಮ ಜೋರಾಗಿ ಅಳುತ್ತಿದ್ದಾನೆ. ಹಿನ್ನಲೆಯಲ್ಲಿ ಪುಟ್ಟ ನಾಯಿಮರಿ ಅಳುತ್ತಿರುವ ಶಬ್ದ ಕೇಳಿಸುತ್ತದೆ. ಧರ್ಮ ಅಳು ನಿಲ್ಲಿಸಿ ಶಬ್ದ ಬರುತ್ತಿರುವ ಕಡೆ ನೋಡುತ್ತಾನೆ.

CUT TO

* ಧರ್ಮ ಗುಡಿಸಲಿನ ಒಳಗಡೆ ಬರುತ್ತಾನೆ. ಎದುರುಗಡೆ ಒಂದು ಶಿವಲಿಂಗ ಕಾಣಿಸುತ್ತದೆ. ಪಕ್ಕದಲ್ಲಿ ನಾಯಿಮರಿ ಅಳುತ್ತಿರುವ ಶಬ್ದ ಕೇಳಿಸುತ್ತದೆ. ಧರ್ಮ ನಿಧಾನಕ್ಕೆ ಅತ್ತ ಕಡೆ ಹೋಗಿ ಕುಳಿತುಕೊಳ್ಳುತ್ತಾನೆ. ಸಂಪೂರ್ಣ ಕತ್ತಲಿನಿಂದ ಧರ್ಮ ಪುಟ್ಟ ನಾಯಿಮರಿಯನ್ನು ಮೆಲ್ಲನೆ ಕೈಗೆತ್ತಿಕೊಳ್ಳುತ್ತಾನೆ. ಕಪ್ಪು ಬಣ್ಣದ ಒಂದೇ ಒಂದು ಪುಟ್ಟ ಮರಿ ಇನ್ನೇನು ಜನ್ಮತಾಳಿದೆ. ಧರ್ಮ ಅಳುತ್ತಾ ನಾಯಿಮರಿಯನ್ನು ನೋಡುತ್ತಿದ್ದಾನೆ.

FADE OUT

* ಧರ್ಮ ಗುಡಿಸಲಿನ ಹೊರಗಡೆ ಪುಟ್ಟ ನಾಯಿಮರಿಯನ್ನು ಹಿಡಿದುಕೊಂಡು ಕುಳಿತಿದ್ದಾನೆ. ಧರ್ಮನ ಮಡಿಲಿನಲ್ಲಿ ಚಾರ್ಲಿ ಮಲಗಿದ್ದಾಳೆ.

DHARMA (V.O)
ಚಾರ್ಲಿಗ್ ಗೊತ್ತಿತ್ತು. ಅವ್ಳು ಹೋದ್ಮೇಲೆ ನನ್ ಕೈಲಿ ಇರೋಕಾಗಲ್ಲ ಅಂತ. ಅದಿಕ್ಕೆ ಒಂದು ಪುಟಾಣಿ ಚಾರ್ಲಿನ ಕೊಟ್ಟೋಗಿದ್ದಾಳೆ. ನಾನ್ ಮೊದ್ಲೇ ಹೇಳ್ದಂಗೆ ನೀವ್ lucky ಆಗಿದ್ರೆ ನಿಮ್ lifeಗೂ ಒಂದ್ ಚಾರ್ಲಿ ಬರುತ್ತೆ.
(After a pause)
ನೀವ್ lucky ಆಗಿದ್ರೆ ಮಾತ್ರ..

* CAMERA TILTS UP TO THE SKY.

ON SCREEN: FEW MONTHS LATER

CUT TO

EXT. DAY. CHARLIE'S ANIMAL RESCUE CENTER

* CAMERA TILTS DOWN FROM THE SKY.

* 'Charlie's Animal Rescue Centre' ಎಂಬ board ಕಾಣಿಸುತ್ತಿದೆ. ಹಲವಾರು ಜನ ಸೇರಿದ್ದಾರೆ. Rescue Center ಉದ್ಘಾಟನೆ ನಡೆಯುತ್ತಿದೆ. ದೇವಿಕಾ, ಆದ್ರಿಕ, ಡಾಕ್ಟರ್ ಅಶ್ವಿನ್ ಹಾಗೂ ಕಾಲನಿಯ ಇತರ ಸದಸ್ಯರು ಸೇರಿದ್ದಾರೆ. ಧರ್ಮ ಚಾರ್ಲಿಯ ಮರಿಯನ್ನು ಹಿಡಿದುಕೊಂಡು ನಿಂತಿದ್ದಾನೆ. ಆದ್ರಿಕಾ ribban cut ಮಾಡಿ ಉದ್ಘಾಟನೆ ಮಾಡುತ್ತಾಳೆ. ಎಲ್ಲರೂ ಚಪ್ಪಾಳೆ ತಟ್ಟುತ್ತಾರೆ.

FADE OUT

* ಧರ್ಮ Magazine ಕೈಯಲ್ಲಿ ಹಿಡಿದು ಕುಳಿತಿದ್ದಾನೆ. ಒಂದು ಪುಟದಲ್ಲಿ ಧರ್ಮ ಹಾಗೂ ಚಾರ್ಲಿಯ ಫೋಟೋ ಕಾಣಿಸುತ್ತದೆ. ಧರ್ಮ ಚಾರ್ಲಿಯ ಫೋಟೋ ನೋಡಿ ಕೈ ಸವರುತ್ತಾನೆ. ನಂತರ Magizine ಮುಚ್ಚುತ್ತಾನೆ.

DHARMA (V.O)
The past is always tense, the future perfect ಅಂತ ಕೊನೇಲಿ ಗೊತ್ತಾಯ್ತು.

* ಧರ್ಮ ಚಾರ್ಲಿಯನ್ನು ಹೂತಿರುವ ಜಾಗದ ಮುಂದೆ ಕುಳಿತಿದ್ದಾನೆ. ಚಾರ್ಲಿಯ statue ಕಾಣಿಸುತ್ತಿದೆ. ಧರ್ಮ Statue ಕಡೆ ನೋಡಿ ಎದ್ದು ಹೋಗುತ್ತಾನೆ.

CAMERA CHARGE TOWARDS THE STATUE

DHARMA (V.O)
ಎಲ್ಲವನ್ನೂ ಕೊಟ್ಟು ಹೋದ ಚಾರ್ಲಿ ಹೆಸರಲ್ಲಿ ಒಂದು Animal Rescue Center ನ ಪ್ರಾರಂಭಿಸಿದೆ. ಚಾರ್ಲಿ ಹಾಗೆ ಅದೆಷ್ಟೋ ಜೀವಗಳು ಒಂದೊಳ್ಳೆ ಮನೆ, ಮನ್ಸಿಗಾಗಿ ಬೀದಿಯಲ್ಲಿ ಕಾಯ್ತಾ ಇವೆ. ಕಲಿಯುಗದಲ್ಲಿ ನೀವೂ ಧರ್ಮರಾಯನಾಗ್ಬೋದು. ಮನ್ಸ್ ಮಾಡ್ಬೇಕಷ್ಟೇ.

FADE OUT

POST CREDIT SCENE WHEN THE END CREDITS ROLL

INT. DAY. DHARMA'S NEW HOUSE (POST CREDIT SCENE)

* ಧರ್ಮನ ಹೊಸ ಮನೆಯ ಗೋಡೆಯಲ್ಲಿ ಹಲವಾರು photo frames ಕಾಣಿಸುತ್ತವೆ. ಧರ್ಮ ಚಾರ್ಲಿಯ ಜೊತೆ ಕಳೆದಿರುವ ಕ್ಷಣಗಳನ್ನು ನೆನಪಿಸುವ ಹಲವಾರು photo frame ಗಳಿವೆ.

Camera tilt down ಆದಂತೆ table ಮೇಲೆ Fish bowl ಕಾಣಿಸುತ್ತದೆ. ಅದರೊಳಗೆ ಎರಡು ಮೀನುಗಳು ಈಜಾಡುತ್ತಿವೆ. Camera pan right ಆದಂತೆ Snow ball, photo frames, spex, helmet ಹಾಗೂ ಇನ್ನಿತರ ವಸ್ತುಗಳು ಕಾಣಿಸುತ್ತವೆ. ಕೊನೆಯಲ್ಲಿ ಒಂದು Abdominal guard ಕಾಣಿಸುತ್ತದೆ.

CUT TO

INT. DAY. DHARMA'S NEW HOUSE (POST CREDIT SCENE)

* ಧರ್ಮ ಮಲಗಿದ್ದಾನೆ. Jr ಚಾರ್ಲಿ bedsheet ಒಳಗಿನಿಂದ ಬಂದು ಧರ್ಮನ ಮುಖ ನೆಕ್ಕುತ್ತಾಳೆ. ಧರ್ಮ Jr ಚಾರ್ಲಿಯನ್ನು ತಬ್ಬಿಕೊಂಡು ಮಲಗುತ್ತಾನೆ. Jr ಚಾರ್ಲಿ ಬೊಗಳುತ್ತಾಳೆ.

CUT TO

* ಧರ್ಮ commodeನಲ್ಲಿ ಕುಳಿತು Phone ನೋಡುತ್ತಿದ್ದಾನೆ. Jr ಚಾರ್ಲಿ ಧರ್ಮನ ಚಡ್ಡಿ ಎಳೆಯುತ್ತಿದ್ದಾಳೆ.

DHARMA
ಏಯ್ ಚಾರ್ಲಿ..

* ಧರ್ಮ ದೇವರ ವಿಗ್ರಹದ ಮುಂದೆ ನಿಂತು ದೀಪ ಹಚ್ಚುತ್ತಾನೆ. Jr ಚಾರ್ಲಿ ಹಿಂದಿನಿಂದ ಬಂದು ಧರ್ಮನ ಮೇಲೆ ಹಾರುತ್ತಾಳೆ. ಧರ್ಮ ದೇವರಿಗೆ ನಮಸ್ಕರಿಸುತ್ತಾ ಮುಗುಳ್ನಗುತ್ತಾನೆ.

DHARMA (O.S)
ಸಂಜೆ Factory ಯಿಂದ ಬೇಗ ಬರ್ತೀನಿ. ಮನೆ ಕಡೆ ಜೋಪಾನ.

* Jr ಚಾರ್ಲಿ ಧರ್ಮನನ್ನು ನೋಡುತ್ತಿದ್ದಾಳೆ.

CUT TO

INT. DAY. DHARMA'S NEW HOUSE (POST CREDIT SCENE)

JUMPCUTS

* Jr ಚಾರ್ಲಿ Kitchen shelf ನಲ್ಲಿ ಇರುವ ವಸ್ತುಗಳನ್ನು ಎಳೆದು ಹಾಕುತ್ತಿದ್ದಾನೆ.

* Jr ಚಾರ್ಲಿ Dustbin ಕಚ್ಚಿ ಎಳೆದು ಹಾಕುತ್ತಿದ್ದಾನೆ.

CUT TO

INT. DAY. DHARMA'S NEW HOUSE (POST CREDIT SCENE)

* Jr ಚಾರ್ಲಿ bathroom ಒಳಗಡೆ ಬಟ್ಟೆ ತುಂಡನ್ನು ಎಳೆಯುತ್ತಿದ್ದಾನೆ.

CUT TO

INT. DAY. DHARMA'S NEW HOUSE (POST CREDIT SCENE)

JUMPCUTS

* Jr ಚಾರ್ಲಿ ಓಡಿ ಬಂದು table ಮೇಲೆ ಹಾರಿ ಎಡವಿ ಬೀಳುತ್ತಾನೆ.

* Jr ಚಾರ್ಲಿ Table ಮೇಲೆ ಕಾಲಿಟ್ಟು ನಿಂತು ಆಟವಾಡುತ್ತಿದ್ದಾನೆ.

CUT TO

INT. DAY. DHARMA'S NEW HOUSE (POST CREDIT SCENE)

* Jr ಚಾರ್ಲಿ tissue paper ಸುತ್ತಿಕೊಂಡು ಓಡಿ ಹೋಗುತ್ತಾನೆ.

* Jr ಚಾರ್ಲಿ curtain ಸುತ್ತಿಕೊಂಡು ಆಟವಾಡುತ್ತಿದ್ದಾನೆ.

CUT TO

INT. NIGHT. DHARMA'S NEW HOUSE (POST CREDIT SCENE)

* Jr ಚಾರ್ಲಿ ಧರ್ಮನ ಮಂಚದ ಮೇಲೆ ಕೈ ಮೇಲೆ ಮಾಡಿಕೊಂಡು ಗೊರಕೆ ಹೊಡೆಯುತ್ತಾ ಮಲಗಿದ್ದಾನೆ.

CUT TO

INT. DAY. DHARMA'S NEW HOUSE (POST CREDIT SCENE)

* ಧರ್ಮ ಮನೆಗೆ ಬಂದು ಅಡುಗೆ ಕೋಣೆಯತ್ತ ನೋಡಿದಾಗ ನೆಲೆ ಪೂರ್ತಿ ಗಲೀಜಾಗಿದೆ. ಸ್ವಲ್ಪ ಮುಂದೆ ಬಂದು ನೋಡಿದಾಗ Fridge ಬಾಗಿಲು ಅರ್ಧ ತೆರೆದಿರುತ್ತದೆ.

* ಧರ್ಮ Fridge ಬಾಗಿಲು ತೆರೆದು ನೋಡಿದಾಗ Jr ಚಾರ್ಲಿ ಕೈ ಕಾಳು ಮೇಲೆ ಮಾಡಿಕೊಂಡು ಮಲಗಿದ್ದಾನೆ.

DHARMA
(ನಗುತ್ತಾ)
ನಿಂಗಿಂತ ನಿನ್ ತಾಯಿನೇ ಎಷ್ಟೋ ವಾಸಿ..

CUT TO

INT. DAY. DHARMA'S NEW HOUSE (POST CREDIT SCENE)

JUMPCUTS

* Bathroom ಒಳಗಡೆ Commode ನಲ್ಲಿ ಧರ್ಮ ಕುಳಿತಿರುವಾಗ Jr ಚಾರ್ಲಿ ಧರ್ಮನ ಚಡ್ಡಿ ಎಳೆಯುತ್ತಿದ್ದಾನೆ.

* Jr ಚಾರ್ಲಿ ಧರ್ಮನ ಶೂ ಕಚ್ಚಿಕೊಂಡು ಆಟವಾಡುತ್ತಿದ್ದಾನೆ.

* Jr ಚಾರ್ಲಿ pillow ಕಚ್ಚುತ್ತಾ ಆಟವಾಡುತ್ತಿದ್ದಾನೆ.

* Jr ಚಾರ್ಲಿ Bathroom ಒಳಗಡೆ ಧರ್ಮನ ಚಡ್ಡಿ ಎಳೆದು ಧರ್ಮನನ್ನು ತಲೆಯೆತ್ತಿ ನೋಡುತ್ತಾನೆ. ಧರ್ಮ Commode ಮೇಲೆ paper ಓದುತ್ತಾ ಕುಳಿತಿದ್ದಾನೆ. Jr ಚಾರ್ಲಿ ಚಡ್ಡಿಯನ್ನು ಸಂಪೂರ್ಣವಾಗಿ ಕಚ್ಚಿ ಎಳೆಯುತ್ತಾನೆ. ಧರ್ಮ ಆಶ್ಚರ್ಯದಿಂದ ನೋಡುತ್ತಾನೆ.

CUT TO

INT. DAY. DHARMA'S NEW HOUSE (POST CREDIT SCENE)

* Jr ಚಾರ್ಲಿ hall ನಲ್ಲಿ ಇರುವ ಸುಮಾರು ವಸ್ತುಗಳನ್ನು ಎಳೆದು ಹಾಕಿ ಆಟವಾಡುತ್ತಾನೆ.

* Jr ಚಾರ್ಲಿ Hall ಮೂಲೆಯಲ್ಲಿ ಹೋಗಿ ಕುಳಿತು ಮಲ ವಿಸರ್ಜಿಸುತ್ತಾನೆ.

* ಧರ್ಮ Jr ಚಾರ್ಲಿಯ ಮಲವನ್ನು ತೆಗೆದು ಸ್ವಚ್ಛ ಮಾಡುತ್ತಿದ್ದಾನೆ. Jr ಚಾರ್ಲಿ sofa ಮೇಲೆ ಉಲ್ಟಾ ಮಲಗಿ ಧರ್ಮನನ್ನು ನೋಡುತ್ತಿದ್ದಾನೆ. ಧರ್ಮ ಚಾರ್ಲಿಯನ್ನು ನೋಡಿ ಮುಗುಳ್ನಗುತ್ತಾನೆ. Jr ಚಾರ್ಲಿ ಆಕಳಿಸುತ್ತಾನೆ.

CUT TO

INT. DAY. DHARMA'S NEW HOUSE (POST CREDIT SCENE)

TIMELAPSE

* Jr ಚಾರ್ಲಿ ಧರ್ಮನ ಜೊತೆಗೆ ಬೇರೆ ಬೇರೆ ಭಂಗಿಯಲ್ಲಿ ಮಲಗಿರುವ Shots.

CUT TO

INT. DAY. DHARMA'S NEW HOUSE (POST CREDIT SCENE)

* ಧರ್ಮ Jr ಚಾರ್ಲಿಯನ್ನು ಮುದ್ದಿಸಿ ಮುತ್ತಿಡುತ್ತಾನೆ.

CUT TO

THE END